ಮಂಗಳವಾರ, ಅಕ್ಟೋಬರ್ 22, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 293 | ಪುಟ 14 • www.prajavani.net prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಹರ್ನಿಯಾಗೆ ತಜ್ಞರ ಸಲಹೆ: ಶಸ್ತ್ರಚಿಕಿತ್ಸೆಯೇ ಪರಿಹಾರ

ಆಳ-ಅಗಲ
ಆಹಾರ ಪದ್ಧತಿ ಭಾರತದ್ದೇ ಉತ್ತಮ

ಬೋರ್ಡ್ ಪರೀಕ್ಷೆ: ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಪರಾಕಿ 7

'ಧರ್ಮನಿರಪೇಕ್ಷತೆ ಸಂವಿಧಾನದ ಮೂಲ ಸ್ವರೂಪ' 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,151	24,781	₹82,020 (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	84.07

ಪರಿಶ್ರಮ ಎಜುಕೇಶನಲ್ ಚಾರಿಟಬಲ್ ಟ್ರಸ್ಟ್(ರಿ)
ಪರಿಶ್ರಮ ಪಿಯು ಕಾಲೇಜು
ಇಂಟಿಗ್ರೇಟೆಡ್ NEET, JEE MAIN & KCET ತರಬೇತಿ
UNDER THE GUIDANCE OF PRADEEP ESHWAR
ನೀಟ್ ಫಲಿತಾಂಶದಲ್ಲಿ ನಮಗೆ ಶ್ಲಾಘನೆ
ಪಿಯುಸಿ ಕಾಲೇಜಿನಲ್ಲೂ ಮುಂದುವರಿಯಲಿದೆ ನಮ್ಮ ಈ ಸಾಧನೆ
ರೆಸಿಡೆನ್ಶಿಯಲ್ ಮತ್ತು ಡೇ ಸ್ಕಾಲರ್ ತರಗತಿಗಳು

2025-26 ನೋಂದಣಿ ಪ್ರಾರಂಭವಾಗಿವೆ
080 24413400, 74838 30545 www.parishramaneetacademy.com

ದಿನದ 24 ಗಂಟೆಯೂ ನಿಗಾ ವ್ಯವಸ್ಥೆ • ಮಾಜಿ ಸೇನಾಧಿಕಾರಿಗಳ ಉಸ್ತುವಾರಿ • ಭದ್ರತೆಯಲ್ಲಿ ಹೆಚ್ಚಳ

ಆಸ್ಪತ್ರೆ ಸ್ತ್ರೀ ಸಿಬ್ಬಂದಿಗೆ 'ರಕ್ಷಾ ಕೋಟೆ'

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳ ವೈದ್ಯೆಯರು ಸೇರಿದಂತೆ ಮಹಿಳಾ ಸಿಬ್ಬಂದಿ ಸುರಕ್ಷತೆಗೆ ಸರ್ಕಾರ ಹೊಸ ನಿಯಮ ಸಿದ್ಧಪಡಿಸಿದ್ದು, ರಕ್ಷಣಾ ಕಣ್ಗಾವಲಿಗೆ ಸೇನೆಯ ಮಾಜಿ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.

ಕೋಲ್ಕತ್ತ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ, ಕೊಲೆ ಪ್ರಕರಣದ ನಂತರ ಸುಪ್ರೀಂಕೋರ್ಟ್ ಸೂಚನೆಯಂತೆ ರಾಜ್ಯದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳಲ್ಲೂ ವೈದ್ಯಕೀಯ ವಿದ್ಯಾರ್ಥಿನಿಯರು ಹಾಗೂ ಮಹಿಳಾ ಸಿಬ್ಬಂದಿ ಸುರಕ್ಷತೆಗೆ ನಿರ್ಭಯ ಕಾಯ್ದೆಯ ಶಿಫಾರಸುಗಳನ್ನೂ ಒಳಗೊಂಡು ಹಲವು ಹಂತಗಳ ಹೊಸ ನಿಯಮಾವಳಿ ರೂಪಿಸಲಾಗಿದೆ.

ಕಣ್ಗಾವಲಿಗೆ ನೇಮಿಸಿಕೊಂಡ ಸೇನೆಯ ಮಾಜಿ ಅಧಿಕಾರಿಗಳು ಮತ್ತು ಸಿಬ್ಬಂದಿ ದಿನದ 24 ಗಂಟೆ ಕೆಲಸ ಮಾಡಲಿದ್ದಾರೆ. ನಿಯಂತ್ರಣ ಕೊಠಡಿಗಳನ್ನೂ ಅವರೇ ನಿರ್ವಹಿಸಲಿದ್ದಾರೆ. ಪ್ರಮುಖವಾದ ಎಲ್ಲ ಸ್ಥಳ, ಕೊಠಡಿಗಳಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಕಡ್ಡಾಯಗೊಳಿಸಲಾಗಿದೆ. ನಿಯಂತ್ರಣ ಕೊಠಡಿಯಲ್ಲಿ ಕುಳಿತು ಪ್ರತಿಕ್ಷಣದ ದೃಶ್ಯಾವಳಿಯನ್ನು ವೀಕ್ಷಿಸಲಾಗುತ್ತದೆ. ಅನುಮಾನಾಸ್ಪದ ಚಲನವಲನ, ಘಟನೆಗಳು ಕಂಡುಬಂದರೆ ತಕ್ಷಣ ತುರ್ತು ಸಂದೇಶ ರವಾನಿಸಲಾಗುತ್ತದೆ. ಪ್ರತಿ ಆಸ್ಪತ್ರೆಯಲ್ಲೂ ರಚಿಸಲಾಗುವ ಭದ್ರತಾ ಸಮಿತಿಯು ಸ್ಥಳೀಯ ಪೊಲೀಸರನ್ನು ಒಳಗೊಂಡಿರುತ್ತದೆ. ಮಹಿಳಾ ದೌರ್ಜನ್ಯದ ಪ್ರಕರಣಗಳ ಸುಳಿವು ಸಿಕ್ಕ ತಕ್ಷಣ ರಕ್ಷಣಾ ತಂಡ ನೆರವಿಗೆ ಧಾವಿಸುತ್ತದೆ.

ನಿಯಮಗಳಲ್ಲಿನ ಲೋಪಗಳನ್ನು ಸರಿಪಡಿಸಲಾಗಿದೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರಿಗೆ ಸೂಕ್ತ ಭದ್ರತಾ ವ್ಯವಸ್ಥೆ ಒದಗಿಸಲಾಗುತ್ತಿದೆ
ಡಾ.ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

ಆಸ್ಪತ್ರೆ, ಹಾಸ್ಟೆಲ್ ನಡುವೆ ವಾಹನ ಸೌಲಭ್ಯ: ಆರೋಗ್ಯ ಸಿಬ್ಬಂದಿ ಮೂರು ಪಾಳಿಗಳಲ್ಲಿ ಕೆಲಸ ಮಾಡುತ್ತಾರೆ.ರಾತ್ರಿಪಾಳಿಯೂ ಕಡ್ಡಾಯವಾಗಿರುತ್ತದೆ. ತುರ್ತು ಸಮಯಗಳಲ್ಲಿ ದಿನದ 24 ಗಂಟೆ ರೋಗಿಗಳ ಆರೈಕೆ ಮಾಡುವ ಅನಿವಾರ್ಯ ಇರುತ್ತದೆ. ಅವರವಸತಿಗೃಹಗಳು,ಹಾಸ್ಟೆಲ್,ಆಸ್ಪತ್ರೆ, ಕಾಲೇಜಿನ ಕ್ಯಾಂಪಸ್ ಒಳಗೆ ಇದ್ದರೂ, ಕೆಲವೊಮ್ಮೆ ವಿಶಾಲವಾದ ಕ್ಯಾಂಪಸ್‌ಗಳ ಒಳಗೆ ನಡೆದು ಹೋಗುವಾಗ ಅಪಾಯಗಳು ಎದುರಾಗುವ ಸಂಭವ ಇರುತ್ತದೆ. ಅದಕ್ಕಾಗಿ ಅವರನ್ನು ಕರೆತರುವಾಗ, ಬಿಡುವಾಗ ವಾಹನ ವ್ಯವಸ್ಥೆ ಕಲ್ಪಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಅಧಿಕ ಸಂಖ್ಯೆಯ ಸಿಬ್ಬಂದಿ ಒಟ್ಟಿಗೆ ತೆರಳುವಾಗ ದೊಡ್ಡ ವಾಹನಗಳು, ಒಬ್ಬಿಬ್ಬರು ಇದ್ದರೆ ಚಿಕ್ಕ ಎಲೆಕ್ಟ್ರಿಕಲ್ ಬಗ್ಗಿಗಳನ್ನು (ಇವಿ) ಬಳಸಬೇಕು. ರಾತ್ರಿ ಪಾಳಿಯ ಸಿಬ್ಬಂದಿಗೆ ಅವರ ಮನೆ, ಪಿ.ಜಿಗಳಿಂದ ಬರುವವರಿಗೂ ವಾಹನ ವ್ಯವಸ್ಥೆ ಕಲ್ಪಿಸಬೇಕು. ಆಸ್ಪತ್ರೆ, ಹಾಸ್ಟೆಲ್ ನಡುವಿನ ದಾರಿಯುದ್ದಕ್ಕೂ ಬೆಳಕಿನ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು. ದಾರಿಯ ಆಯಕಟ್ಟಿನ ಸ್ಥಳದಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಸಬೇಕು ಎಂದು ಸೂಚಿಸಲಾಗಿದೆ.

ಮಹಿಳಾ ರೋಗಿಗಳ ಗುಣಮಟ್ಟದ ಆರೈಕೆ, ಸುರಕ್ಷತೆಗೆ ಒತ್ತು ನೀಡಲು ಪ್ರತ್ಯೇಕ ಮಾರ್ಗದರ್ಶಿ ರೂಪಿಸಲಾಗಿದೆ.

ನಿಯಮಗಳೇನು?

- ಪ್ರತಿ ಆಸ್ಪತ್ರೆಯಲ್ಲೂ ಬಿಗಿ ಭದ್ರತಾ ವ್ಯವಸ್ಥೆ, ತಪಾಸಣೆಯ ನಂತರವೇ ಒಳ ಪ್ರವೇಶ. ರೋಗಿಗಳು ಮತ್ತು ಅವರ ಸಹಾಯಕರಿಗಷ್ಟೇ ಅವಕಾಶ
- ಆರೋಗ್ಯ ಸಿಬ್ಬಂದಿಯನ್ನು ಗುರುತಿಸಲು ನಿರ್ದಿಷ್ಟ ಬಣ್ಣ ಒಳಗೊಂಡ ಗುರುತು ಪಟ್ಟಿಗಳು, ಗುರುತುಪತ್ರ ವಿತರಣೆ
- ಎಲ್ಲ ವೈದ್ಯೆಯರು, ವಿದ್ಯಾರ್ಥಿನಿಯರು, ಮಹಿಳಾ ಸಿಬ್ಬಂದಿಗೆ ಸ್ವಯಂ ರಕ್ಷಣಾ ತಂತ್ರಗಳ ತರಬೇತಿ. ಪ್ರಮುಖ ಸ್ಥಳಗಳಲ್ಲಿ ಪ್ಯಾನಿಕ್ ಬಟನ್‌ಗಳ ಅಳವಡಿಕೆ
- ವಿಪತ್ತು ಎದುರಿಸಲು, ಅಗತ್ಯ ಮನೋಸ್ಥೈರ್ಯ ಮೂಡಿಸಲು ಮನೋವೈದ್ಯ ಶಾಸ್ತ್ರ ವಿಭಾಗದಿಂದ ಸಮಾಲೋಚನೆ
- ಕಿರುಕುಳಕ್ಕೆ ಒಳಗಾದವರಿಗೆ ಅಗತ್ಯ ಕಾನೂನು ಮತ್ತು ನೈತಿಕ ರಕ್ಷಣೆ ನೀಡಲು ಪ್ರತ್ಯೇಕ ವಿಭಾಗಗಳ ಆರಂಭ
- ವಾರಕ್ಕೆ ಒಮ್ಮೆ ಆಂತರಿಕ ದೂರು ಸಮಿತಿ, ಭದ್ರತಾ ಸಮಿತಿ ಸಭೆ. ಪ್ರಕರಣಗಳ ವಿಚಾರಣೆ, ಪರಾಮರ್ಶೆ
- ಮಹಿಳೆಯರಿಗೆ ಸಂಪೂರ್ಣ ಸುರಕ್ಷತೆ ಒಳಗೊಂಡ ಪ್ರತ್ಯೇಕ ವಿಶ್ರಾಂತಿ ಕೊಠಡಿಗಳು

ಮಹಿಳಾ ಸುರಕ್ಷತೆ ಕೇಂದ್ರ ಸಮಿತಿ

ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಮಹಿಳಾ ಸುರಕ್ಷತೆಯ ಕೇಂದ್ರ ಸಮಿತಿ ರಚಿಸಲಾಗಿದೆ. ಕೇಂದ್ರ ಸಮಿತಿ ಪ್ರತಿ ತಿಂಗಳು ಸಭೆ ಸೇರಿ ಮಹಿಳಾ ವೈದ್ಯರು ಹಾಗೂ ಸಿಬ್ಬಂದಿ ಮೇಲಿನ ದೌರ್ಜನ್ಯ ಪ್ರಕರಣಗಳು, ಕೈಗೊಂಡ ಕ್ರಮಗಳು, ದೌರ್ಜನ್ಯ ತಡೆಗೆ ಅನುಸರಿಸಿದ ಮಾರ್ಗ, ನಿಯಮಗಳ ಪಾಲನೆ ಕುರಿತು ಪರಾಮರ್ಶೆ ನಡೆಸಲಿದೆ. ಪ್ರತಿ ಆಸ್ಪತ್ರೆ, ವೈದ್ಯಕೀಯ ಕಾಲೇಜುಗಳಿಗೆ ಅಗತ್ಯ ಸಲಹೆ, ಸಹಕಾರ ನೀಡಲಿದೆ.

ಪ್ರತಿ ಆಸ್ಪತ್ರೆಯಲ್ಲೂ ಹಿಂಸೆ ತಡೆ ಸಮಿತಿ, ಆಂತರಿಕ ದೂರು ಸಮಿತಿ, ಆಸ್ಪತ್ರೆ ಭದ್ರತಾ ಸಮಿತಿಗಳು ಕಾರ್ಯನಿರ್ವಹಿಲಿವೆ.

ಗೋಪ್ಯ ದೂರಿಗೆ ಪಿಂಕ್ ಪೆಟ್ಟಿಗೆ

ಹೊಸ ನಿಯಮದ ಪ್ರಕಾರ ಪ್ರತಿ ಆಸ್ಪತ್ರೆ, ವೈದ್ಯಕೀಯ ಕಾಲೇಜುಗಳ ಕೆಲ ಸ್ಥಳಗಳಲ್ಲಿ ಪಿಂಕ್ ದೂರು ಪೆಟ್ಟಿಗೆಗಳನ್ನು ಸ್ಥಾಪಿಸಬೇಕಿದೆ.

ವೈದ್ಯಕೀಯ ವಿದ್ಯಾರ್ಥಿನಿಯರು, ಮಹಿಳಾ ಸಿಬ್ಬಂದಿ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ, ಕಿರುಕುಳ, ಲಿಂಗ ಆಧಾರಿತ ತಾರತಮ್ಯ ಪ್ರಕರಣಗಳಲ್ಲಿ ದೂರು, ಮಾಹಿತಿ ನೀಡಲು ಹಿಂದೇಟು ಹಾಕುವ ಮಹಿಳೆಯರು ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಪತ್ರಗಳ ಮೂಲಕ ಹಂಚಿಕೊಳ್ಳಬಹುದು. ಅಂಥವರ ಹೆಸರನ್ನು ಗೋಪ್ಯವಾಗಿ ಇಡಲಾಗುತ್ತದೆ. ದೂರಿನಲ್ಲಿ ಉಲ್ಲೇಖಿಸಲಾದ ವ್ಯಕ್ತಿಯ ಚಲನವಲನ ಮೇಲೆ ನಿಗಾವಹಿಸಲು ಪ್ರತ್ಯೇಕ ಪಡೆ ರಚಿಸಲಾಗುತ್ತಿದ್ದು, ಅವರ ನಡವಳಿಕೆಯ ವರದಿಯನ್ನು ಆಂತರಿಕ ದೂರು ಸಮಿತಿಗೆ ಸಲ್ಲಿಸಲಾಗುತ್ತದೆ. ನಂತರ ವಿಚಾರಣೆಗೆ ಒಳಪಡಿಸಲಾಗುತ್ತದೆ.

ಹಾವೇರಿ ಜಿಲ್ಲೆಯ ನದಿನೀರಲಗಿ ಗ್ರಾಮದಲ್ಲಿ ಸೋಮವಾರ ಭಾರಿ ಮಳೆಯಿಂದಾಗಿ ರಸ್ತೆ ಮೇಲೆ ನೀರು ಹರಿದಿದ್ದು, ಕೆಲ ಮನೆಗಳಿಗೂ ನುಗ್ಗಿದೆ

ಧಾರಾಕಾರ ಮಳೆ; ಹೆಚ್ಚಿದ ಪ್ರವಾಹ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ದಾವಣಗೆರೆ: ಹಾವೇರಿ, ಗದಗ, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು, ಮಂಡ್ಯ ಸೇರಿದಂತೆ ರಾಜ್ಯದ ಹಲವೆಡೆ ಭಾನುವಾರ ರಾತ್ರಿ ಮತ್ತು ಸೋಮವಾರ ಧಾರಾಕಾರ ಮಳೆಯಾಗಿದೆ.

ದಾವಣಗೆರೆಯ ಮಂಡಲೂರು ಗ್ರಾಮದ ಹಳ್ಳ ತುಂಬಿ ಹರಿದಿದ್ದು, ಸೇತುವೆ ಕೊಚ್ಚಿಹೋಗಿದೆ. ಜಿಲ್ಲೆಯ ಗಡಿಭಾಗದಲ್ಲಿರುವ ಮಂಡಲೂರು ಹಾಗೂ ಗೊಲ್ಲರಹಟ್ಟಿ, ಚಿತ್ರದುರ್ಗ ಜಿಲ್ಲೆಯ ಹಲವು ಗ್ರಾಮಗಳ ನಡುವಿನ ಸಂಪರ್ಕ ಕಡಿತಗೊಂಡಿದೆ. ಕುರ್ಕಿ ಗ್ರಾಮದ ರೈಲ್ವೆ ಕೆಳಸೇತುವೆಯಲ್ಲಿ ಹರಿಯುತ್ತಿದ್ದ ಭಾರಿ ಪ್ರಮಾಣದ ನೀರಿನಲ್ಲಿ ಶಾಲಾ ವಾಹನವೊಂದು ಸಿಲುಕಿಕೊಂಡಿತ್ತು. ವಾಹನದಲ್ಲಿದ್ದ ವಿದ್ಯಾರ್ಥಿಗಳನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಹಾವೇರಿ ಜಿಲ್ಲೆಯಲ್ಲಿ ಹಲವು ಗ್ರಾಮಗಳಲ್ಲಿ ಪ್ರವಾಹ ಸ್ಥಿತಿ ಉಂಟಾಗಿದೆ. ಮನೆಗಳಿಗೆ ನೀರು ನುಗ್ಗಿ ಸಂಕಷ್ಟದಲ್ಲಿ ಸಿಲುಕಿರುವ 282 ಮಂದಿಯನ್ನು ರಕ್ಷಿಸಿರುವ ಜಿಲ್ಲಾಡಳಿತ, ಕಾಳಜಿ ಕೇಂದ್ರದಲ್ಲಿ ಆಶ್ರಯ ಕಲ್ಪಿಸಿದೆ. ಸವಣೂರು-ಬಂಕಾಪೂರ ಕ್ರಾಸ್ ಸಂಪರ್ಕಿಸುವ ರಾಜ್ಯ ಹೆದ್ದಾರಿ ನಾಲ್ಕು ತಾಸು ಬಂದ್ ಆಗಿತ್ತು. ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ಬರದೂರು ಗ್ರಾಮದ ರಾಮಲಿಂಗೇಶ್ವರ ಮಠ ಸಂಪೂರ್ಣ ಜಲಾವೃತಗೊಂಡಿದ್ದರಿಂದ ಮಠದಲ್ಲಿ ತಂಗಿದ್ದ 24 ಜನರ ಪಂಢರಪುರ ಪಾದಯಾತ್ರಿಗಳ ತಂಡವನ್ನು ಅಗ್ನಿಶಾಮಕದಳದ ಸಿಬ್ಬಂದಿ ರಕ್ಷಿಸಿದರು.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಬ್ಯಾಡರಹಳ್ಳಿ ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ ಮನೆಯ ಶಿಥಿಲ ಗೋಡೆ ಕುಸಿದು ಮೀನಾಕ್ಷಮ್ಮ ಮಹಾಂತೇಶ್ (56) ಎಂಬುವರು ಮೃತಪಟ್ಟಿದ್ದಾರೆ. ಮನೆಯಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಗೋಡೆ ಅವರ ಮೇಲೆ ಬಿದ್ದಿದೆ.

ನಿರಂತರ ಮಳೆಯಿಂದ ಉಂಟಾದ ಹತ್ತಿ ಬೆಳೆ ಹಾನಿಗೆ ಮನನೊಂದು ಬಳ್ಳಾರಿಯ ಹಳೇಕೋಟೆ ಗ್ರಾಮದ ರೈತ ಖಿಚಡಿ ಸಿದ್ದಯ್ಯ(58) ಸೋಮವಾರ ತಮ್ಮ ಹೊಲದಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಡಿಕೆಶಿ ವಿರುದ್ಧ 'ಸುಪ್ರೀಂ'ಗೆ ಸಿಬಿಐ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ನವದೆಹಲಿ: ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಸಿಬಿಐ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದೆ.

ಯತ್ನಾಳ ಹಾಗೂ ಸಿಬಿಐ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಪೀಠವು ಶಿವಕುಮಾರ್ ಹಾಗೂ ಲೋಕಾಯುಕ್ತಕ್ಕೆ ನೋಟಿಸ್ ನೀಡಿತ್ತು.

'ಪರಿಶೀಲನಾರ್ಹ ದತ್ತಾಂಶ'ದ ಆಧಾರದಲ್ಲಿ ವರ್ಗೀಕರಣ

ಒಳಮೀಸಲು ಜಾರಿಗೆ ಒಮ್ಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಯ ಎಲ್ಲ ಉಪ ಜಾತಿಗಳ 'ಪರಿಶೀಲನಾರ್ಹ ದತ್ತಾಂಶ' (ಎಂಫರಿಕಲ್ ಡಾಟಾ) ಆಧಾರದಲ್ಲಿ ಒಳ ಮೀಸಲಾತಿ ಜಾರಿಗೆ ಪರಿಶಿಷ್ಟ ಜಾತಿ ಪ್ರತಿನಿಧಿಸುವ ಕಾಂಗ್ರೆಸ್‌ನ ಜನಪ್ರತಿನಿಧಿಗಳು ಒಮ್ಮತ ವ್ಯಕ್ತಪಡಿಸಿದ್ದಾರೆ.

ಒಳ ಮೀಸಲಾತಿ ಜಾರಿ ಕುರಿತಂತೆ ಗೃಹ ಸಚಿವ ಜಿ. ಪರಮೇಶ್ವರ ನಿವಾಸದಲ್ಲಿ ಸೋಮವಾರ ಸಭೆ ನಡೆಯಿತು. ವಿಧಾನ ಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಎಲ್ಲ ಸಚಿವರು, ಶಾಸಕ ದರ್ಶನ್ ಧ್ರುವನಾರಾಯಣ ಬಿಟ್ಟು ಎಲ್ಲ ಶಾಸಕರು, ಪರಿಷತ್ ಸದಸ್ಯರು ಸಭೆಯಲ್ಲಿದ್ದರು.

ಒಳ ಮೀಸಲಾತಿ ಜಾರಿಗೆ ಎಲ್ಲರೂ ಸಹಮತಕ್ಕೆ ಬಂದಿದ್ದೇವೆ. ಆದರೆ, ನೈಜ ದತ್ತಾಂಶದ ಆಧಾರದಲ್ಲಿ ಜಾರಿ ಮಾಡಬೇಕು ಎಂಬುದು ಬಹುತೇಕರ ಅಭಿಪ್ರಾಯ
ಜಿ. ಪರಮೇಶ್ವರ, ಗೃಹ ಸಚಿವ

ಪರಿಶೀಲನಾರ್ಹ ದತ್ತಾಂಶವಾಗಿ ಯಾವುದನ್ನು ಪರಿಗಣಿಸಬೇಕು ಎಂಬ ಬಗ್ಗೆ ಚರ್ಚೆ ನಡೆಯಿತು. 2011ರಲ್ಲಿ ನಡೆದ ಜನಗಣತಿಯ ಮಾಹಿತಿ ಸದ್ಯ ಅಧಿಕೃತ ಅಂಕಿ ಅಂಶ. ದತ್ತಾಂಶವನ್ನು ಪರಿಗಣಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವಾಲಯಕ್ಕೆ ಪತ್ರ ಬರೆಯುವ ಬಗ್ಗೆಯೂ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಳಸಿ ಪರಿಶಿಷ್ಟ ಜಾತಿಗಳ ಉಪಜಾತಿಗಳ ಸಮೀಕ್ಷೆ ನಡೆಸುವುದು ಸೂಕ್ತ ಎಂದು ಕೆಲವರು ಸಲಹೆ ನೀಡಿದರೆ, ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನೀಡಿರುವ ವರದಿಯಲ್ಲಿರುವ ಅಂಕಿಅಂಶಗಳನ್ನು ಪರಿಗಣಿಸುವ ಬಗ್ಗೆಯೂ ಇನ್ನೂ ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

10ನೇ ಪುಟ ನೋಡಿ

ಜಾತಿಗಣತಿ ವಿರುದ್ಧ ಜಂಟಿ ಹೋರಾಟಕ್ಕೆ ತೀರ್ಮಾನ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿ (ಜಾತಿ ಜನಗಣತಿ) ಬಹಿರಂಗಕ್ಕೆ ವಿರೋಧ ವ್ಯಕ್ತಪಡಿಸಿರುವ ವೀರಶೈವ-ಲಿಂಗಾಯತರು, ಒಕ್ಕಲಿಗರ ಜತೆಗೂಡಿ ಹೋರಾಟ ರೂಪಿಸಲು ಮುಂದಾಗಿದ್ದಾರೆ.

ಈ ಕುರಿತು ಚರ್ಚಿಸಲು ಹೋಟೆಲ್ ರ‍್ಯಾಡಿಷನ್ ಬ್ಲೂನಲ್ಲಿ ಅ. 22ರಂದು ಸಭೆ ವೀರಶೈವ-ಲಿಂಗಾಯತರ ಪ್ರಮುಖರ ಸಭೆ ನಡೆಯಲಿದೆ. ಸಭೆಯ ನಂತರ ಕರ್ನಾಟಕ ರಾಜ್ಯ ಒಕ್ಕಲಿಗ ಸಂಘದ ಪದಾಧಿಕಾರಿಗಳ ಜತೆ ಮಾತುಕತೆ ನಡೆಯಲಿದೆ. ವೀರಶೈವರಂತೆ ಒಕ್ಕಲಿಗರೂ ಜಾತಿಗಣತಿ ಬಹಿರಂಗಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು, ಎರಡೂ ಸಮುದಾಯಗಳು ಜಂಟಿಯಾಗಿ ಹೋರಾಟ ರೂಪಿಸಲು ಅಣಿಯಾಗುತ್ತಿವೆ.

'ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಹೊರ ರಾಜ್ಯಗಳಿಗೆ ಗುಳೆ ಹೋದವರನ್ನು ಸಮೀಕ್ಷೆಯಲ್ಲಿ ಪರಿಗಣಿಸಿಲ್ಲ. ನಮ್ಮಲ್ಲೂ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಇದ್ದಾರೆ. ವರದಿಯನ್ನು ಒಪ್ಪಿಕೊಂಡರೆ ಲಕ್ಷಾಂತರ ಮಂದಿಗೆ ಅನ್ಯಾಯವಾಗುತ್ತದೆ' ಎಂದು ವೀರಶೈವ ಲಿಂಗಾಯತರು, ಒಕ್ಕಲಿಗರು ವಿರೋಧ ವ್ಯಕ್ತಪಡಿಸಿದ್ದರು.

10ನೇ ಪುಟ ನೋಡಿ

ಜೆಡಿಎಸ್– ಯೋಗೇಶ್ವರ್ ಕಿತ್ತಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಟಿಕೆಟ್‌ಗಾಗಿ ಜೆಡಿಎಸ್ ನಾಯಕರು ಮತ್ತು ಸಿ.ಪಿ. ಯೋಗೇಶ್ವರ್ ಮಧ್ಯೆ ಜಟಾಪಟಿ ತಾರಕಕ್ಕೇರಿದೆ. ಚುನಾವಣೆಯಲ್ಲಿ ಸ್ಪರ್ಧಿಸಲೇಬೇಕೆಂಬ ಹಟಕ್ಕೆ ಬಿದ್ದಿರುವ ಯೋಗೇಶ್ವರ್, ಪರಿಷತ್‌ನ ಬಿಜೆಪಿ ಸದಸ್ಯ ಸ್ಥಾನಕ್ಕೆ ಸೋಮವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಶಿಗ್ಗಾವಿ, ಸಂಡೂರು ಕ್ಷೇತ್ರಗಳಿಗಷ್ಟೇ ಅಭ್ಯರ್ಥಿಗಳನ್ನು ಪ್ರಕಟಿಸಿರುವ ಬಿಜೆಪಿ ರಾಷ್ಟ್ರೀಯ ನಾಯಕರು, ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿ ಕುರಿತು ಮೌನ ತಾಳಿದ್ದಾರೆ. ಚನ್ನಪಟ್ಟಣದ ಅಭ್ಯರ್ಥಿಯನ್ನು ತಾವೇ ನಿರ್ಧರಿಸುವುದಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಈ ಬೆಳವಣಿಗೆಯು ಬಿಕ್ಕಟ್ಟು ಉತ್ತುಂಗಕ್ಕೆ ತಲುಪಲು ಕಾರಣವಾಗಿದೆ.

ಯೋಗೇಶ್ವರ್ ಅವರನ್ನೇ ಜೆಡಿಎಸ್ ಅಭ್ಯರ್ಥಿಯಾಗಿಸಲು ಮೈತ್ರಿಕೂಟದಲ್ಲಿ ಚರ್ಚೆ ಬಿರುಸಾಗಿತ್ತು. 'ಯೋಗೇಶ್ವರ್ ಅವರು ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರನ್ನು ಆಗಾಗ ಭೇಟಿಯಾಗುತ್ತಿದ್ದಾರೆ' ಎಂದು ಕುಮಾರಸ್ವಾಮಿ ಅವರು ಆರೋಪಿಸಿದ ಬೆನ್ನಲ್ಲೇ ವಾಕ್ಸಮರ ಜೋರಾಗಿದೆ.

5ನೇ ಪುಟ ನೋಡಿ

ನಾನು ಸಿ.ಪಿ. ಯೋಗೇಶ್ವರ್ ಅವರನ್ನು ಭೇಟಿ ಮಾಡಿಲ್ಲ. ಮಾತೂ ಆಡಿಲ್ಲ. ಬೇರೆ ಪಕ್ಷದವರನ್ನು ಸಂಪರ್ಕಿಸುವ ಅಗತ್ಯ ಸದ್ಯಕ್ಕಿಲ್ಲ ಎಂದು ನಮ್ಮ ಪಕ್ಷದವರಿಗೂ ಹೇಳಿದ್ದೇನೆ
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಬಿಜೆಪಿ ಜತೆಗಿನ ಮೈತ್ರಿಗೆ ಅಗೌರವ ತೋರಬಾರದು ಎಂದು ಸಹಿಸಿಕೊಂಡಿದ್ದೇವೆ. ಮೈತ್ರಿ ಚೌಕಟ್ಟಿನ ಒಳಗೆ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ
ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ

ಚನ್ನಪಟ್ಟಣ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಆಯ್ಕೆ ಇನ್ನೂ ಅಂತಿಮವಾಗಿಲ್ಲ. ಕೇಂದ್ರ ಸಚಿವ ಕುಮಾರಸ್ವಾಮಿ ಅವರ ತೀರ್ಮಾನವೇ ಈ ವಿಚಾರದಲ್ಲಿ ಮುಖ್ಯವಾಗುತ್ತದೆ
ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

'ನನ್ನ ಸ್ಪರ್ಧೆ ಖಚಿತ'

ಯೋಗೇಶ್ವರ್

ಹುಬ್ಬಳ್ಳಿ: 'ಚನ್ನಪಟ್ಟಣ ಉಪ ಚುನಾವಣೆಗೆ ಸ್ಪರ್ಧಿಸುವುದು ಖಚಿತ. ಬಿಜೆಪಿ ಟಿಕೆಟ್ ಸಿಗದಿದ್ದರೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅನುಕೂಲವಾಗಲೆಂದು ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ' ಎಂದು ಯೋಗೇಶ್ವರ್ ಹೇಳಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಇಲ್ಲಿನ ನಿವಾಸಕ್ಕೆ ಸೋಮವಾರ ಸಾಯಂಕಾಲ ಬಂದ ಅವರು ರಾಜೀನಾಮೆ ಸಲ್ಲಿಸಿದರು. ಅದನ್ನು ಅಂಗೀಕರಿಸಿರುವುದಾಗಿ ಸಭಾಪತಿ ಪ್ರಕಟಿಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಯೋಗೇಶ್ವರ್, 'ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಬಗ್ಗೆ ಈ ಕ್ಷಣದವರೆಗೆ ನಿರ್ಧರಿಸಿಲ್ಲ. ಮುಂದೆ ಏನಾಗುತ್ತದೆಯೋ ಗೊತ್ತಿಲ್ಲ. ಮಂಗಳವಾರ ಕಾರ್ಯಕರ್ತರ ಜೊತೆ ಚರ್ಚಿಸಿ, ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ. ನಾನಿನ್ನೂ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿಲ್ಲ' ಎಂದು ತಿಳಿಸಿದರು.

ಕಾರ್ಯಕರ್ತರತ್ತ ಜೆಡಿಎಸ್ ಚಿತ್ತ

ಬೆಂಗಳೂರು: ವಿಧಾನಪರಿಷತ್ ಸ್ಥಾನಕ್ಕೆ ಯೋಗೇಶ್ವರ್ ರಾಜೀನಾಮೆ ನೀಡಿದ ಹಠಾತ್ ಬೆಳವಣಿಗೆ ನಂತರ ಸ್ಥಳೀಯ ಕಾರ್ಯಕರ್ತರನ್ನು ಕಣಕ್ಕೆ ಇಳಿಸಲು ಜೆಡಿಎಸ್ ನಾಯಕರು ಚಿಂತನೆ ನಡೆಸಿದ್ದಾರೆ. ಪುತ್ರ ನಿಖಿಲ್ ಕುಮಾರಸ್ವಾಮಿ ಜೊತೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರನ್ನು ಭೇಟಿಯಾದ ಕುಮಾರಸ್ವಾಮಿ ಅವರು ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ.

'ಯೋಗೇಶ್ವರ್ ಕಾಂಗ್ರೆಸ್ ಸೇರುತ್ತಾರೋ ಅಥವಾ ಪಕ್ಷೇತರವಾಗಿ ಸ್ಪರ್ಧಿಸುತ್ತಾರೋ ಎನ್ನುವುದನ್ನು ನೋಡಿಕೊಂಡು ಅಭ್ಯರ್ಥಿ ಆಯ್ಕೆ ಅಂತಿಮಗೊಳಿಸಲಾಗುವುದು. ಮಂಗಳವಾರ ಚನ್ನಪಟ್ಟಣದ ಮುಖಂಡರು, ಕಾರ್ಯಕರ್ತರ ಜೊತೆ ಚರ್ಚೆ ನಡೆಸಿ, ಅಭಿಪ್ರಾಯ ಆಲಿಸಲು ಸೂಚಿಸಿದ್ದೇನೆ. ಸಭೆಯ ನಂತರ ಅವರನ್ನು ಬೆಂಗಳೂರಿಗೆ ಕರೆಯಿಸಿಕೊಂಡು ಸಂಜೆಯೇ ಅಭ್ಯರ್ಥಿ ಆಯ್ಕೆ ಅಂತಿಮಗೊಳಿಸಲಾಗುವುದು' ಎಂದು ಕುಮಾರಸ್ವಾಮಿ ಅವರು ದೇವೇಗೌಡರಿಗೆ ವಿವರ ನೀಡಿದ್ದಾರೆ.

₹5 ಲಕ್ಷದ ನಿವೇಶನ ಸರ್ಕಾರದ ಹೆಸರಿಗೆ ನೋಂದಾಯಿಸಿದ ನಿವಾಸಿಗಳು

ಸರ್ಕಾರಿ ಶಾಲೆಗೆ ನಿವೇಶನ ದೇಣಿಗೆ

• ಬಿ.ಎ. ನಂದಿಕೋಲಮಠ

ಲಿಂಗಸುಗೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಕುಪ್ಪಿಗುಡ್ಡ ಗ್ರಾಮಸ್ಥರು ವಂತಿಗೆ ಸಂಗ್ರಹಿಸಿ ಖರೀದಿಸಿದ ನಿವೇಶನವನ್ನು ಸರ್ಕಾರಿ ಪ್ರಾಥಮಿಕ ಶಾಲೆಗೆ ದೇಣಿಗೆ ನೀಡಿದ್ದಾರೆ.

ರಾಯಚೂರು ಜಿಲ್ಲಾ ಕೇಂದ್ರ ಸಂಪರ್ಕಿಸುವ ಮುಖ್ಯ ರಸ್ತೆಯಲ್ಲಿರುವ ಪುಟ್ಟ ಗ್ರಾಮ ಕುಪ್ಪಿಗುಡ್ಡದಲ್ಲಿ ಪ್ರಾಥಮಿಕ ಶಾಲೆ ಇದೆ. 1ರಿಂದ 7ನೇ ತರಗತಿಯಲ್ಲಿ 87 ಮಕ್ಕಳು ಓದುತ್ತಿದ್ದಾರೆ. ಇರುವ ಏಳು ಕೊಠಡಿಗಳ ಪೈಕಿ ಮೂರು ಕೊಠಡಿಗಳು ಶಿಥಿಲಗೊಂಡಿದ್ದು, ಕ್ರೀಡಾ ಚಟುವಟಿಕೆಗೆ ಮೈದಾನವೇ ಇಲ್ಲವಾಗಿತ್ತು.

ವೀರೇಶ ಮುದ್ನೂರು, ದೇವಣ್ಣ ನೆಲೋಗಿ, ಹನುಮಂತರಾಯ ನೆಲೋಗಿ, ಸಾಬಣ್ಣ ನೆಲೋಗಿ, ಮಾಧವ ನೆಲೋಗಿ, ಬಾಲಪ್ಪ ಮಾನಮಟ್ಟಿ, ಅಯ್ಯನಗೌಡ ಪಾಟೀಲ ಸೇರಿದಂತೆ ಶಾಲಾ ಸುಧಾರಣಾ ಸಮಿತಿ ಸದಸ್ಯರು ₹5 ಲಕ್ಷ ವಂತಿಗೆ ಸಂಗ್ರಹಿಸಿದ್ದಾರೆ. ಈ ಮೊತ್ತದಲ್ಲಿ 45X36 (1,620 ಚದರ ಅಡಿ) ವಿಸ್ತೀರ್ಣದ ನಿವೇಶನ ಖರೀದಿಸಿ ಶಾಲೆಗೆ ದೇಣಿಗೆ ನೀಡಿದ್ದಾರೆ.

ಕುಪ್ಪಿಗುಡ್ಡ ಗ್ರಾಮಸ್ಥರು ನಿವೇಶನ ನೋಂದಣಿ ಮಾಡಿಸಿದ ಪ್ರತಿ

ಅಕ್ಟೋಬರ್ 15ರಂದು ಲಿಂಗಸುಗೂರು ಉಪ ನೋಂದಣಾಧಿಕಾರಿ ಕಚೇರಿಗೆ ಬಂದ ಗ್ರಾಮಸ್ಥರು, ಕ್ಷೇತ್ರ ಶಿಕ್ಷಣಾಧಿಕಾರಿ ಹೊಂಬಣ್ಣ ರಾಠೋಡ ಸಮಕ್ಷಮ ರಾಜ್ಯಪಾಲರ ಹೆಸರಿನಲ್ಲಿ ನಿವೇಶನ ನೋಂದಣಿ ಮಾಡಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೊಂಬಣ್ಣ ರಾಠೋಡ ಮಾತನಾಡಿ, 'ತಾಲ್ಲೂಕಿನಲ್ಲಿ ಈ ಹಿಂದೆ ದಾನವಾಗಿ ನೀಡಿದ ಎಷ್ಟೋ ಶಾಲಾ ನಿವೇಶನಗಳು ಸಮಸ್ಯೆಯಲ್ಲಿವೆ. ಇಂತಹ ಸಂದರ್ಭದಲ್ಲಿ ಕುಪ್ಪಿಗುಡ್ಡ ಗ್ರಾಮಸ್ಥರು ವಂತಿಗೆ ಸಂಗ್ರಹಿಸಿ ಖರೀದಿಸಿದ ನಿವೇಶನವನ್ನು ಸರ್ಕಾರದ ಹೆಸರಲ್ಲಿ ನೋಂದಾಯಿಸಿದ್ದು ಖುಷಿ ತಂದಿದೆ' ಎಂದರು.

'ಶಾಲಾ ಸುಧಾರಣಾ ಸಮಿತಿ ಸಭೆಯಲ್ಲಿ ಕೊಠಡಿಗಳ ಸ್ಥಿತಿಗತಿ, ನಿವೇಶನ ಕೊರತೆ ಬಗ್ಗೆ ಗಮನಕ್ಕೆ ತಂದಿದ್ದೆವು. ಶಿಕ್ಷಕರ ಸಹಕಾರದಿಂದ ಗ್ರಾಮಸ್ಥರು ವಂತಿಗೆ ಸಂಗ್ರಹಿಸಿ ನಿವೇಶನ ನೋಂದಣಿ ಮಾಡಿಸಿದ್ದು ಖುಷಿ ತಂದಿದೆ. ಶಿಕ್ಷಣ ಪ್ರೇಮಿಗಳ ಸಹಕಾರಕ್ಕೆ ಋಣಿಯಾಗಿರುವೆ' ಎಂದು ಮುಖ್ಯಶಿಕ್ಷಕಿ ಕಾಶಿಬಾಯಿ ಹೇಳಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಲಡಾಖ್ – ಎಲ್‌ಎಸಿ ಉದ್ದಕ್ಕೂ ಗಸ್ತು: ಭಾರತ– ಚೀನಾ ಒಪ್ಪಂದ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನ ವಾಸ್ತವಿಕ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ಇನ್ನೂ ಸಂಘರ್ಷ ಉಳಿದಿರುವ ಸ್ಥಳಗಳಲ್ಲಿ ಗಸ್ತು ತಿರುಗಲು ಚೀನಾ ಜತೆಗೆ ಒಪ್ಪಂದಕ್ಕೆ ಬಂದಿರುವುದಾಗಿ ಭಾರತ ಸೋಮವಾರ ಪ್ರಕಟಿಸಿದೆ.

ಸಂಧಾನಕಾರರ ನಡುವೆ ಕಳೆದ ಕೆಲವು ವಾರಗಳಿಂದ ನಡೆದ ಮಾತುಕತೆಗಳ ನಂತರ ಆಗಿರುವ ಪ್ರಮುಖ ಬೆಳವಣಿಗೆ ಇದಾಗಿದೆ. ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾಗೆ ಭೇಟಿ ನೀಡುವ ಮುನ್ನಾ ದಿನ ಈ ಮಹತ್ವದ ಬೆಳವಣಿಗೆ ನಡೆದಿದೆ.

10ನೇ ಪುಟ ನೋಡಿ

ಚೀನಾ ಹಾರಿಕೆ ಉತ್ತರ

ಬೀಜಿಂಗ್ (ಪಿಟಿಐ): ಬ್ರಿಕ್ಸ್ ಶೃಂಗಸಭೆಯ ನೇಪಥ್ಯದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ನಡುವೆ ಸಂಭವನೀಯ ದ್ವಿಪಕ್ಷೀಯ ಮಾತುಕತೆ ಬಗ್ಗೆ ಚೀನಾ ಸೋಮವಾರ ಹಾರಿಕೆಯ ಉತ್ತರ ನೀಡಿದೆ.

ಮೋದಿ ಮತ್ತು ಷಿ ಜಿನ್ ಪಿಂಗ್ ಅವರ ಭೇಟಿ ಕುರಿತು ಸುದ್ದಿಗೋಷ್ಠಿಯಲ್ಲಿ ಎದುರಾದ ಪ್ರಶ್ನೆಗೆ ಉತ್ತರಿಸಿದ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್, 'ಆ ರೀತಿ ಏನಾದರೂ ನಡೆದರೆ ನಾವು ಅದನ್ನು ನಿಮಗೆ ತಿಳಿಸುತ್ತೇವೆ' ಎಂದರು. ಎಲ್‌ಎಸಿ ಕುರಿತ ಒಪ್ಪಂದದ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಪ್ರಜ್ವಲ್ ಜಾಮೀನು ಅರ್ಜಿಗಳ ವಜಾ

ಪ್ರಜಾವಾಣಿ ವಾರ್ತೆ

ಪ್ರಜ್ವಲ್

ಬೆಂಗಳೂರು: ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಜಾಮೀನು ಅರ್ಜಿಗಳನ್ನು ಹೈಕೋರ್ಟ್ ತಿರಸ್ಕರಿಸಿದೆ.

'ಮೇಲ್ನೋಟಕ್ಕೆ ಪ್ರಜ್ವಲ್ ಒಬ್ಬ ಲಂಪಟ ಹಾಗೂ ತನ್ನ ಇಂದ್ರಿಯಗಳ ಮೇಲಿನ ನಿಯಂತ್ರಣ ಕಳೆದುಕೊಂಡು, ಕಾಮಾತುರನಾಗಿ ವರ್ತಿಸಿದ್ದು, ಈ ನೀಚತನದ ಕೃತ್ಯಗಳು ಸ್ವಸ್ಥ ಸಮಾಜದ ಬೆನ್ನುಹುರಿಯಲ್ಲಿ ಚಳಿ ಹುಟ್ಟಿಸುವಂತಿದೆ' ಎಂದು ಹೇಳಿದೆ.

ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಒಂದು ನಿಯಮಿತ ಜಾಮೀನು ಮತ್ತು ಎರಡು ನಿರೀಕ್ಷಣಾ ಅರ್ಜಿಗಳ ಮೇಲಿನ ಸುದೀರ್ಘ ವಿಚಾರಣೆ ಆಲಿಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿತು.

ಗೋಪಾಲ್ ಜೋಶಿ ಹತ್ತು ದಿನ ಪೊಲೀಸ್ ವಶಕ್ಕೆ

ಬೆಂಗಳೂರು: ಲೋಕಸಭೆ ಚುನಾವಣೆಗೆ ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ದೇವಾನಂದ್ ಫೂಲ್ ಸಿಂಗ್ ಚವ್ಹಾಣ್ ಅವರಿಂದ ₹2 ಕೋಟಿ ಸುಲಿಗೆ ಮಾಡಿದ್ದ ಆರೋಪದಡಿ ಬಂಧಿತರಾಗಿರುವ ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರ ಅಣ್ಣ ಗೋಪಾಲ ಜೋಶಿ ಅವರನ್ನು ಹತ್ತು ದಿನ ಪೊಲೀಸ್ ವಶಕ್ಕೆ ನ್ಯಾಯಾಲಯ ಒಪ್ಪಿಸಿದೆ.

ಗೋಪಾಲ್ ಜೋಶಿ ಅವರನ್ನು ಮಹಾರಾಷ್ಟ್ರದಲ್ಲಿ ಬಸವೇಶ್ವರ ನಗರ ಠಾಣೆಯ ವಿಶೇಷ ಪೊಲೀಸ್ ತಂಡ ಶನಿವಾರ ಬಂಧಿಸಿತ್ತು. ಗೋಪಾಲ್ ಜೋಶಿ ಮತ್ತು ಅವರ ಪುತ್ರ ಅಜಯ್ ಜೋಶಿ ಅವರನ್ನು ಪುಣೆಯಲ್ಲಿ ವಿಚಾರಣೆ ನಡೆಸಿ, ಬೆಂಗಳೂರಿಗೆ ಸೋಮವಾರ ಕರೆತರಲಾಯಿತು. ವೈದ್ಯಕೀಯ ಪರೀಕ್ಷೆ ಒಳಪಡಿಸಿದ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ಪೊಲೀಸ್ ವಶಕ್ಕೆ ಪಡೆದುಕೊಳ್ಳಲಾಗಿದೆ.

ಅಥಣಿಯ ಎಂಜಿನಿಯರ್ ಸೋಮಶೇಖರ್ ಹಾಗೂ ಬೆಂಗಳೂರಿನ ಬಸವೇಶ್ವರ ನಗರ ನಿವಾಸಿ ವಿಜಯ ಕುಮಾರಿ ಅವರನ್ನು ಶನಿವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಈ ನಡುವೆ ವಿಜಯ ಕುಮಾರಿ ಮನೆಯಲ್ಲಿ ಬಿಎಂಆರ್‌ಸಿಎಲ್ ಹಾಗೂ ಬಿಡಿಎಗೆ ಸಂಬಂಧಿಸಿ ಮಹತ್ವದ ದಾಖಲೆಗಳು ಪತ್ತೆಯಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ನೂರು ಹೊಸ ಠಾಣೆ ಸ್ಥಾಪನೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪೊಲೀಸರ ಮಕ್ಕಳಿಗೆ 7 ಪಬ್ಲಿಕ್ ಶಾಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಮಕ್ಕಳಿಗಾಗಿ ರಾಜ್ಯದ ಏಳು ಪ್ರಮುಖ ಸ್ಥಳಗಳಲ್ಲಿ ಏಳು ಪಬ್ಲಿಕ್ ಶಾಲೆಗಳನ್ನು ತೆರೆಯಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ನಗರ ಸಶಸ್ತ್ರ ಮೀಸಲು ಪಡೆ ಆವರಣದಲ್ಲಿ ಪೊಲೀಸ್ ಸಂಸ್ಮರಣಾ ದಿನದ ಅಂಗವಾಗಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹುತಾತ್ಮ ಪೊಲೀಸ್ ಸಿಬ್ಬಂದಿಗೆ ನಮನ ಸಲ್ಲಿಸಿ ಅವರು ಮಾತನಾಡಿದರು.

ಎಲ್ಲರಿಗೂ ಗುಣಮಟ್ಟ ಹಾಗೂ ವೈಚಾರಿಕ ಶಿಕ್ಷಣ ಸಿಗಬೇಕು. ಹಾಗಾಗಿ, ಪಬ್ಲಿಕ್ ಶಾಲೆ ಆರಂಭಿಸಲು ನಿರ್ಧರಿಸಲಾಗಿದೆ. ಪೊಲೀಸರು ಮುಕ್ತ ಮತ್ತು ಸ್ವತಂತ್ರವಾಗಿ ಕೆಲಸ ಮಾಡಲು ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ ಎಂದರು.

ಜನರ ಪ್ರಾಣ, ಆಸ್ತಿ ರಕ್ಷಿಸುವ ಪೊಲೀಸ್ ಸಿಬ್ಬಂದಿಯ ಹಿತ ರಕ್ಷಣೆಗೆ ಬದ್ಧವಾಗಿರುವ ಸರ್ಕಾರ, 2025ರ ವೇಳೆಗೆ 10 ಸಾವಿರ ಪೊಲೀಸ್ ವಸತಿ ಗೃಹಗಳ ನಿರ್ಮಾಣಕ್ಕೆ ₹2 ಸಾವಿರ ಕೋಟಿ ನೀಡಲಾಗಿದೆ. ₹200 ಕೋಟಿ ವೆಚ್ಚದಲ್ಲಿ 100 ಹೊಸ ಠಾಣೆಗಳು ನಿರ್ಮಾಣವಾಗುತ್ತಿವೆ ಎಂದು ಹೇಳಿದರು.

ನಗರದಲ್ಲಿ ಆಯೋಜಿಸಿದ್ದ ಪೊಲೀಸ್ ಸಂಸ್ಮರಣಾ ದಿನದ ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಪಿ ಪೊಲೀಸರು ಹುತಾತ್ಮ ಪೊಲೀಸರಿಗೆ ಗೌರವ ವಂದನೆ ಸಲ್ಲಿಸಿದರು ಪ್ರಜಾವಾಣಿ ಚಿತ್ರ: ರಂಜು ಪಿ

ಅಪರಾಧ ತಡೆಯಲು ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ ವಿವಿಧೆಡೆ ಆರು ಲಕ್ಷ ಸಿ.ಸಿ.ಟಿ.ವಿ. ಕ್ಯಾಮೆರಾಗಳು ಹಾಗೂ 260ಕ್ಕೂ ಹೆಚ್ಚು ಹೆದ್ದಾರಿ ಗಸ್ತು ವಾಹನಗಳು ಕರ್ತವ್ಯ ನಿರ್ವಹಿಸುತ್ತಿವೆ ಎಂದು ಮಾಹಿತಿ ನೀಡಿದರು.

ಕಳೆದ ಒಂದು ವರ್ಷದಲ್ಲಿ ದೇಶದಲ್ಲಿ 216 ಮಂದಿ, ರಾಜ್ಯದಲ್ಲಿ 12 ಮಂದಿ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳು ಕರ್ತವ್ಯದಲ್ಲಿದ್ದಾಗಲೇ ಹುತಾತ್ಮರಾಗಿದ್ದಾರೆ. ದೇಶದಲ್ಲಿ ಆಂತರಿಕ ಭದ್ರತೆ ಕಾಪಾಡುವಲ್ಲಿ, ದೌರ್ಜನ್ಯ, ಅಪರಾಧ, ದುರಂತಗಳನ್ನು ತಡೆಯುವುದರಲ್ಲಿ ಪ್ರಮುಖ ಪಾತ್ರ ವಹಿಸುವುದು ಪೊಲೀಸ್ ಸಿಬ್ಬಂದಿ. ಹೀಗಾಗಿ ಇವರ ಜವಾಬ್ದಾರಿ ಬಹಳ ದೊಡ್ಡದು ಎಂದರು.

ಗೃಹ ಸಚಿವ ಜಿ.ಪರಮೇಶ್ವರ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್. ಕೆ. ಅತೀಕ್, ಗೃಹ ಇಲಾಖೆ ಕಾರ್ಯದರ್ಶಿ ಉಮಾಶಂಕರ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಉಪಸ್ಥಿತರಿದ್ದರು.

ಕಾನೂನು ಸುವ್ಯವಸ್ಥೆಯಿಂದ ಜಿಡಿಪಿ ವೃದ್ಧಿ

ಕಾನೂನು ಸುವ್ಯವಸ್ಥೆಗೂ ದೇಶದ ಒಟ್ಟು ಆಂತರಿಕ ಉತ್ಪಾದನೆಗೂ (ಜಿಡಿಪಿ) ನೇರಾ ನೇರ ಸಂಬಂಧ ಇರುವುದರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಿಸಿದರು.

ಕಾನೂನು ಸುವ್ಯವಸ್ಥೆ ಸಮರ್ಪಕವಾಗಿದ್ದರೆ ಮಾತ್ರ ಬಂಡವಾಳ ಹೂಡಿಕೆ ಹೆಚ್ಚಾಗುತ್ತದೆ. ಇದರಿಂದ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತದೆ, ಆರ್ಥಿಕತೆಯ ವೇಗ ಹೆಚ್ಚುತ್ತದೆ. ಆರ್ಥಿಕತೆಗೆ ವೇಗ ಬಂದರೆ ಅಭಿವೃದ್ಧಿ ಹೆಚ್ಚುತ್ತದೆ. ಅಭಿವೃದ್ಧಿ ಹೆಚ್ಚಾದರೆ ದೇಶದ ಜಿಡಿಪಿ, ತಲಾ ಆದಾಯವೂ ಹೆಚ್ಚುತ್ತದೆ ಎಂದು ವಿಶ್ಲೇಷಿಸಿದರು.

ಸುದ್ದಿ 2 ನಿಮಿಷ

ನಕಲಿ ಆಡಿಯೊ ಪ್ರಕರಣ: ದೂರು ದಾಖಲಿಸಿದ ಶಾಸಕ ಶಿವಲಿಂಗೇಗೌಡ

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ನಕಲಿ ಆಡಿಯೊ ಹರಿ ಬಿಡುವ ಮೂಲಕ ತಮ್ಮ ಗೌರವಕ್ಕೆ ಚ್ಯುತಿ ಉಂಟು ಮಾಡುತ್ತಿರುವ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಅರಸೀಕೆರೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಹಣ ಹಂಚುವಂತೆ ತಾವು ಹೇಳಿದ್ದಾಗಿ ನಕಲಿ ಆಡಿಯೊವನ್ನು ಸೃಷ್ಟಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿದೆ. ಇದರಿಂದ ನನ್ನ ಘನತೆಗೆ ಧಕ್ಕೆಯುಂಟಾಗುತ್ತಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ನಕಲಿ ಆಡಿಯೊ ಹರಿಬಿಡುತ್ತಿರುವ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಕೋರಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಕಳೆದ ವಿಧಾನಸಭೆ ಚುನಾವಣೆಗೂ ಮುನ್ನ ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡಿದ್ದ ಶಿವಲಿಂಗೇಗೌಡ ಅವರು, ಅರಸೀಕೆರೆ ಕ್ಷೇತ್ರದಿಂದ ಶಾಸಕರಾಗಿ ಚುನಾಯಿತರಾಗಿದ್ದಾರೆ. ಸದ್ಯ, ರಾಜ್ಯ ಗೃಹಮಂಡಳಿ ಅಧ್ಯಕ್ಷರಾಗಿದ್ದಾರೆ.

‘ಚುನಾವಣೆ ನಡೆದು ಆರು ತಿಂಗಳು ಆಗಿದೆ. ಯಾವ ಉದ್ದೇಶದಿಂದ ನಕಲಿ ಆಡಿಯೊ ಜಾಲತಾಣದಲ್ಲಿ ಹರಿಬಿಡಲಾಗಿದೆ? ಯಾರು ಈ ಕೆಲಸ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ನಾನು ಮಾತನಾಡಿರುವುದೇ ಒಂದು. ಅದಕ್ಕೆ ಸಂಬಂಧವಿಲ್ಲದ ಮತ್ತೊಂದು ಆಡಿಯೊವನ್ನು ಸೇರಿಸಲಾಗಿದೆ. ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದೇನೆ’ ಎಂದು ಶಿವಲಿಂಗೇಗೌಡ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಚನ್ನಮ್ಮ ಅಂಚೆಚೀಟಿ ನಾಳೆ ಬಿಡುಗಡೆ

ನವದೆಹಲಿ: ವೀರ ವನಿತೆ ಕಿತ್ತೂರು ರಾಣಿ ಚನ್ನಮ್ಮ ಗೌರವಾರ್ಥ ಅಂಚೆ ಚೀಟಿಯನ್ನು ಅಂಚೆ ಇಲಾಖೆ ಇದೇ 23ರಂದು ಬಿಡುಗಡೆ ಮಾಡಲಿದೆ.

ಬ್ರಿಟಿಷರ ವಿರುದ್ಧ ಚನ್ನಮ್ಮ ಅವರು ಐತಿಹಾಸಿಕ ವಿಜಯಕ್ಕೀಗ 200 ವರ್ಷ ಸಂದಲಿದ್ದು, ಇದರ ಜ್ಞಾಪಕಾರ್ಥವಾಗಿ ಕೇಂದ್ರ ಸರ್ಕಾರ ಅಂಚೆ ಚೀಟಿ ಬಿಡುಗಡೆ ಮಾಡುತ್ತಿದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನೇತೃತ್ವದಲ್ಲಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಅರವಿಂದ ಬೆಲ್ಲದ, ಅಭಯ್ ಪಾಟೀಲ ಸೇರಿದಂತೆ ಕಿತ್ತೂರು ಕರ್ನಾಟಕ ಭಾಗದ ಪ್ರಮುಖರು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು.

ರೈಸ್ ಪುಲ್ಲಿಂಗ್ ಚೊಂಬು ಹೆಸರಿನಲ್ಲಿ ಮನೆ, ಜಮೀನು ಕಬಳಿಕೆ

ಉದ್ಯಮಿಯ ಸುಲಿಗೆ: ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಸ್ ಪುಲ್ಲಿಂಗ್ ಚೊಂಬು ವ್ಯವಹಾರದ ಕಥೆ ಹಣೆದು ಉದ್ಯಮಿಯೊಬ್ಬರ ಕೋಟ್ಯಂತರ ಮೌಲ್ಯದ ಸ್ಥಿರಾಸ್ತಿಗಳನ್ನು ತಮ್ಮ ಹೆಸರಿಗೆ ಬರೆಸಿಕೊಂಡು ವಂಚಿಸಿದ್ದ ಆರೋಪದ ಪ್ರಕರಣದಲ್ಲಿ ಮಹಿಳೆ ಸೇರಿ ಐವರು ಆರೋಪಿಗಳನ್ನು ಕೇಂದ್ರ ಅಪರಾಧ ವಿಭಾಗ(ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ.

ಹಾಸನ ಜಿಲ್ಲೆ ಚನ್ನರಾಯಪಟ್ಟಣದ ನಾಗರತ್ನ, ಹೊಳೆನರಸೀಪುರದ ರಾಮಚಂದ್ರ, ಬೆಂಗಳೂರಿನ ಸುಕುಮಾರನ್, ಮಂಜುನಾಥ ಹಾಗೂ ನಟೇಶ್ ಬಂಧಿತರು.

ಆರೋಪಿಗಳಿಂದ ರೈಸ್ ಪುಲ್ಲಿಂಗ್ ಚೊಂಬುಗಳನ್ನು ಜಪ್ತಿ ಮಾಡಲಾಗಿದೆ. ಉದ್ಯಮಿ ಹೆಣ್ಣೂರು ಪ್ರಕೃತಿ ಲೇಔಟ್ ನಿವಾಸಿ ವಿ.ಕಾಂತರಾಜು ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಗಂಗಾ ಬೋರ್‌ವೆಲ್ ಹೆಸರಿನಲ್ಲಿ ಉದ್ಯಮಿ ಕಾಂತರಾಜು ವ್ಯವಹಾರ ಮಾಡುತ್ತಿದ್ದು, ಕಚ್ಚಾ ತೈಲ ಮತ್ತು ರಿಫೈನರಿ ಘಟಕ ತೆರೆಯಲು ಪ್ರಯತ್ನಿಸುತ್ತಿದ್ದರು. ಈ ವೇಳೆ ಕನಕಪುರದ ಮನು ಮತ್ತು ರಾಮಣ್ಣ ಎಂಬುವರ ಮೂಲಕ ಆರೋಪಿಗಳಾದ ನಾಗರತ್ನ ಮತ್ತು ರಾಮಚಂದ್ರಪ್ಪ ಪರಿಚಯವಾಗಿದೆ. ಈ ವೇಳೆ ನಾಗರತ್ನ, ಚನ್ನರಾಯಪಟ್ಟಣದಲ್ಲಿ ಪೆಟ್ರೋಲ್ ಬಂಕ್ ಇದ್ದು, ಮಾಜಿ ಸಚಿವರಾದ ಶ್ರೀರಾಮುಲು ಮತ್ತು ಅಶ್ವತ್ಥನಾರಾಯಣ ಪರಿಚಯವಿದ್ದು, ಕೇಂದ್ರ ಸರ್ಕಾರದಿಂದ ಅನುಮತಿ ಕೊಡಿಸುತ್ತೇನೆ ಎಂದು ನಂಬಿಸಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಉದ್ಯಮಕ್ಕೆ ಅಗತ್ಯವಿರುವ ಸಾವಿರಾರು ಕೋಟಿ ರೂಪಾಯಿ ಬಂಡವಾಳ ಹೊಂದಿಸುವುದು ಆಗುವುದಿಲ್ಲ. ನಮ್ಮ ಬಳಿ ಐದು ರೈಸ್ ಪುಲ್ಲಿಂಗ್ ಚೊಂಬುಗಳಿವೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅವುಗಳಿಗೆ ₹ 5 ಲಕ್ಷ ಕೋಟಿ ಬೆಲೆ ಇದೆ ಎಂದು ನಂಬಿಸಿದ್ದರು. ನಂತರ ನಟೇಶ್ ಮತ್ತು ಸುಕುಮಾರ್ ಎಂಬುವರು ಕಾಂತರಾಜು ಬಳಿ ತಾವು ರೇಡಿಯಸ್ ಕಂಪನಿ ಸಿಇಒಗಳು ಎಂದು ಪರಿಚಯಿಸಿಕೊಂಡಿದ್ದರು. ರಾಮಚಂದ್ರಪ್ಪ ಎಂಬಾತ ಸಿಇಜಿಎಆರ್‌ಎನ್ ಕಂಪನಿ ಸಿಇಒ ಎಂದು ಪರಿಚಯಿಸಿಕೊಂಡಿದ್ದ. ಬಳಿಕ ಆರೋಪಿಗಳು ರೈಸ್ ಪುಲ್ಲಿಂಗ್ ಚೊಂಬುಗಳನ್ನು ತೋರಿಸಿ ಪರೀಕ್ಷಿಸಿ ಕಾಂತರಾಜುನನ್ನು ನಂಬಿಸಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘ರೈಸ್ ಪುಲ್ಲಿಂಗ್ ಚೊಂಬುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಬಂದ ಹಣವನ್ನು ಕೊಡುತ್ತೇವೆ. ಅಲ್ಲಿಯವರೆಗೆ ಸ್ಥಿರಾಸ್ತಿಯನ್ನು ಬರೆದುಕೊಡಬೇಕು ಎಂದು ಹೇಳಿ, ಕಾಂತರಾಜು ಅವರ ಕನಕಪುರ ತಾಲ್ಲೂಕಿನ ಅತ್ತಿಗುಪ್ಪೆ ಗ್ರಾಮದಲ್ಲಿನ 4 ಎಕರೆ 18 ಗುಂಟೆ ಜಮೀನನ್ನು ಸುಕುಮಾರನ್ ಪತ್ನಿ ಸವಿತಾ ಹೆಸರಿಗೆ ಕ್ರಯ ಮಾಡಿಸಿದ್ದರು. ನಂತರ ಆರೋಪಿಗಳು ರೈಸ್ ಪುಲ್ಲಿಂಗ್ ಚೊಂಬುಗಳು ಮಾರಾಟವಾಗಿಲ್ಲ. ಮಾರಾಟಕ್ಕೆ ಮಾರುಕಟ್ಟೆಯಲ್ಲಿ ₹1 ಕೋಟಿ ಹಣ ಠೇವಣಿ ಇರಿಸಬೇಕು ಎಂದು ಥಣಿಸಂದ್ರದ ಕಾಂತರಾಜು ಅವರ ಮನೆಯನ್ನು ರಾಮಚಂದ್ರ ಪಳನಿಕರನ್ ಹೆಸರಿಗೆ ಬರೆಸಿಕೊಂಡಿದ್ದರು. ನಂತರ ಚೊಂಬುಗಳು ₹100 ಕೋಟಿ ಮಾರಾಟವಾಗಿದೆ ಎಂದು ನಂಬಿಸಿ, ನೆಲಮಂಗಲದ ಸಮೀಪದ 2 ಎಕರೆ 4 ಗುಂಟೆ ಜಮೀನನ್ನು ಗಂಗರಾಜು ಹೆಸರಿಗೆ ಜಿಪಿಎ ಮಾಡಿದ್ದರು. ಬಳಿಕ ಆರೋಪಿಗಳು ಪರಾರಿಯಾಗಿದ್ದರು’ ಎಂದು ಮಾಹಿತಿ ನೀಡಿದರು.

ಅಪರಾಧ ಸುದ್ದಿ

ವ್ಹೀಲಿ : ಆಟೋ ಚಾಲಕ ಸೆರೆ

ಬೆಂಗಳೂರು: ರಾತ್ರಿ ವೇಳೆ ಜನನಿಬಿಡ ರಸ್ತೆಯಲ್ಲಿ ಆಟೊ ವ್ಹೀಲಿ ಮಾಡುತ್ತಿದ್ದ ಚಾಲಕನನ್ನು ನೆಲಮಂಗಲ ಸಂಚಾರ ಠಾಣೆ ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿದ್ದಾರೆ.

ಆಕಾಶ್ (27) ಬಂಧಿತ ಚಾಲಕ. ರಾಷ್ಟ್ರೀಯ ಹೆದ್ದಾರಿ 75ರ ನೆಲಮಂಗಲ - ಕುಣಿಗಲ್ ರಸ್ತೆಯ ಮಲ್ಲರಬಾಣವಾಡಿ ಬಳಿ ಆಟೊದಲ್ಲಿ ವ್ಹೀಲಿ ಮಾಡಿದ್ದರ ಬಗ್ಗೆ ಸಾರ್ವಜನಿಕರು ಪೊಲೀಸರ ಗಮನಕ್ಕೆ ತಂದಿದ್ದರು. ವ್ಹೀಲಿ ಮಾಡುತ್ತಿದ್ದ ವಿಡಿಯೊ ಸಹ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಚಾಲಕನನ್ನು ಪತ್ತೆ ಮಾಡಿ ಬಂಧಿಸಲಾಗಿದ್ದು, ಆಟೊವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆ ಸಾವು

ಆನೇಕಲ್: ತಾಲ್ಲೂಕಿನ ಸರ್ಜಾಪುರದಲ್ಲಿ ಕ್ಯಾಂಟರ್ ಡಿಕ್ಕಿ ಹೊಡೆದು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೆಂಗಳೂರಿನ ನಾಗಾವರ ಮಲ್ಲಿಕ(56) ಮೃತರು. ಸರ್ಜಾಪುರ ಸಮೀಪದ ಟಿವಿಎಸ್ ಪ್ಯಾಲೇಸ್‌ನಲ್ಲಿ ನಡೆಯುತ್ತಿದ್ದ ಮದುವೆಗೆ ಮಲ್ಲಿಕಾ ಮತ್ತು ಪತಿ ಮುನಿರಾಜು ತೆರಳುತ್ತಿದ್ದ ವೇಳೆ ಅಪಘಾತ ನಡೆದಿದೆ. ಬೈಕ್‌ನ ಹಿಂಬದಿಗೆ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಮಲ್ಲಿಕಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿಗೆ ಗಾಯ, ಮನೆಯ ಗೋಡೆ ಕುಸಿತ

ಎಲ್‌ಪಿಜಿ ಸಿಲಿಂಡರ್ ಸ್ಫೋಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟಿಎಂ ಲೇಔಟ್‌ನ ಮನೆಯೊಂದರಲ್ಲಿ ಸೋಮವಾರ ಎಲ್‌ಪಿಜಿ ಸಿಲಿಂಡರ್ ಸ್ಫೋಟಗೊಂಡಿದ್ದು, 36 ವರ್ಷದ ವ್ಯಕ್ತಿಗೆ ಸುಟ್ಟ ಗಾಯಗಳಾಗಿವೆ.

ಮನೆ ಸಮೀಪದ ಅಪಾರ್ಟ್‌ಮೆಂಟ್‌ಗಳಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶ ಮೂಲದ ಪವನ್ ಗಾಯಗೊಂಡಿದ್ದು, ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸದ್ಯ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಪೊಲೀಸರು ಮತ್ತು ಅಗ್ನಿಶಾಮಕ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸಿದರು.

ಬೆಳಿಗ್ಗೆ 8.30ರಲ್ಲಿ ಹಾಲು ಬಿಸಿ ಮಾಡಲು ಸಿಲಿಂಡರ್ ಆನ್ ಮಾಡಿದ ಸಂದರ್ಭದಲ್ಲಿ ಅನಿಲ ಸೋರಿಕೆಯಿಂದ ಬೆಂಕಿ ಹೊತ್ತಿಕೊಂಡಿದೆ. ಬಳಿಕ ಸಿಲಿಂಡರ್ ಸ್ಫೋಟಗೊಂಡಿದೆ. ಘಟನೆ ನಡೆದ ಸಂದರ್ಭದಲ್ಲಿ ಪವನ್ ಒಬ್ಬರೇ ಇದ್ದರು. ಸ್ಫೋಟದ ತೀವ್ರತೆಗೆ ಮನೆಯ ಗೋಡೆ ಕುಸಿದು ಬಿದ್ದಿದೆ. ಪಕ್ಕದ ಮನೆಗಳಿಗೂ ಹಾನಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸುಮಾರು 10 ವರ್ಷಗಳ ಹಿಂದೆ ಉದ್ಯೋಗ ಅರಸಿ ಪವನ್ ಬೆಂಗಳೂರಿಗೆ ಬಂದಿದ್ದರು. ಬಿಟಿಎಂ ಲೇಔಟ್‌ನಲ್ಲಿ ಜಾನಕಿ ಎಂಬುವರ ಮನೆಯಲ್ಲಿ ವಾಸವಿದ್ದರು ಎಂದು ಹೇಳಿದ್ದಾರೆ.

ಬಿಟಿಎಂ ಲೇಔಟ್‌ನ ಮನೆಯೊಂದರಲ್ಲಿ ಎಲ್‌ಪಿಜಿ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಗೋಡೆ ಕುಸಿದು ಬಿದ್ದಿದೆ

ಆರೋಪಿ ಪವನ್ ಸ್ಥಳಾಂತರ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿ ನಟ ದರ್ಶನ್ ಜೊತೆ ಸೇರಿ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಜೈಲಿನ ನಿಯಮಗಳನ್ನು ಉಲ್ಲಂಘಿಸಿದ್ದಾರೆ’ ಎಂದು ಮೂರನೇ ಆರೋಪಿ ಪುಟ್ಟಸ್ವಾಮಿ ಅಲಿಯಾಸ್ ಪವನ್ ಅವರನ್ನು ಬೆಂಗಳೂರಿನಿಂದ ಮೈಸೂರು ಜೈಲಿಗೆ ಸ್ಥಳಾಂತರಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಪವನ್ (29) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪವನ್ ಅವರನ್ನು ಮೈಸೂರು ಜೈಲಿಗೆ ಸ್ಥಳಾಂತರಿಸಲು ನಗರದ 24ನೇ ಎಸಿಎಂಎಂ ನ್ಯಾಯಾಲಯ ಆಗಸ್ಟ್ 27ರಂದು ಹೊರಡಿಸಿದ ಆದೇಶ ರದ್ದುಪಡಿಸಿತು.

ವಿಚಾರಣೆ ವೇಳೆ ಪವನ್ ಪರ ವಕೀಲರು, ‘ಈಗಾಗಲೇ ಇದೇ ಪ್ರಕರಣದ 14ನೇ ಆರೋಪಿ ಪ್ರದೋಷ್ ಅವರನ್ನು ಪರಪ್ಪನ ಅಗ್ರಹಾರ ಜೈಲಿನಿಂದ ಬೆಳಗಾವಿ ಜೈಲಿಗೆ ಸ್ಥಳಾಂತರಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಹೀಗಾಗಿ, ಈ ಆದೇಶವು ಪವನ್ ವಿಷಯದಲ್ಲೂ ಅನ್ವಯಿಸಲಿದೆ’ ಎಂಬ ಅಂಶವನ್ನು ನ್ಯಾಯಪೀಠಕ್ಕೆ ಅರುಹಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸಕಾರಣಗಳಿಲ್ಲದೆ ಸುಖಾಸುಮ್ಮನೆ ಅರ್ಜಿದಾರನ್ನು ಬೇರೊಂದು ಜೈಲಿಗೆ ಸ್ಥಳಾಂತರಿಸಲಾಗಿದೆ. ಇಂತಹ ಪ್ರಕರಣಗಳಿಂದ ರಾಜ್ಯ ಸರ್ಕಾರದ ಹಣ ವ್ಯರ್ಥವಾಗುತ್ತದೆ ಅಷ್ಟೇ. ಜೈಲುಗಳ ಸ್ಥಿತಿ ಭಯಾನಕವಾಗಿದೆ. ಇವುಗಳ ಸುಧಾರಣೆ ಅಗತ್ಯವಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಅಂತೆಯೇ, ಪವನ್ ಅವರನ್ನು ಮೈಸೂರು ಜೈಲಿಗೆ ಸ್ಥಳಾಂತರಿಸಿದ್ದ ಆದೇಶವನ್ನು ರದ್ದುಪಡಿಸಿತು.

ಕೋಚಿಮುಲ್ ವಿಭಜನೆಗೆ ಸರ್ಕಾರ ಒಪ್ಪಿಗೆ: ನಂಜೇಗೌಡ

ಕೋಲಾರ: ಕೋಲಾರ ಮತ್ತು ಚಿಕ್ಕಬಳ್ಳಾಪುರ ಒಕ್ಕೂಟ (ಕೋಚಿಮುಲ್) ವಿಭಜನೆಗೆ ಸರ್ಕಾರ ಇದೇ 23ರಂದು (ಬುಧವಾರ) ಒಪ್ಪಿಗೆ ನೀಡಲಿದೆ ಎಂದು ಕೋಚಿಮುಲ್ ಅಧ್ಯಕ್ಷ ಕೆ.ವೈ.ನಂಜೇಗೌಡ ಸುಳಿವು ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೋಚಿಮುಲ್ ವಿಭಜನೆಗೆ ಸಮ್ಮತಿಸಿದೆ. ಕೋಚಿಮುಲ್ ವಿಭಜನೆ ನಿರ್ಧಾರದ ವಿರುದ್ಧ ಈ ಹಿಂದಿನ ಸರ್ಕಾರ ನ್ಯಾಯಾಲಯದ ಮೆಟ್ಟಿಲೇರಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಯಾವುದೇ ರೀತಿ ಆಕ್ಷೇಪಣೆ ವ್ಯಕ್ತಪಡಿಸಿಲ್ಲ ಎಂದು ಸೋಮವಾರ ಟೇಕಲ್‌ನ ಕೊಮ್ಮನಹಳ್ಳಿಯಲ್ಲಿ ಹೇಳಿದರು.

ವಿಭಜನೆ ಬಳಿಕ ಕೋಲಾರ ಜಿಲ್ಲೆಯೊಂದರಿಂದಲೇ ದಿನವೊಂದಕ್ಕೆ ಕನಿಷ್ಠ ಹತ್ತು ಲಕ್ಷ ಲೀಟರ್ ಹಾಲು ಉತ್ಪಾದಿಸುವ ಗುರಿ ಇದೆ ಎಂದರು.

ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ ಪ್ರಕರಣ ಹಿಂಪಡೆಯಲಿ

ಬೆಂಗಳೂರು: ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ ಗಲಭೆಯಲ್ಲಿನ ಅಮಾಯಕರ ಮೇಲಿನ ಪ್ರಕರಣಗಳನ್ನು ವಾಪಸ್ ಪಡೆಯಬೇಕು ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರನ್ನು ಭೇಟಿ ಮಾಡಿ ಮಾಜಿ ಸಚಿವ ರೋಷನ್ ಬೇಗ್ ಮನವಿ ಮಾಡಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ಪ್ರಕರಣದಲ್ಲಿ ಭಾಗಿಯಾದ ಆರೋಪದಲ್ಲಿ ಜೈಲಿನಲ್ಲಿ ಇರುವವರ ಪೋಷಕರು ನನ್ನನ್ನು ಭೇಟಿ ಮಾಡಿ ತಮ್ಮ ಮಕ್ಕಳ ಬಗ್ಗೆ ಅಳಲು ತೋಡಿಕೊಂಡರು. ಈ ಕಾರಣಕ್ಕೆ ಗೃಹ ಸಚಿವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದೇನೆ’ ಎಂದರು.

ಕಾಂಗ್ರೆಸ್ ಸೇರಲು ಇಂಗಿತ: ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಬೇಗ್, ‘ಕಾಂಗ್ರೆಸ್ ಪಕ್ಷ ನನ್ನನ್ನು ಉಚ್ಚಾಟಿಸಿದ್ದು, ಸದ್ಯದಲ್ಲೆ ಆ ಆದೇಶವನ್ನು ಹಿಂಪಡೆಯಲಿದೆ. ಆ ಮೇಲೆ ಕಾಂಗ್ರೆಸ್ ಪಕ್ಷಕ್ಕೆ ಮರಳುವ ವಿಚಾರ ನೋಡೋಣ’ ಎಂದರು.

ಕುಡಿದ ಮತ್ತಿನಲ್ಲಿ ಪಾನಿಪುರಿ ವ್ಯಾಪಾರಿಯ ಹತ್ಯೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಸೇವಿಸಿದ ಮತ್ತಿನಲ್ಲಿ ಸ್ನೇಹಿತರ ಮಧ್ಯೆ ನಡೆದ ಜಗಳವು ಪಾನಿಪುರಿ ವ್ಯಾಪಾರಿಯೊಬ್ಬರ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ಎಲೆಕ್ಟ್ರಾನಿಕ್ಸ್ ಸಿಟಿ ಬಳಿ ನಡೆದಿದೆ.

ಉತ್ತರ ಪ್ರದೇಶ ಮೂಲದ ಪಾನಿಪುರಿ ವ್ಯಾಪಾರಿ ಸರ್ವೇಶ್ ಕೊಲೆ ಯಾಗಿದ್ದು, ಸ್ನೇಹಿತರಾದ ಜಾರ್ಖಂಡ್‌ನ ರಾಹುಲ್ ಕುಮಾರ್ ಮತ್ತು ಸಹದೇವ ತುರಿ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

‘12 ವರ್ಷಗಳಿಂದ ಪಾನಿಪುರಿ ವ್ಯಾಪಾರ ಮಾಡುತ್ತಿದ್ದ ಸರ್ವೇಶ್, ಭಾನುವಾರ ಕೆಲಸ ಮುಗಿದ ಬಳಿಕ ಕೋನಪ್ಪನ ಅಗ್ರಹಾರ ವೃತ್ತದ ಮದ್ಯದಂಗಡಿಯಲ್ಲಿ ಮದ್ಯ ಖರೀದಿಸಿದ್ದರು. ಅವರೊಂದಿಗೆ ಕಟ್ಟಡ ಕಾರ್ಮಿಕರಾದ ರಾಹುಲ್ ಕುಮಾರ್, ಸಹದೇವ್ ಸಹ ಇದ್ದರು. ಎಲ್ಲರೂ ಒಟ್ಟಿಗೆ ಮದ್ಯ ಸೇವಿಸಿದ್ದರು’ ಎಂದು ಪೊಲೀಸರು ತಿಳಿಸಿದರು.



ರಾಹುಲ್

ಸಹದೇವ್

‘ಕುಡಿದ ಮತ್ತಿನಲ್ಲಿ ಜೋರಾಗಿ ಮಾತನಾಡುತ್ತಿದ್ದ ಸ್ನೇಹಿತರಿಗೆ ಸುಮ್ಮನಿರುವಂತೆ ಸರ್ವೇಶ್ ಹೇಳಿದ್ದರು. ಇದರಿಂದ ಕುಪಿತಗೊಂಡ ಆರೋಪಿಗಳು, ಅವರನ್ನು ಥಳಿಸಿದ್ದಾರೆ. ಬಳಿಕ ಅಲ್ಲಿಂದ ಹೊರಟು ಬಂದ ಸರ್ವೇಶ್‌ನನ್ನು ಹಿಂಬಾಲಿಸಿಕೊಂಡು ಬಂದು ಪಾರ್ಕಿಂಗ್ ಟೈಲ್ಸ್‌ನಲ್ಲಿ ತಲೆಗೆ ಹೊಡೆದಿದ್ದಿ, ತೀವ್ರ ವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು’ ಎಂದು ಪೊಲೀಸರು ಹೇಳಿದರು.

‘ಸರ್ವೇಶ್ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಆರೋಪಿಗಳು ಗಲಾಟೆ ಮಾಡಿ ರುವ ದೃಶ್ಯಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ’ ಎಂದು ತಿಳಿಸಿದ್ದಾರೆ.

ಒ.ಬಿ.ಸಿ ಫೆಡರೇಶನ್ ಆಫ್ ಇಂಡಿಯಾ ಶನಿವಾರ ಆಯೋಜಿಸಿದ್ದ ಸಮಾವೇಶದಲ್ಲಿ 'ಸಮರ್ಥನಂ ಸಂಸ್ಥೆ ಮ್ಯಾನೇಜಿಂಗ್ ಟ್ರಸ್ಟಿ ಜಿ.ಕೆ. ಮಹಾಂತೇಶ್ ಅವರಿಗೆ 'ಡಿ. ದೇವರಾಜ ಅರಸು ಸದ್ಭಾವನಾ ಪುರಸ್ಕಾರ' ಮತ್ತು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಅವರಿಗೆ 'ಬಿ.ಪಿ. ಮಂಡಲ್ ಸದ್ಭಾವನಾ ಪುರಸ್ಕಾರ' ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ಕೆರೆ ಒಡಲಿಗೆ ತ್ಯಾಜ್ಯ: ಮಲಿನಗೊಂಡ ಭೀಮನಕುಪ್ಪೆ ಕೆರೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ತ್ಯಾಜ್ಯ ಹಾಗೂ ರಾಸಾಯನಿಕ ವಸ್ತುಗಳು ಭೀಮನಕುಪ್ಪೆ ಕೆರೆ ಸೇರುತ್ತಿದ್ದು, ಕೆರೆಯೊಡಲು ಕಲುಷಿತಗೊಳ್ಳುವ ಆತಂಕ ಎದುರಾಗಿದೆ.

ರಾಮೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಮಾಳಿಗೊಂಡನಹಳ್ಳಿ ಗ್ರಾಮದ ಖಾಸಗಿ ಭೂಮಿಯಲ್ಲಿ ಅಕ್ರಮವಾಗಿ ತ್ಯಾಜ್ಯ ಸಂಗ್ರಹಣೆ ಮಾಡಲಾಗಿದೆ. ಗ್ರಾಮದ ಸರ್ವೆ ನಂ. 26ರಲ್ಲಿರುವ ಈ ಜಮೀನಿನಲ್ಲಿ ಸುತ್ತಮುತ್ತಲ ಪ್ರದೇಶದ ಕೈಗಾರಿಕಾ ತ್ಯಾಜ್ಯ ಸುರಿಯಲಾಗುತ್ತಿದೆ. ಜಮೀನಿನ ಮಾಲೀಕರು ಹಣ ಪಡೆದು ಕಸ ಸುರಿಯಲು ಅವಕಾಶ ನೀಡಿದ್ದು, ಮಧ್ಯ ರಾತ್ರಿಯಲ್ಲಿ ಟಿಪ್ಪರ್‌ಗಳಲ್ಲಿ ತ್ಯಾಜ್ಯವನ್ನು ತರಲಾಗುತ್ತಿದೆ. ಹಲವು ದಿನಗಳಿಂದ ಇದು ನಡೆಯುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಕೆಲ ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಸಂಗ್ರಹಗೊಂಡಿರುವ ತ್ಯಾಜ್ಯ ಹಾಗೂ ಅದರಲ್ಲಿನ ರಾಸಾಯನಿಕಗಳು ಭೀಮನಕುಪ್ಪೆ ಕೆರೆ ಒಡಲು ಸೇರುತ್ತಿದೆ. ಕೆರೆ ನೀರು ದುರ್ವಾಸನೆ ಬೀರುತ್ತಿದೆ.

ಗ್ರಾಮಸ್ಥರ ದೂರಿನ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ರಾಮೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಚ್.ಪ್ರಭು ಮಾತನಾಡಿ, 'ಜಮೀನಿನ ಮಾಲೀಕರು ಅನಧಿಕೃತವಾಗಿ ತ್ಯಾಜ್ಯ ಸಂಗ್ರಹಣೆಗೆ ಅವಕಾಶ ಕಲ್ಪಿಸಿದ್ದಾರೆ. ತ್ಯಾಜ್ಯದ ದುರ್ವಾಸನೆಯಿಂದ ಸುತ್ತಮುತ್ತಲ ವಾತಾವರಣ ಹದಗೆಟ್ಟಿದೆ. ಕೆರೆ ನೀರು ಮಲಿನಗೊಂಡಿದೆ. ಅಂತರ್ಜಲವೂ ಕಲುಷಿತಗೊಳ್ಳುವ ಆತಂಕ ಎದುರಾಗಿದೆ' ಎಂದರು.

ತಪ್ಪಿತಸ್ಥರ ವಿರುದ್ಧ ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪರಿಸರ ನಿಯಂತ್ರಣ ಮಂಡಳಿಗೂ ದೂರು ನೀಡಿ ಸೂಕ್ತ ಕ್ರಮಕ್ಕೆ ಆಗ್ರಹಿಸಲಾಗುವುದು ಎಂದು ಹೇಳಿದರು. ಕುಂಬಳಗೋಡು ಠಾಣಾಧಿಕಾರಿ ಮಂಜುನಾಥ್ ಹೂಗಾರ್, ಪಂಚಾಯಿತಿ ಸದಸ್ಯರು ಈ ಸಂದರ್ಭದಲ್ಲಿ ಹಾಜರಿದ್ದರು.

ಜಮೀನಿನಲ್ಲಿ ಸುರಿದಿರುವ ತ್ಯಾಜ್ಯದ ರಾಶಿ

'ಜಾತಿ ಸಮೀಕ್ಷೆ ವಿರೋಧಿಸುವ ಬಡವರ ವಿರೋಧಿಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಸಮೀಕ್ಷೆಯ ವರದಿ ವಿರೋಧಿಸುವವರು ತಮ್ಮದೇ ಜಾತಿಯ ಬಡವರನ್ನು ವಿರೋಧಿಸುತ್ತಿದ್ದಾರೆ ಎಂದು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಅವರು ತಿಳಿಸಿದರು.

ಒಬಿಸಿ ಫೆಡರೇಶನ್ ಆಫ್ ಇಂಡಿಯಾ ಹಮ್ಮಿಕೊಂಡಿದ್ದ ದಕ್ಷಿಣ ಭಾರತ ಹಿಂದುಳಿದ ವರ್ಗಗಳ ಮುಖಂಡರ ಸಮಾವೇಶ, ಮಂಡಲ್ ವರದಿ, ಡಿ. ದೇವರಾಜ ಅರಸು ಸ್ಮರಣೋತ್ಸವ, ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಸಮೀಕ್ಷೆಯು ಹಿಂದುಳಿದ ವರ್ಗಕ್ಕೆ ಸೀಮಿತವಾಗಿ ನಡೆದಿಲ್ಲ. ಎಲ್ಲ ಜಾತಿ ಸಮುದಾಯಗಳ ಸಮೀಕ್ಷೆ ಮಾಡಲಾಗಿದೆ. ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ಸಮುದಾಯದಲ್ಲಿ ಇರುವ ಬಡವರ ಮಾಹಿತಿಯೂ ಅದರಲ್ಲಿದೆ. ಈ ವರದಿಯನ್ನು ವಿರೋಧಿಸುವ ಮೂಲಕ ಭೂರಹಿತ ಒಕ್ಕಲಿಗರು, ಭೂರಹಿತ ಲಿಂಗಾಯತರನ್ನು ವಿರೋಧಿಸುತ್ತಿದ್ದಾರೆ ಎಂದು ಪ್ರತಿಪಾದಿಸಿದರು.

ಮೀಸಲಾತಿ ಎಂದರೆ ಪ್ರಾತಿನಿಧ್ಯ. ದಲಿತರ ನೋವು ಕಾಣುತ್ತದೆ. ಆದರೆ, ಹಿಂದುಳಿದವರ ಯಾತನೆ ಕಾಣುವುದಿಲ್ಲ. ದಲಿತರಿಗೆ ರಾಜಕೀಯ ಪ್ರಾತಿನಿಧ್ಯವನ್ನು ನೀಡಿರುವುದು ಸ್ವಾಗತಾರ್ಹ. ಅದೇ ರೀತಿ ಹಿಂದುಳಿದ ವರ್ಗಗಳಿಗೂ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಆಗ್ರಹಿಸಿದರು.

ಬಾಯಿಪಾಠ ಮಾಡಿ ಪರೀಕ್ಷೆ ಬರೆದು ಉತ್ತಮ ಅಂಕಗಳಿಸುವುದನ್ನೇ ಬುದ್ಧಿವಂತಿಕೆ ಎಂದು ತಿಳಿದು ಶ್ರಮ ಆಧಾರಿತ ಬುದ್ಧಿವಂತಿಕೆಯನ್ನು ನಿರಾಕರಿಸಲಾಗಿದೆ. ಕುಶಲಕರ್ಮಿಗಳಾಗಿರುವ ಹಿಂದುಳಿದವರು ಈ ಕಾರಣದಿಂದ ಹಿಂದೆ ಉಳಿದಿದ್ದಾರೆ. ಅವರು ಹಿಂದೆ ಉಳಿದಿದ್ದಲ್ಲ, ಹಿಂದಕ್ಕೆ ತಳ್ಳಿರುವುದು ಎಂದು ವಿವರಿಸಿದರು.

'ಸಾಮಾಜಿಕ ನ್ಯಾಯ'ದ ಬಗ್ಗೆ ಮಾಜಿ ಉಪಮೇಯರ್ ಬಿ.ಪಿ. ಹರೀಶ್ ಮಾತನಾಡಿ, 'ಹಿಂದುಳಿದ ವರ್ಗಗಳ ಜನಸಂಖ್ಯೆ ಶೇ 56ರಷ್ಟಿದೆ. ಇದಕ್ಕೆ ಅನುಗುಣವಾಗಿ ಶಾಸಕರು ಸುಮಾರು 120 ಇರಬೇಕಿತ್ತು. ಆದರೆ, 25 ರಿಂದ 30 ಇದ್ದಾರೆ. ಮೇಲ್ಜಾತಿಗಳಲ್ಲಿ ಇರುವ ಒಗ್ಗಟ್ಟು ನಮ್ಮಲ್ಲಿ ಇಲ್ಲದೇ ಇರುವುದೇ ಇದಕ್ಕೆ ಕಾರಣ' ಎಂದು ಹೇಳಿದರು.

ಬಿ.ಪಿ. ಮಂಡಲ್ ಅವರ ಮೊಮ್ಮಗ ಸೂರಜ್ ಯಾದವ್ ಮಂಡಲ್, ಮಾಜಿ ಸಂಸದ ಕಮಲ್ ಕಿಶೋರ್ ಕಮಾಂಡೊ, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ. ಸುರೇಶ್, ಶಿಕ್ಷಣ ತಜ್ಞ ಉಮೇಶ್ ಬಾಬು, 'ಸಮರ್ಥನಂ' ಟ್ರಸ್ಟಿ ಜಿ.ಕೆ. ಮಹಾಂತೇಶ್, ಉದ್ಯಮಿ ಬಂಜಾರ ಪಾಳ್ಯ ಮಂಜುನಾಥ್, ಮಾಜಿ ಮೇಯರ್ ವೆಂಕಟೇಶ್ ಮೂರ್ತಿ, ಮುಖಂಡರಾದ ಕೇಶವ ಪ್ರಸಾದ್, ಸುಜಾತಾ ಮಯೂರಿ, ಮುದುಮಡು ರಂಗಸ್ವಾಮಿ, ಪುಟ್ಟಸ್ವಾಮಿ, ಶ್ರೀನಿವಾಸಾಚಾರಿ ಭಾಗವಹಿಸಿದ್ದರು.

'ಶೇ 50 ಅನುದಾನ ಒದಗಿಸಿ'

'ಬಜೆಟ್‌ನಲ್ಲಿ ಶೇ 50ರಷ್ಟು ಅನುದಾನವನ್ನು ಶೇ 56ರಷ್ಟಿರುವ ಹಿಂದುಳಿದ ವರ್ಗಗಳಿಗೆ ಮೀಸಲಿಡಬೇಕು. ಕಾಂತರಾಜು ವರದಿಯನ್ನು ಯಥಾವತ್ತಾಗಿ ಜಾರಿ ಮಾಡಬೇಕು. ಹಿಂದುಳಿದವರಿಗೆ ಇರುವ ಮೀಸಲಾತಿಯನ್ನು ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಶೈಕ್ಷಣಿಕ, ಆರ್ಥಿಕ, ರಾಜಕೀಯವಾಗಿ ಅನುಷ್ಠಾನಗೊಳಿಸಬೇಕು. ದೇಶದ ಸಂಪನ್ಮೂಲವನ್ನು ಜನಸಂಖ್ಯೆಗೆ ಅನುಗುಣವಾಗಿ ಕೇಂದ್ರ ಸರ್ಕಾರ ಸಮಾನವಾಗಿ ಹಂಚಬೇಕು' ಎಂದು ಒಬಿಸಿ ಫೆಡರೇಶನ್ ಆಫ್ ಇಂಡಿಯಾ ಅಧ್ಯಕ್ಷ ಜೆ. ಎಂಜೇರಪ್ಪ ಆಗ್ರಹಿಸಿದರು.

Garuda Wheels, Hoskote, Ph: 9035040171; **Whitefield Yamaha, Whitefield,** Ph: 9606061054; **Mahadevapura,** Ph: 9148086668; **Motoworld: Bommanahalli,** Ph: 080-69643030; **Chandapura,** Ph: 080-69643030; **Bangalore Wheels: Rajajinagar,** Ph: 9964156618; **Vijayanagar,** Ph: 9611920002; **Malathahalli,** Ph: 9916610017; **Kengeri,** Ph: 9916610022; **Perfect Riders: Lalbagh Road,** Ph: 8497816000; **Jayanagar,** Ph: 8497816000; **Pacer Yamaha: Hebbal,** Ph: 6360237411; **Kalyan Nagar,** Ph: 9902607629; **RR Nagar,** Ph: 7624818307; **Vidyaranyapura,** Ph: 9036690334; **Vinayak Motors: Domlur,** Ph: 9591072222; **Kormangala,** Ph: 9035961010; **Laxmi International, Bannerghatta Road,** Ph: 9739364819; **Chandan Motors, Banashankari,** Ph: 9606861911; **Geetha Motors: Nelamangala,** Ph: 7619628882, **Peenya,** Ph: 8951954565; **Panache Enterprises: Indiranagar,** Ph: 9844011961; **Marathahalli,** Ph: 9844011961; **I Yamaha Automotives, K R Puram,** Ph: 8088448844; **Srijaya Motors, Yalahanka,** Ph: 7406622213, 7406622218; **Sree Geetha Motors, Tumkur,** Ph: 6364885726; **Sri RV Advent Ride, Kolar,** Ph: 9071374827; **Xtreme Motors, Chikaballapur,** Ph: 9353279001; **Yamaha Bike Corner: Varthur: Touch Yamaha,** Ph: 9986547353; **Anekal: Anekal Yamaha Motors,** Ph: 9972909455; **Devanahalli: Nandi Bikes,** Ph: 9739030606; **Magadi: Sri Narashima Motors,** Ph: 9482090890; **Tiptur: Jenukallu Yamaha,** Ph: 7892862641; **Mulbagal: Sri RV Advent Ride,** Ph: 9071374830; **Kunigal: Manjunathaswamy Yamaha,** Ph: 7411979755; **Chintamani: Xtreme Motors,** Ph: 9353279001; **Attibele: Moto World,** Ph: 8884452700; **Dommasandra: Moto World,** Ph: 8884452899.

ನಗರದ ಪ್ರಮುಖ ಆಸ್ಪತ್ರೆಗಳಲ್ಲಿ ಹಾಸಿಗೆ ಸಂಖ್ಯೆ ಹೆಚ್ಚಳ ● ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಇಲಾಖೆಯಿಂದ ನೂತನ ಕಟ್ಟಡಗಳ ನಿರ್ಮಾಣ

ಸರ್ಕಾರಿ ವೈದ್ಯಕೀಯ ವ್ಯವಸ್ಥೆ ಬಲವರ್ಧನೆ

● ವರುಣ ಹೆಗಡೆ

ಬೆಂಗಳೂರು: ಖಾಸಗಿ ವೈದ್ಯಕೀಯ ವ್ಯವಸ್ಥೆಯಡಿ ಚಿಕಿತ್ಸೆ ದುಬಾರಿ ಆಗಿರುವುದರಿಂದ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಈ ಕಾರಣದಿಂದಾಗಿ ಇಲ್ಲಿನ ಪ್ರಮುಖ ಸರ್ಕಾರಿ ವೈದ್ಯಕೀಯ ಸಂಸ್ಥೆಗಳು ಹೊಸ ಕಟ್ಟಡಗಳ ನಿರ್ಮಾಣ, ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆ, ಸಿಬ್ಬಂದಿ ಹೆಚ್ಚಳದಂತಹ ಉಪಕ್ರಮಗಳೊಂದಿಗೆ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲಾರಂಭಿಸಿವೆ.

ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲು ಇಲ್ಲಿನ ಆಸ್ಪತ್ರೆಗಳು ಕೂಡ ಕಾರಣ. ನಗರದಲ್ಲಿ ಲಭ್ಯವಿರುವ ವೈದ್ಯಕೀಯ ಚಿಕಿತ್ಸೆಗೆ ಜಾಗತಿಕ ಮಟ್ಟದಲ್ಲಿ ಮನ್ನಣೆ ದೊರೆತಿದೆ. ಇದರಿಂದಾಗಿ ಹೊರ ರಾಜ್ಯದ ಜತೆಗೆ ಹೊರ ದೇಶದಿಂದಲೂ ರೋಗಿಗಳು ಶಸ್ತ್ರಚಿಕಿತ್ಸೆಗಳಿಗೆ ಬರುತ್ತಿದ್ದಾರೆ. ಹೀಗಾಗಿ, ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ'ದಂತಹ ಯೋಜನೆಗಳು ಇಲ್ಲಿನ ರೋಗಿಗಳಿಗೆ ಆಶಾಕಿರಣವಾಗಿದ್ದು, ಲಕ್ಷಾಂತರ ರೂಪಾಯಿ ವೆಚ್ಚದ ಶಸ್ತ್ರಚಿಕಿತ್ಸೆಗಳನ್ನೂ ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಉಚಿತವಾಗಿ ನಡೆಸಲಾಗುತ್ತಿದೆ. ರೋಗಿಗಳ ದಟ್ಟಣೆ ಹೆಚ್ಚುತ್ತಿರುವುದರಿಂದ ಆಸ್ಪತ್ರೆಗಳಲ್ಲಿನ ಹಾಸಿಗೆಗಳ ಸಂಖ್ಯೆ ಹೆಚ್ಚಳಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆ ಕ್ರಮ ಕೈಗೊಂಡಿದೆ.

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ನೆಫ್ರೊ-ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ, ಸಂಜಯ ಗಾಂಧಿ ಟ್ರಾಮಾ ಮತ್ತು

ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ಆವರಣದಲ್ಲಿ ನಿರ್ಮಾಣಗೊಂಡಿರುವ ಕ್ರೀಡಾ ಚಿಕಿತ್ಸಾ ಸಂಕೀರ್ಣ

ಅಸ್ಥಿ ಚಿಕಿತ್ಸಾ ಸಂಸ್ಥೆ, ಕೆ.ಸಿ.ಜನರಲ್ ಸೇರಿ ವಿವಿಧ ಆಸ್ಪತ್ರೆಗಳಲ್ಲಿ ನೂತನ ಕಟ್ಟಡಗಳು ನಿರ್ಮಾಣವಾಗುತ್ತಿವೆ. ಕೆಲವೆಡೆ ಈಗಾಗಲೆ ಕಟ್ಟಡಗಳ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಉದ್ಘಾಟನೆಗೆ ಸಜ್ಜಾಗಿವೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ಚುವರಿ ಹಾಸಿಗೆಗಳು ಲಭ್ಯವಾಗಲಿವೆ.

ಕಳೆದ ಐದು ವರ್ಷಗಳ ಅವಧಿಯಲ್ಲಿ ಇನ್ಫೊಸಿಸ್ ಪ್ರತಿಷ್ಠಾನ ಸೇರಿ ವಿವಿಧ ಸಂಸ್ಥೆಗಳು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್ಆರ್) ಅಡಿ ಜಯದೇವ ಹಾಗೂ ಕಿದ್ವಾಯಿ ಸಂಸ್ಥೆಯಲ್ಲಿ ಹಾಸಿಗೆಗಳ ಹೆಚ್ಚಳಕ್ಕೆ ನೆರವಾಗಿದ್ದವು. ಇಲ್ಲಿನ ಜಯದೇವ ಹೃದ್ರೋಗ ಸಂಸ್ಥೆಯು ಜಾಗತಿಕ ಮಟ್ಟದಲ್ಲಿ ಚಿಕಿತ್ಸೆಗೆ ಹೆಸರಾಗಿದೆ. ಅಮೆರಿಕದಂತಹ ಮುಂದುವರಿದ ದೇಶಗಳಿಂದಲೂ ಹೃದ್ರೋಗ ಚಿಕಿತ್ಸೆಗಾಗಿ ಇಲ್ಲಿಗೆ ಬರುತ್ತಿದ್ದಾರೆ. ಬೆಂಗಳೂರಿನ ಜಯನಗರದಲ್ಲಿರುವ ಸಂಸ್ಥೆಯು 1,050 ಹಾಸಿಗೆಗಳನ್ನು ಒಳಗೊಂಡಿದೆ. ಇದು ವಿಶ್ವದಲ್ಲೇ ಅತಿದೊಡ್ಡ ಹೃದ್ರೋಗ ಆಸ್ಪತ್ರೆಯಾಗಿದೆ. ಕ್ಯಾನ್ಸರ್ ಚಿಕಿತ್ಸೆಗೆ ಹೆಸರಾದ ಕಿದ್ವಾಯಿ ಸಂಸ್ಥೆಯು 850 ಹಾಸಿಗೆಗಳನ್ನು ಹೊಂದಿದೆ. ಈಗ ಸರ್ಕಾರವು ಉಳಿದ ಸಂಸ್ಥೆಗಳಲ್ಲಿನ ಹಾಸಿಗೆಗಳ ಸಂಖ್ಯೆ ಹೆಚ್ಚಳಕ್ಕೂ ಕ್ರಮವಹಿಸಿದೆ.

ಸಾವಿರ ಹಾಸಿಗೆಯ ಕಟ್ಟಡ: ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಸಾವಿರ ಹಾಸಿಗೆಗಳ 11 ಮಹಡಿಗಳ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. 2 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣವಾಗುತ್ತಿದ್ದು, ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿದೆ. ಸದ್ಯ ವಿಕ್ಟೋರಿಯಾ ಆಸ್ಪತ್ರೆಯು 530 ಸಾಮಾನ್ಯ ಹಾಸಿಗೆ ಹಾಗೂ 27 ಐಸಿಯು ಹಾಸಿಗೆ ಒಳಗೊಂಡಿದೆ.

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ 1 ಎಕರೆ 33 ಗುಂಟೆ ಪ್ರದೇಶದಲ್ಲಿ 'ಮಕ್ಕಳ ಅಂಗಾಂಗ ಕಸಿ ಕೇಂದ್ರ'ವನ್ನು ನಿರ್ಮಾಣ ಮಾಡಲಾಗುತ್ತಿದೆ. ಒಂಬತ್ತು ಮಹಡಿಗಳ ಕಟ್ಟಡವು 500 ಹಾಸಿಗೆಗಳನ್ನು ಒಳಗೊಂಡಿರಲಿದೆ. ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಈ ಕಟ್ಟಡವೂ ಇದೇ ವರ್ಷ ಕಾರ್ಯಾರಂಭ ಮಾಡುವ ಸಾಧ್ಯತೆಯಿದೆ. ಮಕ್ಕಳ ಅಂಗಾಂಗ ಕಸಿಗೆ ಈ ಕೇಂದ್ರ ನೆರವಾಗಲಿದೆ.

ಕೆ.ಸಿ. ಜನರಲ್ ಆಸ್ಪತ್ರೆಯ ಆವರಣದಲ್ಲಿ ಒಟ್ಟು 12,824 ಚದರ ಮೀಟರ್ ವಿಸ್ತೀರ್ಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಕಟ್ಟಡ ನಿರ್ಮಾಣವಾಗಲಿದೆ. ಈ ಕಟ್ಟಡ ನಿರ್ಮಾಣ ಕಾಮಗಾರಿಗೆ ಸೆಪ್ಟೆಂಬರ್‌ನಲ್ಲಿ ಚಾಲನೆ ದೊರೆತಿದೆ. ಇದರಲ್ಲಿ ಕಟ್ಟಡದ ಅಡಿಪಾಯದ ವಿಸ್ತೀರ್ಣ 2,131 ಚದರ ಮೀಟರ್ ಇರಲಿದೆ. ಇದಕ್ಕೆ ₹ 66.78 ಕೋಟಿ ವೆಚ್ಚವಾಗಲಿದೆ. ನಾಲ್ಕು ಮಹಡಿಯ ಈ ಆಸ್ಪತ್ರೆಯು, 200 ಹಾಸಿಗೆಗಳನ್ನು ಒಳಗೊಂಡಿರಲಿದೆ.

ನೆಫ್ರೊ-ಯುರಾಲಜಿ ಸಂಸ್ಥೆ ಆವರಣದಲ್ಲಿ 150 ಹಾಸಿಗೆಗಳ ಅನೆಕ್ಸ್ ಕಟ್ಟಡ ತಲೆಯೆತ್ತಿದೆ. ನೂತನ ಕಟ್ಟಡವು 30 ಹಾಸಿಗೆಗಳ ಡಯಾಲಿಸಿಸ್ ಘಟಕ, 20 ಹಾಸಿಗೆಗಳ ತೀವ್ರ ನಿಗಾ ಘಟಕವನ್ನೂ ಒಳಗೊಂಡಿದೆ. ಇದೂ ಸಹ ಶೀಘ್ರದಲ್ಲಿಯೇ ಕಾರ್ಯಾರಂಭಿಸಲಿದೆ. ಬೌರಿಂಗ್ ಆಸ್ಪತ್ರೆಗೆ 500 ಹಾಸಿಗೆಗಳ ನೂತನ ಕಟ್ಟಡ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ₹212.23 ಕೋಟಿ ವೆಚ್ಚದಲ್ಲಿ ನೂತನ ಆಸ್ಪತ್ರೆ ನಿರ್ಮಾಣವಾಗಲಿದೆ. 2027ರಲ್ಲಿ ಹೊಸ ಆಸ್ಪತ್ರೆ ಕಾರ್ಯಾರಂಭ ಮಾಡುವ ಗುರಿ ಹಾಕಿಕೊಳ್ಳಲಾಗಿದ್ದು, ಶೀಘ್ರ ಕಾಮಗಾರಿ ಪ್ರಾರಂಭವಾಗಲಿದೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಇನ್ನೊಂದು ಶಾಖೆಯನ್ನು ಪ್ರಾರಂಭಿಸುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿದೆ. ಕ್ಯಾಲಸನಹಳ್ಳಿ ಸಮೀಪ 40 ಎಕರೆ ಜಮೀನನ್ನೂ ಗುರುತಿಸಲಾಗಿದೆ.

'ಇಲ್ಲಿನ ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ಸಿಗುವ ಕಾರಣ ಹೊರ ರಾಜ್ಯಗಳಿಂದಲೂ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವ ಜತೆಗೆ ಹಾಸಿಗೆಗಳ ಸಂಖ್ಯೆ ಹೆಚ್ಚಳ, ಅತ್ಯಾಧುನಿಕ ವೈದ್ಯಕೀಯ ಉಪಕರಣಗಳ ಅಳವಡಿಕೆಗೆ ಆದ್ಯತೆ ನೀಡಲಾಗಿದೆ' ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಅತ್ಯಾಧುನಿಕ ಕ್ರೀಡಾ ಚಿಕಿತ್ಸಾಲಯ

ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ (ಎಸ್‌ಜಿಐಟಿಒ) ಕ್ರೀಡಾ ಗಾಯಗಳ ಚಿಕಿತ್ಸೆಗೆ ಅತ್ಯಾಧುನಿಕ ಸೌಲಭ್ಯಗಳುಳ್ಳ ಕಟ್ಟಡ ತಲೆಯೆತ್ತಿದೆ. ಕ್ರೀಡಾ ಗಾಯಗಳ ಚಿಕಿತ್ಸೆ ಬಗ್ಗೆ ತರಬೇತಿಯ ಜತೆಗೆ ಗಾಯಾಳು ಕ್ರೀಡಾಪಟುಗಳಿಗೆ ಚಿಕಿತ್ಸೆ ಹಾಗೂ ಪುನರ್ವಸತಿ ಕಲ್ಪಿಸಲು ಸಹಕಾರಿಯಾಗಲಿದೆ. ಕಟ್ಟಡದ ಕಾಮಗಾರಿ ಪೂರ್ಣಗೊಂಡಿದ್ದು, ಇದಕ್ಕೆ ಶೀಘ್ರದಲ್ಲಿಯೇ ಚಾಲನೆ ದೊರೆಯಲಿದೆ.

ನಗರದ ಆರೋಗ್ಯ ವ್ಯವಸ್ಥೆ ಚಿತ್ರಣ

243 ಕಾರ್ಯನಿರ್ವಹಿಸುತ್ತಿರುವ ನಮ್ಮ ಕ್ಲಿನಿಕ್‌ಗಳು

301 'ಆಯುಷ್ಮಾನ್' ಯೋಜನೆಯಡಿ ನೋಂದಾಯಿಸಲ್ಪಟ್ಟ ಆಸ್ಪತ್ರೆಗಳು

1.75 ಲಕ್ಷ 'ಆಯುಷ್ಮಾನ್' ಯೋಜನೆಯಡಿ ಕಳೆದ ಎರಡು ವರ್ಷ ಚಿಕಿತ್ಸೆ ಪಡೆದವರು

71 ನಗರದಲ್ಲಿರುವ 'ಆರೋಗ್ಯ ಕವಚ' ಆಂಬುಲೆನ್ಸ್‌ಗಳು

331 ನಗರದಲ್ಲಿರುವ ಜನೌಷಧ ಮಳಿಗೆಗಳು

ಹೊರರೋಗಿಗಳ ಸಂಖ್ಯೆಯೂ ಏರಿಕೆ

ಕಳೆದೊಂದು ವರ್ಷದಿಂದ ನಗರದ ಸರ್ಕಾರಿ ಆಸ್ಪತ್ರೆಗಳಿಗೆ ನಿತ್ಯ ಭೇಟಿ ನೀಡುವ ಹೊರ ರೋಗಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ. ವಾಣಿವಿಲಾಸ ಆಸ್ಪತ್ರೆಯಲ್ಲಿ 300ರ ಆಸುಪಾಸಿನಲ್ಲಿದ್ದ ಸಂಖ್ಯೆ, ಈಗ 500ರ ಗಡಿ ಸಮೀಪಿಸಿದೆ. ಜಯದೇವ ಹೃದ್ರೋಗ ಆಸ್ಪತ್ರೆಗೆ ಸುಮಾರು 2,200 ಮಂದಿ ಭೇಟಿ ನೀಡುತ್ತಿದ್ದು, ಈ ಸಂಖ್ಯೆ ಹಿಂದೆ 1,600 ರಷ್ಟಿತ್ತು. ಕಿದ್ವಾಯಿ ಆಸ್ಪತ್ರೆಗೆ ಸುಮಾರು 1,900 ಹೊರ ರೋಗಿಗಳು ಭೇಟಿ ನೀಡುತ್ತಿದ್ದಾರೆ. ಮೊದಲು ಈ ಸಂಖ್ಯೆ 1,700ರಷ್ಟಿತ್ತು. ಅದೇ ರೀತಿ, ಕೆ.ಸಿ ಜನರಲ್ ಆಸ್ಪತ್ರೆಗೆ ಸುಮಾರು 950, ವಿಕ್ಟೋರಿಯಾ ಆಸ್ಪತ್ರೆಗೆ ಅಂದಾಜು 1,300 ರೋಗಿಗಳು ಭೇಟಿ ನೀಡುತ್ತಿದ್ದಾರೆ.

ಚರಕ ಆಸ್ಪತ್ರೆ ಕಾರ್ಯಾರಂಭ

ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಎಬಿವಿಎಂಸಿಆರ್‌ಐ) ಅಧೀನದಲ್ಲಿರುವ, ಶಿವಾಜಿನಗರದ ಬ್ರಾಡ್‌ವೇ ರಸ್ತೆಯಲ್ಲಿರುವ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಸೆಪ್ಟೆಂಬರ್ ತಿಂಗಳಲ್ಲಿ ಕಾರ್ಯಾರಂಭಿಸಿದೆ. ₹ 24.38 ಕೋಟಿ ವೆಚ್ಚದಲ್ಲಿ ಬಿಬಿಎಂಪಿ ವತಿಯಿಂದ 2020ರಲ್ಲಿಯೇ ನಿರ್ಮಿಸಲಾಗಿದ್ದ ಈ ಆಸ್ಪತ್ರೆಗೆ, ವೈದ್ಯರು ಹಾಗೂ ಸಿಬ್ಬಂದಿಯ ನೇಮಕಾತಿ ನಡೆಯದಿದ್ದರಿಂದ ನಿರುಪಯುಕ್ತವಾಗಿತ್ತು. ಈಗ ಆಸ್ಪತ್ರೆಗೆ ಅಗತ್ಯ ವೈದ್ಯರು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. 20 ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆ ಸೇರಿ ಒಟ್ಟು 130 ಹಾಸಿಗೆಗಳನ್ನು ನಾಲ್ಕು ಮಹಡಿಗಳ ಈ ಆಸ್ಪತ್ರೆ ಒಳಗೊಂಡಿದೆ.

ಆರೋಗ್ಯ ವ್ಯವಸ್ಥೆಯ ಸಮಗ್ರ ಸುಧಾರಣೆಗೆ ಕ್ರಮವಹಿಸಲಾಗಿದೆ. ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ ಸೇರಿ ವಿವಿಧ ಕಾಮಗಾರಿ ಕೈಗೊಳ್ಳಲಾಗಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ



ಚರಕ ಆಸ್ಪತ್ರೆ ಲೋಕಾರ್ಪಣೆಯಿಂದ ಬಡ-ಮಧ್ಯಮ ವರ್ಗದವರಿಗೆ ಅನುಕೂಲವಾಗಿದೆ. ಸರ್ಕಾರಿ ವೈದ್ಯಕೀಯ ಸಂಸ್ಥೆಗಳ ಉನ್ನತೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ

ಡಾ. ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ನಿರ್ಮಾಣ ಆಗುತ್ತಿರುವ 11 ಮಹಡಿಗಳ ಕಟ್ಟಡ ಪ್ರಜಾವಾಣಿ ಚಿತ್ರ / ಕಿಶೋರ್ ಕುಮಾರ್ ಬೋಳಾರ್

ಎಚ್‌ಡಿಕೆ ಜಾಮೀನು ರದ್ಧತಿ ಕೋರಿ ಎಸ್‌ಐಟಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ (ಎಸ್‌ಎಸ್‌ವಿಎಂ) ಕಂಪನಿಗೆ ಗಣಿ ಮತ್ತು ಖನಿಜ ನಿಯಮಗಳನ್ನು ಉಲ್ಲಂಘಿಸಿ 550 ಎಕರೆ ವಿಸ್ತೀರ್ಣದ ಗಣಿ ಗುತ್ತಿಗೆ ಮಂಜೂರು ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಮಂಜೂರು ಮಾಡಿರುವ ಜಾಮೀನನ್ನು ರದ್ದುಗೊಳಿಸುವಂತೆ ಲೋಕಾಯುಕ್ತದ ವಿಶೇಷ ತನಿಖಾ ತಂಡ (ಎಸ್‌ಐಟಿ) ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸೋಮವಾರ ಅರ್ಜಿ ಸಲ್ಲಿಸಿದೆ.

ಕುಮಾರಸ್ವಾಮಿ ಅವರು 2007ರಲ್ಲಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಎಸ್‌ಎಸ್‌ವಿಎಂ ಕಂಪನಿಗೆ ಗಣಿ ಮತ್ತು ಖನಿಜ ನಿಯಮಗಳನ್ನು ಉಲ್ಲಂಘಿಸಿ 550 ಎಕರೆ ವಿಸ್ತೀರ್ಣದ ಗಣಿ ಗುತ್ತಿಗೆ ಮಂಜೂರು ಮಾಡಿದ ಆರೋಪವಿದೆ. 2011ರಲ್ಲಿ ಲೋಕಾಯುಕ್ತರಾಗಿದ್ದ ಎನ್. ಸಂತೋಷ್ ಹೆಗ್ಡೆ ಅವರು ಅಕ್ರಮ ಗಣಿಗಾರಿಕೆ ಕುರಿತು ಸಲ್ಲಿಸಿದ್ದ ವರದಿಯಲ್ಲಿನ ಉಲ್ಲೇಖ ಆಧರಿಸಿ ಲೋಕಾಯುಕ್ತದ ಎಸ್‌ಐಟಿ ತನಿಖೆ ನಡೆಸುತ್ತಿದೆ.

ಈ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯವು ಕುಮಾರಸ್ವಾಮಿ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. 2015ರ ಆಗಸ್ಟ್‌ನಲ್ಲಿ ಕುಮಾರಸ್ವಾಮಿ ಅವರು ವಿಚಾರಣೆಗೆ ಹಾಜರಾಗಿದ್ದ ಸಂದರ್ಭದಲ್ಲಿ ಎಸ್‌ಐಟಿ ಅಧಿಕಾರಿಗಳು ಅವರನ್ನು ಬಂಧಿಸಿ, ನ್ಯಾಯಾಲಯದ ಆದೇಶದಂತೆ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದರು.

'ತನಿಖೆಯಲ್ಲಿ ಹಸ್ತಕ್ಷೇಪ ಮಾಡುತ್ತಿರುವುದು ಮತ್ತು ತನಿಖಾಧಿಕಾರಿಗಳ ಮೇಲೆ ಒತ್ತಡ ಹೇರಲು ಪ್ರಯತ್ನ ಹಾಗೂ ಬೆದರಿಕೆ ಹಾಕುತ್ತಿರುವ ಆರೋಪಗಳ ಅಡಿಯಲ್ಲಿ ಕುಮಾರಸ್ವಾಮಿ ಅವರ ಜಾಮೀನು ರದ್ದುಗೊಳಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಸೋಮವಾರ ಅರ್ಜಿ ಸಲ್ಲಿಸಲಾಗಿದೆ' ಎಂದು ಲೋಕಾಯುಕ್ತದ ಎಸ್‌ಐಟಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಈ ಪ್ರಕರಣದಲ್ಲಿ ತನಿಖೆ ಪೂರ್ಣಗೊಳಿಸಿರುವ ಎಸ್‌ಐಟಿ ಅಧಿಕಾರಿಗಳು, ಕುಮಾರಸ್ವಾಮಿ ಅವರ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ರಾಜ್ಯಪಾಲರ ಅನುಮತಿ ಕೋರಿದ್ದಾರೆ. ರಾಜ್ಯಪಾಲರ ಕಚೇರಿಯು ಕೆಲವು ಸ್ಪಷ್ಟನೆಗಳನ್ನು ಕೋರಿತ್ತು. ಪುನಃ ಪ್ರಸ್ತಾವವನ್ನು ಸಲ್ಲಿಸಿರುವ ಎಸ್‌ಐಟಿ ಅಧಿಕಾರಿಗಳು, ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿದ್ದರು.

ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಲು ಅನುಮತಿ ಕೋರಿದ ಅರ್ಜಿ

ಜಮೀರ್ ವಿರುದ್ಧ ರಾಜ್ಯಪಾಲರಿಗೆ ಅಬ್ರಹಾಂ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಲು ಅನುಮತಿ ಕೋರಿ ತಾವು ಸಲ್ಲಿಸಿರುವ ಅರ್ಜಿಯನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಅಡ್ವೊಕೇಟ್ ಜನರಲ್ ಅವರಿಗೆ ನಿರ್ದೇಶನ ನೀಡುವಂತೆ ವಕೀಲ ಟಿ.ಜೆ. ಅಬ್ರಹಾಂ ಅವರು ರಾಜ್ಯಪಾಲರಿಗೆ ಸೋಮವಾರ ಮನವಿ ಸಲ್ಲಿಸಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಬದಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಖಾಸಗಿ ಮೊಕದ್ದಮೆ ದಾಖಲಿಸಲು ರಾಜ್ಯಪಾಲರು ಅನುಮತಿ ನೀಡಿದ್ದರು. ಅದನ್ನು ಪ್ರಶ್ನಿಸಿ ಸಿದ್ದರಾಮಯ್ಯ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ರಾಜ್ಯಪಾಲರ ತೀರ್ಮಾನವನ್ನು ಎತ್ತಿಹಿಡಿದಿತ್ತು.

'ಹೈಕೋರ್ಟ್ ತೀರ್ಪು ಹೊರಬಿದ್ದ ಬಳಿಕ ಪ್ರತಿಕ್ರಿಯಿಸಿದ್ದ ಜಮೀರ್ ಅಹಮದ್, 'ಇದು ರಾಜಕೀಯ ತೀರ್ಪು' ಎಂದಿದ್ದರು. ನ್ಯಾಯಾಲಯದ ಘನತೆಗೆ ಕುಂದು ಉಂಟುಮಾಡುವ ರೀತಿಯಲ್ಲಿ ಹಾಗೂ ತೀರ್ಪನ್ನು ರಾಜಕೀಯ ಚಟುವಟಿಕೆಗೆ ಹೋಲಿಸಿರುವ ಜಮೀರ್ ಅಹಮದ್ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಲು ಅನುಮತಿ ನೀಡಬೇಕು' ಎಂದು ಕೋರಿ ಅಬ್ರಹಾಂ ಅವರು ಸೆಪ್ಟೆಂಬರ್ 26ರಂದು ಅಡ್ವೊಕೇಟ್ ಜನರಲ್ ಅವರಿಗೆ ಅರ್ಜಿ ಸಲ್ಲಿಸಿದ್ದರು.

ರಾಜಭವನದಲ್ಲಿ ರಾಜ್ಯಪಾಲರನ್ನು ಸೋಮವಾರ ಭೇಟಿಯಾದ ಅಬ್ರಹಾಂ, 'ನಾನು ಸೆ.26ರಂದು ಅರ್ಜಿ ಸಲ್ಲಿಸಿದ್ದರೂ ಅಡ್ವೊಕೇಟ್ ಜನರಲ್ ಅವರು ಈವರೆಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ನ್ಯಾಯಾಂಗ ನಿಂದನೆ ಕೃತ್ಯದಲ್ಲಿ ಭಾಗಿಯಾಗಿರುವ ಜಮೀರ್ ಅಹಮದ್ ಅವರಿಗೆ ರಕ್ಷಣೆ ಒದಗಿಸುವ ದುರುದ್ದೇಶದಿಂದ ನನ್ನ ಅರ್ಜಿಯನ್ನು ಬಾಕಿ ಇರಿಸಿಕೊಂಡಿದ್ದಾರೆ. ತ್ವರಿತವಾಗಿ ಅರ್ಜಿಯನ್ನು ವಿಲೇವಾರಿ ಮಾಡಿ, ಸಚಿವರ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಲು ಅನುಮತಿ ನೀಡುವಂತೆ ಅಡ್ವೊಕೇಟ್ ಜನರಲ್ ಅವರಿಗೆ ನಿರ್ದೇಶನ ನೀಡಬೇಕು' ಎಂಬ ಮನವಿಯನ್ನು ಸಲ್ಲಿಸಿದರು.

ಎ.ಜಿ. ವಜಾಗೊಳಿಸುವಂತೆಯೂ ಆಗ್ರಹ: 'ಅಡ್ವೊಕೇಟ್ ಜನರಲ್ ಅವರು ನ್ಯಾಯಾಂಗ ನಿಂದನೆಯಲ್ಲಿ ಭಾಗಿಯಾದ ಸಚಿವರನ್ನು ರಕ್ಷಿಸುತ್ತಿದ್ದಾರೆ. ಆದ್ದರಿಂದ ಸಂವಿಧಾನದ 165ನೇ ವಿಧಿಯಡಿ ಪ್ರದತ್ತವಾಗಿರುವ ಅಧಿಕಾರವನ್ನು ಬಳಸಿಕೊಂಡು ಅಡ್ವೊಕೇಟ್ ಜನರಲ್ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕು' ಎಂಬ ಬೇಡಿಕೆಯುಳ್ಳ ಪ್ರತ್ಯೇಕ ಮನವಿಯನ್ನೂ ಅವರು ರಾಜ್ಯಪಾಲರಿಗೆ ಸಲ್ಲಿಸಿದರು.

ಇಬ್ಬರು ಮಕ್ಕಳು ಕೆರೆಯಲ್ಲಿ ಮುಳುಗಿರುವ ಶಂಕೆ

ಕೆಂಗೇರಿ: ಕೆರೆಯಲ್ಲಿ ಮುಳುಗಿ ಇಬ್ಬರು ಮಕ್ಕಳು ನಾಪತ್ತೆಯಾಗಿರುವ ಘಟನೆ ಸೋಮವಾರ ಸಂಜೆ ನಡೆದಿದೆ.

ಶ್ರೀನಿವಾಸ್ (15) ಮತ್ತು ಮಹಾಲಕ್ಷ್ಮಿ (13) ನಾಪತ್ತೆಯಾದವರು ಎಂದು ಗುರುತಿಸಲಾಗಿದೆ.

ಬಿಬಿಎಂಪಿಯಲ್ಲಿ ಪೌರಕಾರ್ಮಿಕರಾಗಿರುವ ಮಕ್ಕಳ ತಾಯಿ, ಇತ್ತೀಚೆಗಷ್ಟೇ ಕೆಂಗೇರಿ ಸಮೀಪದ ಹರ್ಷ ಲೇಔಟ್‌ಗೆ ಬಂದು ನೆಲೆಸಿದ್ದರು.

ಕೆಲಸದ ನಿಮಿತ್ತ ತಾಯಿ ಹೊರ ಹೋಗಿದ್ದರು. ಸಂಜೆ 5.30ರ ವೇಳೆಗೆ ಬಟ್ಟೆ ಒಗೆಯಲು ಬಂದಿದ್ದ ಅಣ್ಣ, ತಂಗಿ ಕಾಲು ಜಾರಿ ಕೆರೆಗೆ ಬಿದ್ದಿರುವ ಶಂಕೆಯಿದ್ದು, ಬಟ್ಟೆ ಹಾಗೂ ಪಾತ್ರೆ ಕೆರೆಯ ಬಳಿ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಂಗೇರಿ ಪೊಲೀಸರು ಮತ್ತು ಅಗ್ನಿ ಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಆದರೆ ರಾತ್ರಿಯವರೆಗೂ ಪತ್ತೆಯಾಗಲಿಲ್ಲ. ಮಳೆ ಕಾರಣ ಬೆಳಿಗ್ಗೆ ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಕೆಂಗೇರಿ ಸಿಪಿಐ ಸಂಜೀವ್ ಗೌಡ ತಿಳಿಸಿದ್ದಾರೆ

ಜ.29ರಿಂದ ಭಾರತೀಯ ಸಂಸ್ಕೃತಿ ಉತ್ಸವ

ಬೆಂಗಳೂರು: 'ದೇಶದ ಸಂಸ್ಕೃತಿಯನ್ನು ಉಳಿಸುವ ಮತ್ತು ಪರಿಚಯಿಸುವ ಉದ್ದೇಶದಿಂದ ನಡೆಸಲಾಗುತ್ತಿರುವ ಭಾರತೀಯ ಸಂಸ್ಕೃತಿ ಉತ್ಸವ–7 ಮತ್ತು ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಸ್ವರ್ಣ ಜಯಂತಿಯಲ್ಲಿ ಎಲ್ಲರೂ ಭಾಗಿಯಾಗಬೇಕು' ಎಂದು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಕರೆ ನೀಡಿದರು.

ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಮ್ ವಿಕಾಸ ಅಕಾಡೆಮಿ ಮತ್ತು ಭಾರತ ವಿಕಾಸ ಸಂಗಮ ಸಹಯೋಗದಲ್ಲಿ 2025ರ ಜನವರಿ 29ರಿಂದ ನಡೆಯಲಿರುವ ಉತ್ಸವದ ಆಹ್ವಾನ ಪತ್ರಿಕೆಯನ್ನು ಅವರು ಭಾನುವಾರ ಬಿಡುಗಡೆ ಮಾಡಿದರು. ಭಾರತೀಯ ವಿಕಾಸ ಸಂಗಮದ ಪೋಷಕರಾದ ಬಸವರಾಜ ಪಾಟೀಲ ಸೇಡಂ ಭಾಗವಹಿಸಿದ್ದರು.

ಜಾತ್ಯತೀತ ದೇಶದಲ್ಲೇಕೆ ಬೇಕು ಜಾತಿ ಗಣತಿ: ಪೇಜಾವರ ಶ್ರೀ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಜಾತ್ಯತೀತವಾಗಿರುವ ದೇಶದಲ್ಲಿ ಜಾತಿ ಗಣತಿ ಏಕೆ ಬೇಕು? ಅಷ್ಟೊಂದು ಹಣ ಖರ್ಚು ಮಾಡಿ ತಯಾರಿಸಲಾದ ಜಾತಿ ಗಣತಿ ವರದಿಯನ್ನು ಇಷ್ಟು ವರ್ಷ

ಮುಚ್ಚಿಟ್ಟಿದ್ದು ಏಕೆ?' ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರಶ್ನಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಒಂದು ಕಡೆ ಜಾತಿ ಆಧಾರದಲ್ಲಿ ರಾಜಕೀಯ ಬೇಡ ಎಂದು ಹೇಳುತ್ತಾರೆ. ಮತ್ತೊಂದು ಕಡೆಗೆ ಜಾತಿ ಗಣತಿ ಬೇಕು ಅನ್ನುತ್ತಾರೆ. ಜಾತಿ ಗಣತಿ ಏಕೆ ಬೇಕು ಎನ್ನುವುದು ತಿಳಿಯುತ್ತಿಲ್ಲ' ಎಂದರು.

'ಅಯೋಧ್ಯೆಯಲ್ಲಿ ಶ್ರೀರಾಮನ ಮಂದಿರ ನಿರ್ಮಾಣದ ಇನ್ನುಳಿದ ಕಾರ್ಯ ಭರದಿಂದ ಸಾಗಿದೆ. ಒಂದು ವರ್ಷದಲ್ಲಿ ಶ್ರೀರಾಮ ಮಂದಿರ ಕಾಮಗಾರಿ ಪೂರ್ಣವಾಗಲಿದೆ. ರಾಮರಾಜ್ಯದ ಸ್ಥಾಪನೆಗಾಗಿ ನಮಗೆ ರಾಮ ಮಂದಿರ ಬೇಕು. ಇವತ್ತು ಪ್ರಜಾರಾಜ್ಯ ಇದೆ. ಆದರೂ ರಾಮನ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು. ತಾಯಿಯನ್ನೂ, ತಾಯಿನಾಡನ್ನೂ ಗೌರವಿಸಬೇಕು' ಎಂದು ಹೇಳಿದರು.

'ಅಯೋಧ್ಯೆಗೆ ಹೋದಾಗ ನಿಮ್ಮ ಹೆಸರಿನಲ್ಲಿ ಸಹಾಯ ಮಾಡುತ್ತಿದ್ದೇನೆ ಅಂದರೆ ಅದೇ ಸೇವೆ. ನಮ್ಮ ಮಠದಿಂದ ಮನೆ ಇಲ್ಲದವರಿಗೆ ಮನೆ ಕಟ್ಟಿಸಿಕೊಡುವ ಕಾರ್ಯ ಆಗುತ್ತಿದೆ. ರಾಮನ ಮಂದಿರ ನಿರ್ಮಾಣ ಕಾಮಗಾರಿ ಶುರುವಾದ ಮೇಲೆ ಇಂತಹ ಕಾರ್ಯಗಳು ನಡೆಯುತ್ತಿವೆ. ರಾಮಮಂದಿರ ದೇಶದ ಹೆಮ್ಮೆಯ ಪ್ರತೀಕ' ಎಂದರು.

ತರಾತುರಿಯಲ್ಲಿ ಮೀಸಲಾತಿ ವರ್ಗೀಕರಣ ಮಾಡದಿರಲು ಆಗ್ರಹ

ಒಳಮೀಸಲಾತಿ ಜಾರಿ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಜಾರಿಗೊಳಿಸುವ ಪ್ರಸ್ತಾವವನ್ನು ವಿರೋಧಿಸಿ ಬಂಜಾರ ಧರ್ಮಗುರುಗಳ ಮಹಾಸಭಾದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ರಾಜ್ಯದಲ್ಲಿರುವ ಸಮುದಾಯಗಳ ವೈಜ್ಞಾನಿಕವಾಗಿ ದತ್ತಾಂಶವನ್ನು ಸಂಗ್ರಹಿಸದೆ ತರಾತುರಿಯಲ್ಲಿ ಮೀಸಲಾತಿ ವರ್ಗೀಕರಣ ಮಾಡಬಾರದು. ಪರಿ ಶಿಷ್ಟರ ಜಾತಿ ಪಟ್ಟಿಯಲ್ಲಿರುವ ವಿವಿಧ ಸಮುದಾಯದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ದೊರಕಿರುವ ಅವಕಾಶಗಳು, ಆರ್ಥಿಕ ಸ್ಥಿತಿಗಳು, ರಾಜಕೀಯ ಸ್ಥಾನಮಾನ ಆಧರಿಸಿಯೇ ಒಳಮೀಸಲು ಹಂಚಿಕೆ ನಿರ್ಧಾರ ಕೈಗೆತ್ತಿಕೊಳ್ಳಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ನ್ಯಾಯ ಸಮ್ಮತ ಮತ್ತು ಸಂವಿಧಾನಾತ್ಮಕ ಅಂಶಗಳ ದೃಷ್ಟಿಯಿಂದ ಸರ್ಕಾರ ಹೊಸದಾಗಿ ಅಧ್ಯಯನ ಮಾಡಬೇಕು. ಅದಕ್ಕಾಗಿ ಎಲ್ಲಾ ಸಮುದಾಯಗಳನ್ನು ಒಳಗೊಂಡ ನೂತನ ಆಯೋಗ ರಚಿಸಬೇಕು. ಸಮುದಾಯಗಳಲ್ಲಿ ಸಮಾನ ನ್ಯಾಯ ಮತ್ತು ಏಕತೆ

ಒಳಮೀಸಲಾತಿ ಜಾರಿಗೊಳಿಸುವುದನ್ನು ವಿರೋಧಿಸಿ ಸೋಮವಾರ ಬಂಜಾರ ಧರ್ಮಗುರುಗಳ ಮಹಾಸಭಾ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಉಳಿಸಿಕೊಳ್ಳುವ ದೃಷ್ಟಿಯಿಂದ ಆತುರದ ನಿರ್ಣಯ ಕೈಗೊಳ್ಳಬಾರದು' ಎಂದು ಮಹಾಸಭಾದ ಅಧ್ಯಕ್ಷ ಸೈನಾ ಭಗತ್ ತಿಳಿಸಿದರು.

'ಸೂಕ್ತ ಅಧ್ಯಯನ ಮತ್ತು ಪ್ರಾತಿನಿಧ್ಯದ ಕೊರತೆ ಸಾಬೀತು ಪಡಿಸುವ ದತ್ತಾಂಶಗಳು ಲಭ್ಯವಾಗುವವರೆಗೂ ಒಳ ವರ್ಗೀಕರಣ ಮಾಡಬಾರದು' ಎಂದು ಒತ್ತಾಯಿಸಿದರು.

'2011ರ ನಂತರ ಜನಗಣತಿ ನಡೆದಿಲ್ಲ. ಜನಸಂಖ್ಯಾ ಮಾಹಿತಿ ಇಲ್ಲದೇ ಮತ್ತು ಜಾತಿ ಗಣತಿ ನಡೆಯದೆ ಒಳಮೀಸಲಾತಿ ಮತ್ತು ವರ್ಗೀಕರಣದ ವಿಚಾರ ಸಮಂಜಸವಾಗಿರುವುದಿಲ್ಲ. ಪರಿಶಿಷ್ಟ ಸಮುದಾಯಗಳ ನಡುವೆ ಒಳಮೀಸಲಾತಿ ಹಾಗೂ ವರ್ಗೀಕರಣ ವಿಷಯಗಳಲ್ಲಿ ಹುಟ್ಟುತ್ತಿರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವುದು. ಮತ್ತು ಸಮುದಾಯಗಳ ನಡುವೆ ಯಾವುದೇ ಧಕ್ಕೆ ತರದಂತೆ ಎಲ್ಲ ಪರಿಶಿಷ್ಟರ ಹಿತವನ್ನು ಕಾಪಾಡಲು ಸರ್ಕಾರ ಸರಿಯಾದ ಕ್ರಮವಹಿಸಬೇಕು' ಎಂದು ಮನವಿ ಮಾಡಿದರು. ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಬಂಜಾರ ಸಮುದಾಯದ ಮುಖಂಡ ಬಾಬು ನಾಯಕ, ಅಂಬೇಡ್ಕರ್ ಸಿದ್ಧಾಂತ ವೇದಿಕೆಯ ಮಹಿಳಾ ಅಧ್ಯಕ್ಷೆ ಚಂದ್ರಿಕಾ ಪಾಲ್ಗೊಂಡಿದ್ದರು.

ರಾಕೇಶ್ ಸಾವಿಗೆ ಬೈರತಿ ಕಾರಣ: ಶೋಭಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನಡುವಿನ ವಾಕ್ಸಮರ ತೀವ್ರಗೊಂಡಿದೆ. ರಾಕೇಶ್ ಸಿದ್ದರಾಮಯ್ಯ ಸಾವಿಗೆ ಬೈರತಿ ಸುರೇಶ್ ಕಾರಣ ಎಂದು ಶೋಭಾ ಆರೋಪಿಸಿದ್ದಾರೆ.

'ಬಿ.ಎಸ್.ಯಡಿಯೂರಪ್ಪ ಪತ್ನಿ ಮೈತ್ರಾದೇವಿ ಅವರ ಸಾವಿನಲ್ಲಿ ಶೋಭಾ ಕರಂದ್ಲಾಜೆ ಅವರ ಪಾತ್ರವಿದೆ ಎಂದು ನನಗೆ ಅನುಮಾನವಿದೆ. ಈ ಬಗ್ಗೆ ತನಿಖೆಯಾಗಲಿ' ಎಂದು ಸುರೇಶ್ ಆಗ್ರಹಿಸಿದ್ದರು. ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಶೋಭಾ, 'ಬೈರತಿ ಸುರೇಶ್ ದರೋಡೆಕೋರ. ಅವರು ಮುಡಾದಿಂದ ಸಾವಿರಾರು ಕಡತಗಳನ್ನು ಎತ್ತಿಕೊಂಡು ಬಂದು ಸುಟ್ಟು ಹಾಕಿದ್ದಾರೆ' ಎಂದರು.

'ಇಂತಹ ವ್ಯಕ್ತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹತ್ತಿರ ಇಟ್ಟುಕೊಂಡಿರುವುದು ಏಕೆ' ಎಂದು ಕೇಳಿದರು.

'ರಾಜಕಾರಣಿಗಳು ಮಹಾಭಾರತವನ್ನು ಓದಬೇಕು. ಕೌರವರನ್ನು ಉದ್ಧಾರ ಮಾಡಲು ಶಕುನಿ, ಅವರ ಜತೆಗೆ ಸೇರಿಕೊಂಡಿರಲಿಲ್ಲ. ಅವರನ್ನು ಮುಗಿಸಲು ಸೇರಿಕೊಂಡಿದ್ದ. ಅಂತಹ ಶಕುನಿಗಳು ಈಗಲೂ ಇದ್ದಾರೆ. ಅವರು ಮುಖ್ಯಮಂತ್ರಿಯ ಹಿಂದೆ ಮುಂದೆ ಸುತ್ತುತ್ತಿರುತ್ತಾರೆ. ಸಿದ್ದರಾಮಯ್ಯ ಆಸ್ತಿ ಹೊಡೆಯಲು, ಅವರ ದುಡ್ಡು ಹೊಡೆಯಲು ಬೈರತಿ ಮುಂದಾಗಿದ್ದಾರೆ' ಎಂದರು.

'ರಾಜಕಾರಣಿಗಳು ಕ್ಷುಲ್ಲಕ ರಾಜಕಾರಣ ಮಾಡಬಾರದು. ರಾಕೇಶ್ ಸಾವಿಗೆ ಬೈರತಿ ಸುರೇಶ್ ಕಾರಣ ಎಂದು ಜನ ಹೇಳುತ್ತಿದ್ದಾರೆ. ಅದನ್ನು ಅವರು ಒಪ್ಪಿಕೊಳ್ಳುತ್ತಾರಾ' ಎಂದು ಪ್ರಶ್ನಿಸಿದರು.

'ನಿಮ್ಮನ್ನು ಹೆಬ್ಬಾಳದಿಂದ ಓಡಿಸುವ ಜವಾಬ್ದಾರಿ ನಮ್ಮದಾಗಿದೆ. ಕ್ಷೇತ್ರದಲ್ಲಿ ದರೋಡೆ ನಡೆಯುತ್ತಿದೆ. ಒಂದೇ ಒಂದು ಅಭಿವೃದ್ಧಿ ಕೆಲಸ ಆಗುತ್ತಿಲ್ಲ. ನೀವು ನಗರಾಭಿವೃದ್ಧಿ ಸಚಿವರು. ಬೆಂಗಳೂರು ಮುಳುಗುತ್ತಿದೆ. ಯಾವ ಅಭಿವೃದ್ಧಿ ಕೆಲಸ ಮಾಡಿದ್ದೀರಿ' ಎಂದು ಪ್ರಶ್ನಿಸಿದರು.

ನಗರದಲ್ಲಿ ಇಂದು

'ಶೇಪಿಂಗ್ ದಿ ಫ್ಯೂಚರ್ ಆಫ್ ಬಯೋಡೈನಮಿಕ್ಸ್ ಇನ್ ಇಂಡಿಯ': ಉದ್ಘಾಟನೆ: ಕೆ. ಚಂದ್ರಶೇಖರನ್, ಎಚ್.ಕೆ. ಪಾಟೀಲ, ಮಹೇಶ್ ಮೆಲ್ವಿನ್, ಅತಿಥಿಗಳು: ಕೃಷ್ಣ ಬೈರೇಗೌಡ, ಆಯೋಜನೆ: ಬಯೋಡೈನಮಿಕ್ ಅಸೋಸಿಯೇಷನ್ ಆಫ್ ಇಂಡಿಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10

'ದೇಶದ ಸುಭಿಕ್ಷೆಗಾಗಿ ಪ್ರಾಮಾಣಿಕತೆಯ ಸಂಸ್ಕೃತಿ' ಕುರಿತು ಹೆಸ್ಕಾಂ ಅಧಿಕಾರಿಗಳಿಗೆ ಕಾರ್ಯಾಗಾರ: ಅತಿಥಿಗಳು: ಬಿ.ಎಸ್. ಪಾಟೀಲ್, ಬಿ. ವೀರಪ್ಪ, ಮಹಾಂತೇಶ ಬೀಳಗಿ, ರಮೇಶ ಎಚ್.ಜೆ., ದಯಾನಂದ ಬಿ.ಆರ್., ಆಯೋಜನೆ: ಹೆಸ್ಕಾಂ, ಸ್ಥಳ: ಕೆಇಬಿ ಎಂಜಿನಿಯರ್ಸ್ ಅಸೋಸಿಯೇಷನ್, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.15

'ನಾನೇಕೆ ಐಎಎಸ್ ಅಧಿಕಾರಿಯಾದೆ?': ಅತಿಥಿ: ಅನಿಲ್ ಗೋಕಾಕ್, ಉಪಸ್ಥಿತಿ: ವತ್ಸಲಾ ಮೋಹನ್, ನ. ರವಿಕುಮಾರ್, ಕೆ.ಎನ್.ವೀಣಾ, ಆಯೋಜನೆ: ವಿ.ಕೃ. ಗೋಕಾಕ್ ವಾಙ್ಮಯ ಟ್ರಸ್ಟ್, ಸ್ಥಳ: ಸುರಾನ ಕಾಲೇಜು, ಸೌತ್ ಎಂಡ್ ರಸ್ತೆ, ಬೆಳಿಗ್ಗೆ 10.30

'ಅನ್ವೇಷಣೆ' ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನೆ: ಅತಿಥಿಗಳು: ಪ್ರಿಯಾಂಕಾ ಉಪೇಂದ್ರ, ರೋಹಿಣಿ ರಘುನಂದನ್, ಅಧ್ಯಕ್ಷತೆ: ವಿಷ್ಣು ಭರತ್ ಎ.ಎಸ್., ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

'ರಾಮ ದರ್ಶನ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಕಾವ್ಯಶ್ರೀನಾಯಕ್ ಅಜೇರು, ಪೃಥ್ವಿ ಬಡೆಕ್ಕಿಲ, ಅಂಬಾತನಯ ಅರ್ನಾಡಿ, ಮುಮ್ಮೇಳ: ಉಮಾಕಾಂತ್ ಭಟ್ ಕೆರೇಕೈ, ಅಶೋಕ ಭಟ್, ಶಶಾಂಕ ಅರ್ನಾಡಿ, ಸುಧನ್ವಾ ದೇರಾಜೆ ಆಯೋಜನೆ: ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಶಬರಿಗಿರಿ, ಎರಡನೇ ಕ್ರಾಸ್, ಎಸ್‌ಎಲ್‌ಎನ್ ಬಡಾವಣೆ ಅಂದ್ರಹಳ್ಳಿ ಮುಖ್ಯರಸ್ತೆ, ಕರಿಹೋಬನಹಳ್ಳಿ, ಸಂಜೆ 5

'ಶ್ರೀದೇವಿ ಮಹಾತ್ಮೆ' ಯಕ್ಷಗಾನ ಪ್ರದರ್ಶನ: ಸಾನಿಧ್ಯ:ರಾಜಶೇಖರಾನಂದ ಸ್ವಾಮೀಜಿ, ಆಯೋಜನೆ: ಸಾಯಿ ದುರ್ಗಾ ಟ್ರಸ್ಟ್, ಸ್ಥಳ: ಪ್ರಸನ್ನ ದುರ್ಗಾ ಪರಮೇಶ್ವರಿ ಹಾಗೂ ಶಿರಡಿ ಸಾಯಿ ಬಾಬಾ ದೇವಸ್ಥಾನ ನವಿಲು ನಗರ, ಅಂದ್ರಹಳ್ಳಿ ಮುಖ್ಯರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಕ್ರೀಡಾಂಗಣದ ಆವರಣಕ್ಕೆ ನುಗ್ಗಿದ ಮಳೆ ನೀರು: 2 ಪಂದ್ಯಗಳು ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಷ್ಯನ್ ನೆಟ್‌ಬಾಲ್ ಮಹಿಳಾ ಚಾಂಪಿಯನ್‌ಷಿಪ್ ನಡೆಯುತ್ತಿರುವ ನಗರದ ಕೋರಮಂಗಲ ಒಳಾಂಗಣ ಕ್ರೀಡಾಂಗಣದ ಆವರಣಕ್ಕೆ ಸೋಮವಾರ ಬೆಳಿಗ್ಗೆ ಮಳೆ ನೀರು ನುಗ್ಗಿದ ಕಾರಣ ಎರಡು ಪಂದ್ಯಗಳನ್ನು ಮೂಂದೂಡಲಾಗಿದೆ.

'ಬೆಳಿಗ್ಗೆ 9 ಗಂಟೆಗೆ ಪಂದ್ಯಗಳು ಆರಂಭವಾಗಬೇಕಿತ್ತು. ಆದರೆ, ಕ್ರೀಡಾಂಗಣದ ಆವರಣ ಜಲಾವೃತ ವಾಗಿದ್ದರಿಂದ ಚೀನಾ ತೈಪೆ- ಇರಾಕ್ ಮತ್ತು ಫಿಲಿಪೀನ್ಸ್- ಜಪಾನ್ ನಡುವಿನ ಪಂದ್ಯವನ್ನು ಗುರುವಾರಕ್ಕೆ ಮುಂದೂಡಲಾಗಿದೆ. ಮಧ್ಯಾಹ್ನ 1ಗಂಟೆಗೆ ಇತರ ಪಂದ್ಯಗಳು ಆರಂಭವಾಗಿ, ನಿಗದಿಯಂತೆ ನಡೆದವು' ಎಂದು ಕರ್ನಾಟಕ ಅಮೆಚೂರ್ ನೆಟ್‌ಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಗಿರೀಶ್ ಸಿ. ತಿಳಿಸಿದ್ದಾರೆ.

ಏಷ್ಯನ್ ನೆಟ್‌ಬಾಲ್ ಚಾಂಪಿಯನ್‌ಷಿಪ್ ನಡೆಯುತ್ತಿರುವ ಕೋರಮಂಗಲ ಒಳಾಂಗಣ ಕ್ರೀಡಾಂಗಣದ ಮುಂಭಾಗ ಮಳೆ ನೀರು ನಿಂತಿರುವ ದೃಶ್ಯ

ಭಾರಿ ಮಳೆಯಿಂದ ಮೆಜೆಸ್ಟಿಕ್ ಬಸ್ ನಿಲ್ದಾಣದ ಅಂಗಳದಲ್ಲಿ ಬೃಹತ್ ಹೊಂಡವೊಂದು ನಿರ್ಮಾಣವಾಗಿರುವುದು ಕಂಡುಬಂತು

ಪ್ರಜಾವಾಣಿ ಚಿತ್ರ:ಕಿಶೋರ್ ಕುಮಾರ್ ಬೋಳಾರ್

ಯಲಹಂಕದ ಅಟ್ಟೂರಿನಲ್ಲಿ ಮನೆಗಳಿಗೆ ನುಗ್ಗಿದ ನೀರು • ಜನರ ನಿದ್ದೆಗೆಡಿಸಿದ ಮಳೆರಾಯ • ಸಂಚಾರ ಸಂಪೂರ್ಣ ಅಸ್ತವ್ಯಸ್ತ

ರಾತ್ರಿ ವರ್ಷಧಾರೆ ಅಬ್ಬರ: ರಸ್ತೆಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ರಾತ್ರಿಯಿಂದ ಸೋಮವಾರದಿಂದ ಬೆಳಿಗ್ಗೆವರೆಗೆ ಸುರಿದ ಮಳೆಯಿಂದ ದಿನವಿಡೀ ಸುಧಾರಿಸಿಕೊಳ್ಳುತ್ತಿದ್ದ ನಾಗರಿಕರಿಗೆ, ಸೋಮವಾರ ರಾತ್ರಿ ಮತ್ತೆ ಅಬ್ಬರಿಸಿದ ಮಳೆ ನಿದ್ದೆಗೆಡಿಸಿತು.

ಸೋಮವಾರ ಬೆಳಿಗ್ಗೆ 10ರಿಂದ ರಾತ್ರಿ 8 ರವರೆಗೆ ಆಗಾಗ ತುಂತುರು ಮಳೆಯಾಗಿತ್ತಿತ್ತು. ರಾತ್ರಿ 10ರ ನಂತರ ಬಿರುಸುಗೊಂಡ ಮಳೆ ಮತ್ತೆ ಅವಾಂತರ ಸೃಷ್ಟಿಸಿತು. ತಡರಾತ್ರಿಯ-ವರೆಗೆ ಅಬ್ಬರ ಮುಂದುವರಿದಿತ್ತು.

ನಗರದ ಬಹುತೇಕ ರಸ್ತೆಗಳು ಜಲಾವೃತಗೊಂಡರೆ, ಹಲವು ಮನೆಗಳಿಗೆ ನೀರು ನುಗ್ಗಿತು. ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರ ನಿಧಾನಗತಿಯಾಗಿ ದಟ್ಟಣೆ ಉಂಟಾಯಿತು. ದ್ವಿಚಕ್ರ ವಾಹನ ಸವಾರರು ಪರದಾಡಿದರು.

ಮೈಸೂರು ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಯಿತು. ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಖಾಸಗಿ ಬಸ್‌ಗಳು ರಸ್ತೆಯ ಮಧ್ಯೆ ನಿಂತಿದ್ದರಿಂದ ದಟ್ಟಣೆ ಅಧಿಕವಾಗಿತ್ತು.

ಹೆಬ್ಬಾಳ ಜಂಕ್ಷನ್ ಸುತ್ತಮುತ್ತಲ ರಸ್ತೆಗಳಲ್ಲಿ ಮಳೆ ನೀರು ನಿಂತು ವಾಹನ ಸಂಚಾರ ಬಹುತೇಕ ಸ್ಥಗಿತ-ಗೊಂಡಂತಾಗಿತ್ತು.

ಯಲಹಂಕದಲ್ಲಿ ರಾತ್ರಿ 11.30ರ ವೇಳೆಗೆ 15 ಸೆಂಟಿಮೀಟರ್ ಗೂ ಹೆಚ್ಚು ಮಳೆಯಾಯಿತು. ಅಟ್ಟೂರಿನಲ್ಲಿ ಮನೆಗಳಿಗೆ ನೀರು ನುಗ್ಗಿದ್ದು, ನಿವಾಸಿಗಳು ನೀರು ಹಾಕಲು ಹರಸಾಹಸ ಪಟ್ಟರು. ಹಲವರು ರಕ್ಷಣೆಗಾಗಿ ಮನೆಯಿಂದ ಹೊರಬಂದರು.

ನಗರದಲ್ಲಿ ಭಾನುವಾರ ರಾತ್ರಿ ಸುರಿದ ಮಳೆಗೆ ಈಜೀಪುರದ ಶ್ರೀರಾಮ ರಸ್ತೆ ಜಲಾವೃತವಾಗಿದ್ದರಿಂದ ವಾಹನ ಸವಾರರು ಪರದಾಡಿದರು

ಹಲಸೂರಿನ ಮರ್ಫಿಟೌನ್‌ನ ಮಾರ್ಕೆಟ್ ರಸ್ತೆಯಲ್ಲಿರುವ ಮನೆಯೊಂದಕ್ಕೆ ನುಗ್ಗಿದ್ದ ಮಳೆ ನೀರನ್ನು ಮಹಿಳೆ, ಮಕ್ಕಳು ಹೊರ ಹಾಕುತ್ತಿರುವ ದೃಶ್ಯ

ಪ್ರಜಾವಾಣಿ ಚಿತ್ರ:ಎಸ್‌.ಕೆ.ದಿನೇಶ್

ಲಾಲ್‌ಬಾಗ್ ರಸ್ತೆಯು ಜಲಾವೃತವಾಗಿದ್ದರಿಂದ ಯುವಕರು ಮೀನು ಹಿಡಿದರು

ಎಚ್‌ಎಸ್‌ಆರ್ ಲೇಔಟ್ ಸೆಕ್ಟರ್–4ನ ಫ್ರೀಡಂ ಶಾಲೆಯ ಬಳಿ ರಸ್ತೆಯು ಹೊಂಡದಂತಾಗಿದ್ದು, ವಾಹನ ಸವಾರರು, ಪಾದಚಾರಿಗಳು ಪರದಾಡಿದರು

ಪ್ರಜಾವಾಣಿ ಚಿತ್ರ:ಪ್ರಶಾಂತ್ ಎಚ್‌.ಜಿ

'ನೆರೆ ಪರಿಹಾರಕ್ಕೆ ₹1000 ಕೋಟಿ ಬಿಡುಗಡೆ ಮಾಡಿ'

ಬೊಮ್ಮನಹಳ್ಳಿ: 'ಬೆಂಗಳೂರು ನಗರದಲ್ಲಿ ವಾರದಿಂದ ಧಾರಾಕಾರ ಮಳೆಯಾಗುತ್ತಿದ್ದು, ಅನೇಕ ಪ್ರದೇಶಗಳು ನೆರೆಯಿಂದ ತತ್ತರಿಸಿವೆ. ನೆರೆ ಪರಿಹಾರಕ್ಕಾಗಿ ರಾಜ್ಯ ಸರ್ಕಾರ ₹1 ಸಾವಿರ ಕೋಟಿ ಬಿಡುಗಡೆ ಮಾಡಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ನಗರದ ಸಿಲ್ಕ್ ಬೋರ್ಡ್ ಜಂಕ್ಷನ್ ಮತ್ತು ಎಚ್.ಎಸ್. ಆರ್ ಬಡಾವಣೆಯಲ್ಲಿನ ಮಳೆ ಹಾನಿಗೊಳಗಾದ ಪ್ರದೇಶಗಳಿಗೆ ಸೋಮವಾರ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಪದೇಪದೇ ನೆರೆಯಿಂದ ಸಮಸ್ಯೆ ಉಂಟಾಗುತ್ತಿದೆ. ಇಲ್ಲಿ ನೆರೆ ತಪ್ಪಿಸಲು ಆರು ತಿಂಗಳ ಹಿಂದೆಯೇ ₹3 ಕೋಟಿ ವೆಚ್ಚದ ಟೆಂಡರ್ ಆಗಿದ್ದರೂ, ಇನ್ನೂ ಕೆಲಸ ಶುರು ಮಾಡಿಲ್ಲ' ಎಂದು ಆರೋಪಿಸಿದರು.

'ರಾಜಕಾಲುವೆಗಳಲ್ಲಿ ಕಸ ತುಂಬಿ ದುರ್ವಾಸನೆ ಬೀರುತ್ತಿದೆ. ರಾಜ್ಯ ಸರ್ಕಾರ, ಒಂದೂವರೆ ವರ್ಷದಿಂದ ನಗರದ ರಾಜಕಾಲುವೆ, ಒಳ ಚರಂಡಿಗಳನ್ನು ಸ್ವಚ್ಛಗೊಳಿಸಿಲ್ಲ. ಸರ್ಕಾರದ ಖಜಾನೆ ಖಾಲಿಯಾಗಿದೆ. ಮುಖ್ಯಮಂತ್ರಿಯವರು 15 ದಿನಗಳಿಗೊಮ್ಮೆ ಬೆಂಗಳೂರು ರೌಂಡ್ಸ್ ಮಾಡುವುದಾಗಿ ಹೇಳಿದ್ದರು. ಆದರೆ ಮಳೆಯಿಂದ ಬೆಂಗಳೂರು ಮುಳುಗಡೆಯಾದರೂ ಮುಖ್ಯ-ಮಂತ್ರಿಗಳು ಇನ್ನೂ ಹೊರ ಬಂದಿಲ್ಲ' ಎಂದು ವ್ಯಂಗ್ಯವಾಡಿದರು.

ರಾಜ್ಯದಾದ್ಯಂತ ಮಳೆಯಿಂದಾಗಿ ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟ ಉಂಟಾಗಿದೆ. ರೈತರು ಸಂಕಷ್ಟಕ್ಕೆ ಸಿಲುಕಿದ್ದರೂ ರಾಜ್ಯ ಸರ್ಕಾರ, ಜನರ ನೆರವಿಗೆ ಬಂದಿಲ್ಲ. ಸರ್ಕಾರ ಅತಿವೃಷ್ಟಿ ಪರಿಹಾರಕ್ಕಾಗಿ ₹5 ಸಾವಿರ ಕೋಟಿ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

'ಸಿಲ್ಕ್ ಬೋರ್ಡ್‌ನಲ್ಲಿ ಮೆಟ್ರೊ ರೈಲು ಮಾರ್ಗಕ್ಕೆ ಸಂಬಂಧಿಸಿದ ಕಾಮಗಾರಿ ನಡೆಯುತ್ತಿರುವ ಕಾರಣಕ್ಕಾಗಿ ಒಂದು ಭಾಗದ ಒಳಚರಂಡಿಯನ್ನು ಮುಚ್ಚಲಾಗಿದೆ. ರಾಜಕಾಲುವೆಗಳ ಮೂಲಕ ಹರಿದು ಬರುವ ನೀರು ಸಿಲ್ಕ್ ಬೋರ್ಡ್ ಜಂಕ್ಷನ್‌ಲ್ಲಿ ಶೇಖರಣೆಗೊಂಡು ರಸ್ತೆಗೆ ಹರಿದು ಬರುತ್ತಿದೆ. ಇದರಿಂದಾಗಿ ಇಲ್ಲಿ ನೆರೆ ಉಂಟಾಗುತ್ತಿದೆ. ಇದರಿಂದ ಹೊಸೂರು ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚುತ್ತಿದೆ' ಎನ್ನಲಾಗಿದೆ.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಸತೀಶ್‌ರೆಡ್ಡಿ, ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತ ಅಜಿತ್, ಮುಖ್ಯ ಎಂಜಿನಿಯರ್ ಶಶಿಕುಮಾರ್ ಇದ್ದರು.

ಸಿಲ್ಕ್ ಬೋರ್ಡ್ ಜಂಕ್ಷನ್ ನೆರೆ ವೀಕ್ಷಿಸಲು ಬಂದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತ ಅಜಿತ್ ಅವರಿಂದ ಮಾಹಿತಿ ಪಡೆದರು. ಶಾಸಕ ಸತೀಶ್ ರೆಡ್ಡಿ ಹಾಜರಿದ್ದರು

'ಕಾಮಗಾರಿ ವಿಳಂಬ'

'ಸಿಲ್ಕ್ ಬೋರ್ಡ್‌ನಲ್ಲಿ ನೆರೆ ತಪ್ಪಿಸಲು ಸಮಾನಾಂತರ ಒಳ ಚರಂಡಿ ಮಾಡಬೇಕೆಂದು ಒಂಬತ್ತು ತಿಂಗಳ ಹಿಂದೆಯೇ ನಿರ್ಧಾರ ಮಾಡಲಾಗಿತ್ತು.

ಇಲ್ಲಿ ಮೆಟ್ರೊ ಪಿಲ್ಲರ್ ಇರುವುದರಿಂದ ಬಿಎಂಆರ್‌ಸಿಎಲ್ ಕಾಮಗಾರಿಯ ಜವಾಬ್ದಾರಿ ಹೊತ್ತಿತ್ತು. ಅದರಂತೆ ಟೆಂಡರ್ ಆಗಿ, ಹಣವೂ ಬಿಡುಗಡೆ ಆಗಿತ್ತು. ಆದರೆ ಈವರೆಗೂ ಕೆಲಸ ಆಗಿಲ್ಲ. ಈ ವಿಚಾರದಲ್ಲಿ ನಾನು ಸರ್ಕಾರವನ್ನು ದೂರುವುದಿಲ್ಲ, ಬಿಎಂಆರ್ ಸಿಎಲ್ ಅಧಿಕಾರಿಗಳ ನಿರ್ಲಕ್ಷ್ಯ-ದಿಂದಾಗಿ ಇದು ವಿಳಂಬವಾಗಿದೆ' ಎಂದು ಅಶೋಕ್ ಆರೋಪಿಸಿದರು.

30 ಮನೆ, 97 ರಸ್ತೆಗಳಲ್ಲಿ ನೀರು

ಬೆಂಗಳೂರು: ನಗರದಲ್ಲಿ ಭಾನುವಾರ ಹಾಗೂ ಸೋಮವಾರ ಸುರಿದ ಮಳೆಯಿಂದ 30 ಮನೆಗಳಿಗೆ ನೀರು ನುಗ್ಗಿದ್ದು, 97 ರಸ್ತೆಗಳಲ್ಲಿ ನೀರು ನಿಂತಿತ್ತು. ಈ ಪ್ರದೇಶಗಳಿಂದ ಒಂದು ಗಂಟೆಯಲ್ಲಿ ಮಳೆನೀರು ಹೊರಗೆ ಹರಿದು ಹೋಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ರಾಜರಾಜೇಶ್ವರಿನಗರ ಮತ್ತು ಯಶವಂತಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಹೆಚ್ಚು ಮಳೆಯಾಗಿದೆ. ಯಲಚೇನಹಳ್ಳಿಯಲ್ಲಿ ಮೂರು, ಯಶವಂಪುರದಲ್ಲಿ 18, ನಾಗ ದೇವನಹಳ್ಳಿಯಲ್ಲಿ ಒಂಬತ್ತು ಮನೆಗಳಿಗೆ ನೀರು ನುಗ್ಗಿದೆ. ಏಳು ಮರ ಮತ್ತು 13 ಕೊಂಬೆಗಳು ಬಿದ್ದಿವೆ ಎಂದು ಸುದ್ದಿಗಾರರಿಗೆ ಸೋಮವಾರ ಮಾಹಿತಿ ನೀಡಿದರು.

'ಮಳೆ ಸಂದರ್ಭದಲ್ಲೂ ಬೃಹತ್ ನೀರುಗಾಲುವೆಯನ್ನು ಸ್ವಚ್ಛಗೊಳಿಸಲಾ-ಗುತ್ತಿದೆ. ಆದ್ದರಿಂದ ನೀರು ಸುಗಮವಾಗಿ ಹರಿಯುತ್ತಿದೆ. ಬಿಎಂಆರ್‌ಸಿಎಲ್ ವತಿಯಿಂದ ಕೇಂದ್ರ ರೇಷ್ಮೆ ಮಂಡಳಿ ಬಳಿ ಸೋಮವಾರದಿಂದ ಕೆಲಸ ಆರಂಭಿಸಿದ್ದಾರೆ. ಪರ್ಯಾಯ ಕಾಲುವೆಯನ್ನು ಮಳೆ ನಿಂತ ಮೇಲೆ ಮಾಡುತ್ತೇವೆ ಎಂದಿದ್ದರು. ಆದರೆ, ಮಳೆಯಿಂದ ನೀರು ಹರಿಯುತ್ತಿಲ್ಲ ವಾದ್ದರಿಂದ ತಕ್ಷಣವೇ ಕೆಲಸ ಆರಂಭಿಸಿ ಎಂದು ಹೇಳಿದ್ದೇವೆ' ಎಂದು ತಿಳಿಸಿದರು.

ಪೂರ್ವ, ಪಶ್ಚಿಮ, ದಕ್ಷಿಣ ವಲಯದಲ್ಲಿ ಯಾವುದೇ ಮನೆಗಳಿಗೆ ನೀರು ನುಗ್ಗಿಲ್ಲ ಎಂದು ನಮ್ಮ ವಲಯ ಆಯುಕ್ತರು ತಿಳಿಸಿದ್ದಾರೆ. ನೀರು ಮನೆಯ ಹೊರಗೆ ನಿಂತಿತ್ತು. ಒಂದು ಗಂಟೆ ಯಲ್ಲಿ ನೀರು ಹೊರಗೆ ಹರಿದಿದೆ ಎಂದರು.

'ವಿಶ್ವಬ್ಯಾಂಕ್‌ನ ₹1700 ಕೋಟಿ ಹಣ ದಿಂದ ರಾಜಕಾಲುವೆ ಮಾರ್ಗ ಸರಿಪಡಿಸುವು ದಷ್ಟೇ ಅಲ್ಲ, ರಾಜಕಾಲುವೆ ನಿರ್ಮಾಣ, ತೂಬು ನಿರ್ಮಾಣ ಸೇರಿದ ಕಾಮಗಾರಿ ನಡೆಸ ಲಾಗುತ್ತದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ ₹250 ಕೋಟಿ ಅನುದಾನ ಅನು ಮೋದನೆಯಾಗಿದೆ. ಸಚಿವ ಸಂಪುಟದ ಒಪ್ಪಿಗೆ ನಂತರ ಅದರ ಬಳಕೆ ಮಾಡಲಾಗುತ್ತದೆ. ಇದರ ಜೊತೆಗೆ ಬಿಬಿಎಂಪಿ ಅನುದಾನದಿಂದ ರಾಜಕಾಲುವೆ ಅಭಿವೃದ್ಧಿ ಮಾಡಲಾಗುತ್ತದೆ' ಎಂದು ಹೇಳಿದರು.

ಜಿಕೆವಿಕೆಯ 100 ಅಡಿ ಕಾಂಪೌಂಡ್ ಕುಸಿದು ರಸ್ತೆ ಮೇಲೆ ಬಿದ್ದಿತ್ತು

ಜಿಕೆವಿಕೆ: 100 ಅಡಿ ಕಾಂಪೌಂಡ್ ಕುಸಿತ

ನ್ಯಾಯಾಂಗ ಬಡಾವಣೆಯ ಜಿಕೆವಿಕೆಯ ಹಳೆಯ ಸುಮಾರು 100 ಅಡಿ ಕಾಂಪೌಂಡ್ ಕುಸಿದು ರಸ್ತೆ ಮೇಲೆ ಬಿದ್ದಿತ್ತು. ಅದನ್ನು ಜೆಸಿಬಿ ಮೂಲಕ ರಸ್ತೆ ಬದಿಗೆ ತಳ್ಳಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ಯಲಹಂಕ ವಲಯ ಆಯುಕ್ತ ಕರೀಗೌಡ ತಿಳಿಸಿದ್ದಾರೆ.

ಸೋಮವಾರ ಅವರು ನಿಯಂತ್ರಣ ಕೊಠಡಿ-ಯಲ್ಲಿದ್ದು, ಮಳೆ ಹಾಗೂ ಮಳೆ ನೀರಿನ ಸಮಸ್ಯೆಗಳ ಬಗ್ಗೆ ಮೇಲುಸ್ತುವಾರಿ ವಹಿಸಿ, ಪರಿಹಾರ ನೀಡಿದರು.

ಕೊಡಿಗೆಹಳ್ಳಿಯ ಚಿತ್ರಕೂಟ ರೆಸಿಡೆನ್ಸಿಯ ಗೋಡೆ ಬಿದ್ದಿರುವ ಪರಿಣಾಮ ಪಕ್ಕದಲ್ಲಿರುವ ನೀರುಗಾಲುವೆಯಿಂದ ಅಪಾರ್ಟ್‌ಮೆಂಟ್‌ನ ನೆಲ ಮಹಡಿ ಹಾಗೂ ಕೈಸರ್ ರೆಸಿಡೆನ್ಸಿ ಬೇಸ್‌ಮೆಂಟ್‌ಗೆ ನೀರು ನುಗ್ಗಿತ್ತು, ಅದನ್ನು ಪಂಪ್ ಮೂಲಕ ಹೊರಹರಿಸಲಾಗಿದೆ.

ಕೊಡಿಗೆಹಳ್ಳಿ ಕೆಳ ಸೇತುವೆ, ಯಲಹಂಕ ಕೆಳ ಸೇತುವೆ, ಸಹಕಾರ ನಗರದ ಎನ್‌.ಟಿ.ಐ ಕೆಳಸೇತುವೆ ನಿಂತಿರುವ ನೀರನ್ನು ತೆರವುಗೊಳಿಸ-ಲಾಯಿತು.

ಬಸವ ಸಮಿತಿಯ ಬಳಿ ಒಂಬತ್ತು ಮನೆ, ವೆಂಕಟಶಾಮಪ್ಪ ಲೇಔಟ್‌ನಲ್ಲಿ 10 ಮನೆ, ಎಂ.ಎಸ್ ಪಾಳ್ಯದಲ್ಲಿ ಎಂಟು ಮನೆ ಹಾಗೂ ಟೆಲಿಕಾಂ ಲೇಔಟ್‌ನಲ್ಲಿ ಒಂದು ಮನೆಗೆ ನೀರು ನುಗ್ಗಿದ್ದು, ನೀರು ತೆರವುಗೊಳಿಸುವ ಕೆಲಸ ಮಾಡುತ್ತಿದ್ದಾರೆ. ಕಳೆದ ವಾರದ ಅತಿಹೆಚ್ಚು ನೀರು ನಿಂತಿದ್ದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್‌ಗೆ ನೀರು ಹರಿದಿಲ್ಲ ಎಂದು ಕರೀಗೌಡ ತಿಳಿಸಿದ್ದಾರೆ.

ಕೊಡಿಗೇಹಳ್ಳಿಯಲ್ಲಿ ವಾಹನ ಸವಾರರ ಪರದಾಟ

ಯಲಹಂಕ: ಸೋಮವಾರ ಸಂಜೆಯಿಂದ ನಿರಂತರವಾಗಿ ಸುರಿದ ಭಾರೀ ಮಳೆಯಿಂದ ಕೊಡಿಗೇಹಳ್ಳಿ ರೈಲ್ವೆ ಕೆಳಸೇತುವೆಯಲ್ಲಿ ನೀರು ತುಂಬಿಕೊಂಡು ಸಂಚಾರ ಸ್ಥಗಿತಗೊಂಡಿತು. ಇದರಿಂದಾಗಿ ವಾಹನಸವಾರರು ತೀವ್ರ ತೊಂದರೆ ಅನುಭವಿಸಬೇಕಾಯಿತು.

ಈ ರಸ್ತೆಯು ಬಳ್ಳಾರಿ ರಸ್ತೆ ಮತ್ತು ಭದ್ರಪ್ಪ ಬಡಾವಣೆಯ ಮಾರ್ಗವಾಗಿ ಕೊಡಿಗೇಹಳ್ಳಿ ಕೆಳಸೇತುವೆ ಮೂಲಕ ತಿಂಡ್ಲು, ವಿದ್ಯಾರಣ್ಯ ಪುರ, ದೊಡ್ಡಬೊಮ್ಮಸಂದ್ರ, ಚಿಕ್ಕಬೆಟ್ಟಹಳ್ಳಿ, ರಾಮ ಚಂದ್ರಪುರ, ಎಂ.ಎಸ್.ಪಾಳ್ಯ ಹಾಗೂ ಹೆಸರಘಟ್ಟದ ಮೂಲಕ ನೆಲಮಂಗಲದ ವರೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿದ್ದು, ಸಂಜೆ 7ಗಂಟೆಯಿಂದ ಕೆಳ ಸೇತುವೆಯಲ್ಲಿ ಸುಮಾರು 5 ಅಡಿಗಳಷ್ಟು ನೀರು ಸಂಗ್ರಹವಾದ ಪರಿಣಾಮ, ಈ ಭಾಗ ದಲ್ಲಿ ಸಂಚರಿಸುತ್ತಿದ್ದ ವಾಹನಸವಾರರು ತಮ್ಮ ಬಡಾವಣೆಗಳಿಗೆ ತೆರಳಲು ಪರದಾಡಿದರು.

ನೀರಿನಲ್ಲಿ ಸಿಲುಕಿಕೊಂಡಿದ್ದ ಹಲವು ವಾಹನಗಳನ್ನು ನೀರಿನಿಂದ ಹೊರತೆಗೆಯಲು ಹರಸಾಹಸ ಪಡಬೇಕಾಯಿತು.

ಮಾಲ್ ಆಫ್ ಏಷ್ಯಾ ಸಮೀಪದ ಎನ್‌.ಟಿ.ಐ ಲೇಔಟ್ ಅಂಡರ್‌ಪಾಸ್ ನಲ್ಲಿಯೂ ನೀರು ತುಂಬಿಕೊಂಡ ಪರಿಣಾಮ, ಈ ರಸ್ತೆಯಲ್ಲಿಯೂ ಸಂಚಾರಕ್ಕೆ ತೊಂದರೆಯಾಯಿತು. ಅಲ್ಲದೆ ಕೊಡಿಗೇಹಳ್ಳಿ ಕೆಳಸೇತುವೆ ಮೂಲಕ ತೆರಳುತ್ತಿದ್ದ ವಾಹನಸವಾರರಿಗೆ ಪರ್ಯಾಯ ಮಾರ್ಗವಾಗಿದ್ದ ಈ ರಸ್ತೆಯೂ ಬಂದ್ ಆದ ಪರಿಣಾಮ, ವಾಹನಸವಾರರು ಬೇರೆ ಮಾರ್ಗವಿಲ್ಲದೆ ಸುರಿಯುತ್ತಿರುವ ಮಳೆ ಯಲ್ಲಿ ತಮ್ಮ ವಾಹನಗಳನ್ನು ಯಾವಕಡೆ ಚಲಾಯಿಸಿಕೊಂಡು ಹೋಗಬೇಕೆಂದು ದಿಕ್ಕುತೋಚದೆ ಕಂಗಾಲಾದರು.

ಎನ್‌.ಟಿ.ಐ ಲೇಔಟ್ ಬಳಿ ರಾಜಕಾಲುವೆ ಯನ್ನು ಬಂದ್ ಮಾಡಿರುವ ಪರಿಣಾಮ, ನೀರು ಹರಿಯಲು ಆಸ್ಪದವಿಲ್ಲದೆ ಚರಂಡಿನೀರು ಮಳೆನೀರಿನ ಜೊತೆಗೆ ಮಿಶ್ರಣವಾಗಿ ರಸ್ತೆಯ ಮೇಲೆ ಹರಿಯು ವುದರ ಜೊತೆಗೆ ಕೊಡಿಗೇಹಳ್ಳಿ ರೈಲ್ವೆ ಕೆಳ ಸೇತುವೆಯಲ್ಲಿ ನೀರು ತುಂಬಿಕೊಳ್ಳಲು ಕಾರಣವಾಗಿದೆ ಎಂದು ಕೊಡಿಗೇಹಳ್ಳಿ ನಿವಾಸಿ ನಾರಾಯಣಸ್ವಾಮಿ ದೂರಿದರು.

ಮುಂದುವರಿದ ಧಾರಾಕಾರ ಮಳೆ

ಶಾಲೆಗೆ ಜಲ ದಿಗ್ಬಂಧನ, ಬಸ್‌ಗಳು ಮುಳುಗಡೆ

ಬೆಂಗಳೂರು: ನಗರದ ವಿವಿಧ ಭಾಗಗಳಲ್ಲಿ ಸೋಮವಾರ ಬೆಳಿಗ್ಗೆ 9ರವರೆಗೆ ಸುರಿದ ಧಾರಾಕಾರ ಮಳೆಯಿಂದ ಹಲವು ಪ್ರದೇಶಗಳು ಜಲಾವೃತಗೊಂಡು, ಮನೆಗಳಿಗೆ ನೀರು ನುಗ್ಗಿತ್ತು.

ಮೆಜೆಸ್ಟಿಕ್, ಮೈಸೂರು ಬ್ಯಾಂಕ್ ಸರ್ಕಲ್, ವಿಧಾನಸೌಧ, ಶಾಂತಿನಗರ, ಜಯನಗರ, ವಿಜಯನಗರ, ಮಾಗಡಿ ರಸ್ತೆ, ರಾಜಾಜಿನಗರ ಹಾಗೂ ಮಲ್ಲೇಶ್ವರಂನಲ್ಲಿ ಜೋರು ಮಳೆ ಸುರಿಯಿತು. ಮೈಸೂರು ರಸ್ತೆ ಆರ್‌.ವಿ ಕಾಲೇಜಿನ ಸಮೀಪ ಹೆದ್ದಾರಿಯಲ್ಲಿ ನೀರು ನಿಂತಿತ್ತು. ಕೆಂಗೇರಿಯ ರೈಲ್ವೆ ನಿಲ್ದಾಣದಲ್ಲಿ ಮಳೆಯ ನೀರು ರೈಲ್ವೆ ಹಳಿಗಳು ಮುಳುಗಿದವು.

ಎಚ್‌ಎಸ್‌ಆರ್ ಲೇಔಟ್‌ನ ಕೆಲವು ಮನೆಗಳಿಗೆ ನೀರು ನುಗ್ಗಿದೆ. ಇದೇ ಲೇಔಟ್‌ನ ಫ್ರೀಡಂ ಶಾಲೆಯ ಸುತ್ತ ನೀರು ನಿಂತು ಜಲದಿಗ್ಬಂಧನವಾಯಿತು. ಶಾಲೆಯ ಹೊರಗೆ ನಿಲ್ಲಿಸಿದ್ದ ಹತ್ತಕ್ಕೂ ಹೆಚ್ಚು ಬಸ್‌ಗಳು ನೀರಿನಲ್ಲಿ ಮುಳುಗಿದವು.

ಕೋರಮಂಗಲದಲ್ಲಿ ಮುಖ್ಯರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡುವಂತಾಯಿತು. ಕೋರ ಮಂಗಲದಲ್ಲಿರುವ ಕ್ರೀಡಾ ಗ್ರಾಮಕ್ಕೂ ನೀರು ನುಗ್ಗಿತ್ತು. ಸರ್ಜಾಪುರ-ದೊಮ್ಮಸಂದ್ರ ರಸ್ತೆ ಜಲಾವೃತಗೊಂಡಿತು. ದೊಮ್ಮಸಂದ್ರ ಸರ್ಕಲ್ ಬಳಿ ರಸ್ತೆಯಲ್ಲಿ ಹೊಳೆಯಂತೆ ನೀರು ಹರಿಯಿತು. ಇದರಿಂದ ಕಿಲೋ ಮೀಟರ್‌ಗಟ್ಟಲೇ ಸಂಚಾರ ದಟ್ಟಣೆ ಉಂಟಾಯಿತು.

ರಜೆ ಮೌಖಿಕ ಆದೇಶ: ಸೋಮವಾರ ಬೆಳಿಗ್ಗೆ ಮಳೆ ಸುರಿಯುತ್ತಿದ್ದ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಗದೀಶ್ ಅವರು, ಬೆಳಿಗ್ಗೆ 7.30ರ ಸುಮಾರಿಗೆ ಶಾಲೆಗಳಿಗೆ ರಜೆ ಘೋಷಿಸಿ ಮೌಖಿಕ ಆದೇಶ ಹೊರಡಿಸಿದರು. ರಜೆ ಘೋಷಿಸಿರುವುದು ತಿಳಿಯದ ಕೆಲ ಪೋಷಕರು ಆಟೊ, ಬೈಕ್, ಕಾರುಗಳಲ್ಲಿ ಮಕ್ಕಳನ್ನು ಕರೆದುಕೊಂಡು ಶಾಲೆಯತ್ತ ಹೊರಟಿದ್ದರು. ರಜೆ ಘೋಷಣೆ ತಿಳಿದ ಮೇಲೆ ಮನೆಗೆ ವಾಪಸಾದರು. ಕೆಲವು ಖಾಸಗಿ ಶಾಲೆಗಳು ಅರ್ಧ ದಿನ ತರಗತಿ ನಡೆಸಿದವು.

ದೊಡ್ಡಬಿದರಕಲ್ಲು ರಸ್ತೆಯೊಂದರಲ್ಲಿ ಧರೆಗೆ ಉರುಳಿರುವ ಮರ

ಮರಗಳು ಧರೆಗೆ

ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಪೀಣ್ಯಾ ದಾಸರಹಳ್ಳಿ ವ್ಯಾಪ್ತಿಯಲ್ಲಿರುವ ಗೃಹಲಕ್ಷ್ಮಿ ಬಡಾವಣೆ, ಹೆಗ್ಗನಹಳ್ಳಿ, ಎನ್‌ಟಿಟಿಎಫ್ ಹತ್ತಿರ, ಪೀಣ್ಯ 2ನೇ ಹಂತ, ದೊಡ್ಡಬಿದರಕಲ್ಲು, ಕಮ್ಮ ಗೊಂಡನಹಳ್ಳಿ ಫಾರೆಸ್ಟ್ ರಸ್ತೆಯಲ್ಲಿ ಮರಗಳು ಧರಗೆ ಉರುಳಿದವು. ಅವುಗಳನ್ನು ಅರಣ್ಯ ಇಲಾಖೆಯವರು ತೆರವುಗೊಳಿಸಿದರು.

ಕೋರಮಂಗಲದಲ್ಲಿ 7 ಸೆಂ.ಮೀ ಮಳೆ

ಸೋಮವಾರ ಬೆಳಗ್ಗೆ 8.30ರವರೆಗಿನ 24 ಗಂಟೆಗಳಲ್ಲಿ ಕೋರಮಂಗಲ ಮತ್ತು ವನ್ನಾರ್‌ಪೇಟೆಯಲ್ಲಿ ತಲಾ 7 ಸೆಂ.ಮೀನಷ್ಟು ಮಳೆಯಾಗಿದೆ. ಹಂಪಿನಗರ, ಗಾಳಿ ಆಂಜನೇಯ ದೇವಸ್ಥಾನ ಮತ್ತು ನಾಗಪುರದಲ್ಲಿ ತಲಾ 6.5 ಸೆಂ.ಮೀಗೂ ಅಧಿಕ ಮಳೆಯಾಗಿದೆ. ಬಾಗಲಗುಂಟೆ, ಆರ್‌ಆರ್ ನಗರ, ನಂದಿನಿ ಲೇಔಟ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ತಲಾ 5 ಸೆಂ.ಮೀಗೂ ಹೆಚ್ಚು ಮಳೆಯಾಗಿದೆ.

ಮಳೆ ಎಲ್ಲಿ ಎಷ್ಟು? ಸೆಂ.ಮೀ.ನಲ್ಲಿ

ಸೋಮವಾರ ರಾತ್ರಿ 12ರವರೆಗೆ	
ಚೌಡೇಶ್ವರಿ	15.5
ವಿದ್ಯಾರಣ್ಯಪುರ	10.8
ಜಕ್ಕೂರು	8.8
ಹೊರಮಾವು	7.2
ಕೊಡಿಗೇಹಳ್ಳಿ	6.7
ಶೆಟ್ಟಿಹಳ್ಳಿ	6.5
ಬಾಗಲಕುಂಟೆ	5.4
ಪೀಣ್ಯ ಕೈಗಾರಿಕಾ ಪ್ರದೇಶ	4.0
ಚೊಕ್ಕಸಂದ್ರ	3.4
ನಾಗಾಪುರ	3.1
ಹೆಮ್ಮಿಗೆಪುರ	2.9
ಮಾರತ್ ಹಳ್ಳಿ	2.7
ವಿ.ನಾಗೇನಹಳ್ಳಿ	2.7
ಎಚ್‌.ಗೊಲ್ಲಹಳ್ಳಿ	2.4
ದಯಾನಂದನಗರ	2.4
ಎಚ್‌ಎಎಲ್ ವಿಮಾನ ನಿಲ್ದಾಣ	2.4
ಮನೋರಾಯನಪಾಳ್ಯ	2.3
ರಾಜರಾಜೇಶ್ವರಿನಗರ	2.2
ಕೋಣನಕುಂಟೆ	2.1
ನಂದಿನಿ ಲೇಔಟ್	2.1
ಬೆಳ್ಳಂದೂರು	2.0
ಬಾಣಸವಾಡಿ	2.0
ರಾಜಾಜಿನಗರ	2.0

ಪಿಎಸ್ಐ 545 ಹುದ್ದೆ: ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) 545 ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಗೃಹ ಇಲಾಖೆ ಸೋಮವಾರ ಪ್ರಕಟಿಸಿದೆ.

ಹುದ್ದೆಗಳ ಭರ್ತಿಗೆ ಪೊಲೀಸ್ ನೇಮಕಾತಿ ಮಂಡಳಿ ನಡೆಸಿದ್ದ ಪರೀಕ್ಷೆಯಲ್ಲಿ ಅಕ್ರಮ ನಡೆದಿತ್ತು. ಪರೀಕ್ಷಾ ಪ್ರಕ್ರಿಯೆ ವಿವಾದಕ್ಕೆ ಸಿಲುಕಿತ್ತು. ಬಳಿಕ, ಹೈಕೋರ್ಟ್ ಆದೇಶದಂತೆ ರಾಜ್ಯ ಸರ್ಕಾರ ಮರು ಪರೀಕ್ಷೆ ನಡೆಸಿತ್ತು. ಮರು ಪರೀಕ್ಷೆ ನಡೆಸಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಗೃಹ ಇಲಾಖೆಗೆ ಸಲ್ಲಿಸಿತ್ತು. ಆದರೆ, ಹೈದರಾಬಾದ್–ಕರ್ನಾಟಕ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವ ವಿಚಾರದಲ್ಲಿ ಗೊಂದಲ ಉಂಟಾದ ಕಾರಣ ಆಯ್ಕೆ ಪಟ್ಟಿ ಪ್ರಕಟ ಆಗಿರಲಿಲ್ಲ.

ಅಭ್ಯರ್ಥಿಗಳಿಗೆ ಮೀಸಲಾತಿಗೆ ಸಂಬಂಧಿಸಿದಂತೆ 2023ರ ಫೆ. 1ರಂದು ಹೊರಡಿಸಿದ್ದ ಸುತ್ತೋಲೆಯಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಇಲಾಖೆ ಸಿದ್ಧಪಡಿಸಿದೆ. ಅಲ್ಲದೆ, 2020ರ ಜೂನ್ 6ರ ಸುತ್ತೋಲೆಯ ಅನ್ವಯ ಆಯ್ಕೆ ಪಟ್ಟಿಯಿಂದ ಹೊರಗುಳಿಯುವ 40 ಕಲ್ಯಾಣ ಕರ್ನಾಟಕ ವೃಂದದ ಅಭ್ಯರ್ಥಿಗಳಿಗೆ ಅನುಗುಣವಾಗಿ 40 ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ವೃಂದದಲ್ಲಿ ಕಾಯ್ದಿರಿಸಿ ಈ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಈ ಆಯ್ಕೆ ಪಟ್ಟಿಯು ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿರುವ ರಿಟ್ ಅರ್ಜಿಯ ಅಂತಿಮ ತೀರ್ಪಿಗೆ ಒಳಪಟ್ಟಿದೆ ಎಂದೂ ಇಲಾಖೆ ಸ್ಪಷ್ಟಪಡಿಸಿದೆ. ಪಿಎಸ್ಐ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳು ನೇಮಕಾತಿ ಪ್ರಕ್ರಿಯೆ ನಡೆಸುವಂತೆ ಆಗ್ರಹಿಸಿ ಇತ್ತೀಚೆಗೆ ಪ್ರತಿಭಟನೆ ನಡೆಸಿದ್ದರು.

'ಘಂಟಾನಾದ ಶೀರ್ಷಿಕೆ' ಭಾಗ–2ರ ಸಮಾವೇಶದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

'ಬಿಜೆಪಿಗೆ ರಾಜಕಾರಣಕ್ಕಾಗಿ ದೇವರು ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯವರಿಗೆ ರಾಜಕಾರಣಕ್ಕಾಗಿ ದೇವರು ಬೇಕು. ದೇವಸ್ಥಾನಗಳ ಜೀರ್ಣೋದ್ಧಾರ ಅವರಿಗೆ ಬೇಡ. ಆದ್ದರಿಂದಲೇ ದೇವಸ್ಥಾನಗಳಿಗೆ ನಾವು ಒಳಿತು ಮಾಡಲು ಮುಂದಾಗಿದ್ದರೂ, ಅದಕ್ಕೆ ತಡೆ ಯಾಗಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೂರಿದರು.

ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ಸೋಮವಾರ ಆಯೋಜಿಸಿದ್ದ 'ಘಂಟಾನಾದ ಶೀರ್ಷಿಕೆ' ಭಾಗ–2ರ ಸಮಾವೇಶದಲ್ಲಿ ಮಾತನಾಡಿದರು.

'ಧರ್ಮ ಮತ್ತು ರಾಜಕಾರಣ ಬೇರೆ ಬೇರೆ. ರಾಜಕಾರಣದಲ್ಲಿ ಧರ್ಮ ಬೆರೆಸಬಾರದು ಎಂಬುದು ನಮ್ಮ ನಿಲುವು. ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಮಸೂದೆಯನ್ನು ತಂದು, ಒಪ್ಪಿಗೆ ಪಡೆದಿದ್ದೇವೆ. ಆದರೆ, ಅದಕ್ಕೆ ರಾಜ್ಯಪಾಲರು ಸಹಿ ಹಾಕದಂತೆ ಬಿಜೆಪಿಯವರು ತಡೆಹಾಕಿದ್ದಾರೆ' ಎಂದು ಆರೋಪಿಸಿದರು.



'ಘಂಟನಾದ ಶೀರ್ಷಿಕೆ ಭಾಗ – 2' ರಾಜ್ಯಮಟ್ಟದ ಸಮಾವೇಶ ಕಾರ್ಯಕ್ರಮವನ್ನು ಗಂಟೆ ಬಾರಿಸುವುದರ ಮೂಲಕ ಉದ್ಘಾಟಿಸಲಾಯಿತು. (ಎಡದಿಂದ) ಒಕ್ಕೂಟದ ಅಧ್ಯಕ್ಷ ಪ್ರೊ. ಕೆ.ಇ ರಾಧಾಕೃಷ್ಣ, ಗೃಹ ಸಚಿವ ಡಾ.ಜಿ ಪರಮೇಶ್ವರ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಗ್ಯಾರಂಟಿ ಅನುಷ್ಠಾನಗಳ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಮತ್ತು ಒಕ್ಕೂಟದ ಮುಖ್ಯ ಪ್ರಧಾನ ಕಾರ್ಯದರ್ಶಿ ಡಾ.ಕೆ.ಎಸ್.ಎನ್ ದೀಕ್ಷಿತ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ಎಲ್ಲ ಧರ್ಮ, ಜಾತಿಯವರೂ ಇರುವ ಒಕ್ಕೂಟದ ಅರ್ಚಕರು ತಸ್ತೀಕ್ ಸೇರಿದಂತೆ ಹಲವು ಬೇಡಿಕೆಗಳನ್ನು ಸಲ್ಲಿಸಿದ್ದೀರಿ. ನಿಮ್ಮ ಒಳಿತಿಗಾಗಿ ಅವುಗಳನ್ನು ಈಡೇರಿಸಲು ಪ್ರಯತ್ನಿಸಲಾ ಗುತ್ತದೆ' ಎಂದು ಭರವಸೆ ನೀಡಿದರು.

'ಅರ್ಚಕರಿಗೆ ₹5 ಲಕ್ಷದವರೆಗೆ ವಿಮೆ, ವರ್ಷಕ್ಕೆ ಕನಿಷ್ಠ 3 ಸಾವಿರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಕಡ್ಡಾಯ, ಎ, ಬಿ ಪ್ರವರ್ಗದ ದೇವಸ್ಥಾನದ ವರಮಾನದಿಂದ ವರ್ಷಕ್ಕೆ ಒಂದು ಸಾವಿರ ಸಿ ವರ್ಗದ ದೇವಸ್ಥಾನಗಳ ಅಭಿವೃದ್ಧಿಗೆ ಹಣ ವಿನಿಯೋಗ, ಅರ್ಚಕರ ಮನೆ ನಿರ್ಮಾಣಕ್ಕೆ ಅನುದಾನ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡಲು ಕಾಯ್ದೆಗೆ ತಿದ್ದುಪಡಿ ತರಲು ಮಸೂದೆ ಮಂಡಿಸಲಾಗಿದೆ. ರಾಜ್ಯಪಾಲರು ಇದಕ್ಕೆ ಒಪ್ಪಿಗೆ ನೀಡಿಲ್ಲ' ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

'ತಿಂಗಳಿಗೆ ₹10 ಸಾವಿರ ತಸ್ತೀಕ್ ಸೇರಿದಂತೆ ಅರ್ಚಕರು ಸಲ್ಲಿಸಿರುವ 9 ಬೇಡಿಕೆಗಳಲ್ಲಿ ಬಹುತೇಕ ಅಂಶಗಳು ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿದ್ದವು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರಣಾಳಿಕೆ ಸಮಿತಿ ಅಧ್ಯಕ್ಷರಾಗಿದ್ದ ಡಾ. ಪರಮೇಶ್ವರ ಹಾಗೂ ಒಕ್ಕೂಟದ ಗೌರವ ಅಧ್ಯಕ್ಷರೂ ಆಗಿರುವ ಸಚಿವ ದಿನೇಶ್ ಗುಂಡೂರಾವ್ ಅವರು ಈ ಸಮಾರಂಭದಲ್ಲಿ ನಿಮ್ಮ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಹೇಳಿದ್ದಾರೆ. ನಾವೆಲ್ಲ ಸೇರಿ ಮುಂದಿನ ಬಜೆಟ್‌ನಲ್ಲಿ ನಿಮ್ಮ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸುತ್ತೇವೆ' ಎಂದು ಭರವಸೆ ನೀಡಿದರು.

ಗ್ಯಾರಂಟಿ ಅನುಷ್ಠಾನಗಳ ಸಮಿತಿ ಅಧ್ಯಕ್ಷ ಎಚ್.ಎಂ ರೇವಣ್ಣ, ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಅಧ್ಯಕ್ಷ ಕೆ.ಇ. ರಾಧಾಕೃಷ್ಣ, ಗೌರವ ಉಪಾಧ್ಯಕ್ಷ ಎಸ್.ಆರ್. ಶೇಷಾದ್ರಿ ಭಟ್ಟರ್, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಉಪಸ್ಥಿತರಿದ್ದರು.

'ಹಿಂದೂಗಳಿಗೆ ತೊಂದರೆ ನೀಡಿಲ್ಲ'

'ನಮ್ಮ ಸರ್ಕಾರ ಹಿಂದೂಗಳಿಗೆ ತೊಂದರೆ ನೀಡುವ ಕೆಲಸ ಮಾಡಿಲ್ಲ. ನಮ್ಮಲ್ಲಿ ಎಲ್ಲ ಧರ್ಮ, ಜಾತಿ, ಎಡ–ಬಲ, ಸಮಾಜವಾದಿ ಸಿದ್ಧಾಂತವರೂ ಇದ್ದಾರೆ. ನಮ್ಮ ಮೇಲೆ ಸುಮ್ಮನೆ ಅಪಪ್ರಚಾರ ಮಾಡಲಾಗುತ್ತಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

'ದೇವಸ್ಥಾನಗಳಿಗೆ ಅರ್ಚಕರಿಗೆ ಅತಿಹೆಚ್ಚು ಸೌಲಭ್ಯವನ್ನು ನಾವೇ ನೀಡಿರುವುದು. ಮುಜರಾಯಿ ಸಚಿವರಾಗಿ ರಾಮಲಿಂಗಾರೆಡ್ಡಿ ಇನ್ನೂ 10 ವರ್ಷ ಇರಲಿ ಎಂದು ನೀವೇ ಹೇಳಿದ್ದೀರಿ. ಅದರರ್ಥ, ನಾವು ಒಳಿತನ್ನೇ ಮಾಡುತ್ತಿದ್ದೇವೆ ಎಂದಲ್ಲವೇ' ಎಂದು ಪ್ರಶ್ನಿಸಿದರು.

'ನಮ್ಮ ಐದು ಗ್ಯಾರಂಟಿಗಳು ನಮ್ಮ ಪಕ್ಷದ ಕಾರ್ಯಕರ್ತರಿಗೆ ಮಾತ್ರ ಎಂದು ನಾವೇನು ಹೇಳಿಲ್ಲ. ಎಲ್ಲರೂ ಅದರ ಸೌಲಭ್ಯ ಪಡೆಯುತ್ತಿದ್ದಾರೆ. ಈ ಗ್ಯಾರಂಟಿಗಳಿಗೆ ₹56 ಸಾವಿರ ಕೋಟಿ ಹೊಂದಿಸುವುದು ಕಷ್ಟವಿರಬಹುದು. ಆದರೆ, ಸರ್ವರ ಹಿತಕ್ಕಾಗಿ ಅದನ್ನು ನೀಡುತ್ತಲೇ ಇರುತ್ತೇವೆ. ಅನುಮಾನ ಬೇಡ' ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದರು.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/EPC/27/2024, ದಿನಾಂಕ: 10.10.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ತುಮಕೂರು – ರಾಯದುರ್ಗ	ರೂ. 611,53,24,050/-

ಹೊಸ ಲೈನ್ ಯೋಜನೆಯಡಿ ಮಧುಗಿರಿ (ಹೊರತುಪಡಿಸಿ) & ಮಡಕಶಿರ (ಹೊರತುಪಡಿಸಿ) ನಡುವೆ ಚೈನೇಜ್ 51/500 & ಚೈನೇಜ್ 84/000 ರ ನಡುವೆ ರೈಲ್ವೆ ವಿದ್ಯುತೀಕರಣ, ಸಿವಿಲ್ ಕಾಮಗಾರಿ, ಸಿಗ್ನಲ್ & ದೂರ ಸಂಪರ್ಕ ಕೆಲಸಗಳು ಹಾಗೂ ಎಲೆಕ್ಟ್ರಿಕಲ್ ಜನರಲ್ ಸರ್ವೀಸ್‌ಗಳನ್ನೊಳಗೊಂಡಂತೆ ಹೊಸ ಬ್ರಾಡ್ ಗೇಜ್ ಲೈನಿನ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ದ ಕರಾರು ಒಪ್ಪಂದ. (ಟೆಂಡರು ಉಲ್ಲೇಖ ಸಂ. TK-RDG-EPC-04)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08.01.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯಗಳು/ಬೆಂಗಳೂರು

PUB/501/AAMO/PRB/SWR/2024-25

South Western Railway - SWR | SWRRLY | SWRRLY

ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರು ನಗರ ಜಿಲ್ಲೆ

ಕೆ.ಜಿ.ರಸ್ತೆ, ಅಂಬೇಡ್ಕರ್ ವೀಧಿ, ಬೆಂಗಳೂರು–560009

ಸಾರ್ವಜನಿಕ ಪ್ರಕಟಣೆ

ಉಪಲೋಕಾಯುಕ್ತರಿಂದ ಸಾರ್ವಜನಿಕರ ಕುಂದು ಕೊರತೆ ಅಹವಾಲು ಸ್ವೀಕಾರ ಸಭೆ

ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಾರ್ಯಾಲಯ ವತಿಯಿಂದ ಕರ್ನಾಟಕ ಉಪಲೋಕಾಯುಕ್ತರಾದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಕೆ.ಎನ್.ಫಣೀಂದ್ರ ರವರು, ಬೆಂಗಳೂರು ನಗರ ಜಿಲ್ಲೆಯ ಯಲಹಂಕ ಮತ್ತು ಬೆಂಗಳೂರು ಪೂರ್ವ ತಾಲ್ಲೂಕುಗಳಿಗೆ ಸಂಬಂಧಿಸಿದ ಸಾರ್ವಜನಿಕರ ಅಹವಾಲು, ಕುಂದು ಕೊರತೆ, ದೂರು ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಸಂಬಂಧ ದಿನಾಂಕ 24.10.2024 ಮತ್ತು 25.10.2024 ರಂದು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 01.30 ಗಂಟೆಗೆ ಮತ್ತು ಅಪರಾಹ್ನ 2.30 ರಿಂದ ಸಂಜೆ 5.00 ಗಂಟೆಯ ವರೆಗೆ ಯಲಹಂಕ ಉಪನಗರದ ಎನ್.ಇ.ಎಸ್ ಆಫೀಸ್ ಬಸ್ ನಿಲ್ದಾಣ ಹತ್ತಿರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಾರ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಸಹಿ/– ಜಿಲ್ಲಾಧಿಕಾರಿ,
ಬೆಂಗಳೂರು ನಗರ ಜಿಲ್ಲೆ

ಕೋಲ್ಕತ್ತ: ವೈದ್ಯರ ಉಪವಾಸ ಅಂತ್ಯ

ಕೋಲ್ಕತ್ತ (ಪಿಟಿಐ): ಇಲ್ಲಿನ ಆರ್.ಜಿ.ಕರ್ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ ಕೊಲೆಗೈದ ಪ್ರಕರಣವನ್ನು ಖಂಡಿಸಿ ಕಿರಿಯ ವೈದ್ಯರು ನಡೆಸುತ್ತಿದ್ದ ಆಮರಣಾಂತ ಉಪವಾಸ ಸೋಮವಾರ ಅಂತ್ಯಗೊಂಡಿದೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೊಂದಿಗೆ ನಡೆದ ಸಂಧಾನ ಸಭೆಯ ಬಳಿಕ ಉಪವಾಸ ಸತ್ಯಾಗ್ರಹವನ್ನು ಕೈಬಿಡಲು ಕಿರಿಯ ವೈದ್ಯರು ಒಪ್ಪಿದ್ದಾರೆ.

ಬಾಕಿ ಬಿಲ್ ಪಾವತಿಗೆ ಒತ್ತಾಯ

ಹಣ ಬಿಡುಗಡೆ ವಿಳಂಬವಾದರೆ ರಾಜ್ಯದಾದ್ಯಂತ ಪ್ರತಿಭಟನೆ: ಗುತ್ತಿಗೆದಾರರ ಸಂಘ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ಗುತ್ತಿಗೆದಾರರಿಗೆ ₹31 ಸಾವಿರ ಕೋಟಿ ಮೊತ್ತದ ಬಿಲ್ ಬಾಕಿ ಇದೆ. ಅದರಲ್ಲಿ ಶೇಕಡ 50ರಷ್ಟು ಮೊತ್ತವನ್ನು ತಿಂಗಳೊಳಗೆ ಪಾವತಿಸದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ಆರಂಭಿಸಲಾಗುವುದು ಎಂದು ರಾಜ್ಯ ಗುತ್ತಿಗೆದಾರರ ಸಂಘ ಹೇಳಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಜಗನ್ನಾಥ್ ಬಿ. ಶೇಗಜಿ, 'ಬಾಕಿ ಹಣ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಂಬಂಧಪಟ್ಟ ಇಲಾಖೆಗಳ ಸಚಿವರಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ₹31 ಸಾವಿರ ಕೋಟಿ ಮೊತ್ತವನ್ನು ಒಂದೇ ಬಾರಿಯಲ್ಲ ದಿದ್ದರೂ ಹಂತ–ಹಂತವಾಗಿ ಬಿಡುಗಡೆ ಮಾಡಬೇಕಿತ್ತು. ಆದರೆ, ಗುತ್ತಿಗೆದಾರರ ಮನವಿಗೆ ಸರ್ಕಾರ ಸ್ಪಂದಿಸಿಲ್ಲ' ಎಂದು ದೂರಿದರು.

'ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ದಸರಾ, ದೀಪಾವಳಿ ಹಬ್ಬದ ಸಂದರ್ಭದಲ್ಲಿ ಗುತ್ತಿಗೆದಾರರಿಗೆ ಬಾಕಿ ಬಿಲ್ ಬಿಡುಗಡೆಗೊಳಿಸಲಾಗುತ್ತಿತ್ತು. ಆದರೆ, ಈಗಿನ ಸರ್ಕಾರ ಇದುವರೆಗೂ ಬಾಕಿ ಬಿಲ್ ಪಾವತಿಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಪತ್ರ ಬರೆಯಲಾಗುವುದು' ಎಂದರು.

'ಕೆಲವು ಇಲಾಖೆಗಳಲ್ಲಿ ಶೇಕಡ 7ರಿಂದ 15ರಷ್ಟು ಬಿಲ್ ಮೊತ್ತವನ್ನು ಪಾವತಿ ಮಾಡಲಾಗುತ್ತಿದೆ. ಕೆಲ ಇಲಾಖೆಗಳಲ್ಲಿ ತಮಗೆ ಬೇಕಾದ ಪ್ರಭಾವಿ ಗುತ್ತಿಗೆದಾರರಿಗೆ ಮಾತ್ರ ಬಾಕಿ ಮೊತ್ತ ಪಾವತಿಸಲಾಗುತ್ತಿದೆ. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದರೆ, ಇಲಾಖೆ ಉಸ್ತುವಾರಿ ಹೊಂದಿರುವ ಸಚಿವರೊಂದಿಗೆ ಮಾತನಾಡಿ ಎಂಬ ಹೇಳಿಕೆ ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

'ಯಾವುದೇ ಇಲಾಖೆಯಲ್ಲಿ ಬಿಲ್ ಪಾವತಿಯಲ್ಲಿ ಜ್ಯೇಷ್ಠತೆಯನ್ನು ಪಾಲಿಸುತ್ತಿಲ್ಲ. ಗುತ್ತಿಗೆದಾರರ ಸಂಘದ ಪದಾಧಿಕಾರಿಗಳ ಜತೆ ಸಭೆ ನಡೆಸಿ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ಜಲ ಸಂಪನ್ಮೂಲ, ಸಣ್ಣ ನೀರಾವರಿ, ಲೋಕೋಪಯೋಗಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಿಬಿಎಂಪಿಯ ಉಸ್ತುವಾರಿ ವಹಿಸಿಕೊಂಡಿರುವ ಸಚಿವರು ಹಾಗೂ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಆದರೂ ಸಭೆ ನಡೆಸಲು ಸರ್ಕಾರ ಹಿಂದೇಟು ಹಾಕುತ್ತಿದೆ' ಎಂದರು.

'ಮೂರು ಮತ್ತು ನಾಲ್ಕನೇ ದರ್ಜೆಯ ಗುತ್ತಿಗೆದಾರರು ಹಣವನ್ನು ಬ್ಯಾಂಕ್, ಖಾಸಗಿ ಲೇವಾದೇವಿಗಾರರ ಬಳಿ ಸಾಲ ಪಡೆದು ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಾರೆ. ಹಲವರು ಆಸ್ತಿಗಳನ್ನು ಅಡಮಾನ ಇರಿಸಿದ್ದಾರೆ. ಬಿಲ್ ಮೊತ್ತ ಪಾವತಿಯಾಗದ ಕಾರಣ ಗುತ್ತಿಗೆದಾರರು ಊರು ಬಿಟ್ಟು ಹೋಗಿದ್ದಾರೆ. ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಓಡಾಡುತ್ತಿದ್ದಾರೆ' ಎಂದು ಹೇಳಿದರು.

ಸಂಘದ ಕಾರ್ಯಾಧ್ಯಕ್ಷರಾದ ಎಂ.ಎಸ್. ಸಂಕಾಗೌಡಶಾನಿ, ಆರ್. ಮಂಜುನಾಥ್, ಕೆ. ರಾಧಾಕೃಷ್ಣ ನಾಯಕ್, ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ, ಉಪಾಧ್ಯಕ್ಷ ರಾದ ಬಿ.ಸಿ. ದಿನೇಶ್ ಮತ್ತು ಬಿ.ಎನ್. ಕೃಷ್ಣೇಗೌಡ ಪತ್ರಿಕಾಗೋಷ್ಠಿಯಲ್ಲಿದ್ದರು.

'ಕೆಆರ್‌ಐಡಿಎಲ್‌ಗೆ ಹೆಚ್ಚಿನ ಕಾಮಗಾರಿ'

ಜಗನ್ನಾಥ್ ಶೇಗಜಿ

'ಕಲ್ಯಾಣ ಕರ್ನಾಟಕ ಭಾಗದ ಶಾಸಕರು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ಹೆಚ್ಚಿನ ಕಾಮಗಾರಿಗಳನ್ನು ನೀಡುತ್ತಿದ್ದಾರೆ. ಇದರಿಂದ ಆ ಭಾಗದ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ಅನ್ಯಾಯ ಮಾಡುತ್ತಿದ್ದಾರೆ' ಎಂದು ಜಗನ್ನಾಥ್ ಶೇಗಜಿ ಆರೋಪಿಸಿದರು.

ವಸತಿ ಮಹಾಮಂಡಲ ಅಧ್ಯಕ್ಷರಾಗಿ ಎಸ್.ಟಿ.ಸೋಮಶೇಖರ್ ಪುನರಾಯ್ಕೆ

ಎಸ್.ಟಿ. ಸೋಮಶೇಖರ್

ಗದಿಗಪ್ಪಗೌಡ ಪ.ಪಾಟೀಲ

ಬಿ.ಸಿ. ಶಿವಲಿಂಗೇಗೌಡ

ಬೆಂಗಳೂರು: ರಾಜ್ಯ ಸಹಕಾರ ವಸತಿ ಮಹಾ ಮಂಡಲದ ಅಧ್ಯಕ್ಷರಾಗಿ ಶಾಸಕ ಎಸ್.ಟಿ.ಸೋಮಶೇಖರ್ ಅವರು ಸತತ ಆರನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಗದಿಗಪ್ಪಗೌಡ ಪ.ಪಾಟೀಲ ಮೊದಲ ಬಾರಿಗೆ ಹಾಗೂ ಖಜಾಂಚಿಯಾಗಿ ಬಿ.ಸಿ.ಶಿವಲಿಂಗೇಗೌಡ ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಬಿ.ದೇವರಾಜು ಕಾರ್ಯ ನಿರ್ವಹಿಸಿದ್ದರು.

ನರ್ಸಿಂಗ್ ಕಾಲೇಜುಗಳಿಗೆ ಅನುಮತಿ: ದೂರು

ಬೆಂಗಳೂರು: ಮೂಲಸೌಕರ್ಯಗಳನ್ನು ಪೂರೈಸದ ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡಿರುವ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ವೈದ್ಯಕೀಯ ಶಿಕ್ಷಣ ಇಲಾಖೆಗೆ ದೂರು ಸಲ್ಲಿಸಲಾಗಿದೆ.

'ನರ್ಸಿಂಗ್ ಕಾಲೇಜುಗಳಿಗೆ ಭೇಟಿ ನೀಡಿದ್ದ ವಿಶ್ವವಿದ್ಯಾಲಯದ ಸ್ಥಳೀಯ ತಪಾಸಣಾ ಸಮಿತಿಗಳು (ಎಲ್‌ಐಸಿ) 20ಕ್ಕೂ ಹೆಚ್ಚು ಕಾಲೇಜುಗಳು ನಿಯಮ ಪಾಲಿಸಿಲ್ಲ ಎಂದು ಅಲ್ಲಿನ ನ್ಯೂನತೆ ಪಟ್ಟಿ ಮಾಡಿವೆ. ಆದರೂ ಅವುಗಳಿಗೆ ಅನುಮತಿ ನೀಡಲಾಗಿದೆ' ಎಂದು ಸಾಮಾಜಿಕ ಕಾರ್ಯಕರ್ತ ಶಿವಕುಮಾರ್ ದೂರಿನಲ್ಲಿ ವಿವರಿಸಿದ್ದಾರೆ. ನಿಯಮಗಳನ್ನು ಪಾಲಿಸದ ನರ್ಸಿಂಗ್ ಕಾಲೇಜುಗಳಿಗೆ ಸಿಂಡಿಕೇಟ್ ಸಭೆಯಲ್ಲೂ ಅನುಮೋದನೆ ಪಡೆಯಲಾಗಿದೆ. ಈ ಕುರಿತು ತನಿಖೆಗೆ ಆದೇಶಿಸಬೇಕು ಎಂದು ಒತ್ತಾಯಿಸಿದ್ದಾರೆ.

'ಮೂಲಸೌಕರ್ಯ ಇಲ್ಲದ ಯಾವುದೇ ಕಾಲೇಜುಗಳಿಗೆ ಅನುಮತಿ ನೀಡಿಲ್ಲ. ದೂರುಗಳಿದ್ದರೆ ದಾಖಲೆಗಳನ್ನು ಸಲ್ಲಿಸಲಿ. ವಿಳಂಬ ಮಾಡದೆ ತಪಾಸಣೆ ನಡೆಸಲಾಗುವುದು. ತಪ್ಪು ನಡೆದಿದ್ದರೆ ಅಗತ್ಯ ಕ್ರಮಕೈಗೊಳ್ಳಲಾಗುವುದು' ಎಂದು ಕುಲಪತಿ ಎಂ.ಕೆ. ರಮೇಶ್ ಪ್ರತಿಕ್ರಿಯಿಸಿದರು.

ರಾಹುಲ್ ವಿರುದ್ಧದ ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್‌ನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಸುಳ್ಳು ಹರಡಿದ ಆರೋಪದಡಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾ ಮಾಡಿರುವ ಹೈಕೋರ್ಟ್, ಅರ್ಜಿದಾರರಿಗೆ ₹25 ಸಾವಿರ ದಂಡ ವಿಧಿಸಿದೆ.

'ಪ್ರಜ್ವಲ್ ರೇವಣ್ಣ 400 ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಎಸಗಿ, ಆ ಕ್ಷಣಗಳ ವಿಡಿಯೊಗಳನ್ನೂ ಮಾಡಿಕೊಂಡಿದ್ದಾರೆ ಎಂದು ಸಾರ್ವಜನಿಕವಾಗಿ ಸುಳ್ಳು ಹರಡಿದ ಮತ್ತು ದ್ವೇಷ ಭಾಷಣದ ಮೂಲಕ ರಾಹುಲ್ ಗಾಂಧಿ ಮಹಿಳೆಯರ ಘನತೆಗೆ ಕುಂದು ತಂದಿದ್ದಾರೆ' ಎಂದು ಆರೋಪಿಸಿ, 'ಅಖಿಲ ಭಾರತ ದಲಿತ ಕ್ರಿಯಾ ಸಮಿತಿ' ರಾಷ್ಟ್ರೀಯ ಅಧ್ಯಕ್ಷ ಚಿ.ನಾ.ರಾಮು ಮತ್ತು ಸಮಿತಿಯ ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷೆ ಸುಶೀಲಾ ದೇವರಾಜ್ ಜಂಟಿಯಾಗಿ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಈ ಅರ್ಜಿಯಲ್ಲಿ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತಲ್ಲದೆ, ಅರ್ಜಿದಾರರಿಗೆ ₹25 ಸಾವಿರ ದಂಡ ವಿಧಿಸಿತು. 'ದಂಡದ ಮೊತ್ತವನ್ನು ವಕೀಲರ ಗುಮಾಸ್ತರ ಕಲ್ಯಾಣ ನಿಧಿಗೆ ಪಾವತಿಸಬೇಕು' ಎಂದು ಆದೇಶಿಸಿತು.

ಏನಿದು ಅರ್ಜಿ?: 'ಲೋಕಸಭಾ ಚುನಾವಣೆ ವೇಳೆ 2024ರ ಮೇ 2ರಂದು ಶಿವಮೊಗ್ಗದಲ್ಲಿ ಪ್ರಚಾರ ಭಾಷಣ ಮಾಡಿದ್ದ ರಾಹುಲ್ ಗಾಂಧಿ ಹಾಸನ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ 400 ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿ, ಆ ಸಂದರ್ಭಗಳನ್ನು ವಿಡಿಯೊ ಮೂಲಕ ಚಿತ್ರೀಕರಿಸಿಕೊಂಡಿದ್ದಾರೆ. ಇಂತಹ ಅಭ್ಯರ್ಥಿ ಪರ ಮತ ಕೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಾರ್ವಜನಿಕರ ಕ್ಷಮೆ ಕೋರಬೇಕು ಎಂಬ ಹೇಳಿಕೆ ನೀಡಿದ್ದಾರೆ. ಇದು ಭಾರತೀಯ ನಾರಿಯರ, ವಿಶೇಷವಾಗಿ ಹಾಸನ ಭಾಗದ ಮಹಿಳೆಯರ ಘನತೆಗೆ ಹಾನಿ ಉಂಟು ಮಾಡಿದೆ. ಸುಳ್ಳು ಸುದ್ದಿ ಹರಡುವ ಮೂಲಕ ರಾಹುಲ್ ಗಾಂಧಿ ಮತ ಗಳಿಕೆಗೆ ಈ ಪ್ರಕರಣವನ್ನು ಬಳಕೆ ಮಾಡಿಕೊಂಡಿದ್ದಾರೆ. ಹಾಗಾಗಿ, ರಾಹುಲ್ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ರಾಷ್ಟ್ರೀಯ ಮತ್ತು ರಾಜ್ಯ ಮಹಿಳಾ ಆಯೋಗ, ಕೇಂದ್ರ ಮತ್ತು ರಾಜ್ಯ ಗೃಹ ಇಲಾಖೆ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

ಬೆಂಗಳೂರು ಕಂಬಳ ಪ್ರಶ್ನಿಸಿ ಪಿಐಎಲ್

ಬೆಂಗಳೂರು: 'ಬೆಂಗಳೂರಿನ ಅರಮನೆ ಮೈದಾನದಲ್ಲಿ ಇದೇ 26ರಂದು ಕಂಬಳ ಸ್ಪರ್ಧೆ ನಡೆಸಲು ಬೆಂಗಳೂರು ಕಂಬಳ ಸಮಿತಿಗೆ ಅನುಮತಿ ನೀಡದಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಪ್ರಾಣಿ ದಯಾ ಸಂಘ ಪೆಟಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ (ಅ.22) ಮಂಗಳವಾರ ವಿಚಾರಣೆ ನಡೆಸಲಿದೆ.

ಈ ಕುರಿತಂತೆ ಪೆಟಾ (ಪೀಪಲ್ ಫಾರ್ ಎ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್) ಕಂಪನಿಯ ಅಧಿಕೃತ ಪ್ರತಿನಿಧಿ ಖುಷ್ಬೂ ಗುಪ್ತ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೆ ನಿಗದಿಗೊಳಿಸುವಂತೆ ಪೆಟಾ ಪರ ಹಾಜರಾಗಿದ್ದ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ, ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠಕ್ಕೆ ಮನವಿ ಮಾಡಿದರು. ಅರ್ಜಿ ಪರಿಶೀಲಿಸಿದ ನ್ಯಾಯಪೀಠ, ವಿಚಾರಣೆಯನ್ನು ಮಂಗಳವಾರಕ್ಕೆ (ಅ.22) ನಿಗದಿಗೊಳಿಸಿತು.

'ಪ್ರಾಣಿಗಳ ಮೇಲಿನ ಕ್ರೌರ್ಯ ನಿಷೇಧ ಕಾಯ್ದೆ–2017ರ ನಿಬಂಧನೆ ಜಾರಿಗೊಳಿಸಲು ಪಶು ಸಂಗೋಪನೆ, ಮೀನುಗಾರಿಕೆ ಇಲಾಖೆಗೆ ನಿರ್ದೇಶಿಸಬೇಕು' ಎಂದು ಕೋರಲಾಗಿದೆ. ಪಶು ಸಂಗೋಪನಾ ಇಲಾಖೆ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿ, ಬೆಂಗಳೂರು ಕಂಬಳ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ರೈ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/52/2024–25 ದಿನಾಂಕ: 21–10–2024

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು–2 ಹೋಬಳಿ, ಕೃಷ್ಣರಾಜಪಾಳ್ಯ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ" ವಲಯದಿಂದ "ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು ಶ್ರೀ / ಶ್ರೀಮತಿ	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಕೆ. ಕೇಶವಮೂರ್ತಿ ಬಿನ್ ಲೇಟ್ ಸಿ. ಕೆಂಪಯ್ಯ	ನೆಲಮಂಗಲ/ ತ್ಯಾಮಗೊಂಡ್ಲು–2/ ಕೃಷ್ಣರಾಜಪಾಳ್ಯ	3/1	02–00	ವ್ಯವಸಾಯ	ಕೈಗಾರಿಕೆ
		3/3	01–05 ಪೈಕಿ 00–34		
		ಒಟ್ಟು	02-34		

ಷರಾ:– ಪ್ರಶ್ನಿತ ಜಮೀನುಗಳಲ್ಲಿ **ಕೈಗಾರಿಕೆ** ಚಟುವಟಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ವ್ಯವಸಾಯ ವಲಯದಿಂದ ಕೈಗಾರಿಕೆ ಉದ್ದೇಶಕ್ಕೆ"** ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/2658/ಅಡ್ವರ್ಟೋರ್ /2024–25

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

ಮೆ. ವಿಸ್ಡಂ ಸೆಕ್ಯೂರಿಟಿ ಸರ್ವೀಸಸ್
ನಂ. 106, 1ನೇ ಮಹಡಿ, 40 ಅಡಿ ರಸ್ತೆ, ಮಂಜುನಾಥನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು–560010.
ಹೊರಗುತ್ತಿಗೆ ಆಧಾರದ ಮೇಲೆ ಅರ್ಜಿ ಆಹ್ವಾನ
ಸಂಜೀವಿನಿ–ಕೆಎಸ್ಆರ್ಎಲ್‌ಪಿಎಸ್ ಕೌಉಜೀ ಇಲಾಖೆ ಸಂಸ್ಥೆಗೆ ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು M/s. Wisdom Security Services ಸಂಸ್ಥೆಯಿಂದ ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ:
1. SPM-Financial Management
2. SPM- Non-Farm Livelihoods
3. SPM- Social Mobilization & Institution Building
4. SPM- Social Inclusion, Social Development, FNHW, Convergence & Gender
5. SPM-Knowledge Management & Communication / GAC/ IEC
6. SPM - ASMITHE/Marketing
7. SPM (IT & Bio-Metrics)
8. SPM - Pedagogy & Learning Management
9. SPM - Finance & Proposal Examination
10. SPM - PIA Co-ordination and Development
11. SPM- Inspection, Quality Assurance & Branding
12. SPM - Co-ordination
13. PM- Non-Farm
14. PM- Farm Livelihoods
15. PM-Capacity Building
16. PM- Livestock
17. Project Executive - Financial Inclusion
18. Project Executive – HR
19. Project Executive - Social Inclusion, Social Development, FNHW, Convergence & Gender
20. Consultant (Procurement)
ಮೇಲಿನ ಹುದ್ದೆಗಳಿಗೆ ಆಸಕ್ತಿಯಿರುವ ಅರ್ಹ ಅಭ್ಯರ್ಥಿಗಳು ದಿನಾಂಕ 30.10.2024 ರಂದು ಸಂಜೆ 5:00 ಗಂಟೆ ಒಳಗೆ ಸಂಸ್ಥೆಯ ಜಾಲತಾಣ ವೀಕ್ಷಿಸಿ jobs.wisdomsecurity.in ಮೂಲಕ ವಿದ್ಯಾಹತೆ ಅನುಭವ, ಕಲ್ಯಾಣ ಕರ್ನಾಟಕ, ಜಾತಿ, ವರ್ಗ, ಇತ್ಯಾದಿಗಳ ಪೂರ್ಣ ವಿವರಗಳೊಂದಿಗೆ ಸಲ್ಲಿಸತಕ್ಕದ್ದು. ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ, ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ: +91 99452 30206, +91 99452 30204, + 91 99452 30210 ಗಳನ್ನು ಸಂಪರ್ಕಿಸಲು ತಿಳಿಸಿದೆ.
ವಿಶೇಷ ಸೂಚನೆ : ದಿನಾಂಕ 26–1–2024 ರಂದು 26 ಹುದ್ದೆಗಳು ಹಾಗೂ ದಿನಾಂಕ 18–10–2024 ರಂದು 20 ಹುದ್ದೆಗಳಿಗೆ ಹೊರಡಿಸಿದ ಅಧಿಸೂಚನೆಗಳನ್ನು ತಾಂತ್ರಿಕ ಕಾರಣದಿಂದ ರದ್ದುಗೊಳಿಸಿ ಮೇಲಿನಂತೆ ಹೊಸ ಅಧಿಸೂಚನೆ ಹೊರಡಿಸಲಾಗಿದೆ.

JOB REQUIREMENT (Full time) Delivery Executives (Biker) Night Shift: Operation Executives Data Entry operator Helper's Part time Job Location Near Jakkur Aero Drum Contact: 8147394231/ 8296514619

RENTAL PROPERTIES

Accommodation Available

Commercial

WAREHOUSE SPACE IMMEDIATELY AVAILABLE Location: Near Hennur/ Hebbal Space: 30000 sqft Contact No. 9004476233

BUSINESS

Business Offers

Finance

MSME LOANS: We arrange MSME Business Loans against your existing or New Businesses also.Contact:7204995189

PERSONAL

Change of Name

CHANGE OF NAME
I, M Munirathna D/o Munikrishnappa and W/o D. Muni Beerappa, Residing at 4905/1, Beerappa Residency at 6th A Main Road, Punya Bhoomi Layout, Kalkere, Horamavu, Bangalore-560043. In Passport no. M6379960 my name entered as Munirathna. But my correct name is M MUNIRATHNA as per Aadhar card no. 5339 9167 5782, vide affidavit date 19.10.2024 before notary Y.R. Chandrasekar, Bangalore.

CHANGE OF NAME
I, S. SUMITHRA, SUMITHRA.S & SUMITHRA NAGARAJ,. W/o Late M. Nagaraj, residing at #102, 1st Floor, Aravind Cauvery Apartment, Kadirenahalli Main Road, Bendre Nagar, Bengaluru- 70, declare that above names pertain to me only. Vide affidavit dated 19.10.2024 before Notary H.G. Venkataramu, Bengaluru. Henceforth I shall be called as SUMITHRA NAGARAJ only

CHANGE OF NAME
I, M Thulasi Ram S/o Muninaganna Reddy Residing at No.204, 1st Main Road, Gururaja Layout, Behind Vidhyapeeta BSK 3rd Stage, Bangalore-560028. have changed my name to THULASIRAM MUNINAGANNA, Vide affidavit dated 20/10/2024 before notary S.N.Madhu, Bangalore, henceforth I shall be known as THULASIRAM MUNINAGANNA for all future purposes

CHANGE OF NAME
I, B.N. SUKANYA & SUKANYA NANJEGOWDA W/o G.S. Nanjegowda, R/at # 8/4, New Timber Yard Layout, Mysore Road, Bengaluru-560026, declare that above names pertain to me only. Vide affidavit dated 18.10.2024 before Notary S.R.Thulasikrishna, Bengaluru. Henceforth I shall be called as B.N. SUKANYA only

I, GEETHA Dinesh, D/o P.Krishnappa, #131, 1st Main, Swathantra Nagar, Bangalore 560049, have changed my name to Geetha Krishnappa, vide affidavit number - IN-KA10942314374536W, Dt -10/9/2024

CHANGE OF NAME
I, Sidharth Ramesh S/o Ramesh, Residing at # 101, Imperium Tranquility, Benson Town, Bangalore-560046, have changed my name from Sidharth Ramesh to KANAO RAMESH & Gender from Male to Female, vide affidavit date 21.09.2024 before notary Vijayalakshmi K, Bangalore.

I, RAVIKUMARA H.A, residing at K.R.Nagara, Mysore-571601 have changed my name as RAVIKUMAR H.A, vide affidavit dated 21/10/2024 before Notary K.S.Bammappanavar, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9845114560 | +91 9900428036

ಶಿಗ್ಗಾವಿ: ಬಿಜೆಪಿಗೆ ಬಂಡಾಯದ ಬಿಸಿ

ಬೆಂಬಲಿಗರ ಸಭೆ ನಡೆಸಿದ ಶ್ರೀಕಾಂತ ದುಂಡಿಗೌಡ್ರ ● ಅ. 24ರ ನಂತರ ತೀರ್ಮಾನ ಘೋಷಣೆ

ಪ್ರಜಾವಾಣಿ ವಾರ್ತೆ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಸಂಸದ ಬಸವರಾಜ ಬೊಮ್ಮಾಯಿ ಅವರ ಮಗ ಭರತ್‌ಗೆ ಬಿಜೆಪಿ ಟಿಕೆಟ್ ಘೋಷಣೆ ಆಗುತ್ತಿದ್ದಂತೆ, ಬಂಡಾಯದ ಬಿಸಿ ಶುರುವಾಗಿದೆ. ಕ್ಷೇತ್ರದ ಬಿಜೆಪಿಯ ಪ್ರಭಾವಿ ಮುಖಂಡ ಶ್ರೀಕಾಂತ ದುಂಡಿಗೌಡ್ರ, 'ಬಸವರಾಜ ಬೊಮ್ಮಾಯಿ ಅವರು ನನಗೆ ಟಿಕೆಟ್ ಕೊಡಿಸುವುದಾಗಿ ಭರವಸೆ ನೀಡಿದ್ದರು. ಆದರೆ ಅನ್ಯಾಯ ಮಾಡಿದ್ದಾರೆ. ಅ. 24ರ ನಂತರ ನನ್ನ ನಿರ್ಧಾರ ತಿಳಿಸುವೆ' ಎಂದು ಬಂಡಾಯದ ಸೂಚನೆ ನೀಡಿದರು.

ಶ್ರೀಕಾಂತ ದುಂಡಿಗೌಡ್ರ

ಭರತ್ ಬೊಮ್ಮಾಯಿ

ಬಿಜೆಪಿ ಟಿಕೆಟ್ ಸಿಗುವ ವಿಶ್ವಾಸದಿಂದಿದ್ದ ಮುಖಂಡ ಶ್ರೀಕಾಂತ ದುಂಡಿಗೌಡ್ರ, 'ಬಸವರಾಜ ಬೊಮ್ಮಾಯಿ ಅವರು ನನಗೆ ಹಾಗೂ ಕಾರ್ಯಕರ್ತರಿಗೆ ಸುಳ್ಳು ಹೇಳಿಕೊಂಡು ಬಂದರು. ಮಗನಿಗೆ ಟಿಕೆಟ್ ಸಿಗುವ ಬಗ್ಗೆ ನಿಜಾಂಶವನ್ನು ತಿಳಿಸಲಿಲ್ಲ. ಭರತ್‌ಗೆ ಟಿಕೆಟ್ ಬೇಡವೆಂದು ವರಿಷ್ಠರಿಗೆ ತಿಳಿಸುವುದಾಗಿಯೂ ಹೇಳಿದ್ದರು. ಆದರೆ, ಇದೀಗ ಭರತ್‌ಗೆ ಟಿಕೆಟ್ ಸಿಕ್ಕಿದೆ. ನನಗೂ ಹಾಗೂ ಬೆಂಬಲಿಗರಿಗೆ ಬಹಳ ನೋವಾಗಿದೆ. ಬೊಮ್ಮಾಯಿ ಅವರು ಟಿಕೆಟ್ ಘೋಷಣೆ ಆಗುವವರೆಗೂ ಸತ್ಯವನ್ನು ಹೇಳದೆ ಅನ್ಯಾಯ ಮಾಡಿದರು' ಎಂದು ದೂರಿದರು.

ಭಾರತ್ ಸೇವಾ ಸಂಸ್ಥೆಯ ಅಧ್ಯಕ್ಷರಾಗಿರುವ ಅವರು ಹಲವು ವರ್ಷಗಳಿಂದ ಬಿಜೆಪಿಯಲ್ಲಿದ್ದಾರೆ. ಅವರ ಪತ್ನಿ ಶಕುಂತಲಾ, ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯೆ.

ಶಿಗ್ಗಾವಿ ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಅವಧಿಯಲ್ಲಿ ಶಾಸಕರಾಗಿದ್ದ ಬಸವರಾಜ ಬೊಮ್ಮಾಯಿ, ಉಪ ಚುನಾವಣೆಯಲ್ಲಿ ಕಾರ್ಯಕರ್ತರಿಗೆ ಟಿಕೆಟ್ ಕೊಡಿಸುವುದಾಗಿ ಲೆಕ್ಕಾಚಾರ ಮುಖಂಡರಿದ್ದಾಗಿತ್ತು. ಆದರೆ, ಅವರ ಪುತ್ರನಿಗೆ ಇದೀಗ ಟಿಕೆಟ್ ಸಿಕ್ಕಿರುವುದರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಕೆಲ ಕಾರ್ಯಕರ್ತರು ಸೋಮವಾರ ಸಭೆ ನಡೆಸಿ ತಮ್ಮ ಮುಂದಿನ ನಡೆ ಬಗ್ಗೆ ಚರ್ಚಿಸಿದರು.

'ಶ್ರೀಕಾಂತ ದುಂಡಿಗೌಡ್ರ ಅವರು ನಮ್ಮ ನಾಯಕರು' ಎಂಬುದಾಗಿ ಹೇಳಿಕೊಂಡು ಸಭೆ ಸೇರಿದ್ದ ಬೆಂಬಲಿಗರು, 'ಬಿಜೆಪಿಯಲ್ಲಿ ಕುಟುಂಬ ರಾಜಕಾರಣಕ್ಕೆ ಅಸ್ಪದವಿಲ್ಲವೆಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಿದ್ದಾರೆ. ಆದರೆ, ಇಲ್ಲಿ ಶಾಸಕರ ಮಗನೇ ಶಾಸಕ ಸ್ಥಾನದ ಅಭ್ಯರ್ಥಿಯಾಗಿದ್ದಾರೆ. ಇದು ಯಾವ ಸಾಮಾಜಿಕ ನ್ಯಾಯ' ಎಂದು ಪ್ರಶ್ನಿಸಿದರು.

'ಕುಟುಂಬ ರಾಜಕಾರಣವನ್ನು ಕ್ಷೇತ್ರದ ಜನ ಒಪ್ಪುವುದಿಲ್ಲ. ಜನ ಪರವಾಗಿರುವ ಶ್ರೀಕಾಂತ ದುಂಡಿಗೌಡ್ರ ಅವರು ಈ ಬಾರಿ ಪಕ್ಷೇತರರಾಗಿ ಸ್ಪರ್ಧಿಸಬೇಕು' ಎಂದು ಬೆಂಬಲಿಗರು ಒತ್ತಾಯಿಸಿದರು.

ಸಭೆಯಲ್ಲಿ ಮಾತನಾಡಿದ ಶ್ರೀಕಾಂತ ದುಂಡಿಗೌಡ್ರ, 'ಬಸವರಾಜ ಬೊಮ್ಮಾಯಿ ನಮ್ಮ ನಾಯಕರು. ನಾಲ್ಕು ಅವಧಿಯಲ್ಲಿಯೂ ಅವರ ಪರವಾಗಿ ಕೆಲಸ ಮಾಡಿದ್ದೇವೆ. ನನಗೆ ಟಿಕೆಟ್ ಕೊಡಿಸುವುದಾಗಿ ಅವರು ಭರವಸೆ ನೀಡಿದ್ದು ಹುಸಿ ಹೋಗಿದೆ. ಮುಂದಿನ ನಡೆ ಬಗ್ಗೆ ಬೆಂಬಲಿಗರ ಜೊತೆ ಸೇರಿ ಚರ್ಚಿಸುವೆ' ಎಂದರು.

ಯಾರಿಗೂ ಮಾತು ಕೊಟ್ಟಿಲ್ಲ: ಬೊಮ್ಮಾಯಿ



ಶ್ರೀಕಾಂತ ದುಂಡಿಗೌಡ್ರ

ಶ್ರೀಕಾಂತ್ ದುಂಡಿಗೌಡ್ರ ಅವರು ಬೆಂಬಲಿಗರ ಸಭೆ ನಡೆಸಿದ ಬಗ್ಗೆ ಪ್ರತಿಕ್ರಿಯಿಸಿದ ಸಂಸದ ಬಸವರಾಜ ಬೊಮ್ಮಾಯಿ, 'ಟಿಕೆಟ್ ಕೊಡಿಸುವ ಬಗ್ಗೆ ನಾನು ಯಾರಿಗೂ ಭರವಸೆ ನೀಡಿರಲಿಲ್ಲ' ಎಂದರು.

'ಸುಮಾರು 50 ಆಕಾಂಕ್ಷಿಗಳಿದ್ದರು. ಪಕ್ಷದ ನಿರ್ಧಾರಕ್ಕೆ ಬದ್ಧವಾಗಿರುವುದಾಗಿ ಎಲ್ಲರೂ ಹೇಳಲಾಗಿತ್ತು. ಟಿಕೆಟ್ ಘೋಷಣೆಯಾಗಿರುವುದು ನನ್ನ ನಿರ್ಣಯವಲ್ಲ, ಅದರು, ಪಕ್ಷದ ನಿರ್ಣಯ. ನನ್ನ ಮಗನನ್ನು ನಿಲ್ಲಿಸಲು ಆಸಕ್ತಿ ಇರಲಿಲ್ಲ. ಕೊನೆ ಗಳಿಗೆಯವರೆಗೂ, ಟಿಕೆಟ್ ಬೇಡವೆಂದು ಹೇಳಿದ್ದೆ. ಅಂತಿಮವಾಗಿ ಹೈಕಮಾಂಡ್ ಟಿಕೆಟ್ ನೀಡಿದೆ. ಗೆಲುವ ದೃಷ್ಟಿಯಿಂದ ಟಿಕೆಟ್ ನೀಡಿದೆ. ಪಕ್ಷದ ಆದೇಶ ಪಾಲನೆ ನನ್ನ ಕಾಯಕ' ಎಂದು ಹೇಳಿದರು.

'ನನ್ನ ಕಾರ್ಯಕರ್ತರಿಗೆ ಅನ್ಯಾಯ ಮಾಡಿಲ್ಲ. ಶ್ರೀಕಾಂತ್ ದುಂಡಿಗೌಡ್ರ ಅವರಿಗೆ ಕ್ಯಾಬಿನೆಟ್ ಸ್ಥಾನ ನೀಡಿದ್ದೇನೆ. ಬೆಂಬಲಿಗರ ಜೊತೆ ಸಭೆ ನಡೆಸಿರುವ ಅವರ ಜೊತೆ ಮಾತನಾಡುವೆ' ಎಂದರು.

ಪ್ರಜಾ ಮತ
ಜನತಂತ್ರದ ಹಬ್ಬ

ಮೂರು ಕ್ಷೇತ್ರಗಳಲ್ಲೂ ಗೆಲ್ತೀವಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಚಳ್ಳಕೆರೆ (ಚಿತ್ರದುರ್ಗ ಜಿಲ್ಲೆ): ಉಪ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಮಂಗಳವಾರ ಅಂತಿಮಗೊಳ್ಳಲಿದೆ. ನಾವು ಎಲ್ಲ ಮೂರು ಕ್ಷೇತ್ರಗಳಲ್ಲೂ ನೂರಕ್ಕೆ ನೂರರಷ್ಟು ಗೆಲುವು ಸಾಧಿಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ಟಿ.ರಘುಮೂರ್ತಿ ಪುತ್ರಿಯ ವಿವಾಹ ಸಮಾರಂಭದಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಸೋಮವಾರ ಭೇಟಿ ನೀಡಿದ್ದ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ಚನ್ನಪಟ್ಟಣ ಕ್ಷೇತ್ರದಲ್ಲಿ ಯೋಗೇಶ್ವರ್ ಕಾಂಗ್ರೆಸ್ ಸಂಪರ್ಕದಲ್ಲಿ ಇಲ್ಲ. ಟಿಕೆಟ್ ಹಂಚಿಕೆ ವಿಚಾರದಲ್ಲಿ ಯಾವುದೇ ಗೊಂದಲಗಳು ಇಲ್ಲ ಎಂದರು.

ಕಾಂಗ್ರೆಸ್ ಅಹಿಂದ ಹಣವನ್ನು ಲೂಟಿ ಹೊಡೆದಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ ಮಾಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಸರ್ಕಾರ ಕೆಡವಲು ಅವರ ಪಕ್ಷದ ಮುಖಂಡರೇ ₹ 1,000 ಕೋಟಿ ಸಿದ್ಧಪಡಿಸಿರುವುದಾಗಿ ಯತ್ನಾಳ ಅವರೇ ಆರೋಪಿಸಿದ್ದಾರೆ. ನಮ್ಮ ಸರ್ಕಾರ ಕೆಡವಲು ಯತ್ನಾಳ ಎಲ್ಲಿಂದ ಹಣ ತರುತ್ತಾರೆ' ಎಂದು ಪ್ರಶ್ನಿಸಿದರು.

ಇದೇ ವೇಳೆ ಪ್ರತ್ಯೇಕವಾಗಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಸಿ.ಪಿ.ಯೋಗೇಶ್ವರ್ ನಮ್ಮ ಸಂಪರ್ಕದಲ್ಲಿ ಇಲ್ಲ. ಎಚ್.ಡಿ. ಕುಮಾರಸ್ವಾಮಿ ಏನೇನೋ ಮಾತನಾಡುತ್ತಾ ಇರುತ್ತಾರೆ. ಕುಮಾರಸ್ವಾಮಿ ಅವರೇ ಬೇರೆಯವರೊಂದಿಗೆ ಸಂಪರ್ಕದಲ್ಲಿ ಇರಬಹುದು' ಎಂದರು

ಕಪ್ಪು ವಸ್ತ್ರ ಪ್ರದರ್ಶನ: ವಿವಾಹ ಸಮಾರಂಭದಲ್ಲಿ ಭಾಗಿಯಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸುತ್ತಿದ್ದಂತೆಯೇ ಮಾದಿಗ ಮಹಾಸಭಾ ಸದಸ್ಯರು ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಕಪ್ಪು ವಸ್ತ್ರ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು. ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದ ಮುಖ್ಯಮಂತ್ರಿ 'ಒಳ ಮೀಸಲಾತಿ ಜಾರಿ ಮಾಡುತ್ತೇವೆ' ಎಂದು ಭರವಸೆ ನೀಡಿ ಮುಂದೆ ಸಾಗಿದರು.

'ವರಸೆ ಬದಲಿಸಿದ ಸಿಪಿವೈ'

ಪ್ರಜಾವಾಣಿ ವಾರ್ತೆ

ರಾಮನಗರ: 'ಚನ್ನಪಟ್ಟಣ ಉಪ ಚುನಾವಣೆಯ ಟಿಕೆಟ್ ಆಕಾಂಕ್ಷಿ ಬಿಜೆಪಿಯ ಸಿ.ಪಿ. ಯೋಗೇಶ್ವರ್ ಅವರನ್ನು ಮೈತ್ರಿ ಅಭ್ಯರ್ಥಿಯಾಗಿ ಜೆಡಿಎಸ್ ಚಿಹ್ನೆ ಅಡಿ ಕಣಕ್ಕಿಳಿಸಲು ಪಕ್ಷದ ನಾಯಕರು ತೀರ್ಮಾನಿಸಿದ್ದರು. ಆರಂಭದಲ್ಲಿ ಸ್ಪರ್ಧೆಗೆ ಒಪ್ಪಿದ್ದ ಯೋಗೇಶ್ವರ್, ಈಗ ವರಸೆ ಬದಲಿಸಿ ನಮ್ಮ ಪಕ್ಷದ ಆಹ್ವಾನ ತಿರಸ್ಕರಿಸಿದ್ದಾರೆ' ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎ. ಮಂಜುನಾಥ್ ಹೇಳಿದರು.

'ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ರಾಜ್ಯಾಧ್ಯಕ್ಷ ಎಚ್ .ಡಿ. ಕುಮಾರಸ್ವಾಮಿ, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಪಕ್ಷದ ಕೋರ್ ಕಮಿಟಿ ಸದಸ್ಯರು ಸಭೆ ನಡೆಸಿ ಯೋಗೇಶ್ವರ್ ಅವರನ್ನೇ ಅಂತಿಮಗೊಳಿಸಿದ್ದರು. ಆದರೆ, ಅವರು . ಬಿಜೆಪಿ ಟಿಕೆಟ್‌ಗೆ ಪಟ್ಟು ಹಿಡಿದಿದ್ದಾರೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸ್ಪರ್ಧೆಗೆ ಯೋಗೇಶ್ವರ್ ನಿರಾಕರಿಸುವುದರಿಂದ ನಿಖಿಲ್ ಅವರನ್ನೇ ಕಣಕ್ಕಿಳಿಸಬೇಕೆಂಬ ಒತ್ತಡ ಹೆಚ್ಚಾಗುತ್ತಿದೆ. ನಿಖಿಲ್ ಒಪ್ಪದಿದ್ದರೆ ಪಕ್ಷದ ಸ್ಥಳೀಯ ಮುಖಂಡರೊಬ್ಬರನ್ನು ಕಣಕ್ಕಿಳಿಸುವ ಆಲೋಚನೆ ಇದೆ. ಈ ಕುರಿತು, ಪಕ್ಷದ ನಾಯಕರು ಅಂತಿಮ ತೀರ್ಮಾನ ಕೈಗೊಳ್ಳುತ್ತಾರೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಚನ್ನಪಟ್ಟಣ: ಮೂವರು ಅಭ್ಯರ್ಥಿಗಳ ನಾಮಪತ್ರ

ರಾಮನಗರ: ಚನ್ನಪಟ್ಟಣ ಉಪ ಚುನಾವಣೆಗೆ ಸೋಮವಾರ ಮೂರು ನಾಮಪತ್ರ ಸಲ್ಲಿಕೆಯಾಗಿವೆ. ಇಂಡಿಯನ್ ಪೊಲಿಟಿಕಲ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪ್ರೇಮ್‌ಕುಮಾರ್ ಕೆ., ಉಮಾ ವಿ. ಹಾಗೂ ಪಕ್ಷೇತರ ಅಭ್ಯರ್ಥಿ ಸೈಯದ್ ಆಸಿಫ್ ಬುಕಾರಿ ನಾಮಪತ್ರ ಸಲ್ಲಿಸಿದ್ದಾರೆ.

ಇದುವರೆಗೆ ಒಟ್ಟು ನಾಲ್ಕು ನಾಮಪತ್ರ ಸಲ್ಲಿಕೆಯಾಗಿವೆ.

ಅ. 19ರಂದು ಯಂಗ್‌ಸ್ಟಾರ್ ಎಂಪವರ್‌ಮೆಂಟ್ ಪಾರ್ಟಿಯ ಅಭ್ಯರ್ಥಿ ಶಾಬಾಜ್ ಉಲ್ಲಾ ಖಾನ್ ಎಂಬುವರು ತಮ್ಮ ಉಮೇದುವಾರಿಕೆ ಸಲ್ಲಿಸಿದ್ದರು ಎಂದು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಬಿನೋಯ್ ಪಿ.ಕೆ ತಿಳಿಸಿದ್ದಾರೆ.

ಈಶಾನ್ಯ ದಿಕ್ಕಿನಿಂದ ಬಿಜೆಪಿ ಪ್ರಚಾರ ಆರಂಭ

ಅನ್ನಪೂರ್ಣಗೆ ಟಿಕೆಟ್ ಬಹುತೇಕ ಖಚಿತ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಸಂಡೂರು ವಿಧಾನಸಭಾ ಉಪಚುನಾವಣೆಯ ಟಿಕೆಟ್ ಸಂಸದ ತುಕಾರಾಂ ಪತ್ನಿ ಅನ್ನಪೂರ್ಣ ಅವರಿಗೆ ಬಹುತೇಕ ಅಂತಿಮಗೊಂಡಿದೆ. ಅಧಿಕೃತ ಘೋಷಣೆಯಷ್ಟೇ ಬಾಕಿಯಿದೆ' ಎಂದು ಮೂಲಗಳು ತಿಳಿಸಿವೆ.

ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರನ್ನು ಬೆಂಗಳೂರಿನಲ್ಲಿ ಭೇಟಿಯಾದ ತುಕಾರಾಂ ದಂಪತಿ ಈ ಕುರಿತು ಚರ್ಚಿಸಿದ್ದಾರೆ.

ಸಂಡೂರು ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಕೇಳಿದ್ದ ಎನ್. ವೆಂಕಣ್ಣ ಎಂಬುವರು ಸೋಮವಾರ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದರು. ತಮಗೆ ಟಿಕೆಟ್ ನೀಡುವಂತೆ ವೆಂಕಣ್ಣ ಅವರು ಪೂರ್ವಭಾವಿ ಸಭೆ ಮತ್ತು ವೀಕ್ಷಕರ ಸಭೆಯಲ್ಲಿ ಮನವಿ ಮಾಡಿದ್ದರು. ಪಕ್ಷ ಇದಕ್ಕೆ ಸ್ಪಂದಿಸಿಲ್ಲ.

ಹೀಗಾಗಿ ಅವರು ಪಕ್ಷೇತರರಾಗಿ ಸ್ಪರ್ಧಿಸಲು ತೀರ್ಮಾನಿಸಿದ್ದಾರೆ.

ಶಾಸಕ ಜನಾರ್ದನ ರೆಡ್ಡಿ ಪ್ರಚಾರ

ಸಂಡೂರು ಉಪಚುನಾವಣೆ ಪ್ರಚಾರವನ್ನು ಬಿಜೆಪಿಯು ಕ್ಷೇತ್ರದ ಈಶಾನ್ಯ ದಿಕ್ಕಿನಿಂದ ಆರಂಭಿಸಿದೆ. ಕುರುಗೋಡು ತಾಲ್ಲೂಕಿನ ಏಳುಬೆಂಚಿ ಗ್ರಾಮ ಸಂಡೂರು ವಿಧಾನಸಭೆಗೆ ಸೇರಿದ್ದು, ಇದನ್ನು ಕ್ಷೇತ್ರದ ಈಶಾನ್ಯ ಮೂಲೆ ಎಂದು ಪರಿಗಣಿಸಲಾಗುತ್ತದೆ. ಇಲ್ಲಿ ಭಾನುವಾರ ರಾತ್ರಿ ಶಾಸಕ ಜನಾರ್ದನ ರೆಡ್ಡಿ ಪ್ರಚಾರ ನಡೆಸಿದರು. ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಚೋರನೂರು ಹೋಬಳಿಯಲ್ಲಿ ಸೋಮವಾರ ಪ್ರಚಾರ ನಡೆಸಿದರು.

'ಸಂಪುಟದಿಂದ ಬೋಸರಾಜು ಕೈಬಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಪ್ರಭಾವ ಬಳಸಿ ಮೀಸಲು ಅರಣ್ಯದ ಜಮೀನನ್ನು ಒತ್ತುವರಿ ಮಾಡಿರುವ ಆರೋಪದ ಮೇಲೆ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಅವರನ್ನು ಸಂಪುಟದಿಂದ ಕೈಬಿಡಬೇಕು' ಎಂದು ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಅವರು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ನೋಂದಾಯಿತ ಅಂಚೆ ಮೂಲಕ ಸೋಮವಾರ ಮನವಿ ರವಾನಿಸಿರುವ ಅವರು, 'ಬೋಸರಾಜು ಅವರ ಪತ್ನಿ ಎನ್. ಕೃಷ್ಣವೇಣಿ ಬೋಸರಾಜು ಅವರು ರಾಯಚೂರು ನಗರದ ವ್ಯಾಪ್ತಿಯಲ್ಲಿರುವ ಮೀಸಲು ಅರಣ್ಯಕ್ಕೆ ಸೇರಿದ 5 ಎಕರೆ 28 ಗುಂಟೆ ಅರಣ್ಯ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ತಮ್ಮ ಪತ್ನಿಯೂ ಸೇರಿದಂತೆ ನಾಲ್ವರು ಅರಣ್ಯ ಜಮೀನು ಒತ್ತುವರಿ ಮಾಡುವುದಕ್ಕೂ ಬೋಸರಾಜು ಅವರು ರಾಜಕೀಯ ಪ್ರಭಾವದ ಮೂಲಕ ನೆರವು ನೀಡಿದ್ದಾರೆ' ಎಂದು ದೂರಿದ್ದಾರೆ.

2022ರಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಅರಣ್ಯ ಸಂರಕ್ಷಣಾ ಕಾಯ್ದೆಯ ಅಡಿಯಲ್ಲಿ ಕೃಷ್ಣವೇಣಿ ಮತ್ತು ಇತರ ಮೂವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು. ಈ ರೀತಿ ಅರಣ್ಯ ಜಮೀನು ಕಬಳಿಸಲು ನೆರವು ನೀಡುವ ಮೂಲಕ ಸಚಿವರು ಅಧಿಕಾರ ದುರುಪಯೋಗ ಹಾಗೂ ಸ್ವಜನಪಕ್ಷಪಾತ ಎಸಗಿದ್ದಾರೆ ಎಂದು ಆರೋಪಿಸಿದ್ದಾರೆ.

ಒಟ್ಟು 16 ಎಕರೆ 21 ಗುಂಟೆ ಅರಣ್ಯ ಜಮೀನು ಒತ್ತುವರಿ ಯಾಗಿದ್ದರೂ ಅದನ್ನು ತೆರವುಗೊಳಿಸಲು ಅರಣ್ಯ ಇಲಾಖೆ ಅಧಿಕಾರಿಗಳು ಪ್ರಯತ್ನಿಸಿಲ್ಲ. ಇದಕ್ಕೆ ರಾಜಕೀಯ ಪ್ರಭಾವವೇ ಕಾರಣ. ಸಚಿವರ ಪ್ರಭಾವಕ್ಕೆ ಮಣಿದು ಅರಣ್ಯ ಇಲಾಖೆ ಅಧಿಕಾರಿಗಳು ಒತ್ತುವರಿ ತೆರವು ಮಾಡುತ್ತಿಲ್ಲ. ತಕ್ಷಣವೇ ಒತ್ತುವರಿ ತೆರವುಗೊಳಿಸಿ, ಜಮೀನನ್ನು ಅರಣ್ಯ ಇಲಾಖೆಯ ವಶಕ್ಕೆ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

ಅಕ್ರಮ ಎಸಗಿಲ್ಲ ಬೋಸರಾಜು

'ನಮ್ಮ ಕುಟುಂಬವು 1987ರಲ್ಲಿ ರಾಯಚೂರಿನಲ್ಲಿ ಜಮೀನು ಖರೀದಿಸಿದೆ. ಎಲ್ಲ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಖರೀದಿ ಮಾಡಲಾಗಿದೆ. ನಾವು ಅರಣ್ಯ ಜಮೀನು ಒತ್ತುವರಿ ಮಾಡಿಲ್ಲ. ಅರಣ್ಯ ಇಲಾಖೆ ದಾಖಲಿಸಿದ್ದ ಪ್ರಕರಣವನ್ನು ಹೈಕೋರ್ಟ್ 2023ರಲ್ಲೇ ರದ್ದುಗೊಳಿಸಿದೆ. ಈಗ ರಾಜಕೀಯಕ್ಕಾಗಿ ಆರೋಪ ಮಾಡಲಾಗಿದೆ' ಎಂದು ಸಚಿವ ಎನ್.ಎಸ್. ಬೋಸರಾಜು ಹೇಳಿದ್ದಾರೆ.

'ನಾನು ಇದೇ ಮೊದಲ ಬಾರಿಗೆ ಸಚಿವನಾಗಿದ್ದೇನೆ. ಮೊದಲ ಬಾರಿ ಶಾಸಕನಾಗಿದ್ದು 1999ರಲ್ಲಿ. 1987 ರಲ್ಲಿ ಪ್ರಭಾವ ಬೀರಲು ಹೇಗೆ ಸಾಧ್ಯ? ಸಚಿವರ ವಿರುದ್ಧ ರಾಜ್ಯಪಾಲರಿಗೆ ದೂರು ನೀಡುವುದು ಹವ್ಯಾಸವಾಗುತ್ತಿದೆ. ನನ್ನ ವಿರುದ್ಧದ ಆರೋಪದಲ್ಲಿ ಹುರುಳಿಲ್ಲ' ಎಂದಿದ್ದಾರೆ.

ಮರಕುಂಬಿಯ ಜಾತಿ ಸಂಘರ್ಷ ಪ್ರಕರಣ 101 ಜನ ವಿರುದ್ಧದ ಆರೋಪ ದೃಢ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಗಂಗಾವತಿ ತಾಲ್ಲೂಕಿನ ಮರಕುಂಬಿಯಲ್ಲಿ ಹತ್ತು ವರ್ಷಗಳ ಹಿಂದೆ ದಲಿತರು ಹಾಗೂ ಸವರ್ಣೀಯರ ನಡುವೆ ನಡೆದ ಜಾತಿ ಸಂಘರ್ಷಕ್ಕೆ ಸಂಬಂಧಿಸಿದಂತೆ 101 ಜನರ ವಿರುದ್ಧದ ಆರೋಪ ಸಾಬೀತಾಗಿದೆ ಎಂದು ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಆದೇಶ ನೀಡಿದೆ.

ಅದರಲ್ಲಿ ಹಲವರ ಮೇಲೆ ಜಾತಿನಿಂದನೆಗೆ ಸಂಬಂಧಿಸಿದ ಆರೋಪಗಳಿವೆ. ಶಿಕ್ಷೆಯ ಪ್ರಮಾಣ ಅ. 24ರಂದು ಪ್ರಕಟ ವಾಗಲಿದೆ. ಒಟ್ಟು 117 ಜನ ಆರೋಪಿಗಳಿದ್ದರು.

ಸಿನಿಮಾ ನೋಡಲು ಹೋಗಿದ್ದಾಗ ಟಿಕೆಟ್ ವಿಚಾರಕ್ಕೆ ಆರಂಭವಾಗಿದ್ದ ಜಗಳ ಸಂಘರ್ಷಕ್ಕೆ ಕಾರಣವಾಗಿತ್ತು. ಗಂಗಾವತಿ ಡಿವೈಎಸ್‌ಪಿ, ಡಿಎಆರ್ ಸಿಬ್ಬಂದಿ ಸೇರಿದಂತೆ ಹೆಚ್ಚಿನ ಪೊಲೀಸ್ ಸಿಬ್ಬಂದಿಗಳ ಬಂದೋಬಸ್ತ್ ನಡುವೆ ಅಪರಾಧಿಗಳನ್ನು ಜೈಲಿಗೆ ಕಳುಹಿಸಲಾಯಿತು.

ಚನ್ನಪಟ್ಟಣ: ಜೆಡಿಎಸ್– ಸಿಪಿವೈ ಕಿತ್ತಾಟ

ಒಂದನೇ ಪುಟದಿಂದ...

'ಕುಟುಂಬಕ್ಕೇ ಮನ್ನಣೆ': ಸೋಮವಾರ ಹುಬ್ಬಳ್ಳಿಗೆ ತೆರಳುವ ಮುನ್ನ ಸುದ್ದಿಗಾರರ ಜೊತೆ ಮಾತನಾಡಿದ ಯೋಗೇಶ್ವರ್, 'ಕುಮಾರಸ್ವಾಮಿ ಅವರು ಚನ್ನಪಟ್ಟಣ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ದಿನದಿಂದಲೂ ಮಗ ನಿಖಿಲ್ ಕುಮಾರಸ್ವಾಮಿ ಅವರನ್ನೇ ಕಣಕ್ಕಿಳಿಸಬೇಕು ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ. ಅದಕ್ಕಾಗಿಯೇ ಪ್ರಯತ್ನ ಮಾಡುತ್ತಿದ್ದಾರೆ. ಅವರ ಮನಸ್ಸಿನಲ್ಲಿ ಆ ಭಾವನೆ ಇರುವಾಗ ನಾನು ಟಿಕೆಟ್ ಕಿತ್ತುಕೊಳ್ಳಲು ಆಗುತ್ತದಾ' ಎಂದು ಪ್ರಶ್ನಿಸಿದರು.

'ನಾನು ಕಾಂಗ್ರೆಸ್‌ನ ಯಾವುದೇ ನಾಯಕರನ್ನೂ ಭೇಟಿ ಮಾಡಿಲ್ಲ. ಕುಮಾರ ಸ್ವಾಮಿ ರಾಜಕೀಯ ಲಾಭಕ್ಕಾಗಿ ಸುಳ್ಳು ಹೇಳುತ್ತಿದ್ದಾರೆ. ಚನ್ನಪಟ್ಟಣದಲ್ಲಿ ಜೆಡಿಎಸ್ ಚಿಹ್ನೆಯಡಿ ಸ್ಪರ್ಧಿಸುವಂತೆ ಅವರು ಖಚಿತವಾಗಿ ಹೇಳಿಲ್ಲ. ಜೆಡಿಎಸ್ ಚಿಹ್ನೆಯಡಿ ಸ್ಪರ್ಧಿಸುವುದು ಬೇಡ ಎಂದು ನಮ್ಮ ತಾಲ್ಲೂಕಿನ ಜನರೂ ಹೇಳುತ್ತಿದ್ದಾರೆ. ಬಿಜೆಪಿಯಿಂದಲೇ ಸ್ಪರ್ಧಿಸಲು ಬಯಸಿದ್ದೇನೆ. ಬೆಂಬಲ ಸಿಗುತ್ತಿಲ್ಲ' ಎಂದರು.

ದೆಹಲಿಯತ್ತ ಬಿಜೆಪಿ ನಾಯಕರು: ಚನ್ನಪಟ್ಟಣ ಕ್ಷೇತ್ರದ ಟಿಕೆಟ್‌ಗಾಗಿ ಜಟಾಪಟಿ ಜೋರಾಗುತ್ತಿದ್ದಂತೆಯೇ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ರಾಜ್ಯ ಘಟಕದ ಕೆಲವು ಪದಾಧಿಕಾರಿಗಳು ದೆಹಲಿಗೆ ತೆರಳಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಕೂಡ ರಾಷ್ಟ್ರ ರಾಜಧಾನಿಗೆ ಹೋಗಿದ್ದಾರೆ.

'ಚನ್ನಪಟ್ಟಣ ಅಭ್ಯರ್ಥಿಯ ಆಯ್ಕೆಯನ್ನು ಕುಮಾರಸ್ವಾಮಿಯವರ ನಿರ್ಧಾರಕ್ಕೆ ಬಿಡಲು ಬಿಜೆಪಿ ವರಿಷ್ಠರು ತೀರ್ಮಾನಿಸಿದ್ದರು. ಆ ಪ್ರಕಾರವೇ ಎರಡು ಕ್ಷೇತ್ರಗಳಿಗೆ ಮಾತ್ರ ಬಿಜೆಪಿ ಅಭ್ಯರ್ಥಿಗಳ ಹೆಸರು ಘೋಷಿಸಲಾಗಿದೆ. ಯೋಗೇಶ್ವರ್ ಅವರನ್ನು ವರಿಷ್ಠರ ಮೂಲಕ ಮನವೊಲಿಸಲು ಪ್ರಯತ್ನಿಸಲಾಗುತ್ತಿದೆ' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001.
ಫೋನ್ ಸಂ. 080–22265383 ವೆಬ್‌ಸೈಟ್: www.kiadb.in
ಇ–ಮೇಲ್: cdoce1@kiadb.in or jdtp@kiadb.in

ಸಂ.ಕ.ಕೈ.ಪ್ರ.ಮಂ./ಜಂ.ನಿ(ನ.ಗ್ರಾ.ಯೋ)/ಕಸಂ.209/286/2024–25 ದಿ: 21–10–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಗೌಡಸಂದ್ರ ಮತ್ತು ದೊಡ್ಡಕುರುಗೋಡು ಗ್ರಾಮಗಳು ಇಲ್ಲಿ ಅಭಿವೃದ್ಧಿಪಡಿಸುತ್ತಿರುವ ಗೌರಿಬಿದನೂರು 3ನೇ ಹಂತ ಕೈಗಾರಿಕಾ ಪ್ರದೇಶದ 825.07ಎಕರೆ ವಿಸ್ತೀರ್ಣಕ್ಕೆ, ದಿ:18–10–2024 ರಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಪರಿಸರ ವಿಮೋಚನಾ (EC) ಪತ್ರವನ್ನು ಪಡೆಯಲಾಗಿರುತ್ತದೆ. ಸದರಿ ಪ್ರತಿಯು (https://parivesh.nic.in) ವೆಬ್‌ಸೈಟ್ ರಲ್ಲಿ ಲಭ್ಯವಿರುತ್ತದೆ.

ಸ್ಥಳ: ಬೆಂಗಳೂರು
ಸಹಿ/–
ಮುಖ್ಯ ಅಭಿಯಂತರರು–1
ವಾ.ಸಾ.ಸಂ.ಇ/ವಾಪ್ರ/2655/ಆಕಾರ್/2024–25

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕಳಸ, ಚಿಕ್ಕಮಗಳೂರು ಜಿಲ್ಲೆ–577124.

ಪ್ರಕಟಣೆ

ಸಂಘವು ಕಚಗಾನೆಯಲ್ಲಿ ನಿರ್ಮಿಸಿರುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಒಳಗೊಂಡ ಗಂಟೆಗೆ 04 ಟನ್/ಗಂಟೆ ಸಾಮರ್ಥ್ಯದ ಕಾಫಿ ಸಂಸ್ಕರಣಾ ಘಟಕವನ್ನು 2024–25ನೇ ಸಾಲಿಗೆ ಲೀಸ್/ರೆಂಟ್ ಆಧಾರದಲ್ಲಿ ನೀಡಲು ಆಡಳಿತ ಮಂಡಳಿಯವರು ತೀರ್ಮಾನಿಸಿರುತ್ತಾರೆ. ಆಸಕ್ತರು ದೂರವಾಣಿ ಸಂಖ್ಯೆ: ಅಧ್ಯಕ್ಷರು: 9448256111, ಮುಖ್ಯ ಕಾರ್ಯನಿರ್ವಹಣಾಧಿಕಾರಿ: 9448939994. ಇ–ಮೇಲ್: pacskalasa@gmail.com ಮೂಲಕ ಸಂಪರ್ಕಿಸಬಹುದು.

ಸಹಿ/– ಮುಖ್ಯಕಾರ್ಯನಿರ್ವಹಣಾಧಿಕಾರಿ,
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕಳಸ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ವಿಭಾಗ, ಕೆ. ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 04 ದಿನಾಂಕ:22.10.2024

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು / ಮಾಡಲು/ ಸೇವೆಗಳನ್ನು ಒದಗಿಸಲುಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ https://kppp.karnataka.gov.in. ಮೂಲಕ (ಪೂರ್ವ ಅರ್ಹತೆ ಮತ್ತು ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ–ಪೋರ್ಟಲ್‌ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ&ವೇಳೆ @17.00ಗಂಟೆ
KSRTC/2024-25/IND0136	ಆಟೋ ಎಲೆಕ್ಟ್ರಿಕಲ್ ಐಟಮ್ಸ್‌ಗಳ ಖರೀದಿ	4.80	19/11/2024
KSRTC/2024-25/IND0137	ಟೈರಾಡ್ ಡ್ರ್ಯಾಗ್ ಲಿಂಕ್ ಮತ್ತು ರಿಪೇರ್ ಕಿಟ್‌ಗಳು	2.17	19/11/2024
KSRTC/2024-25/IND0138	ಡೆನ್ಸಿಫೈಡ್ ವುಡನ್ ಫ್ಲೋರ್ ಬೋರ್ಡ್‌ಗಳ ಖರೀದಿ	1.70	19/11/2024
KSRTC/2024-25/IND0139	ಕಾಟನ್ ವೇಸ್ಟ್‌ಗಳ ಖರೀದಿ	0.60	04/11/2024
KSRTC/2024-25/IND0140	ವ್ಹೀಲ್ ಬೋಲ್ಟ್ಸ್, ನಟ್ಸ್‌ಗಳ ಮತ್ತು ಆಕ್ಸೆಲ್ ಸ್ಟಡ್ಸ್‌ಗಳ ಖರೀದಿ	0.56	04/11/2024
KSRTC/2024-25/IND0141	ಟೈರ್ ಮತ್ತು ಟ್ಯೂಬ್ ಪ್ಯಾಚಸ್‌ಗಳ ಖರೀದಿ	0.50	04/11/2024
KSRTC/2024-25/IND0142	ಪ್ಲೈವುಡ್ ಶೀಟ್ಸ್‌ಗಳ ಖರೀದಿ	0.35	04/11/2024
KSRTC/2024-25/IND0143	ಎಂ.ಎಸ್ ವೆಲ್ಡಿಂಗ್‌ಎಲೆಕ್ಟ್ರೋಡ್ಸ್ & ಸಿ.ಒ 2 ಎಂ.ಐ.ಜಿ ಕಾಯ್ಲ್‌ಗಳ	0.62	04/11/2024
KSRTC/2024-25/IND0144	ಎಫ್.ಐ.ಪಿ ಸ್ಪೇರ್ಸ್‌ಗಳು ಡೆನ್ಸೊ ಪಂಪ್‌ಗಳಿಗೆ ಖರೀದಿ	0.40	04/11/2024
KSRTC/2024-25/IND0145	ಡ್ಯಾಶ್ ಬೋರ್ಡ್ ಇನ್‌ಸ್ಟ್ರುಮೆಂಟ್ಸ್‌ಗಳ ಖರೀದಿ	4.50	19/11/2024
KSRTC/2024-25/IND0146	ಪಿಸ್ಟನ್ ಅಸೆಂಬ್ಲಿ ಮತ್ತು ರಿಂಗ್ ಸೆಟ್ಸ್‌ಗಳ ಖರೀದಿ	4.00	19/11/2024
KSRTC/2024-25/IND0147	ಉಸಿರು ತಪಾಸಣೆ (ಆಲ್ಕೋಹಾಲ್) ಯಂತ್ರಗಳ ಖರೀದಿ	0.25	04/11/2024
KSRTC/2024-25/IND0148	ಟರ್ನ್ ಕೀ ಆಧಾರದ ಮೇಲೆ ಟಿ.ಐ.ಜಿ ವೆಲ್ಡಿಂಗ್ ಯಂತ್ರದ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ	0.05	04/11/2024
KSRTC/2024-25/IND0149	ಸಿಂಥೆಟಿಕ್ ರಬ್ಬರ್ ಅಡೇಸಿವ್ಸ್‌ಗಳ ಖರೀದಿ	0.35	04/11/2024
KSRTC/2024-25/IND0150	ರೆಟ್ರೋ ರಿ ಫ್ಲೆಕ್ಟೀವ್ ಟೇಪ್‌ಗಳ ಖರೀದಿ	1.15	19/11/2024
KSRTC/2024-25/IND0151	ಜಿ.ಹೆಚ್ ಟಿಬೋಲ್ಟ್ ಮತ್ತು ಜಿ.ಹೆಚ್.ಟಿ ಯೂಬೋಲ್ಟ್ ಜೊತೆಗೆ ನೈಲಾಕ್ ನಟ್ಸ್‌ಗಳ ಖರೀದಿ	1.50	19/11/2024
ಅಲ್ಪಾವಧಿ ಟೆಂಡರ್			
KSRTC/2024-25/SE1300	ಕರಾರಸಾ ನಿಗಮದ ವಿವಿಧ ವಿಭಾಗಕ್ಕೆ ತಾಂತ್ರಿಕ ಸಹಾಯಕರನ್ನು ಒದಗಿಸುವ ಏಜೆನ್ಸಿಯನ್ನು ತೊಡಗಿಸುವ ಕುರಿತು	11.76	23/10/2024
KSRTC/2024-25/IND0135	ಆಟೋಮೋಟಿವ್ ಕೇಬಲ್‌ಗಳು ಮತ್ತು ವೈರ್‌ಗಳ ಖರೀದಿ	0.71	04/11/2024
KSRTC/2024-25/IND0152	VOLVO ವಾಹನಗಳಿಗೆ ಡೋರ್ ಅಸೆಂಬ್ಲಿಗಳು (ಪ್ಯಾಸೆಂಜರ್ ಡೋರ್, ಡ್ರೈವರ್ ಡೋರ್, ಲಗೇಜ್ ಡಿಕ್ಕಿ ಡೋರ್, ರೇಡಿಯೇಟರ್ ಡೋರ್	0.48	28/11/2024

ಪೂರ್ವ ಅರ್ಹತೆ ಹೊಂದಿರುವ ಸರಬರಾಜುದಾರರು ಮಾತ್ರ ಭಾಗವಹಿಸಲು ಅರ್ಹರಾಗಿರುತ್ತಾರೆ. ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ:– ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in. ಅಥವಾ ದೂರವಾಣಿ ಸಂಖ್ಯೆ: 080–22230960 / 22234115, ಕರೆಮಾಡಿ Support@eprochelpdesk.com ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತದೆ.

ಸಹಿ/–
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)
ವಾಸಾಸಂಇ/ವಾಪ್ರ/ಜಿಎ/2657/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯಲಹಂಕ ವಿಭಾಗ,
ಬೆಂಗಳೂರು – 560064.

ಸಂಖ್ಯೆ: ಬೃಬೆಂಮಪಾ/ಕಾಅ/ಯಲಹಂಕ.ವಿ/ಇ–ಪ್ರೊ/09/2024–25 ದಿನಾಂಕ: 21.10.2024

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ)

(ದ್ವಿ ಲಕೋಟೆ ಪದ್ಧತಿ) ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ, ಇವರು ಆಯುಕ್ತರು, ಬೃಬೆಂಮಪಾ, ಬೆಂಗಳೂರು ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಸ್ಟಾಂಡರ್ಡ್ ಟೆಂಡರ್ ದಾಖಲಾತಿಗಳ ಕೆಡಬ್ಲ್ಯೂ–04 ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕೆಲಸದ ಹೆಸರು
1	ವಾರ್ಡ್ ಸಂಖ್ಯೆ 04 ರ ಜಿಕೆವಿಕೆ ಸಮುದಾಯ ಭವನದಲ್ಲಿ ಶೌಚಾಲಯ ನಿರ್ಮಾಣ. **ಅಂದಾಜು ಮೊತ್ತ:** ರೂ.10.00 ಲಕ್ಷಗಳು. **ಇಎಂಡಿ:** ರೂ.0.25/– ಲಕ್ಷಗಳು **ವರ್ಗ:** ಇತರರು.
2	ಚೌಡೇಶ್ವರಿ ವಾರ್ಡ್ ಸಂಖ್ಯೆ 02 ರಲ್ಲಿ ಎಆರ್‌ಓ ಮತ್ತು ಎಇಇ ಕಛೇರಿ ಕಟ್ಟಡಗಳ ನಿರ್ವಹಣೆ. **ಅಂದಾಜು ಮೊತ್ತ:** ರೂ.10.00 ಲಕ್ಷಗಳು. **ಇಎಂಡಿ:** ರೂ.0.25/– ಲಕ್ಷಗಳು. **ವರ್ಗ:** ಇತರರು.
3	ವಾರ್ಡ್ ಸಂಖ್ಯೆ 04 ರ ಮಿನಿ ವಿಧಾನ ಸೌಧ 3ನೇ ಮಹಡಿಯಲ್ಲಿ ಬೃಬೆಂಮಪಾ ಕಛೇರಿ ಕಟ್ಟಡದ ನಿರ್ವಹಣೆ. **ಅಂದಾಜು ಮೊತ್ತ:** ರೂ.10.00 ಲಕ್ಷಗಳು. **ಇಎಂಡಿ:** ರೂ.0.125/– ಲಕ್ಷಗಳು **ವರ್ಗ:** ಪರಿಶಿಷ್ಟ ಪಂಗಡ.
4	ಯಲಯಂಕ ಉಪನಗರ ವಾರ್ಡ್ ಸಂಖ್ಯೆ 04 ರಲ್ಲಿ ಎಆರ್‌ಓ ಮತ್ತು ಎಇಇ ಕಛೇರಿ ಕಟ್ಟಡಗಳ ನಿರ್ವಹಣೆ. **ಅಂದಾಜು ಮೊತ್ತ:** ರೂ.10.00 ಲಕ್ಷಗಳು. **ಇಎಂಡಿ:** ರೂ.0.25/– ಲಕ್ಷಗಳು **ವರ್ಗ:** ಇತರರು.
5	ಕೆಂಪೇಗೌಡ ವಾರ್ಡ್ ಸಂಖ್ಯೆ 01 ರ ನಾಗೇನಹಳ್ಳಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಾಲೋನಿಯಲ್ಲಿ ರಸ್ತೆಗಳ ಹಾಗೂ ಒಳಚರಂಡಿಗಳ ಸುಧಾರಣೆ. **ಅಂದಾಜು ಮೊತ್ತ:** ರೂ.100.00 ಲಕ್ಷಗಳು. **ಇಎಂಡಿ:** ರೂ.2.00/– ಲಕ್ಷಗಳು **ವರ್ಗ:** ಇತರರು.
6	ಕೆಂಪೇಗೌಡ ವಾರ್ಡ್ ಸಂಖ್ಯೆ 01 ರ ಕೆಂಚೇನಹಳ್ಳಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಾಲೋನಿಯಲ್ಲಿ ರಸ್ತೆಗಳ ಹಾಗೂ ಒಳಚರಂಡಿಗಳ ಸುಧಾರಣೆ. **ಅಂದಾಜು ಮೊತ್ತ:** ರೂ.100.00 ಲಕ್ಷಗಳು. **ಇಎಂಡಿ:** ರೂ.1.00/– ಲಕ್ಷಗಳು **ವರ್ಗ:** ಪರಿಶಿಷ್ಟ ಜಾತಿ.
7	ಕೆಂಪೇಗೌಡ ವಾರ್ಡ್ ಸಂಖ್ಯೆ 01 ರ ಹಾರೋಹಳ್ಳಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಾಲೋನಿಯಲ್ಲಿ ರಸ್ತೆಗಳ ಹಾಗೂ ಒಳಚರಂಡಿಗಳ ಸುಧಾರಣೆ. **ಅಂದಾಜು ಮೊತ್ತ:** ರೂ.100.00 ಲಕ್ಷಗಳು. **ಇಎಂಡಿ:** ರೂ.2.00/– ಲಕ್ಷಗಳು **ವರ್ಗ:** ಇತರರು.
8	ಕೆಂಪೇಗೌಡ ವಾರ್ಡ್ ಸಂಖ್ಯೆ 01 ರ ಕೆಂಚೇನಹಳ್ಳಿ ಸರ್ಕಾರಿ ಶಾಲೆಯ ಮೊದಲನೇ ಮಹಡಿಯಲ್ಲಿ ಶಾಲಾ ಕೊಠಡಿಗಳ ನಿರ್ಮಾಣ. **ಅಂದಾಜು ಮೊತ್ತ:** ರೂ.50.00 ಲಕ್ಷಗಳು. **ಇಎಂಡಿ:** ರೂ.0.50/– ಲಕ್ಷಗಳು. **ವರ್ಗ:** ಪರಿಶಿಷ್ಟ ಜಾತಿ.
9	ಕೆಂಪೇಗೌಡ ವಾರ್ಡ್ ಸಂಖ್ಯೆ 01 ರ ವೆಂಕಟಾಲ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಕಾಲೋನಿಯಲ್ಲಿ ರಸ್ತೆಗಳ ಹಾಗೂ ಒಳಚರಂಡಿಗಳ ಸುಧಾರಣೆ. **ಅಂದಾಜು ಮೊತ್ತ:** ರೂ.50.00 ಲಕ್ಷಗಳು. **ಇಎಂಡಿ:** ರೂ.1.00/– ಲಕ್ಷಗಳು. **ವರ್ಗ:** ಇತರರು.
10	ಕೆಂಪೇಗೌಡ ವಾರ್ಡ್ ಸಂಖ್ಯೆ 03 ರ ಅನಂತಪುರ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಕಾಲೋನಿಯಲ್ಲಿ ರಸ್ತೆಗಳ ಹಾಗೂ ಒಳಚರಂಡಿಗಳ ಸುಧಾರಣೆ. ಅಂದಾಜು ಮೊತ್ತ: ರೂ.50.00 ಲಕ್ಷಗಳು. ಇಎಂಡಿ: ರೂ.1.00/– ಲಕ್ಷಗಳು. ವರ್ಗ: ಇತರರು.
11	ಕೆಂಪೇಗೌಡ ವಾರ್ಡ್ ಸಂಖ್ಯೆ 01 & 02 ರ ಎಡಿ ಕಾಲೋನಿ ಹಾಗೂ ಎಕೆ ಕಾಲೋನಿಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಪ್ರದೇಶದಲ್ಲಿ ರಸ್ತೆಗಳ ಹಾಗೂ ಒಳಚರಂಡಿಗಳ ಸುಧಾರಣೆ. **ಅಂದಾಜು ಮೊತ್ತ:** ರೂ.50.00 ಲಕ್ಷಗಳು. **ಇಎಂಡಿ:** ರೂ.0.50/– ಲಕ್ಷಗಳು **ವರ್ಗ:** ಪರಿಶಿಷ್ಟ ಜಾತಿ.

ವೇಳಾ ಪಟ್ಟಿ: 1) ಬಿಡ್ ಪೂರ್ವ ಸಭೆ ದಿನಾಂಕ 28–10–2024 ರಂದು 4.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ ಇವರ ಕಛೇರಿಯಲ್ಲಿ. 2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ 04–11–2024 ರಂದು 4.00 ಗಂಟೆಯವರೆಗೆ ಅಥವಾ ಮುಂಚಿತವಾಗಿ ಸಲ್ಲಿಸಬೇಕು. 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 05–11–2024 ರಂದು 4.00 ಗಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ

ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ

ಸಂಖ್ಯೆ: ಮನಪಾಬ/ತಾಶಾ/ಅ.ಟೆ.ಪ್ರ./2024–25 ದಿನಾಂಕ: 21.10.2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ 2022–23 & 2023–24ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ ಮತ್ತು ಮುಕ್ತ & 2018–19ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಯಡಿ ಹಂಚಿಕೆಯಾದ ಎಸ್.ಎಫ್.ಸಿ.ವಿಶೇಷ ಅನುದಾನದಲ್ಲಿ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 30.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. 145.00 ಲಕ್ಷಗಳು ಇರುತ್ತದೆ. ಇಂಡೆಂಟ್ ಸಂಖ್ಯೆ: 1) DMA/2024-25/EL/WORK_INDENT 26595/Call-2, 2) Package No.2: DMA/2023-24/WS/WORK_INDENT 14221/Call-3, 3) DMA/2024-25/WS/WORK_INDENT30915, 4) DMA/2024-25/BD/ WORK_INDENT 27220/Call-2 ಗೆ ಟೆಂಡರ್ ಸಲ್ಲಿಸಲು ದಿನಾಂಕ: 30.10.2024 ರ ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬಹುದು. ಟೆಂಡರ್‌ಗಳ ಪೂರ್ವಭಾವಿ ಸಭೆಯ ದಿನಾಂಕ:23.10.2024 ರಂದು ಬೆಳಿಗ್ಗೆ 11.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:05.11.2024 ರ ಬೆಳಿಗ್ಗೆ 11.00 ಗಂಟೆಗೆ. ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ:08.11.2024 ರ ಬೆಳಿಗ್ಗೆ 11.00 ಗಂಟೆಗೆ ಕಾಮಗಾರಿಯ ಎಲ್ಲಾ ವಿವರಗಳಿಗಾಗಿ, ಟೆಂಡರ್ ಕುರಿತಂತೆ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್:http://kppp.karnataka.gov.in ಅನ್ನು ಮತ್ತು www.ballaricity.mrc.gov.in ಅನ್ನು ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/– ಆಯುಕ್ತರು
ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂನ **ವಿಚಾರಣೆ ಸಂಖ್ಯೆ:** ಬೆವಿಕಂ/2024–25/ವಿದ್ಯುತ್/ಕಾಮಗಾರಿ_ **ಇಂಡೆಂಟ್**225ರಂತೆ ರಾಮನಗರ ವೃತ್ತದ ಮಾಗಡಿ ವಿಭಾಗ ವ್ಯಾಪ್ತಿಯಲ್ಲಿ ಹಾಲಿ ಇರುವ ಫೀಡರ್‌ಗಳ ಮೇಲೆ ಅಧಿಕ ಹೊರೆ ಇರುವುದರಿಂದ, ಹೊರೆಯನ್ನು ಕಡಿತಗೊಳಿಸಲು ಹೊಸ ಮಾರ್ಗ ವಿಸ್ತರಣೆ ಹಾಗೂ ಲಿಂಕ್ ಲೈನ್ ಕಾಮಗಾರಿಗಳನ್ನು ಒಂದು ವರ್ಷದ ಅವಧಿಗೆ ಐಟಂವಾರು ದರ ಗುತ್ತಿಗೆ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಬಿಡ್ ದಾಖಲೆಗಳು ದಿನಾಂಕ: **23.10.2024** ರಿಂದ ಲಭ್ಯವಿರುತ್ತದೆ.
ಬಿಡ್ ಸಲ್ಲಿಸುವ ಕೊನೆಯ ದಿನಾಂಕ **21.11.2024**ರ ಸಂಜೆ **5:15 ಗಂಟೆಗೆ**
ಬಿಡ್ ದಾಖಲೆ ತೆರೆಯುವ ದಿನಾಂಕ **22.11.2024**ರ ಸಂಜೆ **5:30 ಗಂಟೆಗೆ**

ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಪಡೆದುಕೊಳ್ಳಬಹುದು. ಇತರೆ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಹಾಯವಾಣಿ **(+91-8046010000, +91-8068948777)** ಅಥವಾ ಇ–ಮೇಲ್ **support@eprochelpdesk.com** ಸಂಪರ್ಕಿಸಬಹುದು.

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ)
ಖರೀದಿ, ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಬಿ.ಎಂ.ಟಿ.ಸಿ. ಕಾಂಪ್ಲೆಕ್ಸ್, 3ನೇ ಮಹಡಿ, ಕೆಂಗಲ್ ಹನುಮಂತಯ್ಯ ರಸ್ತೆ,
ಶಾಂತಿನಗರ, ಬೆಂಗಳೂರು–560027,
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಟೆಂಡರ್ ಸಂಖ್ಯೆ : BMRCL/2024-25/SE 0013 ದಿನಾಂಕ: 18.10.2024

ಟೆಂಡರ್ ಪ್ರಕಟಣೆ

ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತವು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಟೆಂಡರ್ ಸಂಖ್ಯೆ **BMRCL/2024-25/SE0013** ರನ್ವಯ **"ಬಿಎಂಆರ್‌ಸಿಎಲ್‌ನ ಆವರಣದಲ್ಲಿ ಐಟಿ ಮತ್ತು ಸಿಸಿಟಿವಿ ನೆಟ್‌ವರ್ಕ್ ಭದ್ರತಾ ನಿರ್ವಹಣೆ ಕೇಂದ್ರವನ್ನು (ಎಸ್‌ಓಸಿ) ಸ್ಥಾಪಿಸುವುದು, ಸಮನ್ವಯ ಗೊಳಿಸುವುದು ಮತ್ತು ಕಾರ್ಯಾರಂಭಗೊಳಿಸುವುದು ಹಾಗೂ ಕಾರ್ಯಾರಂಭ ಪೂರ್ಣಗೊಂಡ ನಂತರ 03 ವರ್ಷಗಳ ಅವಧಿಗೆ ಎಸ್‌ಓಸಿಯ ಕಾರ್ಯಾಚರಣೆ ಮತ್ತು ನಿರ್ವಹಣೆಗೆ"** ಟೆಂಡರ್ ಅನ್ನು ಆಹ್ವಾನಿಸಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ನಿಂದ ದಿನಾಂಕ : **18.10.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **26.11.2024, 15.30 ಗಂಟೆ**. ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಭೇಟಿನೀಡಿ.

ಸಹಿ/–ಪ್ರಧಾನ ವ್ಯವಸ್ಥಾಪಕರು (ಐಟಿ)

ಕ್ಷೇಮ ಕುಶಲ

ಏನು ಮಾಡಬೇಕು?

ಅತಿಯಾದ ಭಾರವಿರುವ ವಸ್ತುಗಳನ್ನು ಎತ್ತಬಾರದು, ಅತಿಯಾದ ಕೆಮ್ಮು ಇರದಂತೆ ನೋಡಿಕೊಳ್ಳಬೇಕು, ಬೀಡಿ ಮತ್ತು ಸಿಗರೇಟಿನಿಂದ ದೂರವಿರಬೇಕು. ಮಲಬದ್ಧತೆ ಆಗದಂತೆ ಆಹಾರ ಕ್ರಮದಲ್ಲಿ ಎಚ್ಚರಿಕೆ ವಹಿಸಬೇಕು, ಮೂತ್ರ ವಿಸರ್ಜನೆ ಮಾಡುವಾಗ ತಿಣುಕುವಂಥ ಸ್ಥಿತಿ ಬಂದರೆ ಸೂಕ್ತ ವೈದ್ಯಕೀಯ ಸಲಹೆ ಪಡೆಯಬೇಕು. ಇದರಿಂದ ಹರ್ನಿಯಾ ಶಸ್ತ್ರಚಿಕಿತ್ಸೆಯ ನಂತರ ಮರುಕಳಿಸುವ ಸಾಧ್ಯತೆಯನ್ನು ತಪ್ಪಿಸಬಹುದು.

ಹರ್ನಿಯಾ ಲಕ್ಷಣಗಳು ಕಂಡುಬಂದ ಕೂಡಲೇ ಶಸ್ತ್ರಚಿಕಿತ್ಸಾ ತಜ್ಞರನ್ನು ಭೇಟಿ ಮಾಡಿ ಸೂಕ್ತ ಸಲಹೆಗಳನ್ನು ಪಡೆಯಬೇಕು. ಯಾವ ತೊಂದರೆಯೂ ಇಲ್ಲದಿದ್ದಾಗ ಸಾಧ್ಯವಾದಷ್ಟು ಹೊತ್ತು ಹರ್ನಿಯಾವನ್ನು ಯಥಾಸ್ಥಿತಿಯಲ್ಲಿ ಕಾಪಾಡಿಕೊಳ್ಳಬೇಕು. ಪ್ರಯತ್ನಪೂರ್ವಕವಾಗಿ ಕರುಳನ್ನು ಒಳಕ್ಕೆ ತಳ್ಳುವ ಪ್ರಯತ್ನ ಮಾಡಬಾರದು. ಕರುಳು ಒಳಕ್ಕೆ ಹೋಗದೇ ಇರುವ ಸ್ಥಿತಿ ತಲುಪಿದರೆ ಅಥವಾ ವಿಪರೀತ ನೋವು ಕಾಣಿಸಿಕೊಂಡರೆ ಕೂಡಲೇ ವೈದ್ಯರನ್ನು ಕಾಣಬೇಕು. ಇಂಥ ಸಂದರ್ಭದಲ್ಲಿ ತುರ್ತು ಶಸ್ತ್ರಚಿಕಿತ್ಸೆ ಮಾತ್ರ ಜೀವ ಉಳಿಸಬಲ್ಲದು. ಇಂಥ ಸಂದಿಗ್ಧತೆಗೆ ಅವಕಾಶ ಕೊಡದೇ ಉಬ್ಬು ಕಾಣಿಸಿಕೊಂಡ ಕೂಡಲೇ ವೈದ್ಯರ ಸಲಹೆ ಪಡೆಯುವುದು ಜಾಣತನ.

ಹರ್ನಿಯಾ ಶಸ್ತ್ರಚಿಕಿತ್ಸೆಯೇ ಪರಿಹಾರ

ಡಾ.ಜಯಪ್ರಭು ಉತ್ತೂರ

ಕನ್ನಡದಲ್ಲಿ 'ಉಸುರು ಬುರುಡೆ' ಅಥವಾ 'ಬೂರು' ಎಂದು ಕರೆಯಲಾಗುವ ರೋಗವನ್ನೇ ಇಂಗ್ಲಿಷನಲ್ಲಿ 'ಹರ್ನಿಯಾ' ಎಂದು ಕರೆಯಲಾಗುತ್ತದೆ. ಹೀಗಾಗಿ, ಹರ್ನಿಯಾ ಎಂಬ ಪದವೇ ಬಹು ಪ್ರಚಲಿತವಾಗಿದೆ. ದೇಹದ ಉದರ (ಹೊಟ್ಟೆ) ಭಾಗದಲ್ಲಿ ಅನೇಕ ಬಲಹೀನ ಜಾಗ ಅಥವಾ ರಂಧ್ರಗಳಿವೆ. ಇವುಗಳ ಮುಖಾಂತರ ಹೊಟ್ಟೆಯೊಳಗಿನ ಕರುಳು ಅಥವಾ ಮುಸುಕು ಪೊರೆ (ಓಮೆಂಟಮ್) ತೂರಿಕೊಂಡು ಚರ್ಮದಡಿಯಲ್ಲಿ ಬಲೂನಿನಂತೆ ಹೊಟ್ಟೆಯೊಳಗೆ ಸರಿದುಕೊಂಡು ಮಾಯವಾಗಿ ಬಿಡುವ ಸ್ಥಿತಿಗೆ 'ಹರ್ನಿಯಾ' ಎಂದು ಕರೆಯಲಾಗುತ್ತದೆ.

ಹರ್ನಿಯಾ ಎಲ್ಲಿ ಉಂಟಾಗುತ್ತದೆ?

ಮನುಷ್ಯನ ದೇಹ ಅನುಭವಿಸುವ ಹರ್ನಿಯಾಗಳಲ್ಲಿ ಬಹುತೇಕವಾದವುಗಳು ಗೆಜ್ಜೆಕಟ್ಟು ಮತ್ತು ಹೊಕ್ಕಳು ಭಾಗದಲ್ಲಿ ಉಂಟಾಗುತ್ತವೆ. ಗೆಜ್ಜೆಕಟ್ಟು ನಾಳದ ಮುಖಾಂತರ ಆಗುವ ಹರ್ನಿಯಾ ಬಹು ಸಾಮಾನ್ಯ ಶಸ್ತ್ರಚಿಕಿತ್ಸೆಯ ನಂತರ ಹೊಲಿಗೆಯ ಜಾಗದಲ್ಲಿ ಬರುವ ಉಬ್ಬಿಗೂ ಹರ್ನಿಯಾ (ಇನ್ಸಿಜನಲ್) ಎಂದೇ ಕರೆಯಲಾಗುತ್ತದೆ.

ಏಕೆ ಮತ್ತು ಹೇಗೆ ಆಗುತ್ತದೆ?

ಹರ್ನಿಯಾ ಉಂಟಾಗಲು ಅನೇಕ ಕಾರಣಗಳನ್ನು ನಿಡಬಹುದಾದರೂ ಕೆಲವರಲ್ಲಿ ಕಾರಣ ಗೊತ್ತೇ ಆಗುವುದಿಲ್ಲ. ಉದರದ ಸ್ನಾಯುಗಳಲ್ಲಿ ಜನ್ಮಗತವಾಗಿ ಬಂದ ಶಕ್ತಿಯ ಕೊರತೆಯಿಂದಾಗಿ ಹರ್ನಿಯಾ ಆಗುವ ಸಾಧ್ಯತೆ ಹೆಚ್ಚು. ಅತಿಯಾದ ಕೆಮ್ಮು, ಮಲಬದ್ಧತೆ, ಪೌಷ್ಟಿಕತೆ ಕೊರತೆ, ಅತಿಯಾದ ಭಾರವನ್ನು ಎತ್ತುವ ಉದ್ಯೋಗ, ಬೊಜ್ಜು, ಮುಂತಾದ ಸ್ಥಿತಿಗಳು ಬಲಹೀನ ಜಾಗಗಳನ್ನು ಮತ್ತಷ್ಟು ದುರ್ಬಲಗೊಳಿಸಿ ಕರುಳನ್ನು ಹೊರಚಾಚುವಂತೆ ಮಾಡಿ ಹರ್ನಿಯಾವನ್ನು ಉಂಟು ಮಾಡುತ್ತವೆ. ಸಣ್ಣದಾಗಿ ಪ್ರಾರಂಭವಾದ ಹರ್ನಿಯಾ ಕಾಲಕ್ರಮೇಣ ದೊಡ್ಡದಾಗುತ್ತ ಹೋಗುತ್ತದೆ. ಹರ್ನಿಯಾ ಉಂಟಾಗಲು ವಯಸ್ಸಿನ ಮಿತಿ ಇಲ್ಲ. ಸ್ನಾಯುಗಳಲ್ಲಿ ಶಕ್ತಿ ಕೊರತೆಯೊಂದಿಗೆ ಕೆಮ್ಮಿದಾಗ, ಎದ್ದು ನಿಂತಾಗ ಅಥವಾ ತಿಣುಕಿದಾಗ ಹೊಟ್ಟೆಯಲ್ಲಿನ ಕರುಳು ಹರ್ನಿಯಾ ಚೀಲದೊಳಕ್ಕೆ ನುಸುಳಿಕೊಂಡು ಗಂಟಿನಂತೆ ತೋರುತ್ತದೆ.

ಗಂಟಿನಲ್ಲಿ ಏನಿರುತ್ತದೆ?

ಸಾಮಾನ್ಯವಾಗಿ ಸಣ್ಣ ಕರುಳು ಹಾಗೂ ದೊಡ್ಡ ಕರಳು, ಕರುಳಿನ ಮುಸುಕು ಪೊರೆ (ಓಮೆಂಟಮ್) ಇರುತ್ತವೆ ಕೆಲವೊಮ್ಮೆ ದೊಡ್ಡ ಕರಳು ಅಥವಾ ಮೂತ್ರಚೀಲವು ಜರಿದು ಹರ್ನಿಯಾ ಗಂಟಿನಲ್ಲಿ ಕಾಣಿಸಿಕೊಳ್ಳಬಹುದು. ಗೆಜ್ಜೆಕಟ್ಟಿನ (ಇಂಗ್ವೇನಲ್) ಹರ್ನಿಯಾ ಜೊತೆಗೆ ವೀರ್ಯನಾಳ ರಕ್ತನಾಳ ಮತ್ತು ನರಗಳು ಇರುತ್ತವೆ ಜನ್ಮದಾಯಿತ್ವಕ್ಕೆ ಕಾರಣವಾದ ವೀರ್ಯನಾಳ ಇಲ್ಲಿ ಬಹುಮುಖ್ಯ ಭಾಗವಾಗಿದೆ.

ಲಕ್ಷಣಗಳೇನು?

ಹರ್ನಿಯಾ ಸಾಮಾನ್ಯವಾಗಿ ಹೊಟ್ಟೆಯ ಹೊಕ್ಕಳಿನ ಸೂತ್ತ ಮತ್ತು ಗೆಜ್ಜೆಕಟ್ಟಿನಲ್ಲಿ ಗಂಟಿನಂತೆ ಕಂಡುಬರುವುದು ಅಥವಾ ಉಬ್ಬಿರುವಂತೆ ಕಂಡುಬರುವುದು ಪ್ರಮುಖ ಲಕ್ಷಣ ಕೆಮ್ಮಿನಿಂದ ಉಬ್ಬು ಹೆಚ್ಚಾಗುವುದು, ಮಲಗಿದರೆ ಅಥವಾ ಒತ್ತಿದರೆ ಮಾಯವಾಗುವ ಗಂಟು ಒಂದು ರೀತಿಯ ಸೆಳೆತವನ್ನು ಉಂಟು ಮಾಡಬಹುದು. ಆದರೆ, ಇದು ಅತಿಯಾದ ನೋವನ್ನುಂಟು ಮಾಡುವುದಿಲ್ಲ.

ತೊಂದರೆಯೇನು?

ಕೆಲವು ರೀತಿಯ ಹರ್ನಿಯಾಗಳಿಂದ ಯಾವ ರೀತಿಯ ತೊಂದರೆಯೂ ಆಗದೇ ಇರಬಹುದು. ಆದರೂ ಕೂಡ ಯಾವುದೇ ರೀತಿಯಾ ಹರ್ನಿಯಾವನ್ನು ನಿರ್ಲಕ್ಷಿಸುವಂತಿಲ್ಲ. ಕರುಳು ಹರ್ನಿಯಾ ಚೀಲದಲ್ಲಿ ಜಾರಿಕೊಂಡಾಗ ತೂತಿನ ಹತ್ತಿರ ನೇಣು ಬಿಗಿದಂತಾಗಿ ಮರಳಿ ಒಳಹೊಗದಂತಾಗಿ, ಬಾವು ಉಂಟಾಗಿ ಹಿಸುಕಿದಂತಾದ ಕರುಳಿಗೆ ರಕ್ತ ಸಂಚಾರವಿಲ್ಲದಾಗಿ ಕರಳು ಕೊಳೆತು (ಗ್ಯಾಂಗ್ರಿನ್) ಆಗುವ ಸಂಭವ ಇರುತ್ತದೆ. ಇದೊಂದು ತುರ್ತು ಪರಿಸ್ಥಿತಿಯಾಗಿದ್ದು, ನಿರ್ಲಕ್ಷಿಸಿದರೆ ಪ್ರಾಣಕ್ಕೆ ಗಂಡಾಂತರ ಒದಗುವ ಸಾಧ್ಯತೆ ಇದೆ.

ಚಿಕಿತ್ಸೆ ಏನು?

ಯಾವುದೇ ರೀತಿಯ ಔಷಧೋಪಚಾರ ಹರ್ನಿಯಾವನ್ನು ಕಡಿಮೆ ಮಾಡುವುದಿಲ್ಲ. ಶಸ್ತ್ರಚಿಕಿತ್ಸೆಯೊಂದೇ ಲಭ್ಯವಿರುವ ಸೂಕ್ತ ಪರಿಹಾರವಾಗಿದೆ. ಅನೇಕ ದಶಕಗಳ ಹಿಂದೆ ತೆರೆದ ಚಿಕಿತ್ಸೆ (ಓಪನ್ ಸರ್ಜರಿ) ಮಾತ್ರ ಲಭ್ಯವಿದ್ದ ವಿಧಾನವಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಅನೇಕ ರೀತಿಯ ಹರ್ನಿಯಾಗಳನ್ನು 'ಲ್ಯಾಪರೋಸ್ಕೋಪಿ' (ಕೀಹೋಲ್ ಸರ್ಜರಿ) ವಿಧಾನದ ಮೂಲಕ ಯಶಸ್ವಿಯಾಗಿ ನಿರ್ವಹಿಸಬಹುದಾಗಿದೆ. ಈ ವಿಧಾನ ಕನಿಷ್ಠ ಹಾನಿಯನ್ನು ಉಂಟುಮಾಡುವ ಶಸ್ತ್ರಚಿಕಿತ್ಸೆ ಆಗಿದ್ದು, ಶಸ್ತ್ರಚಿಕಿತ್ಸೆ ನಂತರದಲ್ಲಿ ವೇಗವಾದ ಚೇತರಿಕೆ ಕಂಡುಬರುತ್ತದೆ. ಕಡಿಮೆ ನೋವು ಹಾಗೂ ಹರ್ನಿಯಾ ಮರುಕಳಿಸುವ ಕನಿಷ್ಠ ಪ್ರಮಾಣ 'ಲ್ಯಾಪರೋಸ್ಕೋಪಿ' ವಿಧಾನದ ಪ್ರಮುಖ ಲಾಭಗಳು. ❖

ನಿದ್ರೆ ಬಾರದಿರೆ ಏನಂತೀರಿ?

ನಿದ್ರಾಹೀನತೆಯ ಲಕ್ಷಣಗಳು...

- ನಿದ್ರೆಗೆ ಜಾರಲು ತೊಂದರೆ ಅನುಭವಿಸುವುದು
- ನಿದ್ರೆಯಿಂದ ಪದೇ ಪದೇ ಎಚ್ಚರವಾಗುವುದು
- ಬೆಳಗಿನ ಜಾವ ಬೇಗ ಎಚ್ಚರವಾಗುವುದು
- ಬೆಳಿಗ್ಗೆ ಎದ್ದ ನಂತರ ಉತ್ಸಾಹ ಇಲ್ಲದಿರುವುದು
- ಕೆಲಸದಲ್ಲಿ ಗಮನ ಕಡಿಮೆಯಾಗುವುದು
- ಹಗಲಿನಲ್ಲಿ ತೂಕಡಿಕೆ ಬರುವುದು

ಡಾ. ಸುಜ್ಞಾನಿ ದೇವಿ ಪಾಟೀಲ್

ಮಾನವನು ಆರೋಗ್ಯವಾಗಿರಲು ನಿದ್ರೆ ಮುಖ್ಯ ಪಾತ್ರ ವಹಿಸುತ್ತದೆ. ನಿದ್ರೆಯಿಂದ ಶರೀರದ ಅಂಗಾಂಗಗಳಿಗೆ ವಿಶ್ರಾಂತಿ ಮತ್ತು ಹೊಸ ಚೈತನ್ಯ ದೊರಕುತ್ತದೆ. ನಿದ್ರಾಹೀನತೆಯ ಸಮಸ್ಯೆ ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ನಿದ್ರೆ ಕಡಿಮೆಯಾದರೆ ಕೆಲಸದ ಮೇಲೆ ಗಮನವಿಡಲು ಸಾಧ್ಯವಾಗುವುದಿಲ್ಲ. ಜ್ಞಾಪಕಶಕ್ತಿ ಕಡಿಮೆಯಾಗುತ್ತದೆ. ಆಯಾಸವಾಗುತ್ತದೆ. ದೈಹಿಕ ಕೆಲಸದಲ್ಲಿ ಸಾಮರ್ಥ್ಯ ಕಡಿಮೆಯಾಗುತ್ತದೆ. ಪ್ರತಿ ವಯಸ್ಕರ ವ್ಯಕ್ತಿಗೆ ದಿನಕ್ಕೆ 6ರಿಂದ 8 ಗಂಟೆಗಳ ಸುಖನಿದ್ರೆ ಅವಶ್ಯಕತೆ ಇದೆ.

ನಿದ್ರಾಹೀನತೆಗೆ ಹಲವು ದೈಹಿಕ ಮತ್ತು ಮಾನಸಿಕ ತೊಂದರೆಗಳು ಕಾರಣ. ಖಿನ್ನತೆ, ಆತಂಕ, ದೈಹಿಕ ಕಾಯಿಲೆಗಳಾದ ಶ್ವಾಸಕೋಶದ ತೊಂದರೆ, ನರರೋಗಗಳು, 'ಸ್ಲೀಪ್ ಅಪ್ನೀಯ' ಮತ್ತು ದೈಹಿಕ ನೋವು ಸೇರಿದೆ.

ಸುಖ ನಿದ್ರೆಗೆ ಏನು ಮಾಡಬೇಕು?

- ರಾತ್ರಿ ವೇಳೆ ಮಲಗಿಕೊಳ್ಳಲು ಮತ್ತು ಬೆಳಿಗ್ಗೆ ಏದ್ದೇಳುವ ನಿರ್ದಿಷ್ಟ ಅವಧಿಯನ್ನು ನಿಗದಿಪಡಿಸಿಕೊಳ್ಳಬೇಕು.
- ಮಲಗಿಕೊಳ್ಳುವ ಅರ್ಧಗಂಟೆಗೂ ಮೊದಲು ನಮ್ಮ ಕೆಲಸಗಳನ್ನು ಮುಗಿಸಿಕೊಳ್ಳಬೇಕು. ಉದಾಹರಣೆಗೆ ಹೊಟ್ಟೆ ತುಂಬ ಊಟ ಮಾಡುವುದು, ಟಿ.ವಿ, ಮೊಬೈಲ್ ನೋಡುವುದು, ಅಧಿಕ ದೈಹಿಕ ವ್ಯಾಯಾಮ ಮಾಡಬಾರದು.
- ಸಂಜೆಯ ನಂತರ ಕಾಫಿ, ಟೀ, ಸೋಡಾ, ಧೂಮಪಾನ, ಮದ್ಯಪಾನ ಮಾಡಬಾರದು. ಇವೆಲ್ಲ ನಿದ್ರೆಗೆ ಅಡ್ಡಿಪಡಿಸುತ್ತವೆ.
- ಮಲಗುವ ಕೊಠಡಿ ಸ್ವಚ್ಛವಾಗಿರಬೇಕು. ಕತ್ತಲೆ ಮತ್ತು ಶಬ್ದ ಕಡಿಮೆ ಇರುವ ಜಾಗವನ್ನು ಆಯ್ಕೆ ಮಾಡಿಕೊಳ್ಳಬೇಕು. ರಾತ್ರಿ ವೇಳೆ ಒಂದು ಲೋಟ ಹಾಲನ್ನು ಕುಡಿಯುವುದು, ಉಗುರು ಬೆಚ್ಚನೆಯ ನೀರಿನಿಂದ ಸ್ನಾನ ಮಾಡುವುದು, ಲಘು ವಾಯುವಿಹಾರ ಮತ್ತು ಸಂಗೀತ ಕೇಳುವುದು ಸುಖನಿದ್ರೆಗೆ ಉಪಯುಕ್ತ.

- ನಿದ್ರೆ ಬಾರದೇ ಇದ್ದಾಗ ಗಡಿಯಾರ ನೋಡುವುದು, ಮೊಬೈಲ್ ಬಳಸುವುದು, ಸಮಸ್ಯೆಗಳ ಬಗ್ಗೆ ಚಿಂತಿಸುವುದು ಮಾಡಬಾರದು.
- ನಿದ್ರೆ ಬರದಿದ್ದ ಪಕ್ಷದಲ್ಲಿ ಹಾಸಿಗೆ ಮೇಲೆ ಹೊರಳಾಡಬೇಡಿ. ಹಾಸಿಗೆ ಪಕ್ಕ ಕುಳಿತುಕೊಂಡು ನಿಮಗಿಷ್ಟವಾದ ಪುಸ್ತಕ ಓದಿ, ಸಂಗೀತ ಕೇಳಿ, ನಿದ್ರೆ ಬರುವ ವೇಳೆ ಹಾಸಿಗೆಗೆ ಹೋಗಬೇಕು.
- ಖಿನ್ನತೆ, ಆತಂಕ ಮತ್ತು ದೈಹಿಕ ನೋವುಗಳಿಂದ ಬಳಲುತ್ತಿದ್ದರೆ ನಿದ್ರೆಗೆ ಸಮಸ್ಯೆ ಉಂಟಾಗುತ್ತದೆ. ಆಗ ವೈದ್ಯರನ್ನು ಸಂಪರ್ಕಿಸುವುದು ಸೂಕ್ತ.
- ವೈದ್ಯರ ಸಲಹೆ ಇಲ್ಲದೆ ನಿದ್ರೆ ಗುಳಿಗೆಗಳನ್ನು ಸೇವಿಸಬಾರದು
- ಆದಷ್ಟು ನಿತ್ಯ ಒಂದೇ ಸ್ಥಳದಲ್ಲಿ ಮಲಗುವುದನ್ನು ರೂಢಿಸಿಕೊಳ್ಳಬೇಕು
- ಸಡಿಲವಾದ, ಹಗುರವಾದ, ವಾತಾವರಣಕ್ಕೆ ಅನುಕೂಲವಾಗುವ ಉಡುಪುಗಳನ್ನು ಧರಿಸಬೇಕು
- ನಿದ್ರೆಯಿಂದ ಬಳಲುತ್ತಿರುವವರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಬಾರದು
- ಈ ಮೇಲಿನ ಸಲಹೆಗಳನ್ನು ಪಾಲಿಸಿದರೂ ಕೂಡ ನಿದ್ರೆ ಬರದಿದ್ದಾಗ ತಜ್ಞ ವೈದ್ಯರನ್ನು ಕಾಣಬೇಕು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಅಧ್ಯಾಯ–6 ತ್ರಿಭುಜ

ಅಭ್ಯಾಸ–6.3

14) ΔABC ಯು ಬಾಹುಗಳಾದ AB ಮತ್ತು AC ಗಳು ಹಾಗೂ ಮಧ್ಯರೇಖೆ AD ಯು ಕ್ರಮವಾಗಿ ΔPQRನ ಬಾಹುಗಳಾದ PQ ಮತ್ತು PR ಹಾಗೂ ಮಧ್ಯರೇಖೆ PM ನೊಂದಿಗೆ ಸಮಾನುಪಾತ ಹೊಂದಿದ್ದರೆ $\Delta ABC \sim \Delta PQR$ ಎಂದು ಸಾಧಿಸಿ



ಪರಿಹಾರ:– ΔABCಯು ಬಾಹುಗಳಾದ AB ಮತ್ತು AC ಗಳು ಹಾಗೂ ಮಧ್ಯರೇಖೆ AD ಯು ಕ್ರಮವಾಗಿ ΔPQR ನ ಬಾಹುಗಳಾದ PQ ಮತ್ತು PR ಹಾಗೂ ಮಧ್ಯರೇಖೆ PM ನೊಂದಿಗೆ ಸಮಾನುಪಾತದಲ್ಲಿದೆ (ದತ್ತ)

$$\frac{AB}{PQ} = \frac{AC}{PR} = \frac{AD}{PM}$$

$\Delta ABC \sim \Delta PQR$

ರಚನೆ:- AD ಯನ್ನು E ತನಕ ವಿಸ್ತರಿಸಿ ಮತ್ತು CE ಜೋಡಿಸಿ ಇದರಿಂದಾಗಿ AD = DE ಆಗುವುದು ಅದೇ ರೀತಿ PM ಯನ್ನು N ತನಕ ವಿಸ್ತರಿಸಿ ಮತ್ತು RN. ಜೋಡಿಸಿ ಇದರಿಂದಾಗಿ PM = MN ಆಗುವುದು



ΔABD ಮತ್ತು ΔCDE ದಲ್ಲಿ

AD = DE (ರಚನೆ)

BD = DC

$\angle ADB = \angle CDE$

$\therefore \Delta ABD \cong \Delta CDE$ [SAS criterion of congruence]

$\Rightarrow AB = CE$ [By CPCT] ....(i)

ಹಾಗೆಯೇ

, ΔPQM ಮತ್ತು ΔMNRದಲ್ಲಿ

PM = MN [ರಚನೆ.]

QM = MR

$\angle PMQ = \angle NMR$

$\therefore \Delta PQM = \Delta MNR$ [SAS criterion of congruence]

$\Rightarrow PQ = RN$ [CPCT] ....(ii)

ಈಗ

$$\frac{AB}{PQ} = \frac{AC}{PR} = \frac{AD}{PM}$$

ಸಮೀಕರಣ (i) ಮತ್ತು (ii) ರಿಂದ

$$\frac{CE}{RN} = \frac{AC}{PR} = \frac{AD}{PM}$$

$$\frac{CE}{RN} = \frac{AC}{PR} = \frac{2AD}{2PM}$$

$$\frac{CE}{RN} = \frac{AC}{PR} = \frac{AE}{PN} \text{[Since 2AD = AE and 2PM = PN]}$$

$\therefore \Delta ACE \sim \Delta PRN$ [SSS similarity criterion]

ಆದುದರಿಂದ, $\angle 2 = \angle 4$

ಹಾಗೆಯೇ, $\angle 1 = \angle 3$

$\therefore \angle 1 + \angle 2 = \angle 3 + \angle 4$

$\Rightarrow \angle A = \angle P$ ....(iii)

ಈಗ ΔABC ಮತ್ತು ΔPQR ದಲ್ಲಿ

$$\frac{AB}{PQ} = \frac{AC}{PR} \text{(Already given)}$$

ಸಮೀಕರಣ (iii) ರಿಂದ

$\angle A = \angle P$

$\therefore \Delta ABC \sim \Delta PQR$ [SAS similarity criterion]

15) 6m ಎತ್ತರದ ನೇರವಾದ ಕಂಬವು ನೆಲದ ಮೇಲೆ 4m ಉದ್ದದ ನೆರಳನ್ನು ಉಂಟುಮಾಡುತ್ತದೆ. ಅದೇ ಸಮಯದಲ್ಲಿ ಒಂದು ಕಟ್ಟಡವು 28 ಮೀಟರ್ ಉದ್ದದ ನೆರಳನ್ನು ಉಂಟುಮಾಡುತ್ತದೆ ಹಾಗಾದರೆ ಆ ಕಟ್ಟಡದ ಎತ್ತರವೇನು?

ಪರಿಹಾರ:– ನೇರವಾದ ಕಂಬದ ಎತ್ತರ= 6ಮೀಟರ್

ನೇರವಾದ ಕಂಬದ ನೆರಳು= 4 ಮೀಟರ್

ಒಂದು ಕಟ್ಟಡದ ನೆರಳಿನ ಎತ್ತರ= 28 ಮೀಟರ್ ಮತ್ತು



ΔABC ಮತ್ತು ΔDEFದಲ್ಲಿ

$\angle C = \angle E$ (angular elevation of sum)

$\angle B = \angle F = 90°$

$\therefore \Delta ABC \sim \Delta DEF$ (AA similarity criterion)

$$\frac{AB}{DF} = \frac{BC}{EF}$$

$$\therefore \frac{6}{h} = \frac{4}{28}$$

$$\Rightarrow h = \frac{6x28}{4}$$

$\Rightarrow h = 6 \times 7$

$\Rightarrow h = 42$ m

ಕಟ್ಟಡ ಎತ್ತರ= 42 ಮೀಟರ್

ಹೆಚ್ಚಿನ ಸಮಸ್ಯೆಗಳು

1) $\Delta ABC \sim \Delta DEF$ ಮತ್ತು ಅವುಗಳ ವಿಸ್ತೀರ್ಣಗಳು ಕ್ರಮವಾಗಿ $64 cm^2$ ಮತ್ತು $121 \ cm^2$ ಗಳಾಗಿದ್ದು EF = 15.4cm ಆದರೆ BC ಯನ್ನು ಕಂಡುಹಿಡಿಯಿರಿ

ಪರಿಹಾರ:– $\Delta ABC \sim \Delta DEF$ ದತ್ತ

ΔABC ವಿಸ್ತೀರ್ಣ $= 64 \ cm^2$

ΔDEF ವಿಸ್ತೀರ್ಣ $= 121 \ cm^2$

EF = 15.4 cm

$$\therefore \frac{Area \ of \ \Delta ABC}{Area \ of \ \Delta DEF} = \frac{AB^2}{DE^2}$$

$$\frac{AC^2}{DF^2} = \frac{BC^2}{EF^2}$$

$$\frac{64}{121} = \frac{BC^2}{EF^2}$$

$$\frac{AC^2}{DF^2} = \frac{BC^2}{EF^2}$$

$$\frac{64}{121} = \frac{BC^2}{EF^2}$$

$$\left(\frac{8}{11}\right)^2 = \left(\frac{BC}{15.4}\right)^2$$

$$\frac{8}{11} = \frac{BC}{15.4}$$

$\Rightarrow BC = 8 \times 15.4/11$

$\Rightarrow BC = 8 \times 1.4$

$\Rightarrow BC = 11.2$ cm

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC: PHYSICS

CURRENT ELECTRICITY

21. Why is voltmeter less accurate in measuring the p.d than a potentiometer?

Ans:- The voltmeter draws some current from the circuit, so the main current in the circuit decreases. Consequently, the potential difference measured by the voltmeter is less than the actual value. On the other hand, potentiometer reads the exact potential difference as it draws no current from the circuit.

22. We prefer potentiometer to compare the e.m.fs of cells than the voltmeter. Why?

Ans:- E.M.F. of a cell is equal to the potential difference across the terminals of the cell when no current is drawn from the cell. Since potentiometer draws no current from the cell, hence it can measure the e.m.f of the cell accurately.

23. Two students X and Y perform an experiment on potentiometer separately using the circuit diagram as shown.



Keeping other things changed i) X increases the value of resistance R.

ii) Y decreases the value of resistances S in the set up.How would these changes affect the position of null point in each case and why?

Ans:- i) When R increases, the current in the potentiometer wire AB decreases. Hence, the null point will shift towards point B.

ii) When S decreases, the current drawn from the cell will increase. Hence, the null point will shift towards point A.

24. A potentiometer wire AB is connected to driver cell of e.m.f. 'E' as shown in figure. Explain with reason, whether the circuit works, if the driver cell is replaced with a cell whose e.m.f 'e' of the cell connected in the galvanometer circuit.



Ans:- The circuit will not work if E < e because in that case balance point is never obtained anywhere on the wire of the potentiometer.

25. Why is Leclanche cell preferred as the driving cell in potentiometer?

Ans:- In potentiometer experiment, we require a steady current for a short interval of time. Since Leclanche cell supplies the steady current for a short interval of time, it is preferred.

26. How is potential gradient accounted for?

Ans:- Fall of potential per unit length of a potentiometer wire is known as potential gradient.

27. What is the value of main current in the shown network? (use Kirchhoff's laws if required)



Ans:- Clearly in the shown equivalent circuit, all resistors are by-passed by conducting wire so total resistance of the circuit will be negligible.

$R_{eq.} = 0\Omega$



$$\therefore \text{Current, } I = \frac{V}{R_{eq}} = \frac{2}{0} = \infty$$

28. Connections between resistors in a wheatstone bridge are made of thick steel strips. What do you think about the results?

Ans:- Thick steel strips have appreciable resistance hence when used to connect resistors of wheat stone bridge will affect the measurement.

29. What do you understand by a potential divider circuit? Explain it with the help of an example.

Ans:- Rheostat is basically a variable resistor which can be used as a potential divider.

A rheostat is a wire wound resistor with a sliding contact as shown in Figure (A).



(A)



(Contd.)

ಮಳೆಗೆ ಕೊಚ್ಚಿಹೋದ ಸೇತುವೆ

ಬೆಳೆ, ಮನೆ, ರಸ್ತೆ, ವಿದ್ಯುತ್ ಕಂಬಗಳಿಗೆ ಹಾನಿ • ದೇವಾಲಯಕ್ಕೆ ನೀರು

ಪ್ರಜಾವಾಣಿ ವಾರ್ತೆ

ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದಿಂದ ಸೋಮವಾರ ಹೆಚ್ಚುವರಿ ನೀರು ಹೊರ ಬಿಟ್ಟ ಪರಿಣಾಮ ಹಳೆ ಸೇತುವೆ ಭಾಗಶಃ ಮುಳುಗಡೆಯಾಗಿ, ಹೊಸ ಸೇತುವೆ ನೀರಿನಲ್ಲಿ ಕೊಚ್ಚಿ ಹೋಗಿದೆ – ಪ್ರಜಾವಾಣಿ ಚಿತ್ರ

ಮೈಸೂರು / ಚಿಕ್ಕಮಗಳೂರು: ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಹಾಗೂ ಹಾಸನ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧೆಡೆ ಭಾನುವಾರ ರಾತ್ರಿ ಹಾಗೂ ಸೋಮವಾರ ಬಿರುಗಾಳಿ, ಗುಡುಗು–ಸಿಡಿಲು ಸಹಿತ ಮಳೆಯಾಗಿದ್ದು, ಹಲವು ಬೆಳೆ ನಾಶವಾಗಿವೆ. ಮನೆಗಳೂ ಹಾಗೂ ವಿದ್ಯುತ್ ಕಂಬಗಳು ಬಿದ್ದಿವೆ. ಕೆಲ ಸೇತುವೆಗಳು ಕೊಚ್ಚಿಹೋಗಿದ್ದರೆ, ಹಲವು ಮುಳುಗಡೆಯಾಗಿವೆ.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಸಂತೇಬಾಚಹಳ್ಳಿಯಲ್ಲಿ ಅಘಲಯ ಕೆರೆ ತುಂಬಿ ಹರಿದಿದ್ದರಿಂದ ಹಳ್ಳ ಒಡೆದು ನೂರಾರು ಎಕರೆ ಕೃಷಿ ಭೂಮಿ ಜಲಾವೃತವಾಗಿದೆ. ಶ್ರವಣಬೆಳಗೊಳ, ಮೇಲುಕೋಟೆ ಸೇರಿದಂತೆ ವಿವಿಧ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ 47ಕ್ಕೆ ಹಾನಿಯಾಗಿದೆ.

ಮಳವಳ್ಳಿ ಪಟ್ಟಣದ ಹೊರಕೋಟೆಯಲ್ಲಿ ಹಾಗೂ ತಾಲ್ಲೂಕಿನ ಪೂರಿಗಾಲಿಯಲ್ಲಿ ಮನೆಗಳಿಗೆ ಹಾನಿಯಾಗಿದೆ. ಹೊರವಲಯದ ನಿಡಘಟ್ಟ ರಸ್ತೆ ಶನೇಶ್ವರ ಸ್ವಾಮಿ ದೇವಸ್ಥಾನಕ್ಕೆ ನೀರು ನುಗ್ಗಿದೆ. ಕಿಕ್ಕೇರಿ ಹೋಬಳಿಯ ಮಾದಿಹಳ್ಳಿ ಸೇತುವೆ ಮುಳುಗಡೆಯಾಗಿ ಬೇರೆಡೆಗೆ ತೆರಳಲು ಗ್ರಾಮಸ್ಥರು ಪರದಾಡಿದರು.

ಒಳಹರಿವು ಹೆಚ್ಚಳವಾಗಿದ್ದರಿಂದ ಹಾಸನ ಜಿಲ್ಲೆಯ ಯಗಚಿ ಜಲಾಶಯದಿಂದ 1ಸಾವಿರ ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗಿದೆ. ಹಿರೀಸಾವೆ ಹೋಬಳಿಯಲ್ಲಿ ಬಾಳಗಂಚಿ ಕೆರೆ ತುಂಬಿ ಕೋಡಿ ಹರಿದಿದ್ದು, ವಿದ್ಯುತ್ ಕಂಬಗಳು ಬಿದ್ದಿವೆ. ಹಳೇಬೀಡು ಹೋಬಳಿಯ ಕೊಂಡ್ಲಿ ಗೊಲ್ಲರಟ್ಟಿಯ ಜೋಗಿಹಳ್ಳಿಯಲ್ಲಿ ತಮ್ಮಣ್ಣಗೌಡ ಅವರ ಒಂದು ಎಕರೆ ಬೀನ್ಸ್ ಬೆಳೆ ಹಾಳಾಗಿದೆ.

ಚಾಮರಾಜನಗರ ತಾಲ್ಲೂಕಿನ ಹಲವೆಡೆ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ. ವೆಂಕಟಯ್ಯನ ಛತ್ರ ಹಾಗೂ ವಿ.ಸಿ ಹೊಸೂರಿನಲ್ಲಿ 50 ಎಕರೆಯಷ್ಟು ಬಾಳೆ, 10 ಎಕರೆಗೂ ಹೆಚ್ಚು ಮುಸುಕಿನ ಜೋಳ ಹಾಳಾಗಿದೆ. ಮಡಿಕೇರಿಯಲ್ಲಿ ಬಿರುಸಿನ ಮಳೆ ಸುರಿದಿದೆ.

ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದ ಕೆಲವು ಮಳಿಗೆಗಳಿಗೆ ಹಾನಿಯಾಗಿದೆ. ತಂತಿ ತುಂಡಾಗಿದ್ದರಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ, ವಸ್ತುಪ್ರದರ್ಶನವನ್ನು ಸ್ಥಗಿತಗೊಳಿಸಿ ನೆರೆದಿದ್ದ ಜನರನ್ನು ಹೊರ ಕಳುಹಿಸಲಾಯಿತು.

ತುಮಕೂರು ವರದಿ: ಕೊಡಿಗೇನಹಳ್ಳಿ ಹೋಬಳಿಯಲ್ಲಿನ ದೊಡ್ಡಮಾಲೂರು ಕೆರೆ ಸೋಮವಾರ ಕೋಡಿ ಬಿದ್ದಿದೆ. ಹುಳಿಯಾರು ಹೋಬಳಿ ಚಿಕ್ಕ ಬಿದರೆ ಗ್ರಾಮದ ಕೆರೆ ಸತತ ಮಳೆಗೆ ಭಾನುವಾರದಿಂದ ಕೋಡಿ ಹರಿಯುತ್ತಿದೆ.

ರಾಮನಗರ ಜಿಲ್ಲೆ ಮಾಗಡಿ ಬಳಿ ಅರ್ಕಾವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಮಂಚನಬೆಲೆ ಜಲಾಶಯಕ್ಕೆ ಸುರಿದ ಮಳೆಯಿಂದಾಗಿ ಅಪಾರ ಪ್ರಮಾಣದ ನೀರು ಹರಿದು ಬಂದಿದೆ. ಜಲಾಶಯದಿಂದ ಸೋಮವಾರ 2.50 ಸಾವಿರ ಕ್ಯುಸೆಕ್ ಹೆಚ್ಚುವರಿ ನೀರು ಹೊರಕ್ಕೆ ಬಿಡಲಾಗಿದೆ. ಇದರಿಂದ ಜಲಾಶಯದ ಬಳಿ ₹30ಲಕ್ಷ ವೆಚ್ಚದಲ್ಲಿ ತಾತ್ಕಾಲಿಕವಾಗಿ ನಿರ್ಮಾಣ ಮಾಡಿದ್ದ ಸೇತುವೆ ಕೊಚ್ಚಿ ಹೋಗಿದೆ. ಅದರ ಸಮೀಪದಲ್ಲಿಯೇ ಇದ್ದ ಹಳೆಯ ಸೇತುವೆ ಕೂಡ ಭಾಗಶಃ ಮುಳುಗಡೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್ ಗಿರಿ ಭಾಗದಲ್ಲಿ ಮಳೆ ಅಬ್ಬರಿಸಿತು. ಬೀದರ್ ನಗರ ನಗರ ಸೇರಿದಂತೆ ಜಿಲ್ಲೆಯ ಹುಲಸೂರ ಹಾಗೂ ಔರಾದ್ ತಾಲ್ಲೂಕಿನಲ್ಲೂ ಒಂದು ಗಂಟೆಗೂ ಹೆಚ್ಚು ಕಾಲ ಮಳೆಯಾಗಿದೆ. ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನ ಶಿಗ್ಲಿ, ಒಡೆಯರಮಲ್ಲಾಪುರ ಭಾಗದಲ್ಲಿ ಜೋರು ಮಳೆ ಸುರಿದು ಹಳ್ಳ ಭರ್ತಿಯಾಗಿ ನೀರು ರಸ್ತೆ ಮೇಲೆ ಹರಿಯಿತು.

‘ನಿರಂತರ ಮಳೆಗೆ ಸವಣೂರು ತಾಲ್ಲೂಕಿನಲ್ಲಿ ವಿವಿಧ ಗ್ರಾಮಗಳಲ್ಲಿ ಅಪಾರ ಪ್ರಮಾಣದ ಬೆಳೆ ನಷ್ಟವಾಗಿದೆ. ಮನೆಗಳು ಸಂಪೂರ್ಣ ಜಲಾವೃತಗೊಂಡಿದ್ದು ಬರದೂರ ಸೇರಿದಂತೆ ಕೆಲ ಗ್ರಾಮಗಳಲ್ಲಿ ಸರ್ಕಾರಿ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆದು ಸಾರ್ವಜನಿಕರಿಗೆ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ’ ಎಂದು ಸವಣೂರು ತಹಶೀಲ್ದಾರ್ ಭರತರಾಜ್ ಕೆ.ಎನ್. ತಿಳಿಸಿದ್ದಾರೆ.

ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಒಂದು ದಿನದಲ್ಲಿ ವಾಡಿಕೆಗಿಂತಲೂ ಹೆಚ್ಚಿನ ಮಳೆ ಬಿದ್ದಿದ್ದು, ಹಲವು ಕಡೆ ಮನೆ, ಬೆಳೆಗಳಿಗೆ ಹಾನಿಯಾಗಿದೆ.

ಚಿಕ್ಕಮಗಳೂರು ಪ್ರವಾಸ ಸದ್ಯ ಬೇಡ–ಡಿ. ಸಿ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ಒಂದು ವಾರ ಪ್ರವಾಸಕ್ಕೆ ಬರದಂತೆ ಪ್ರವಾಸಿಗರಲ್ಲಿ ಜಿಲ್ಲಾಧಿಕಾರಿ ಮನವಿ ಮಾಡಿದ್ದಾರೆ.

ಅತಿಯಾದ ಮಳೆಯಿಂದ ಗುಡ್ಡ ಕುಸಿತ ಉಂಟಾಗುವ ಸಂಭವ ಇರುವುದರಿಂದ ಒಂದು ವಾರ ಪ್ರವಾಸ ಮುಂದೂಡಬೇಕು. ಹೋಂಸ್ಟೆ, ರೆಸಾರ್ಟ್, ಅರಣ್ಯ ಇಲಾಖೆ ವತಿಯಿಂದ ಕೈಗೊಳ್ಳುವ ಚಾರಣವನ್ನು ಒಂದು ವಾರ ಸ್ಥಗಿತಗೊಳಿಸಬೇಕು ಎಂದು ತಿಳಿಸಿದ್ದಾರೆ.

14 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದಲ್ಲಿ ಇನ್ನೂ ನಾಲ್ಕು ದಿನ ಮಳೆ ಮುಂದುವರಿಯಲಿದ್ದು, ಹವಾಮಾನ ಇಲಾಖೆಯು 14 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಬಳ್ಳಾರಿ, ವಿಜಯನಗರ, ದಾವಣಗೆರೆ, ಶಿವಮೊಗ್ಗ, ಉತ್ತರ ಕನ್ನಡ, ಉಡುಪಿ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಭಾರಿ ಮಳೆ: 50 ಮನೆಗಳಿಗೆ ಹಾನಿ

ದಾವಣಗೆರೆ ಜಿಲ್ಲೆಯಲ್ಲಿ ಹಳ್ಳಗಳು ತುಂಬಿ ಹರಿದು, ಕೆರೆಗಳು ಕೋಡಿಬಿದ್ದಿವೆ. ಮೆಕ್ಕೆಜೋಳ, ಅಡಿಕೆ ಸೇರಿ ಹಲವು ಬೆಳೆಗಳು ಜಲಾವೃತವಾಗಿವೆ. 50ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ.

ಚನ್ನಗಿರಿ ತಾಲ್ಲೂಕಿನ ಕೆಂಗಾಪುರ ಹಾಗೂ ಕಬ್ಬಳದ ನಡುವಿನ ಸೇತುವೆ ನೀರಿನಲ್ಲಿ ಮುಳುಗಿದೆ. ದಾವಣಗೆರೆಯೊಂದಿಗೆ ಸಂಪರ್ಕ ಕಲ್ಪಿಸುವ ಈ ಮಾರ್ಗದ ಅನೇಕ ಗ್ರಾಮಗಳ ಸಂಪರ್ಕ ಕಡಿತಗೊಂಡಿತ್ತು. ಹೊನ್ನಾಳಿ ತಾಲ್ಲೂಕಿನ ಸಾಸ್ವೆಹಳ್ಳಿಯಲ್ಲಿ ಹಳ್ಳವೊಂದು ಉಕ್ಕಿಹರಿದು ಗ್ರಾಮದೊಳಗೆ ನೀರು ನುಗ್ಗಿ ಹತ್ತಾರು ಮನೆಗಳು ಜಲಾವೃತಗೊಂಡಿವೆ. ತುಂಗಭದ್ರಾ ನದಿಯಲ್ಲಿ ಅಪಾರ ಪ್ರಮಾಣದ ನೀರು ಹರಿಯುತ್ತಿದ್ದು, ಉಕ್ಕಡಗಾತ್ರಿಯ ಸ್ನಾನಘಟ್ಟ, ಅಂಗಡಿಗಳು ಮುಳುಗಡೆಯಾಗಿವೆ.

‘ನಿಗದಿಗಿಂತ 12.22 ಲಕ್ಷ ಹೆಚ್ಚುವರಿ ಕಾರ್ಡ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚುವರಿಯಾಗಿ 12.22 ಲಕ್ಷ ಬಿಪಿಎಲ್ ಪಡಿತರ ಚೀಟಿಗಳನ್ನು ರಾಜ್ಯದಲ್ಲಿ ಹಂಚಿಕೆ ಮಾಡಲಾಗಿದೆ. ಈ ಪಡಿತರ ಚೀಟಿಗಳ 33.40 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳಿಗೆ ನವೆಂಬರ್‌ನಿಂದ ರಾಜ್ಯ ಸರ್ಕಾರವೇ ಅಕ್ಕಿ ಖರೀದಿಸಿ ವಿತರಿಸಲಿದೆ.

ಇಲಾಖೆಯ ಪ್ರಗತಿ ಪರಿಶೀಲನೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ‘ಕೇಂದ್ರ ಸರ್ಕಾರ 10.68 ಲಕ್ಷ ಅಂತ್ಯೋದಯ ಮತ್ತು 1.02 ಕೋಟಿ ಬಿಪಿಎಲ್ ಕಾರ್ಡ್ ಸೇರಿ 1.13 ಕೋಟಿಗೂ ಹೆಚ್ಚು ಪಡಿತರಚೀಟಿಗಳ ಒಟ್ಟು 4.01 ಕೋಟಿ ಫಲಾನುಭವಿಗಳಿಗೆ ಮಾತ್ರ ಅನ್ನಭಾಗ್ಯ ಯೋಜನೆಯಡಿ ಪ್ರತಿ ತಿಂಗಳು ತಲಾ 5 ಕೆ.ಜಿ ಅಕ್ಕಿ ಉಚಿತವಾಗಿ ನೀಡುತ್ತಿದೆ’ ಎಂದರು.

‘ಹೆಚ್ಚುವರಿ ಕಾರ್ಡ್‌ಗಳಿಗೆ ಅಗತ್ಯವಾದ 20 ಸಾವಿರ ಟನ್ ಅಕ್ಕಿಯನ್ನು ಕೇಂದ್ರ ಸರ್ಕಾರದ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ (ಒಎಂಎಸ್‌ಎಸ್) ಕೆ.ಜಿಗೆ ₹ 28 ದರದಲ್ಲಿ ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಮೂಲಕ ಖರೀದಿಸಿ ನವೆಂಬರ್ ತಿಂಗಳಿನಿಂದ ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ’ ಎಂದರು.

ಡಿಬಿಟಿ ಮುಂದುವರಿಕೆ: ‘ಅನ್ನಭಾಗ್ಯ’ ಯೋಜನೆಯಲ್ಲಿ ಹೆಚ್ಚುವರಿ 5 ಕೆಜಿ ಅಕ್ಕಿ ಬದಲಿಗೆ ಫಲಾನುಭವಿಗಳ ಖಾತೆಗೆ ಜುಲೈ 2023ರಿಂದ ಇದೇ ಜುಲೈವರೆಗೆ ₹ 8,433.11 ಕೋಟಿಯನ್ನು ಡಿಬಿಟಿ ಮೂಲಕ ವರ್ಗಾವಣೆ ಮಾಡಲಾಗಿದೆ. ಸೆಪ್ಟೆಂಬರ್ ತಿಂಗಳ ಹಣವನ್ನು ಈ ತಿಂಗಳ ಅಂತ್ಯದೊಳಗೆ ಜಮೆ ಮಾಡಲಾಗುವುದು’ ಎಂದು ತಿಳಿಸಿದರು.

ಆಹಾರ ಇಲಾಖೆ ಕಾರ್ಯದರ್ಶಿ ಟಿ.ಎಂ.ಎಚ್. ಕುಮಾರ್, ಆಯುಕ್ತರಾದ ವಾಸಿರೆಡ್ಡಿ ಜೋತ್ಸ್ನಾ, ವ್ಯವಸ್ಥಾಪಕ ನಿರ್ದೇಶಕ ಚಂದ್ರಕಾಂತ್, ಕಾನೂನು ಮಾಪನಶಾಸ್ತ್ರ ಇಲಾಖೆ ನಿಯಂತ್ರಕಿ ಅನಿತಾ ಲಕ್ಷ್ಮೀ ಇದ್ದರು.

ಐ.ಟಿ ಪಾವತಿಸುವ 1.02 ಲಕ್ಷ ಕುಟುಂಬ ಬಿಪಿಎಲ್!

‘ಆದಾಯ ತೆರಿಗೆ ಪಾವತಿಸುವ 98,458 ಕುಟುಂಬಗಳು, 4,036 ಸರ್ಕಾರಿ ನೌಕರರು ಬಿಪಿಎಲ್ ಕಾರ್ಡ್ ಹೊಂದಿರುವುದು ಪತ್ತೆಯಾಗಿದೆ. ನಿಯಮ ಉಲ್ಲಂಘಿಸಿರುವ ಕಾರ್ಡ್‌ದಾರರಿಗೆ ದಂಡ ವಿಧಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಸಚಿವ ಮುನಿಯಪ್ಪ ಹೇಳಿದರು.

ಕೆ.ಎಚ್. ಮುನಿಯಪ್ಪ

‘ಆರು ತಿಂಗಳಿನಿಂದ ಪಡಿತರ ಪಡೆಯದ 2.75 ಲಕ್ಷ ಪಡಿತರ ಚೀಟಿ, ಆದಾಯ ಮಿತಿ ಹೆಚ್ಚು ಇರುವ 10,09,479 ಕುಟುಂಬಗಳೂ ಸೇರಿದಂತೆ ಒಟ್ಟು 13,87,639 ಕಾರ್ಡ್‌ಗಳು ಅನರ್ಹವೆಂದು ಗುರುತಿಸಲಾಗಿದೆ. ಈ ಪೈಕಿ 3.63 ಲಕ್ಷಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ. 10.38 ಲಕ್ಷಕ್ಕೂ ಅಧಿಕ ಕಾರ್ಡ್‌ಗಳು ರದ್ದುಪಡಿಸಲು ಬಾಕಿ ಇವೆ. ಹೀಗೆ ಒಟ್ಟು 18.70 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಬಿಪಿಎಲ್‌ನಿಂದ ಹೊರ ಹೋಗಲಿದ್ದಾರೆ ಎಂದರು.

‘ಸಶಕ್ತ ಭಾಷಾ ನೀತಿ’ಗೆ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಸಹ ಭಾಷೆಗಳ ಸಂರಕ್ಷಣೆಗಾಗಿ ರಾಜ್ಯ ಸರ್ಕಾರ ಇದೇ ಮೊದಲ ಬಾರಿಗೆ ‘ಕರ್ನಾಟಕಕ್ಕೊಂದು ಸಶಕ್ತ ಭಾಷಾ ನೀತಿ’ಯನ್ನು ರೂಪಿಸಲು ತಜ್ಞರ ಸಮಿತಿ ರಚಿಸಿದೆ.

ತುಳು, ಕೊರಗ, ಕೊಡವ, ಬಡಗ, ಸಿದ್ದಿ, ಕುರುಬ, ವರ್ಲಿ, ಚೆಂಚು, ಇರುಳ, ಗೌಳಿ, ಯರವ, ಸೋಲಿಗ, ಉರ್ದು, ಬ್ಯಾರಿ ಸಣ್ಣ ಭಾಷೆಗಳ ಸಂರಕ್ಷಣೆ ಇದರ ಗುರಿ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತನ್ನ ಆದೇಶದಲ್ಲಿ ಹೇಳಿದೆ.

ಉತ್ತಮ ತೀರ್ಮಾನ: ಕರ್ನಾಟಕ ದಲ್ಲಿ 230 ಭಾಷೆಗಳಿದ್ದು, ಸರ್ಕಾರದ ಈ ತೀರ್ಮಾನವು ಕನ್ನಡ ಭಾಷೆಯನ್ನು ಇನ್ನಷ್ಟು ಸಮಗ್ರ ಮತ್ತು ಸಶಕ್ತಗೊಳಿಸಲಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟಿದ್ದಾರೆ.

ಕನ್ನಡದ ಸಹ ಭಾಷೆಗಳೊಂದಿಗೆ ಹಲವು ಸ್ವತಂತ್ರ ಭಾಷೆಗಳೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸಿವೆ. ತುಳು, ಕೊಡವ, ಹವ್ಯಕ, ಅರೆಭಾಷೆ, ಉರ್ದು ಮೊದಲಾದ ಭಾಷೆಗಳ ಸಂಯೋಜನೆಯ ಮೂಲಕ ಬಳಸಿ ಕನ್ನಡದಲ್ಲಿ ಬರೆದವರೂ ಇದ್ದಾರೆ. ಕರ್ನಾಟಕದ ದಲಿತರ ಭಾಷೆಯು ವೈವಿಧ್ಯವೂ ಶ್ರೀಮಂತವೂ ಆಗಿದೆ.

ಕರ್ನಾಟಕವು ಭಾಷಾ ದೃಷ್ಟಿಯಿಂದ ಸಮೃದ್ಧವಾಗಿದ್ದರೂ ಯುನೆಸ್ಕೊ ಹೇಳಿರುವಂತೆ ಇಲ್ಲಿನ ಸಂಸ್ಕೃತಿಯ ಭಾಗವಾದ 72 ಭಾಷೆಗಳು ಅಳಿವಿನಂಚಿನಲ್ಲಿವೆ. ಇಂತಹ ಸಂದರ್ಭದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡದ ಸಮೃದ್ಧಿಗಾಗಿ ಸಹಕರಿಸಿದ ಭಾಷೆಗಳನ್ನು ಉಳಿಸುವ ಮೂಲಕ ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಯೋಜನೆಯನ್ನು ರೂಪಿಸಿದೆ. ಇದಕ್ಕೆ ಪೂರಕವೆಂಬಂತೆ, ಕನ್ನಡವನ್ನು ಬೆಳೆಸಿದ ಇತರ ಸಣ್ಣ ಭಾಷೆಗಳನ್ನು ಸಂರಕ್ಷಿಸಿಕೊಳ್ಳಲು ದೇಶಕ್ಕೆ ಮಾದರಿಯಾಗಲಿರುವ ಭಾಷಾ ನೀತಿಯನ್ನು ರಚಿಸಿದೆ ಎಂದೂ ಬಿಳಿಮಲೆ ಹೇಳಿದ್ದಾರೆ.

ಸಮಿತಿಯಲ್ಲಿ ಯಾರು: ಪ್ರಧಾನ ಸಂಪಾದಕ: ಪುರುಷೋತ್ತಮ ಬಿಳಿಮಲೆ, ಗೌರವ ಸಂಪಾದಕ: ಜಿ.ಎನ್. ದೇವಿ, ಸದಸ್ಯರು: ಇಂದಿರಾ ಹೆಗ್ಡೆ, ಸಬಿತಾ ಕೊರಗ, ಕಾಳೇಗೌಡ ನಾಗವಾರ, ಬಸವರಾಜ ಕೋಡಗುಂಟಿ, ಸಣ್ಣೀರಪ್ಪ ದೊಡ್ಡಮನಿ, ಅಬ್ದುಲ್ ಬಶೀರ್, ವಿ.ಪಿ. ನಿರಂಜನಾರಾಧ್ಯ, ಸಂತೋಷ ಹಾನಗಲ್ಲ.

ಪರಿಷತ್ ಉಪ ಚುನಾವಣೆ: ಶೇ 97.91ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ಮಂಗಳೂರು / ಉಡುಪಿ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ವಿಧಾನ ಪರಿಷತ್ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಉಪ ಚುನಾವಣೆಯಲ್ಲಿ ಶೇ 97.91ರಷ್ಟು ಮತದಾನವಾಗಿದೆ.

ಸೋಮವಾರ ನಡೆದ ಮತದಾನದಲ್ಲಿ 6,032 ಮತದಾರರ ಪೈಕಿ 5,906 ಮಂದಿ ಹಕ್ಕನ್ನು ಚಲಾಯಿಸಿದರು.

ಪಶ್ಚಿಮ ಘಟ್ಟ ಸಂರಕ್ಷಣೆಗಾಗಿ ಕಸ್ತೂರಿರಂಗನ್ ವರದಿಯ ಶಿಫಾರಸು ಜಾರಿ ವಿರೋಧಿಸಿ ಉಡುಪಿ ಜಿಲ್ಲೆಯ ಏಳು ಗ್ರಾಮ ಪಂಚಾಯಿತಿಗಳು ಮತದಾನ ಬಹಿಷ್ಕರಿಸುವುದಾಗಿ ಘೋಷಿಸಿದ್ದವು. ಈ ಪೈಕಿ ಬೈಂದೂರು ತಾಲ್ಲೂಕಿನ ಜಟ್ಕಲ್‌ನಲ್ಲಿ ಎಲ್ಲ 18 ಸದಸ್ಯರು ಮತದಾನ ಬಹಿಷ್ಕರಿಸಿದರು. ಉಳಿದ ಗ್ರಾಮಗಳಾದ ಯಡಮೊಗೆ, ಚಿತ್ತೂರು, ಯಡೂರು– ಕುಂಞಾಡಿ, ಆಲೂರು ಹಾಗೂ ಕೆರಾಡಿ ಗ್ರಾಮಗಳ ಕೆಲ ಗ್ರಾಮ ಪಂಚಾಯಿತಿ ಸದಸ್ಯರು ಮತ ಚಲಾಯಿಸಲಿಲ್ಲ.

ಈ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಕೋಟ ಶ್ರೀನಿವಾಸ ಪೂಜಾರಿ ಅವರು ಉಡುಪಿ–ಚಿಕ್ಕಮಗಳೂರು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರಿಂದ ರಾಜೀನಾಮೆ ನೀಡಿದ್ದರು. ಈ ಉಪ ಚುನಾವಣೆಯಲ್ಲಿ ಬಿಜೆಪಿಯ ಕಿಶೋರ್ ಬಿ.ಆರ್., ಕಾಂಗ್ರೆಸ್‌ನ ರಾಜು ಪೂಜಾರಿ ಸೇರಿ ನಾಲ್ವರು ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಫಲಿತಾಂಶ ಪ್ರಕಟಿಸದಂತೆ ನ್ಯಾಯಪೀಠ ನಿರ್ದೇಶನ

ಬೋರ್ಡ್ ಪರೀಕ್ಷೆ: ಸರ್ಕಾರಕ್ಕೆ ‘ಸುಪ್ರೀಂ’ ತಪರಾಕಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ 8, 9 ಮತ್ತು 10ನೇ ತರಗತಿಗಳಿಗೆ ಅರ್ಧ ವಾರ್ಷಿಕ ಮೌಲ್ಯಾಂಕನ (ಬೋರ್ಡ್) ಪರೀಕ್ಷೆಗಳನ್ನು ನಡೆಸಿದ ಕರ್ನಾಟಕ ಸರ್ಕಾರವನ್ನು ಸುಪ್ರೀಂ ಕೋರ್ಟ್ ಸೋಮವಾರ ತರಾಟೆಗೆ ತೆಗೆದುಕೊಂಡಿದೆ. ಮುಂದಿನ ಆದೇಶದವರೆಗೆ ಬೋರ್ಡ್ ನಡೆಸದಂತೆ ಅಥವಾ ಈಗಾಗಲೇ ನಡೆದಿರುವ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸದಂತೆ ನಿರ್ಬಂಧ ವಿಧಿಸಿದೆ.

ಕರ್ನಾಟಕ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳ ಒಕ್ಕೂಟ ಸಲ್ಲಿಸಿದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಸತೀಶ್ ಚಂದ್ರ ಶರ್ಮಾ ಪೀಠವು, ‘ವಿದ್ಯಾರ್ಥಿಗಳ ಕತ್ತು ಹಿಸುಕುವ ಕೆಲಸ ಮಾಡಬೇಡಿ’ ಎಂದು ಕಟುವಾಗಿ ಹೇಳಿತು. ಸರ್ಕಾರದ ನಿರ್ಧಾರ ಸಮರ್ಥಿಸಿದ ಹಿರಿಯ ವಕೀಲ ದೇವದತ್ ಕಾಮತ್ ನೇತೃತ್ವದ ರಾಜ್ಯದ ವಕೀಲರ ತಂಡವನ್ನು ತರಾಟೆಗೆ ತೆಗೆದುಕೊಂಡಿತು.

‘ರಾಜ್ಯದ ಏಳು ಗ್ರಾಮಾಂತರ ಜಿಲ್ಲೆಗಳಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 5, 8, 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ಸುತ್ತೋಲೆಯನ್ನು ರಾಜ್ಯ ಸರ್ಕಾರ ಹಿಂಪಡೆದಿದೆ’ ಎಂದು ಕಾಮತ್ ಅವರು ನ್ಯಾಯಪೀಠಕ್ಕೆ ತಿಳಿಸಿದರು. 24 ಜಿಲ್ಲೆಗಳಲ್ಲಿ ಸದ್ದಿಲ್ಲದೆ ಪರೀಕ್ಷೆಗಳನ್ನು ನಡೆಸಲಾಗಿದೆ. ಇದರ ಸುತ್ತೋಲೆ ಹಿಂಪಡೆಯುವ ಬಗ್ಗೆ ಸರ್ಕಾರ ಚಕಾರ ಎತ್ತಿಲ್ಲ. ಫಲಿತಾಂಶಕ್ಕೆ ತಡೆ ನೀಡಬೇಕು’ ಎಂದು ಅರ್ಜಿದಾರರ ಪರ ವಕೀಲ ಕೆ.ವಿ. ಧನಂಜಯ ಕೋರಿದರು.

ಪರೀಕ್ಷೆಯ ನಿಖರವಾದ ವಿವರಗಳನ್ನು ನೀಡುವ ಪ್ರಮಾಣಪತ್ರವನ್ನು ನಾಲ್ಕು ವಾರಗಳಲ್ಲಿ ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಪೀಠ ಸೂಚಿಸಿತು.

> ವಿದ್ಯಾರ್ಥಿಗಳಿಗೆ ಏಕೆ ಕಿರುಕುಳ ನೀಡುತ್ತಿದ್ದೀರಿ. ಪರೀಕ್ಷೆ ನಡೆಸಲು ಸರ್ಕಾರ ಒತ್ತಾಯಿಸುತ್ತಿರುವುದೇಕೆ? ಬೇರೆ ಯಾವ ರಾಜ್ಯದಲ್ಲೂ ಇಂತಹ ಧೋರಣೆ ಇಲ್ಲ. ಕರ್ನಾಟಕದಲ್ಲಿ ಮಾತ್ರ ಇದೆ. ರಾಜ್ಯದ ಮೇಲಿರುವ ಒತ್ತಡ ಏನು?
>
> **ಬೇಲಾ ಎಂ. ತ್ರಿವೇದಿ,** ನ್ಯಾಯಮೂರ್ತಿ

> ನನ್ನ ರಾಜ್ಯದಲ್ಲಿ ಇಂತಹ ಅರ್ಧವಾರ್ಷಿಕ ಮೌಲ್ಯಾಂಕನ ಪರೀಕ್ಷೆ ಇಲ್ಲ. ಇದು ನಡೆಯಲು ಸಾಧ್ಯವಿಲ್ಲ. ನೀವು ನಿಜವಾಗಿಯೂ ವಿದ್ಯಾರ್ಥಿಗಳ ಸುಧಾರಣೆಯನ್ನು ಬಯಸುತ್ತಿದ್ದರೆ, ಗುಣಮಟ್ಟದ ಉತ್ತಮ ಶಾಲೆಗಳನ್ನು ತೆರೆಯಿರಿ. ಬೋಧನೆ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಉತ್ತಮವಾಗಿಸಲು ಪ್ರಯತ್ನಮಾಡಿ. ಯಾರೋ ಖಂಡಿತವಾಗಿಯೂ ಇದನ್ನು ಅಹಂಕಾರದ ಸಮಸ್ಯೆಯನ್ನಾಗಿ ಮಾಡುತ್ತಿದ್ದಾರೆ.
>
> **ಸತೀಶ್ ಚಂದ್ರ ಶರ್ಮಾ,** ನ್ಯಾಯಮೂರ್ತಿ

> ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಬೋರ್ಡ್ ಪರೀಕ್ಷೆಯನ್ನು ಹಿಂಪಡೆಯಲಾಗಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಪೀಠಕ್ಕೆ ಕಳೆದ ವಾರ ಮಾಹಿತಿ ನೀಡಿದ್ದರು.
>
> ಈ ಬಗ್ಗೆ ಪರಿಶೀಲಿಸಿ ಪ್ರಮಾಣಪತ್ರ ಸಲ್ಲಿಸುವಂತೆ ಖಾಸಗಿ ಶಾಲೆಗಳ ಒಕ್ಕೂಟಕ್ಕೆ ನ್ಯಾಯಪೀಠವು ಸೂಚಿಸಿತ್ತು. ಏಳು ಜಿಲ್ಲೆಗಳ ಪರೀಕ್ಷಾ ಆದೇಶವನ್ನು ಸರ್ಕಾರ ವಾಪಸ್ ಪಡೆದಿತ್ತು. ಉಳಿದ 24 ಜಿಲ್ಲೆಗಳಲ್ಲಿ ಸದ್ದಿಲ್ಲದೆ ಪರೀಕ್ಷೆ ನಡೆಸಲಾಗಿತ್ತು. 10ನೇ ತರಗತಿಯ ಅರ್ಧವಾರ್ಷಿಕ ಪರೀಕ್ಷೆಯಲ್ಲಿ 8 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದರು. ಆ ಪರೀಕ್ಷೆಗಳ ಅಧಿಸೂಚನೆ ವಾಪಸ್ ಪಡೆದಿರಲಿಲ್ಲ.
>
> **ಕೆ.ವಿ.ಧನಂಜಯ,** ಖಾಸಗಿ ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳ ಒಕ್ಕೂಟದ ವಕೀಲ

ಪ್ರಜಾವಾಣಿ ದೀಪಾವಳಿ 2024 ಕಥೆ – ಕವನ ಸ್ಪರ್ಧೆ ಫಲಿತಾಂಶ ಪ್ರಕಟ

ನಾಗತಿಹಳ್ಳಿಗೆ ಕಥಾ, ಸದಾಶಿವಗೆ ಕವನ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನಾಗತಿಹಳ್ಳಿ ಚಂದ್ರಶೇಖರ

ಜಯಪ್ರಕಾಶ ಮಾವಿನಕುಳಿ

ಮಂಜುನಾಥ ವಿ.ಎಂ

ಸದಾಶಿವ ಸೊರಟೂರು

ಚಂದ್ರಿಕಾ ಹೆಗಡೆ

ಮಂಜುನಾಥ ನಾಯ್ಕ್

ಬೆಂಗಳೂರು: 2024ನೇ ಸಾಲಿನ ಪ್ರತಿಷ್ಠಿತ ‘ಪ್ರಜಾವಾಣಿ ದೀಪಾವಳಿ ಕಥೆ ಮತ್ತು ಕವನ ಸ್ಪರ್ಧೆ’ಯ ಫಲಿತಾಂಶ ಪ್ರಕಟವಾಗಿದೆ. ನಾಗತಿಹಳ್ಳಿ ಚಂದ್ರಶೇಖರ ಅವರ ಕಥೆ ‘ಒಳಚರಂಡಿ’ ಹಾಗೂ ಸದಾಶಿವ ಸೊರಟೂರು ಅವರ ಕವನ ‘ಮಲ್ಲಿಗೆಕೊಂಡ ಬುದ್ಧ...’ ಆಯಾ ಸ್ಪರ್ಧೆಯಲ್ಲಿ ಮೊದಲ ಬಹುಮಾನವನ್ನು ಪಡೆದುಕೊಂಡಿವೆ.

ಕಥಾಸ್ಪರ್ಧೆಯಲ್ಲಿ ಜಯಪ್ರಕಾಶ ಮಾವಿನಕುಳಿ ಅವರ ‘ಕೋಡಗನ ಕೋಳಿ ನುಂಗಿತ್ತಾ...’ ಹಾಗೂ ಮಂಜುನಾಥ ವಿ.ಎಂ. ಅವರ ‘ಬೆತ್ತಲ ಮೀನು’ ಕಥೆಗಳು ಕ್ರಮವಾಗಿ ಎರಡು ಮತ್ತು ಮೂರನೇ ಬಹುಮಾನಕ್ಕೆ ಭಾಜನವಾಗಿವೆ. ಸುಧಾ ಆಡುಕಳ ಅವರ ‘ಸಲ್ಲೇಖನ’, ಟಿ.ಗೋವಿಂದರಾಜು ಅವರ ‘ಅಗ್ನಿ ಬಿದ್ದದ್ದು...!’, ಪ್ರಕಾಶ್ ಪುಟ್ಟಪ್ಪ ಅವರ ‘ಗಾಂಧಿ ಜೋಡಿನ ಮಳಿಗೆ’, ಪ್ರಸಾದ ಶೆಣೈ ಆರ್.ಕೆ. ಅವರ ‘ಲಾಂಬು’ ಹಾಗೂ ಪ್ರೊ.ಎಂ.ಡಿ.ಚಿತ್ತರಗಿ ಅವರ ‘ಉಫ್’ ಕಥೆಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ.

ಕವನ ಸ್ಪರ್ಧೆಯಲ್ಲಿ ಚಂದ್ರಿಕಾ ಹೆಗಡೆ ಅವರ ‘ಉಳುಮೆಯ ಸದ್ದು..’ ಮತ್ತು ಮಂಜುನಾಥ ನಾಯ್ಕ್ ಅವರ ‘ಅಮೂರ್ತವಾಗುವಲ್ಲಿ’ ಕವನಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿವೆ. ಡಾ.ಲಕ್ಷ್ಮಣ ವಿ.ಎ. ಅವರ ‘ಪರಿಮಳದ ಬಾಕಿ ಮೊತ್ತ’, ಅಕ್ಷತಾ ಕೃಷ್ಣಮೂರ್ತಿ ಅವರ ‘ನದಿ ಹಾದಿ ತಪ್ಪಿದರೆ’, ಶಂಕರರಾವ್ ಉಭಾಳೆ ಅವರ ‘ರಂಜಕವಾದ ನಕಾಶೆ’, ಲಿಂಗರಾಜ ಸೊಟ್ಟಪ್ಪನವರ ಅವರ ‘ಮನುಷ್ಯರು’ ಹಾಗೂ ಸುಧಾ ಆಡುಕಳ ಅವರ ‘ಕಿನ್ನರಿ’ ಕವಿತೆಗಳು ತೀರ್ಪುಗಾರರ ಮೆಚ್ಚುಗೆ ಗಳಿಸಿವೆ.

ಕಥೆಗಾರ ಅಮರೇಶ ನುಗಡೋಣಿ ಹಾಗೂ ವಿಮರ್ಶಕಿ ಆರ್. ತಾರಿಣಿ ಶುಭದಾಯಿನಿ ಅವರು ಕಥಾಸ್ಪರ್ಧೆಯ ತೀರ್ಪುಗಾರರಾಗಿದ್ದರು. ಕವಯತ್ರಿ ಚ.ಸರ್ವಮಂಗಳಾ ಹಾಗೂ ಕವಿ ಸತ್ಯಾನಂದ ಪಾತ್ರೋಟ ಅವರು ಕವನ ಸ್ಪರ್ಧೆಯ ತೀರ್ಪುಗಾರರಾಗಿದ್ದರು.

ಬಹುಮಾನದ ವಿವರ

ಕಥಾ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನ ಪಡೆದ ಕಥೆಗಳಿಗೆ ಕ್ರಮವಾಗಿ **₹20** ಸಾವಿರ, **₹15** ಸಾವಿರ ಹಾಗೂ **₹10** ಸಾವಿರ ನಗದು ಮತ್ತು ಪ್ರಶಸ್ತಿ ಪತ್ರ ಲಭಿಸಲಿದೆ. ಕವನ ಸ್ಪರ್ಧೆ ಮೊದಲ ಮೂರು ಸ್ಥಾನ ಪಡೆದ ಕವನಗಳಿಗೆ ಕ್ರಮವಾಗಿ **₹5,000**, **₹3,000** ಹಾಗೂ **₹2,500** ನಗದು ಹಾಗೂ ಪ್ರಶಸ್ತಿ ಪತ್ರ ದೊರೆಯಲಿದೆ.

ತೀರ್ಪುಗಾರರ ಟಿಪ್ಪಣಿ

ಈ ಎರಡೂವರೆ ದಶಕಗಳ ಕಥಾಸಾಹಿತ್ಯದಲ್ಲಿ ಕಾರ್ಪೊರೇಟ್ ಜಗತ್ತಿನ ಹೊಸ ಬೆಳವಣಿಗೆಗಳಿವೆ. ವೃತ್ತಿ ಸ್ವರೂಪ, ಕುಟುಂಬ- ದಾಂಪತ್ಯ, ಜೀವನ ಶೈಲಿ ಎಲ್ಲದರಲ್ಲೂ ಹೊಸತನವಿದೆ. ಇದು ಕತೆಗಳಲ್ಲಿ ಕಾಣಿಸಿಕೊಳ್ಳುತ್ತಿದೆ.

ಅಮರೇಶ ನುಗಡೋಣಿ
ಕಥಾ ಸ್ಪರ್ಧೆ ತೀರ್ಪುಗಾರರು

ಸಮುದಾಯಗಳನ್ನು ಗ್ರಹಿಸುವ ಕ್ರಮವು ನೆಲದ ಮಿಡಿತ, ಪರಂಪರೆ ಎನ್ನಿಸುವ ಅರಿವು ಖಂಡಿತವಾಗಿ ಬದಲಾಗಿದೆ. ಇದನ್ನು ಈ ಹೊತ್ತಿನ ಕತೆಗಳು ಬಿಂಬಿಸುತ್ತಿವೆ.

ಆರ್.ತಾರಿಣಿ ಶುಭದಾಯಿನಿ
ಕಥಾ ಸ್ಪರ್ಧೆ ತೀರ್ಪುಗಾರರು

ಈ ಬಹುತೇಕ ಕವನಗಳು ಕನ್ನಡ ಕಾವ್ಯದ ಭರವಸೆಯ ಭವಿಷ್ಯದ ದನಿಗಳು. ಸಮಾನತೆ, ಸೌಹಾರ್ದತೆ, ಸಹಿಷ್ಣುತೆಯ ಬೆಳಕನ್ನು ಹಂಬಲಿಸುವ ಬದುಕಿನ ಮಾತುಗಳು ಪ್ರಸ್ತುತ ಪ್ರಕ್ಷುಬ್ಧ ಸಂದರ್ಭದಲ್ಲಿ ಬಹಳ ಅನಿವಾರ್ಯ.

ಚ.ಸರ್ವಮಂಗಳಾ
ಕವನ ಸ್ಪರ್ಧೆ ತೀರ್ಪುಗಾರರು

ಸ್ಪರ್ಧಿಗಳಲ್ಲಿ ಕೆಲವರಿಗೆ ಅಭಿವ್ಯಕ್ತಿ ವಿಧಾನ ಸಿದ್ಧಿಸಿದರೆ, ಇನ್ನು ಕೆಲವರಿಗೆ ಭಾಷೆ, ಶೈಲಿ ಸಿದ್ಧಿಸಿದೆ. ಬಹುತೇಕರು ತಮ್ಮದೇ ದಾರಿ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಇದು ಒಳ್ಳೆಯ ಬೆಳವಣಿಗೆ.

ಸತ್ಯಾನಂದ ಪಾತ್ರೋಟ
ಕವನ ಸ್ಪರ್ಧೆ ತೀರ್ಪುಗಾರರು

ನಿವೃತ್ತ ಅಧಿಕಾರಿ ಪಾಲಯ್ಯಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಮೈಸೂರಿನ ನಿವೃತ್ತ ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಪಾಲಯ್ಯ ಅವರಿಗೆ ಲೋಕಾಯುಕ್ತ ಪೊಲೀಸರು ನೋಟಿಸ್ ನೀಡಿದ್ದಾರೆ.

‘ಪಾಲಯ್ಯ ಈ ವಾರದಲ್ಲಿ ವಿಚಾರಣೆಗೆ ಬರುವುದಾಗಿ ಮಾಹಿತಿ ನೀಡಿದ್ದಾರೆ. ತನಿಖೆ ಮುಂದುವರಿದಿದ್ದು, ಸದ್ಯ ಉಳಿದ ಯಾರಿಗೂ ನೋಟಿಸ್ ನೀಡಿಲ್ಲ’ ಎಂದು ಲೋಕಾಯುಕ್ತ ಎಸ್.ಪಿ. ಟಿ.ಜೆ. ಉದೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಡಾ-- ಡಿಸಿಗೆ ಪ್ರಭಾರ: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ. ಮರೀಗೌಡ ಅವರ ರಾಜೀನಾಮೆಯನ್ನು ಸರ್ಕಾರ ಅಂಗೀಕರಿಸಿದ್ದು, ಜಿಲ್ಲಾಧಿಕಾರಿ ಕೆ. ಲಕ್ಷ್ಮಿಕಾಂತರೆಡ್ಡಿ ಅವರನ್ನು ಪ್ರಭಾರ ಅಧ್ಯಕ್ಷರನ್ನಾಗಿ ನಿಯೋಜಿಸಿ ಸೋಮವಾರ ಆದೇಶ ಹೊರಡಿಸಿದೆ.

ಸುಶೀಲಮ್ಮ, ಕುಂ.ವೀ, ಪ್ರತಿಭಾಗೆ ‘ಬಂಗಾರ’

ಪ್ರಜಾವಾಣಿ ವಾರ್ತೆ



ಕುಂ. ವೀರಭದ್ರಪ್ಪ

ಪ್ರತಿಭಾ ನಾರಾಯಣ್

ಎಸ್‌ಜಿ. ಸುಶೀಲಮ್ಮ

ಬೆಂಗಳೂರು: ಎಸ್.ಬಂಗಾರಪ್ಪ ವಿಚಾರ ವೇದಿಕೆ ನೀಡುವ 2024ನೇ ಸಾಲಿನ ‘ಸೇವಾ ಬಂಗಾರ ಪ್ರಶಸ್ತಿ’ಗೆ ಸುಮಂಗಲಿ ಸೇವಾಶ್ರಮದ ಎಚ್.ಜಿ. ಸುಶೀಲಮ್ಮ, ‘ಸಾಹಿತ್ಯ ಬಂಗಾರ ಪ್ರಶಸ್ತಿ’ಗೆ ಸಾಹಿತಿ ಕುಂ. ವೀರಭದ್ರಪ್ಪ ಹಾಗೂ ‘ಕಲಾ ಬಂಗಾರ ಪ್ರಶಸ್ತಿ’ಗೆ ಕಲಾವಿದೆ ಪ್ರತಿಭಾ ನಾರಾಯಣ್ ಆಯ್ಕೆಯಾಗಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜಮೂರ್ತಿ, ‘ಪ್ರಶಸ್ತಿಯು ತಲಾ ₹1 ಲಕ್ಷ ನಗದು, ತಾಮ್ರ ಫಲಕ ಒಳಗೊಂಡಿದೆ’ ಎಂದರು.

ಎಸ್. ಬಂಗಾರಪ್ಪ ವಿಚಾರ ವೇದಿಕೆ ಹಾಗೂ ಬಂಗಾರಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ಅಕ್ಟೋಬರ್ 26ರಂದು ಶಿವಮೊಗ್ಗ ಜಿಲ್ಲೆಯ ಸೊರಬದಲ್ಲಿ ‘ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಜನ್ಮ ದಿನಾಚರಣೆ, ವಿಚಾರಸಂಕಿರಣ ಹಾಗೂ ಅಭಿನಂದನಾ ಕಾರ್ಯಕ್ರಮ’ದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಅವರು ಪ್ರಶಸ್ತಿ ಪ್ರದಾನ ಮಾಡುವರು. ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ಅವರು ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ವೇದಿಕೆಯ ಅಧ್ಯಕ್ಷ ವೇಣುಗೋಪಾಲ ನಾಯ್ಕ, ಶಮಂತ್ ಸುದ್ದಿಗೋಷ್ಠಿಯಲ್ಲಿದ್ದರು.

ವಿಶ್ವೇಶತೀರ್ಥ ಪ್ರಶಸ್ತಿಗೆ ಯಶಸ್ವೀ ಕಲಾವೃಂದ ಆಯ್ಕೆ

ಪ್ರಜಾವಾಣಿ ವಾರ್ತೆ

ಉಡುಪಿ: ಇಲ್ಲಿಯ ಯಕ್ಷಗಾನ ಕಲಾರಂಗ ಕೊಡಮಾಡುವ ಈ ಬಾರಿಯ ‘ಶ್ರೀ ವಿಶ್ವೇಶತೀರ್ಥ ಪ್ರಶಸ್ತಿ’ಗೆ ತೆಕ್ಕಟ್ಟೆ ಕೊಮೆಯ ಯಶಸ್ವೀ ಕಲಾವೃಂದ ಆಯ್ಕೆಯಾಗಿದೆ.

ಯಕ್ಷಗಾನ ಕಲಾರಂಗದ ಸುವರ್ಣ ವರ್ಷದ ಅಂಗವಾಗಿ ಈ ವರ್ಷದಿಂದ ಪ್ರಶಸ್ತಿಯ ಮೊತ್ತವನ್ನು ₹1 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಆರಂಭದಿಂದಲೂ ನಗದು ಪುರಸ್ಕಾರದ ಅರ್ಧಾಂಶವನ್ನು ಪೇಜಾವರ ಮಠ ನೀಡುತ್ತಾ ಬಂದಿದೆ ಎಂದು ಯಕ್ಷಗಾನ ಕಲಾರಂಗದ ಅಧ್ಯಕ್ಷ ಎಂ. ಗಂಗಾಧರ ರಾವ್ ಹಾಗೂ ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವೆಂಬರ್ 17ರಂದು ಉಡುಪಿಯಲ್ಲಿ ಪೇಜಾವರ ಮಠಾಧೀಶ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಸಾನಿಧ್ಯದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ.

ನಿಧನ ವಾರ್ತೆ

ಯಕ್ಷಗಾನ ಹಾಸ್ಯ ಕಲಾವಿದ ಜಯರಾಮ ಆಚಾರ್ಯ

ಜಯರಾಮ ಆಚಾರ್ಯ

ಬಂಟ್ವಾಳ (ದಕ್ಷಿಣ ಕನ್ನಡ): ಯಕ್ಷಗಾನದ ಹಾಸ್ಯ ಕಲಾವಿದ ಬಂಟ್ವಾಳ ಜಯರಾಮ ಆಚಾರ್ಯ (67) ಬೆಂಗಳೂರಿನಲ್ಲಿ ಸೋಮವಾರ ನಿಧನರಾದರು.

ಯಕ್ಷಗಾನದಲ್ಲಿ 50 ವರ್ಷಗಳಷ್ಟು ಸುದೀರ್ಘಕಾಲ ಕಲಾ ಸೇವೆ ಮಾಡಿರುವ ಅವರು, ತೆಂಕುತಿಟ್ಟಿನ ಪಾರಂಪರಿಕ ವಿದೂಷಕ ಕಲಾವಿದರಲ್ಲಿ ಅಗ್ರ ಪಂಕ್ತಿಯಲ್ಲಿ ಗುರುತಿಸಿಕೊಂಡವರು. ಪ್ರಸಂಗಕ್ಕೆ ತಕ್ಕ ಹಾಸ್ಯವೇಷ ನಿರ್ವಹಣೆಯಲ್ಲಿ ಅವರು ಎತ್ತಿದ ಕೈ.

ತಮ್ಮ ಹಾವಭಾವದಿಂದಲೇ ಪ್ರೇಕ್ಷಕರಲ್ಲಿ ನಗೆ ಉಕ್ಕಿಸುವ ಅಪೂರ್ವ ಕಲೆ ಅವರಿಗೆ ಸಿದ್ಧಿಸಿತ್ತು. ಪುತ್ತೂರು ಪ್ರವಾಸಿ ಮೇಳದ ತಿರುಗಾಟಕ್ಕಾಗಿ ಮೇಳದ ಸಹಕಲಾವಿದರ ಜೊತೆ ಬೆಂಗಳೂರಿಗೆ ತೆರಳಿದ್ದ ವೇಳೆ ಅವರಿಗೆ ಸೋಮವಾರ ಮುಂಜಾನೆ ಹೃದಯಾಘಾತವಾಗಿತ್ತು. ಸಹ ಕಲಾವಿದರು ತಕ್ಷಣವೇ ಆಸ್ಪತ್ರೆಗೆ ಸೇರಿಸಿದರೂ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಬಂಟ್ವಾಳದ ಗಣಪತಿ ಆಚಾರ್ಯ–ಭವಾನಿಯಮ್ಮ ದಂಪತಿಯ ಪುತ್ರರಾಗಿ 1957ರಲ್ಲಿ ಜನಿಸಿದ್ದ ಅವರಿಗೆ ಹಾಸ್ಯ ಪಾತ್ರ ನಿರ್ವಹಿಸುವ ಕಲೆ ತಂದೆಯ ಮೂಲಕವೇ ಬಳುವಳಿಯಾಗಿ ಬಂದಿತ್ತು. ಅವರ ತಂದೆ ಗಣಪತಿ ಆಚಾರ್ಯ ಚಿನ್ನದ ಕೆಲಸಗಾರರಾಗಿದ್ದುಕೊಂಡೇ, ಕೆಲ ಮೇಳಗಳಲ್ಲಿ ಯಕ್ಷಗಾನ ಪಾತ್ರ ನಿರ್ವಹಿಸಿದ್ದರು.

ಜಯರಾಮ ಆಚಾರ್ಯ ಯಕ್ಷಗಾನ ಬಯಲಾಟ ಅಕಾಡೆಮಿಯ ಗೌರವ ಪ್ರಶಸ್ತಿಗೆ ಭಾಜನರಾಗಿದ್ದರು. ಟಿ.ವಿ. ಧಾರಾವಾಹಿಯಲ್ಲೂ ಪಾತ್ರ ನಿರ್ವಹಿಸಿ ಸೈ ಎನಿಸಿಕೊಂಡಿದ್ದರು.

ಅವರಿಗೆ ಪತ್ನಿ ಶ್ಯಾಮಲ, ಪುತ್ರಿ ವರ್ಷಾ ಮತ್ತು ಪುತ್ರ ವರುಣ್ ಇದ್ದಾರೆ. ಬಂಟ್ವಾಳದ ಬೈಪಾಸ್ ಬಳಿ ಇರುವ ಅವರ ಮನೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬಡ್ಡಕಟ್ಟೆಯಲ್ಲಿ ಸ್ಮಶಾನದಲ್ಲಿ ಅವರ ಅಂತ್ಯಕ್ರಿಯೆ ನೆರವೇರಿತು.

ಕರ್ನಾಟಕ ಸರ್ಕಾರ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
(ಸ್ವಾಯತ್ತ ಸಂಸ್ಥೆ)

No:SABVMCRI/E-TENDER/PF&B/11/2024-25. Date:19.10.2024

ಟೆಂಡರ್ ಅಧಿಸೂಚನೆ

ವಿಷಯ: ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿ ಬರುವ ಆಸ್ಪತ್ರೆಗಳಿಗೆ ಅವಶ್ಯವಿರುವ ಮುದ್ರಣ ಸಾಮಗ್ರಿಗಳನ್ನು ಖರೀದಿಸಲು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸುವ ಬಗ್ಗೆ.

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿ ಬರುವ ಆಸ್ಪತ್ರೆಗಳಿಗೆ ಅವಶ್ಯವಿರುವ ಮುದ್ರಣ ಸಾಮಗ್ರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಮೊಹರಾದ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಲಾಗಿದೆ. ಟೆಂಡರ್ ಫಾರಂ, ಇ.ಎಂ.ಡಿ. ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು https://kppp.karnataka.gov.in/ ಈ ವೆಬ್‌ಸೈಟ್‌ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೋಸೆಸ್ಸಿಂಗ್ ಮೊತ್ತ ರೂ. 5,000/–ಗಳ ಡಿ.ಡಿ.ಯನ್ನು ನಿರ್ದೇಶಕರು ಹಾಗೂ ಡೀನ್, ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನ್ನು (Acknowledgement) ಈ ಟೆಂಡರ್‌ನಲ್ಲಿ ಲಗತ್ತಿಸುವುದು. ಆಸಕ್ತಿಯುಳ್ಳ ಟೆಂಡರ್‌ದಾರರು e-procurement portal ನಲ್ಲಿ ನೊಂದಾಯಿಸತಕ್ಕದ್ದು. ನೊಂದಾವಣೆಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: sabvmcri@gmail.com & ದೂರವಾಣಿ ಸಂಖ್ಯೆ: +91–8431188388 ನ್ನು ಸಂಪರ್ಕಿಸುವುದು.

1. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭದ ದಿನಾಂಕ: 19.10.2024 2. ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಅಂತಿಮ ದಿನಾಂಕ: 30.10.2024 ರ ಸಂಜೆ 04.00 ಗಂಟೆ. 3. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಅಂತಿಮ ದಿನಾಂಕ: 04.11.2024 ರ ಸಂಜೆ 04.00 ಗಂಟೆ. 4. ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): 06.11.2024 ರ ಬೆಳಗ್ಗೆ 11.00 ಗಂಟೆ.

ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸ ಬಹುದಾಗಿದೆ.

ಸಹಿ/–
ನಿರ್ದೇಶಕರು ಹಾಗೂ ಡೀನ್
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

DIPR/CP/2646/Zen/2024-25

ಸುಭಾಷಿತ

ಒಬ್ಬ ವ್ಯಕ್ತಿ ನೀಡುವ ಉತ್ತರದಿಂದ ಅವನು ಬುದ್ಧಿವಂತನೇ ಅಲ್ಲವೇ ಎಂದು ನೀವು ಹೇಳಬಹುದು, ಹಾಗೆಯೇ ಒಬ್ಬ ವ್ಯಕ್ತಿ ಕೇಳುವ ಪ್ರಶ್ನೆಗಳಿಂದ ಅವನು ವಿವೇಕಿಯೇ ಅಲ್ಲವೇ ಎಂಬುದನ್ನು ನಿರ್ಧರಿಸಬಹುದು.

–ನಗಿಬ್ ಮಹಫೌಜ್

ಬಾಲ್ಯವಿವಾಹಕ್ಕೆ ಕೊನೆ ಕಾನೂನಿನ ಆಚೆ ಪರಿಹಾರ ಇದೆ

ಬಾಲ್ಯವಿವಾಹ ಕುರಿತು ಸುಪ್ರೀಂ ಕೋರ್ಟ್ ಈಚೆಗೆ ಆಡಿರುವ ಕೆಲವು ಮಾತುಗಳು ಹಾಗೂ 'ಬಾಲ್ಯ ವಿವಾಹ ನಿಷೇಧ ಕಾಯ್ದೆ – 2006'ಕ್ಕೆ (ಪಿಸಿಎಂಎ) ಇನ್ನಷ್ಟು ಬಲ ನೀಡುವ ಉದ್ದೇಶದಿಂದ ನೀಡಿರುವ ಕೆಲವು ನಿರ್ದೇಶನಗಳು, ದೇಶದ ಬಹುತೇಕ ಕಡೆಗಳಲ್ಲಿ ಬಾಲ್ಯವಿವಾಹವು ಮುಂದುವರಿದಿರುವುದನ್ನು ಹಾಗೂ ಈ ವಿಚಾರದಲ್ಲಿ ಕೋರ್ಟ್ ಹೊಂದಿರುವ ಕಳವಳವನ್ನು ದೃಢಪಡಿಸುತ್ತವೆ. ಇಂತಹ ಆಚರಣೆಗಳನ್ನು ಇಲ್ಲವಾಗಿಸುವ ಉದ್ದೇಶದಿಂದ ರೂಪಿಸಿದ ಕಾನೂನುಗಳ ಅನುಷ್ಠಾನವು ಸಮರ್ಪಕವಾಗಿ ಆಗುತ್ತಿಲ್ಲ ಎಂಬುದನ್ನು ಈ ಮಾತುಗಳು ಹೇಳುತ್ತಿವೆ. ಬಾಲ್ಯವಿವಾಹವು ಬಾಲಕಿಯರ ಮೇಲೂ ಬಾಲಕರ ಮೇಲೂ ಕೆಟ್ಟ ಪರಿಣಾಮ ಬೀರಿದೆ ಎಂಬುದನ್ನು ಕೋರ್ಟ್ ಹೇಳಿದೆ. 'ಬಾಲ್ಯದಲ್ಲೇ ಮದುವೆ ಮಾಡಿಕೊಳ್ಳುವ ಹೆಣ್ಣುಮಕ್ಕಳು ತಮ್ಮ ಬಾಲ್ಯವನ್ನು ಕಳೆದುಕೊಳ್ಳುವುದಷ್ಟೇ ಅಲ್ಲದೆ, ಸಾಮಾಜಿಕವಾಗಿಯೂ ಏಕಾಂಗಿಯಾಗುತ್ತಾರೆ... ಬಾಲ್ಯದಲ್ಲಿ ಮದುವೆ ಆಗುವ ಗಂಡುಮಕ್ಕಳ ಮೇಲೆ ಹೆಚ್ಚಿನ ಜವಾಬ್ದಾರಿಯನ್ನು ಒತ್ತಾಯಪೂರ್ವಕವಾಗಿ ಹೊರಿಸಲಾಗುತ್ತದೆ...' ಎಂದು ಕೋರ್ಟ್ ಹೇಳಿದೆ. ಬಾಲ್ಯವಿವಾಹವು ಮಕ್ಕಳ ಸ್ವಾಯತ್ತೆ, ಪೂರ್ಣಪ್ರಮಾಣದ ವಿಕಾಸಗೊಳ್ಳುವ ಹಕ್ಕು ಮತ್ತು ಬಾಲ್ಯವನ್ನು ಆನಂದಿಸುವ ಹಕ್ಕನ್ನು ಕಿತ್ತುಕೊಳ್ಳುತ್ತದೆ ಎಂದು ಕೋರ್ಟ್ ಹೇಳಿದೆ. ಜಿಲ್ಲಾ ಮಟ್ಟದಲ್ಲಿ ಬಾಲ್ಯವಿವಾಹ ನಿಷೇಧ ಅಧಿಕಾರಿಗಳನ್ನು ನೇಮಕ ಮಾಡಬೇಕು, ಬಾಲ್ಯವಿವಾಹ ತಡೆಯಲು ವಿಶೇಷವಾದ ಪೊಲೀಸ್ ಘಟಕಗಳನ್ನು ಬಳಸಿಕೊಳ್ಳಬೇಕು, ಮ್ಯಾಜಿಸ್ಟ್ರೇಟರ ಕೈ ಬಲಪಡಿಸಬೇಕು, ಪ್ರಕರಣಗಳ ವಿಚಾರಣೆಗೆ ವಿಶೇಷವಾದ ತ್ವರಿತಗತಿ ನ್ಯಾಯಾಲಯ ಆರಂಭಿಸಬೇಕು ಎಂಬ ನಿರ್ದೇಶನಗಳನ್ನು ಕೋರ್ಟ್ ನೀಡಿದೆ.

ಬಾಲ್ಯವಿವಾಹ ನಿಷೇಧ ಕಾಯ್ದೆಗೆ ಅಗತ್ಯ ತಿದ್ದುಪಡಿ ತಂದು, ಬಾಲ್ಯವಿವಾಹಕ್ಕೆ ಸಂಬಂಧಿಸಿದ ನಿಶ್ಚಿತಾರ್ಥವನ್ನೂ ನಿಷೇಧಿಸುವ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸಂಸತ್ತಿಗೆ ಸುಪ್ರೀಂ ಕೋರ್ಟ್ ಸಲಹೆ ನೀಡಿದೆ. ಈ ಕಾಯ್ದೆಯ ಅಡಿಯಲ್ಲಿ ದಂಡವನ್ನು ತಪ್ಪಿಸಿಕೊಳ್ಳಲು ನಿಶ್ಚಿತಾರ್ಥವನ್ನು ಬಳಸಿಕೊಳ್ಳಲಾಗುತ್ತಿದೆ. 'ನಿಶ್ಚಿತಾರ್ಥವಾದ ಮಗು, ಬಾಲ ನ್ಯಾಯ ಕಾಯ್ದೆಯ ಅಡಿಯಲ್ಲಿ ಆರೈಕೆ ಹಾಗೂ ರಕ್ಷಣೆಯ ಅಗತ್ಯವಿರುವ ಮಗು ಆಗಿರುತ್ತದೆ. ಆದರೆ, ಈ ಪದ್ಧತಿಯನ್ನು ನಿರ್ಮೂಲಗೊಳಿಸಲು ನಿರ್ದಿಷ್ಟವಾದ ಕ್ರಮಗಳ ಅಗತ್ಯ ಇದೆ' ಎಂದು ಕೋರ್ಟ್ ಹೇಳಿದೆ. ಈ ಕಾಯ್ದೆಯು ಬಾಲ್ಯವಿವಾಹವನ್ನು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸುತ್ತದೆ. 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಂಡುಮಕ್ಕಳನ್ನು ಹಾಗೂ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳನ್ನು ಈ ಕಾಯ್ದೆಯು ಬಾಲಕ, ಬಾಲಕಿಯರು ಎಂದು ಪರಿಗಣಿಸುತ್ತದೆ.

ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಸಬಲೀಕರಣ ಸಾಧ್ಯವಾಗಿಸುವುದು ಮತ್ತು ಅವರ ಸ್ವಾವಲಂಬನೆಯು ಈ ಸಮಸ್ಯೆಯನ್ನು ಕೊನೆಗಾಣಿಸಬಲ್ಲದು

ವೈಯಕ್ತಿಕ ಕಾನೂನುಗಳು ಹಾಗೂ ಪಿಸಿಎಂಎ ನಡುವಿನ ಸಂಬಂಧದ ಬಗ್ಗೆಯೂ ಕೋರ್ಟ್ ಪರಿಶೀಲನೆ ನಡೆಸಿದೆ. ವೈಯಕ್ತಿಕ ಕಾನೂನುಗಳಿಗಿಂತ ಪಿಸಿಎಂಎ ಮಿಗಿಲು ಎಂದು ಸಾರಬೇಕು ಎಂಬ ಕೋರಿಕೆಯು ಕೇಂದ್ರ ಸರ್ಕಾರದ ಕಡೆಯಿಂದ ಬಂದಿದೆ ಎಂದು ಕೋರ್ಟ್ ಹೇಳಿದೆ. ಆದರೆ, ಬಾಲ್ಯವಿವಾಹ ನಿಷೇಧ ಕಾಯ್ದೆಯು ವೈಯಕ್ತಿಕ ಕಾನೂನುಗಳಿಗಿಂತ ಮಿಗಿಲು ಎಂದು ಹೇಳುವ ತಿದ್ದುಪಡಿ ಮಸೂದೆಯೊಂದು 2021ರಲ್ಲಿಯೇ ಸಂಸತ್ತಿನಲ್ಲಿ ಮಂಡನೆ ಆಗಿದ್ದರೂ ಸ್ಥಾಯಿ ಸಮಿತಿಯೊಂದರ ಪರಿಶೀಲನೆಗೆ ವರ್ಗಾವಣೆಯಾದ ಅದು ಇನ್ನೂ ಅಂಗೀಕಾರ ಪಡೆದಿಲ್ಲ ಎಂಬ ಸಂಗತಿಯನ್ನು ಕೋರ್ಟ್ ಗಮನಿಸಿದೆ. ತ್ರಿವಳಿ ತಲಾಖ್ ನಿಷೇಧ, ಏಕರೂಪ ನಾಗರಿಕ ಸಂಹಿತೆ ಜಾರಿಗೆ ಗಮನ ಹರಿಸುವ ಮೂಲಕ ಕ್ರಮಗಳ ಮೂಲಕ ಕೇಂದ್ರ ಸರ್ಕಾರವು ವೈಯಕ್ತಿಕ ಕಾನೂನುಗಳಿಗಿಂತ ಮಿಗಿಲಾದ ಕಾನೂನುಗಳು ಇರಬೇಕು ಎಂಬ ಸಂದೇಶ ರವಾನಿಸಲು ಯತ್ನಿಸುತ್ತಿದೆ. ಆದರೆ, ಹಾಗೆ ಮಾಡುವುದಕ್ಕೆ ಸಂಬಂಧಿಸಿದ ಮಸೂದೆಯೊಂದರ ವಿಚಾರದಲ್ಲಿ ಕೇಂದ್ರ ಸರ್ಕಾರವು ಹೆಚ್ಚಿನ ಆಸಕ್ತಿ ತೋರಿಸಿಲ್ಲ ಎಂಬುದನ್ನು ಕೋರ್ಟ್ ಬೊಟ್ಟುಮಾಡಿದೆ.

ಬಾಲ್ಯವಿವಾಹವು ಯಾವುದೋ ಒಂದು ಧರ್ಮಕ್ಕೆ ಅಥವಾ ಒಂದು ಜಾತಿಗೆ ಸೀಮಿತವಾಗಿಲ್ಲ. ಎಲ್ಲ ಸಮುದಾಯಗಳಲ್ಲಿಯೂ ಇದು ವ್ಯಾಪಕವಾಗಿ ಚಾಲ್ತಿಯಲ್ಲಿದೆ. ಸರ್ಕಾರಗಳು ಕಾನೂನಿನ ಜಾರಿಗೆ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಬೇಕು. ಈ ವಿಚಾರದಲ್ಲಿ ಕೋರ್ಟ್‌ಗಳು ನಿರ್ದೇಶನಗಳನ್ನು ಮಾತ್ರ ನೀಡಬಹುದು. ಆದರೆ, ಈ ಸಮಸ್ಯೆಗೆ ನಿಜವಾದ ಪರಿಹಾರ ಇರುವುದು ಕಾನೂನಿನ ಪರಿಧಿಯ ಆಚೆಗೆ. ಸಾಮಾಜಿಕವಾಗಿ ಹಿಂದುಳಿದಿರುವಿಕೆ, ಬಡತನ ಮತ್ತು ಶಿಕ್ಷಣದ ಕೊರತೆಯು ಬಾಲ್ಯವಿವಾಹಕ್ಕೆ ನಿಜವಾದ ಕಾರಣಗಳು. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಸಬಲೀಕರಣ ಸಾಧ್ಯವಾಗಿಸುವುದು ಮತ್ತು ಅವರ ಸ್ವಾವಲಂಬನೆಯು ಈ ಸಮಸ್ಯೆಯನ್ನು ಕೊನೆಗಾಣಿಸಬಲ್ಲದು.

ದಿನದ ಟ್ವೀಟ್

ಹಿಂಸೆಯಿಂದ ಏನೂ ಸಾಧಿಸಲಾಗದು

ಇದು ಅವಮಾನಕರ! ಎಂಥದ್ದೇ ಪರಿಸ್ಥಿತಿ ಇದ್ದರೂ ಹಿಂಸೆಯು ಉತ್ತರವಾಗಲಾರದು. ಕೌಟುಂಬಿಕ ವಿವಾದಗಳು ಇಷ್ಟೊಂದು ಅತಿರೇಕಕ್ಕೆ ಹೋಗುವುದನ್ನು ನೋಡಲು ದುಃಖವಾಗುತ್ತದೆ. ಪ್ರತಿಯೊಬ್ಬರನ್ನೂ ಗೌರವ ಮತ್ತು ಘನತೆಯಿಂದ ಕಾಣಬೇಕು. ಸಮಸ್ಯೆಗಳನ್ನು ಹಿಂಸೆಯ ಮೂಲಕ ಪರಿಹರಿಸಿಕೊಳ್ಳಲು ಮುಂದಾಗುವುದು ಹಿಂಸಾ ಸರಣಿಗೆ ಕಾರಣವಾಗುತ್ತದೆ ಅಷ್ಟೆ. ಇದೊಂದು ಗಂಭೀರ ಸಮಸ್ಯೆಯಾಗಿದ್ದು, ಇದನ್ನು ಉತ್ತಮವಾದ ಸಂವಹನ ಮತ್ತು ಬೆಂಬಲದ ಮೂಲಕ ಬಗೆಹರಿಸಿಕೊಳ್ಳಬೇಕೇ ವಿನಾ ದೈಹಿಕ ಆಕ್ರಮಣದ ಮೂಲಕ ಅಲ್ಲ.

(ವ್ಯಕ್ತಿಯೊಬ್ಬನಿಗೆ ಆತನ ಪತ್ನಿ ಮತ್ತು ಮಗಳು ದೊಣ್ಣೆಯಿಂದ ಹೊಡೆಯುತ್ತಿರುವ ವಿಡಿಯೊ ದೃಶ್ಯಕ್ಕೆ ಪ್ರತಿಕ್ರಿಯೆ)

ವಿಕಾಸ್ ಚೌಹಾಣ್, ಎಂಜಿನಿಯರ್

ಕಿಡಿನುಡಿ

ಕನ್ನಡ ಉಳಿಯೋದು ಬೆಳೆಯೋದು ಮನೆಯಲ್ಲಿ ನಾವು ಕನ್ನಡ ಮಾತನಾಡುವುದರಿಂದ... ಇತ್ತೀಚಿನ ದಿನಗಳಲ್ಲಿ ತಂದೆ-ತಾಯಿ, ಮಗು (ಮಕ್ಕಳು?) ಮಾತ್ರ ಒಂದು ಪರಿವಾರ. ಅಜ್ಜಿ-ತಾತ ಕೂಡ ಇರುವುದಿಲ್ಲ. ಹೆಚ್ಚಿನ ಮನೆಗಳಲ್ಲಿ, ಮಕ್ಕಳು ಇಂಗ್ಲಿಷ್ ಕಲಿಯಲಿ ಅಂತ, ತಂದೆ ತಾಯಿಯೇ ಮಕ್ಕಳ ಜೊತೆ ಕನ್ನಡದಲ್ಲಿ ಮಾತನಾಡುವುದಿಲ್ಲ. ಮಕ್ಕಳಿಂದ ಬೇರೇನು ಅಪೇಕ್ಷಿಸಲು ಸಾಧ್ಯ?

(ನಮ್ಮ ಬಹುತೇಕ ರಾಜಕಾರಣಿಗಳ ಮಕ್ಕಳು ಸರಿಯಾಗಿ ಕನ್ನಡದಲ್ಲಿ ಮಾತನಾಡದಿರುವ ಬಗೆಗಿನ ಟೀಕೆಗಳಿಗೆ ಪ್ರತಿಕ್ರಿಯೆ)

ಶಿವು ಆರ್.ಎಚ್.

25 ವರ್ಷಗಳ ಹಿಂದೆ

ಶುಕ್ರವಾರ, 22-10-1999

● ದೇಶದಾದ್ಯಂತ ಲಾರಿ ಮುಷ್ಕರ ಸರಕು ಸಾಗಾಣಿಕೆ ಅಸ್ತವ್ಯಸ್ತ

ನವದೆಹಲಿ, ಅ. 21 (ಯುಎನ್‌ಐ, ಪಿಟಿಐ)– ಡೀಸೆಲ್ ಬೆಲೆ ಏರಿಕೆಯನ್ನು ವಿರೋಧಿಸಿ ಅಖಿಲ ಭಾರತ ಲಾರಿ ಮಾಲೀಕರ ಒಕ್ಕೂಟವು ಅನಿರ್ದಿಷ್ಟ ಅವಧಿಯ ಮುಷ್ಕರಕ್ಕೆ ನೀಡಿದ ಕರೆಗೆ ದೇಶದಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ದೇಶದಾದ್ಯಂತ ಸರಕು ಸಾಗಾಣಿಕೆ ಅಸ್ತವ್ಯಸ್ತವಾಗಿದೆ.

ಬಿಹಾರ ಮತ್ತು ಗುಜರಾತ್ ರಾಜ್ಯಗಳನ್ನು ಹೊರತುಪಡಿಸಿ ಕರ್ನಾಟಕವೂ ಸೇರಿದಂತೆ ಇತರ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇಂದು ಸರಕು ಸಾಗಾಣಿಕೆ ವಾಹನಗಳು ರಸ್ತೆಯಿಂದ ಹೊರಗುಳಿದವು. ಒರಿಸ್ಸಾದಲ್ಲಿ ಲಾರಿ ಮುಷ್ಕರಕ್ಕೆ ಬೆಂಬಲ ಸೂಚಿಸಿ ಖಾಸಗಿ ಬಸ್ ಮಾಲೀಕರು ಕೂಡ ಇಂದು ಸಂಚಾರ ರದ್ದುಪಡಿಸಿದರು.

● ಬಳ್ಳಾರಿ ಅಭಿವೃದ್ಧಿಗೆ ರೂ. 3,300 ಕೋಟಿಯ ಯೋಜನೆ

ಬೆಂಗಳೂರು, ಅ. 21– ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಸ್ಪರ್ಧಿಸಿದ್ದ ಬಳ್ಳಾರಿ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ 3,300 ಕೋಟಿ ರೂಪಾಯಿಯ ವಿಶೇಷ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಇಂದು ಇಲ್ಲಿ ಪ್ರಕಟಿಸಿದೆ.

ಬಳ್ಳಾರಿ ಮತದಾರರು ಸೋನಿಯಾ ಅವರನ್ನು ಲೋಕಸಭೆಗೆ ಆಯ್ಕೆ ಮಾಡಿದ್ದರ ಜತೆಗೆ ಅವರ ನಾಯಕತ್ವದ ವರ್ಚಸ್ಸಿನಿಂದಾಗಿ ರಾಜ್ಯದಲ್ಲಿ ಪಕ್ಷ ಪುನಃ ಅಧಿಕಾರದ ಚುಕ್ಕಾಣಿ ಹಿಡಿಯಲು ಕಾರಣವಾಯಿತು, ಸೋನಿಯಾ ಬಯಕೆಯಂತೆ ತಾವು ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಕಟಿಸುತ್ತಿರುವುದಾಗಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 22-10-1974

● ಮತ್ತೆ ಆರ್ಥಿಕ ಹಿಂಜರಿತ: ಉಕ್ಕು ನಿಯಂತ್ರಣ ರದ್ದಾಗುವ ಪರಿಸ್ಥಿತಿ

ಬೆಂಗಳೂರು, ಅ. 21– ಕೇವಲ ಒಂದು ದಶಕದ ಹಿಂದೆ ದೇಶವನ್ನು ಕಾಡಿದ ಆರ್ಥಿಕ ಹಿಂಜರಿತದ ಸಮಸ್ಯೆ ಮತ್ತೆ ಸದ್ಯದಲ್ಲೇ ಮರುಕಳಿಸುವ ಭೀತಿ ಇದೆ. ಅದರ ಮುನ್ಸೂಚನೆ ಈಗಾಗಲೇ ವ್ಯಕ್ತವಾಗಿದ್ದು, ಅಧಿಕ ಬೇಡಿಕೆ ಇದ್ದ ಉಕ್ಕನ್ನು ಅನೇಕ ಸಂಸ್ಥೆಗಳು ಸಾಗಿಸದೆ ಗೋಡೌನ್‌ಗಳಲ್ಲಿ ಅದು ಬೀಳಬೇಕಾದ ಪರಿಸ್ಥಿತಿ ಬಂದಿದೆ.

ಈ ವಿಚಾರವನ್ನು ಭಾರತದ ಕಬ್ಬಿಣ ಮತ್ತು ಉಕ್ಕು ನಿಯಂತ್ರಣಾಧಿಕಾರಿ ಘೋಷ್ ಅವರು, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಫೆಡರೇಷನ್ನಿನ ಆಶ್ರಯದಲ್ಲಿ ಇಂದು ನಡೆದ ಹೊಸ ಉಕ್ಕು ನೀತಿಗೆ ಸಂಬಂಧಿಸಿದ ವಿಚಾರ ಸಂಕಿರಣದಲ್ಲಿ ತಿಳಿಸಿದರು.

1964– 65ರಲ್ಲಿ ಇದ್ದಂತೆ, ಉಕ್ಕಿನ ಮೇಲಿನ ನಿಯಂತ್ರಣವನ್ನು ರದ್ದು ಮಾಡುವ ಪ್ರಸಂಗ ಬರಬಹುದೆಂದು ಹೇಳಿದರು.

● ಭದ್ರಾವತಿ ಉಕ್ಕು ಕಾರ್ಖಾನೆಗೆ 2 ಕೋಟಿ ರೂ. ಲಾಭ

ಬೆಂಗಳೂರು, ಅ. 21– ರಾಜ್ಯ ಸರ್ಕಾರದ ಮಾಲೀಕತ್ವದ ಭದ್ರಾವತಿ ಉಕ್ಕಿನ ಕಾರ್ಖಾನೆ ಈ ವರ್ಷ ಎರಡು ಕೋಟಿ ರೂ. ಲಾಭ ಗಳಿಸಿದೆ ಎಂದು ಕೈಗಾರಿಕೆ ಸಚಿವ ಎಸ್.ಎಂ.ಕೃಷ್ಣ ಅವರು ಇಂದು ಇಲ್ಲಿ ತಿಳಿಸಿದರು.

ಮಹಿಳಾ ಟಿ20 ವಿಶ್ವಕಪ್‌ಗೆ ನ್ಯೂಜಿಲೆಂಡ್ ರಾಣಿ; ಆಸ್ಟ್ರೇಲಿಯಾ ಪಾರಮ್ಯ ಅಂತ್ಯ

ಮಹಿಳಾ ತಂಡ: ಎಡವಿದ್ದು ಎಲ್ಲಿ?

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ನ್ಯೂಜಿಲೆಂಡ್ ದೇಶದ ಕ್ರಿಕೆಟ್ ಪ್ರೇಮಿಗಳು ಎಂದಿಗೂ ಮರೆಯದ ದಿನವಿದು ಈ ವರ್ಷದ ಅಕ್ಟೋಬರ್ 20. ಆ ದೇಶದ ಪುರುಷರ ತಂಡವು 36 ವರ್ಷಗಳ ನಂತರ ಭಾರತದಲ್ಲಿ ಟೆಸ್ಟ್ ಪಂದ್ಯ ಜಯಿಸಿದ್ದು ಮತ್ತು ಮಹಿಳೆಯರ ತಂಡವು ಟಿ20 ವಿಶ್ವಕಪ್ ಗೆದ್ದ ದಿನ ಇದು. ಒಂದು ಕೋಟಿಗೂ ಕಡಿಮೆ ಜನಸಂಖ್ಯೆ ಇರುವ ನ್ಯೂಜಿಲೆಂಡ್‌ನಲ್ಲಿ ಸಂಭ್ರಮದ ಹೊಳೆಯೇ ಹರಿಯುತ್ತಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಟಾಮ್ ಲೇಥಮ್ ಬಳಗವು ಭಾರತ ತಂಡದ ದಿಟ್ಟ ಹೋರಾಟವನ್ನು ಎದುರಿಸಿ ನಿಂತಿತು. ಅತ್ತ ಸೋಫಿ ಡಿವೈನ್ ನಾಯಕತ್ವದ ಮಹಿಳಾ ತಂಡವೂ ಪ್ರತಿ ಹಂತದಲ್ಲಿಯೂ ಕಠಿಣ ಸವಾಲು ಎದುರಿಸಿತು. ಆರು ಬಾರಿಯ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಂಡದ ಪಾರಮ್ಯವನ್ನು ಸೆಮಿಫೈನಲ್‌ನಲ್ಲಿ ಅಂತ್ಯಗೊಳಿಸಿದ್ದ ದಕ್ಷಿಣ ಆಫ್ರಿಕಾ ತಂಡವನ್ನು ಕಿವೀಸ್ ಫೈನಲ್‌ನಲ್ಲಿ ಸೋಲಿಸಿತು.

ಆದರೆ, ಬೆಂಗಳೂರಿನಲ್ಲಿ ಟೆಸ್ಟ್ ಪಂದ್ಯ ಹಾಗೂ ಮಹಿಳಾ ವಿಶ್ವಕಪ್‌ನಲ್ಲಿ ಸೋತವರ ಛಲದ ಮನೋಭಾವ ಮತ್ತು ದಿಟ್ಟ ಹೋರಾಟದ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಬೆಂಗಳೂರು ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ 46 ರನ್‌ಗಳಿಗೆ ಆಲೌಟ್ ಆಗಿದ್ದ ರೋಹಿತ್ ಶರ್ಮಾ ಪಡೆ, ಎರಡನೇ ಇನಿಂಗ್ಸ್‌ನಲ್ಲಿ 462 ರನ್ ಗಳಿಸಿ, ದಿಟ್ಟ ಹೋರಾಟ ನಡೆಸಿದ್ದು ಮತ್ತು ದಕ್ಷಿಣ ಆಫ್ರಿಕಾ ಮಹಿಳಾ ತಂಡದ ಆಟದ ಕುರಿತು ಚರ್ಚೆ ನಡೆಯುತ್ತಿದೆ. ಕೊನೆಯ ಕ್ಷಣದವರೆಗೂ ಹೋರಾಡುವ ಛಲದ ಗುಣದಿಂದಾಗಿಯೇ ಸೋತ ತಂಡಗಳಿಗೂ ಮನ್ನಣೆ ಸಿಗುತ್ತಿದೆ.

ಈ ಬಾರಿ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡದ ವೈಫಲ್ಯ (ಗುಂಪು ಹಂತದಲ್ಲಿ ನಿರ್ಗಮನ) ಮಾತ್ರ ಸಹನೀಯವಾಗಿಲ್ಲ. ಟೀಕೆಗಳು ವ್ಯಕ್ತವಾಗುತ್ತಿವೆ. ಮಾಜಿ ಆಟಗಾರ್ತಿ ಮಿಥಾಲಿ ರಾಜ್ ಅವರೇ ತಂಡದ ಧೋರಣೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಂದಿನ ವರ್ಷ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಈಗಿನಿಂದಲೇ ಸಿದ್ಧತೆ ಆಗಬೇಕು. 35 ವರ್ಷ ವಯಸ್ಸಿನ ಹರ್ಮನ್‌ಪ್ರೀತ್ ಕೌರ್ ನಾಯಕತ್ವ ಬದಲಾಗಬೇಕು, ಯುವ ಆಟಗಾರ್ತಿಯೊಬ್ಬರಿಗೆ ನಾಯಕಿಯ ಪಟ್ಟ ಕಟ್ಟಬೇಕು ಎಂದು ಪ್ರತಿಪಾದಿಸಿದ್ದಾರೆ. ಆದರೆ ಮುಂಬರುವ ನ್ಯೂಜಿಲೆಂಡ್ ಎದುರಿನ ಸರಣಿಗೆ ಹರ್ಮನ್ ಅವರನ್ನೇ ನಾಯಕಿಯನ್ನಾಗಿ ಮುಂದುವರಿಸಲಾಗಿದೆ. ಲೋಪಗಳನ್ನು ತಿದ್ದಿಕೊಳ್ಳಲು ಅವರಿಗೆ ಅವಕಾಶ ಕೊಡಲಾಗಿದೆ.

ಆದರೆ ಇಲ್ಲಿ ನಾಯಕಿ ಮಾತ್ರವಲ್ಲ, ತಂಡದ ಉಳಿದ ಆಟಗಾರ್ತಿಯರು ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೂಡ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ. ವಿಶ್ವಕಪ್ ಟೂರ್ನಿಯಲ್ಲಿ ಅನುಭವಿಸಿದ ಸೋಲಿನಿಂದ ಕಲಿಯಬೇಕಾದ ಪಾಠಗಳು ಹಲವಾರು ಇವೆ.

ಈ ಟೂರ್ನಿಯಲ್ಲಿ ಭಾರತ ತಂಡವು 'ಎ' ಗುಂಪಿನಲ್ಲಿ ಸ್ಥಾನ ಪಡೆದಿತ್ತು. ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಪಾಕಿಸ್ತಾನ ಮತ್ತು ಶ್ರೀಲಂಕಾ ಕೂಡ ಇದೇ ಗುಂಪಿನಲ್ಲಿದ್ದವು. ಕಠಿಣ ಸವಾಲು ಒಡ್ಡುವ ತಂಡಗಳು ಇದ್ದವು. ಆದರೆ ಈ ಸವಾಲನ್ನು ಎದುರಿಸುವ ಪೂರ್ವತಯಾರಿಯಲ್ಲಿ ತಂಡ ಎಡವಿತು. ಆಗಸ್ಟ್‌ನಲ್ಲಿ ನಡೆದಿದ್ದ ಏಷ್ಯಾ ಕಪ್ ಟೂರ್ನಿಯ ನಂತರ ಹರ್ಮನ್‌ಪ್ರೀತ್ ಬಳಗವು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಲಿಲ್ಲ. ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಶಿಬಿರದಲ್ಲಿ ಒಂದೂವರೆ ತಿಂಗಳು ಸಿದ್ಧತೆ ನಡೆಸಿತು. ಆದರೆ ನ್ಯೂಜಿಲೆಂಡ್ ಸೇರಿದಂತೆ ಕೆಲವು ತಂಡಗಳು ದ್ವಿಪಕ್ಷೀಯ ಸರಣಿಗಳಲ್ಲಿ ಆಡಿ ವಿಶ್ವಕಪ್ ಟೂರ್ನಿಗೆ ಬಂದಿದ್ದವು. 'ಮ್ಯಾಚ್ ಟೈಮ್' ಅನುಭವದ ಕೊರತೆಯಿಂದಾಗಿ ಟೂರ್ನಿಯಲ್ಲಿ ಹೊಂದಿಕೊಳ್ಳಲು ಭಾರತ ತಂಡಕ್ಕೆ ಕಷ್ಟವಾಯಿತು. ಮಹಿಳೆಯರಿಗೆ ಭಾರತದಲ್ಲಿ ದೇಶಿ ಟೂರ್ನಿಗಳು (ಪುರುಷರ ಕ್ರಿಕೆಟ್‌ನಷ್ಟು) ಹೆಚ್ಚಿನ ಸಂಖ್ಯೆಯಲ್ಲಿ ಆಗುತ್ತಿಲ್ಲ. ಬಿಸಿಸಿಐ ಅಂತರರಾಷ್ಟ್ರೀಯ ವೇಳಾಪಟ್ಟಿ ಸಿದ್ಧಪಡಿಸುವಾಗ ವಿಶ್ವಕಪ್ ಟೂರ್ನಿಗಳ ಮುನ್ನ ಸಿದ್ಧತೆಯನ್ನು ನಿರ್ಲಕ್ಷಿಸಿತು.

ಇದರ ಪರಿಣಾಮ ಮೊದಲ ಪಂದ್ಯದಲ್ಲಿ ಕಂಡಿತು. ನ್ಯೂಜಿಲೆಂಡ್ ವಿರುದ್ಧ ಸೋತಿತು. ಆದರೆ ನಂತರದ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ ಜಯಿಸಿತು. ಇದು ಸ್ವಲ್ಪ ಭರವಸೆ ಮೂಡಿಸಿತು. ಆದರೆ ಭಾರತ ತಂಡಕ್ಕೆ ಹೋಲಿಕೆ ಮಾಡಿದರೆ ಪಾಕಿಸ್ತಾನ ತಂಡವು ಅಷ್ಟೇನೂ ಬಲಿಷ್ಠವಾಗಿಲ್ಲ. ಶ್ರೀಲಂಕಾ ಎದುರು ಜಯಿಸಿದ ಹರ್ಮನ್‌ಪ್ರೀತ್ ಬಳಗವು ಆಸ್ಟ್ರೇಲಿಯಾ ಎದುರು ಸೋಲುವುದರೊಂದಿಗೆ ಸೆಮಿಫೈನಲ್ ಹಾದಿ ಕಠಿಣವಾಯಿತು. ಆ ಪಂದ್ಯದ ಕೊನೆಯ ಓವರ್‌ನಲ್ಲಿ ನಾಯಕಿ ಹರ್ಮನ್ ಅವರು ಆಡಿದ ರೀತಿ ಚರ್ಚೆಗೆ ಗ್ರಾಸವಾಯಿತು. ಭಾರತದ ಗೆಲುವಿಗೆ ಕೊನೆಯ ಓವರ್‌ನಲ್ಲಿ 14 ರನ್‌ಗಳ ಅಗತ್ಯವಿತ್ತು. ತಂಡ 5 ವಿಕೆಟ್ ಕಳೆದುಕೊಂಡಿತ್ತು. ಆದ್ದರಿಂದ ಅನುಭವಿ ಹರ್ಮನ್‌ಪ್ರೀತ್ ಅವರ ಮೇಲೆ ಹೆಚ್ಚಿನ ಹೊಣೆ ಇತ್ತು. ಆದರೆ ಈ ಓವರ್‌ನಲ್ಲಿ ಕೌರ್ ಗಳಿಸಿದ್ದು ಎರಡು ಒಂಟಿ ರನ್‌ಗಳನ್ನು ಮಾತ್ರ. ಈ ಓವರ್‌ನಲ್ಲಿ ಕೆಳಕ್ರಮಾಂಕದ ನಾಲ್ವರು ಬ್ಯಾಟರ್‌ಗಳು ಔಟಾದರು. ಇದೇ ಪಂದ್ಯದಲ್ಲಿ ಭಾರತದ ಫೀಲ್ಡರ್‌ಗಳು 5 ಕ್ಯಾಚ್‌ಗಳನ್ನು ನೆಲಕ್ಕೆ ಚೆಲ್ಲಿದ್ದು ಕೂಡ ಸೋಲಿಗೆ ಕಾರಣವಾಯಿತು.

ಇಡೀ ಟೂರ್ನಿಯಲ್ಲಿ ಭಾರತಕ್ಕೆ ಬ್ಯಾಟಿಂಗ್‌ನಲ್ಲಿ ಉತ್ತಮ ಆರಂಭ ದೊರೆಯಲಿಲ್ಲ. 19 ವರ್ಷದೊಳಗಿನವರ ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕಿಯಾಗಿದ್ದ ಶಫಾಲಿ ವರ್ಮಾ ಹಾಗೂ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂದಾನ ಜೋಡಿಯು ಉತ್ತಮ ಆರಂಭ ನೀಡಲಿಲ್ಲ. ಸ್ಮೃತಿ ಈ ಟೂರ್ನಿಯಲ್ಲಿ ಗಳಿಸಿದ್ದು 75 ರನ್ ಮಾತ್ರ. ಜೆಮಿಮಾ ರಾಡ್ರಿಗಸ್ ಮತ್ತು ದೀಪ್ತಿ ಶರ್ಮಾ ಅವರು ಕೆಲವು ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದರು. ಆದರೆ ಅವರೂ ಸ್ಥಿರ ಪ್ರದರ್ಶನ ನೀಡಲಿಲ್ಲ. ಹರ್ಮನ್ ಅವರು 4 ಪಂದ್ಯಗಳಲ್ಲಿ 2 ಅರ್ಧಶತಕಗಳೊಂದಿಗೆ 150 ರನ್ ಗಳಿಸಿದರು. ಹೇಮಲತಾ ದಯಾಳನ್, ಯಷ್ತಿಕಾ ಭಾಟಿಯಾ ಗಾಯಗೊಂಡಿದ್ದರಿಂದ ಮೂರನೇ ಕ್ರಮಾಂಕದಲ್ಲಿ ಆಡುವ ಅನುಭವಿಯ ಕೊರತೆ ಕಾಡಿತು.

ಬೌಲಿಂಗ್‌ನಲ್ಲಿ ರೇಣುಕಾ ಸಿಂಗ್ ತಮ್ಮ ಮೇಲಿನ ನಿರೀಕ್ಷೆಯನ್ನು ತಕ್ಕಮಟ್ಟಿಗೆ ಈಡೇರಿಸಿದರು. ಆದರೆ ಸ್ಪಿನ್ ವಿಭಾಗದಲ್ಲಿ ದೀಪ್ತಿ ಶರ್ಮಾ, ಪೂಜಾ ಮತ್ತು ಶ್ರೇಯಾಂಕಾ ಪಾಟೀಲ ಅವರು ದೊಡ್ಡ ಸವಾಲು ಎದುರಿಸಲು ಸಜ್ಜಾಗಬೇಕಿದೆ. ಫೀಲ್ಡಿಂಗ್ ವಿಭಾಗದಲ್ಲಿ ಸುಧಾರಣೆ ಅಗತ್ಯವಿದೆ. ಫಿಟ್‌ನೆಸ್ ಕೂಡ ಹೆಚ್ಚಬೇಕಿದೆ.

'ಪುರುಷರ ತಂಡವು ಮಹತ್ವದ ಸರಣಿ ಅಥವಾ ಟೂರ್ನಿಯಲ್ಲಿ ಆಡಿ ಬಂದ ನಂತರ ಪ್ರಮುಖರಿಗೆ ವಿಶ್ರಾಂತಿ ನೀಡಲಾಗುತ್ತದೆ. ನಂತರದ ಸರಣಿಗೆ ಯುವಪ್ರತಿಭೆಗಳಿಗೆ ಅವಕಾಶ ನೀಡಲಾಗುತ್ತದೆ. ಇದರಿಂದಾಗಿ ಯುವ ಆಟಗಾರರು ಬೆಳೆಯುತ್ತಾರೆ. ಆದರೆ ಮಹಿಳಾ ಕ್ರಿಕೆಟ್‌ನಲ್ಲಿ ಈ ರೀತಿಯಾಗುತ್ತಿಲ್ಲ. ಹೊಸ ಪ್ರತಿಭೆಗಳಿಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಆಡುವ ಅವಕಾಶಗಳನ್ನು ಹೆಚ್ಚು ಕೊಡಬೇಕು. ಆಗ ಮಾತ್ರ ಅವರಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ' ಎಂದು ಮಿಥಾಲಿ ರಾಜ್ ಹೇಳುತ್ತಾರೆ.

ಶಾಂತಾ ರಂಗಸ್ವಾಮಿ, ಕಲ್ಪನಾ, ಡಯಾನಾ ಎಡುಲ್ಜಿ, ಇತ್ತೀಚೆಗೆ ಐಸಿಸಿ ಹಾಲ್ ಆಫ್ ಫೇಮ್ ಸೇರಿದ ನೀತು ಡೇವಿಡ್, ಜೂಲನ್ ಗೋಸ್ವಾಮಿ ಆಡುವ ಕಾಲಘಟ್ಟದಲ್ಲಿ ಮಹಿಳಾ ಕ್ರಿಕೆಟ್‌ಗೆ ಹೆಚ್ಚು ಸೌಲಭ್ಯಗಳಿರಲಿಲ್ಲ. ಆದರೂ ಅವರೆಲ್ಲ ಗಮನಾರ್ಹ ಸಾಧನೆ ಮಾಡಿದರು. ಈಗ ಸಾಕಷ್ಟು ಸೌಲಭ್ಯ, ಸಮಾನ ವೇತನ ಸಿಗುತ್ತಿವೆ. ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾದ ಮಟ್ಟಕ್ಕೆ ಏರಲು ಬೇಕಾದ ಸಿದ್ಧತೆ ಮತ್ತು ಬದ್ಧತೆಯನ್ನು ಇಂದಿನ ಆಟಗಾರ್ತಿಯರು ರೂಢಿಸಿಕೊಳ್ಳಬೇಕಿದೆ. ತಂಡದ ಕೋಚ್ ಅಮೋಲ್ ಮಜುಂದಾರ್ ಅವರ ಮುಂದೆ ಹೊಸ ತಂತ್ರಗಾರಿಕೆ ರೂಪಿಸುವ ಸವಾಲು ಕೂಡ ಇದೆ.

ಚುರುಮುರಿ



ಕುಸಿತದ್ದೇ ಕಥೆ

● ಡಿ.ಎಸ್.ಲಿಂಗರಾಜು

'ಕಮಲದೋರು ಐದನೇ ತಲೆಮಾರಿಗೆ ಟಿಕೆಟ್ ಕೊಟ್ಟು ಫ್ಯಾಮಿಲಿ ಪಾಲಿಟಿಕ್ಸಿಗೆ ಗ್ರೀನ್ ಅಲರ್ಟ್ ತೋರಿಸ್ಯವರೆ. ಹಂಗೇ ಬೆಂಗಳೂರೇಲಿ ಹುಯ್ಯತಿರೋ ಮಾಮೇರಿ ಮಳೆಗೆ ಯಲ್ಲೋ ಅಲರ್ಟ್ ಕೊಟ್ಟವ್ರಂತೆ' ಅಂತಂದೆ.

'ನಿಮಿಗೆ ಗೊತ್ತಿಲ್ಲವ್ರಾ, ಬಂಗಾಳದ ಕೊಲ್ಲೀಲಿ ವಾಯುಭಾರ ಕುಸಿತವಂತೆ. ವಾಯುವಿಗೆ ಭಾರವೇ ಇಲ್ಲ, ಅದೆಂಗೆ ಕುಸಿದದು ಅಂತ ಅರ್ಥಾಯ್ತಿಲ್ಲ' ಚಂದ್ರು ಬಾಯ ಮೇಲೆ ಬೆಳ್ಳು ಮಡಗಿದ.

'ಕಾಲೇಜಲ್ಲಿ ಜಾಗ್ರಫಿ ಕ್ಲಾಸಿಗೆ ಕದೀಬ್ಯಾಡ ಕಲಾ ಕುಸಿದೋಯ್ತಿಯ ಅಂತ ನಾನು ಬಡಕತ್ತಿದ್ದೆ. ನೋಡೀಗ' ಆಕ್ಷೇಪಿಸಿದೆ.

'ಅವನು ವಾಯುಭಾರ ಕುಸಿತದ ಬಗ್ಗೆ ಹೇಳ್ತಾವ್ನೆ ಕನೋ. ಇಂತವೇ ಥರಾವರಿ ಕುಸಿತಗಳೇ ಜನಕ್ಕೆ ಬಲು ತೊಂದ್ರೆ ಕೊಡ್ತವೆ' ತುರೇಮಣೆ ವಡಪು ಹಾಕಿದರು. ನಾವು ಬೆಪ್ಪರಂಗೆ ಅವರ ಮಕ ನೋಡಿದೋ. ತುರೇಮಣೆ ಮುಂದುವರೆಸಿದರು.

'ಸ್ನಾಯುಭಾರದಿಂದ ಒಲಿಂಪಿಕ್ಸ್ ಪದಕ ತಪ್ಪೋಯ್ತದೆ. ಹಡಬಿಟ್ಟಿ ಕಾಸು ಜಾಸ್ತಿಯಾದ್ರೆ ನೈತಿಕತೆ ಕುಸಿದೋಯ್ತದೆ. ಕೆರೆ-ಕಟ್ಟೆಗಳ ನುಂಗಿದ್ಕೆ ಅಪಾರ್ಟ್‌ಮೆಂಟ್ ಮುಳುಗೋಯ್ತದೆ. ಐನ್ ಟೇಮಲ್ಲಿ ಬಿಬಿಎಂಪಿ ನೆಟ್‌ವರ್ಕೇ ಬಿದ್ದೋಯ್ತದೆ. ಬೆಳೆ ನಷ್ಟದಿಂದ ರೈತರ ಆದಾಯ ಕುಸೀತದೆ. ಕೆಪಿಎಸ್‌ಸಿ ಎಡವಟ್ಟಿನಿಂದ ಹದಿಮೂರು ಕೋಟಿ ಲಾಸಾತದೆ. ಚಂಪಟ್ಟಕ್ಕೆ ಅಭ್ಯರ್ಥಿ ಆಯ್ಕೆ ಮಾಡನಾರದೇ ಹೈಕಮಾಂಡುಗಳೇ ಮುಕ್ಕಿರಿತವೆ' ತುರೇಮಣೆ ಉವಾಚ ಮುಂದುವರೆದಿತ್ತು.

'ಬರೀ ಭಂಡತನದ ಸುದ್ದೀನೆ ಪುಂಗ್ತೀರಲ್ಲಾ ಸಾ. ಗಂಜೀಫಾ ಭಟ್ಟರಿಗೆ ಕಾಳಿದಾಸ ಸಮ್ಮಾನ್ ಬಂದದೆ ಅನ್ನೋ ಒಳ್ಳೆ ಸುದ್ದಿ ನಿಮ್ಮ ಕಣ್ಣಿಗೆ ಕಾಣಕ್ಕೇ ಇಲ್ಲವ್ರಾ?' ಅಂತ ರೇಗಿದೆ.

'ಇವನ ನಾಸಬಾಯಗೆ ಹೊಂಡೋ ಎಡವಟ್ ಸುದ್ದಿಗಳು ಕೇಳಿ ಕೇಳಿ ರೋಸೋಗ್ಯದೆ ಕಯ್ಯಾ. ಯಾರನ್ನ ಒಂದೊಳ್ಳೆ ಭುಕ್ತಿಗೀತೆ ಹೇಳಿರ್ಲಾ' ಅಂತು ಯಂಟಪ್ಪಣ್ಣ.

'ಮೂಡಾಲ್ ಕೆಸರೆ ಕತೆ, ನೋಡೋರ್ಗೊಂದ್ ಐಭೋಗ, ನೋಡಿ ಬರ್ತಾನೆ ಇ.ಡಿ. ಮಾಮ, ತಾನಂದನೋ' ತುರೇಮಣೆ ಶುರುಮಾಡಿದ ಗಾನಪದ ಹಾಡಿನ ಕಿರಿಕ್ ಕೇಳಿ ನಮಗೆ ನಗಬೇಕೋ ಅಳಬೇಕೋ ತಿಳೀಲಿಲ್ಲ.

ಸಂಗತ

ಬೇಕು ಮೊಬೈಲ್ ಬಳಸದ 'ಅವಧಿ'

ಮೊಬೈಲ್ ಫೋನ್‌ನ ಅತಿಬಳಕೆಯನ್ನು ಅಪಾಯಕಾರಿ ಎಂದು ಪರಿಗಣಿಸಿ, ಎಳೆಯರನ್ನು ರಕ್ಷಿಸಬೇಕಾದ ಅಗತ್ಯ ಇದೆ

● ಎಚ್.ಬಿ.ಚಂದ್ರಶೇಖರ್

ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ನಡೆದ ಪ್ರಕರಣವೊಂದು ಪೋಷಕರಲ್ಲಿ ತಲ್ಲಣ ಸೃಷ್ಟಿಸಿದೆ. ಆಗಿದ್ದಿಷ್ಟು. ಮೊಬೈಲ್ ಫೋನ್ ಬಳಕೆ ಕಡಿಮೆ ಮಾಡಿ ವಿದ್ಯಾಭ್ಯಾಸದ ಕಡೆ ಗಮನ ಕೊಡುವಂತೆ ಪೋಷಕರು ಬುದ್ಧಿವಾದ ಹೇಳಿದ್ದಾರೆ. ಅಷ್ಟಕ್ಕೇ ಆ ಬಾಲಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅವನು ಸೂಕ್ಷ್ಮ ಮನೋಭಾವದವನಾಗಿದ್ದಿರಬಹುದು, ಅದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಈ ವಿಷಯವನ್ನು ಸುಲಭವಾಗಿ ತಳ್ಳಿಹಾಕುವಂತಿಲ್ಲ.

21ನೇ ಶತಮಾನದ ಕೌಶಲಗಳಾದ ವಿಮರ್ಶಾತ್ಮಕ ಚಿಂತನೆ, ಸಂವಹನ, ಸಹಭಾಗಿತ್ವ, ಸಮಸ್ಯಾ ಪರಿಹಾರ ಕೌಶಲ, ತಾಂತ್ರಿಕ ಸಾಕ್ಷರತೆಯಂತಹವನ್ನು ನಮ್ಮ ಮಕ್ಕಳಿಗೆ ಕಲಿಸಲು ನಾವೆಲ್ಲಾ ಶಾಲೆ, ಕುಟುಂಬಗಳಲ್ಲಿ ಆಸಕ್ತಿ ತೋರಿ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇವೆಲ್ಲವುಗಳ ಜೊತೆ ಮೊಬೈಲ್ ಫೋನ್ ಬಳಕೆಯನ್ನು ಅಗತ್ಯಕ್ಕೆ ಅನುಸಾರವಾಗಿ ಬಳಸುವಂತಹ ಜಾಣ್ಮೆ, ಮನೋನಿಗ್ರಹದ ಕೌಶಲಗಳನ್ನು ಕಲಿಸುವತ್ತಲೂ ನಾವು ಮುಂದಡಿ ಇಡಬೇಕಿದೆ.

ಚಿಕ್ಕಪುಟ್ಟ ಸಂಗತಿಗಳಿಗೆ ಮುನಿಸು, ಬೇಸರ ಮಾಡಿಕೊಳ್ಳದೆ ಸೋಲು, ನಿರಾಸೆಯನ್ನು ತಾಳಿಕೊಂಡು ಪುಟಿದೇಳುವ ಗಟ್ಟಿ ಮನಸ್ಸನ್ನು ಮೈಗೂಡಿಸಿಕೊಳ್ಳುವತ್ತ ಸ್ಪಷ್ಟ, ನಿರ್ದಿಷ್ಟ ಕ್ರಮಗಳನ್ನು ಶಾಲೆ ಹಾಗೂ ಕುಟುಂಬಗಳು ತೆಗೆದುಕೊಳ್ಳಲು ಇದು ಸಕಾಲ.

ಮೊಬೈಲ್ ಫೋನ್‌ನ ಅತಿ ಬಳಕೆಯು ಮಕ್ಕಳು ಮತ್ತು ಹದಿಹರೆಯದವರಲ್ಲಿ ಗಂಭೀರವಾದ ಅನೇಕ ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಮೆದುಳಿನ ಬೆಳವಣಿಗೆ 25 ವರ್ಷಗಳವರೆಗೆ ಆಗುತ್ತದೆ. ಮೊಬೈಲ್‌ನ ಅತಿ ಬಳಕೆಯು ಮೆದುಳಿನ ಬೆಳವಣಿಗೆಗೆ ಅಡ್ಡಿಯುಂಟು ಮಾಡುತ್ತದೆ. ರಾತ್ರಿಯ ವೇಳೆಯಲ್ಲಿ ನಿದ್ರೆಗೆ ಅವಶ್ಯವಾದ ಮೆಲಟೋನಿನ್ ಎಂಬ ಹಾರ್ಮೋನಿನ ಬಿಡುಗಡೆಗೆ ಮೊಬೈಲ್ ಬಳಕೆಯು ಅಡ್ಡಿಯಾಗುವುದರಿಂದ ನಿದ್ರೆಯ ಕೊರತೆ ಉಂಟಾಗುತ್ತದೆ. ನಿದ್ರೆಯ ಅಭಾವದಿಂದ ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳು ಉಂಟಾಗುತ್ತವೆ. ಶಾಲೆ, ಕಾಲೇಜಿನಲ್ಲಿ ಏಕಾಗ್ರತೆಯ ಕೊರತೆಯಿಂದ ವಿಷಯಗಳ ಕಲಿಕೆಗೆ ಅಡ್ಡಿಯಾಗುತ್ತದೆ. ಇದು ಶೈಕ್ಷಣಿಕ ಪ್ರಗತಿಯ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ದೃಷ್ಟಿದೋಷ, ಕತ್ತು, ಬೆನ್ನು ನೋವಿನಂತಹ ಸಮಸ್ಯೆಗಳು ತಲೆದೋರುತ್ತವೆ.

ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಮಾಧ್ಯಮಗಳ ಬಳಕೆ ಹೆಚ್ಚಾದಂತೆ, ಅನಪೇಕ್ಷಿತ ವ್ಯಕ್ತಿಗಳ ಸಂಪರ್ಕ ಬೆಳೆಸಿಕೊಳ್ಳುವ ಅಪಾಯ ಇರುತ್ತದೆ. ಪ್ರೀತಿ, ಪ್ರೇಮದ ಹೆಸರಿನಲ್ಲಿ ಕೆಲವು ಹದಿಹರೆಯದವರು ಮತ್ತು ಮಕ್ಕಳು ಲೈಂಗಿಕ ಸಂಪರ್ಕ ಹೊಂದಿ, ಅಪಾಯಕಾರಿ ಸ್ಥಿತಿಯನ್ನು ಎದುರಿಸುತ್ತಾರೆ. ಮೊಬೈಲ್‌ನಲ್ಲಿನ ಗೇಮ್‌ಗಳಿಗೆ ದಾಸರಾಗಿ ಯಾವಾಗಲೂ ಮೊಬೈಲ್ ಫೋನ್ ಬಿಟ್ಟಿರಲಾರದಂತೆ ಆಗುತ್ತಾರೆ.

ಪೋಷಕರು ಮೊಬೈಲ್ ಫೋನ್ ಬಳಕೆ ನಿಯಂತ್ರಿಸಲು ಪ್ರಯತ್ನಿಸಿದರೆ ಕೆಲವು ಮಕ್ಕಳು ತಮಗೆ ಅಪಾಯ ತಂದುಕೊಳ್ಳಲು ಮುಂದಾಗಬಹುದು. ಇನ್ನು ಕೆಲವರು ದೊಡ್ಡವರ ಮೇಲೆ ಆಕ್ರಮಣ ಮಾಡುವ ಪ್ರವೃತ್ತಿ ತೋರುತ್ತಾರೆ. ಇಂತಹ ಸನ್ನಿವೇಶದಲ್ಲಿ ಪೋಷಕರು ತಮ್ಮ ಮಕ್ಕಳ ಮೊಬೈಲ್ ಬಳಕೆ ಹಾಗೂ ವರ್ತನೆಗಳ ಮೇಲೆ ಗಮನವಿಡಬೇಕು. ಮೊಬೈಲ್ ಫೋನನ್ನು ಯಾವಾಗಲೂ ತಮ್ಮ ಬಳಿ ಹೊಂದಿರುವುದು, ಮೊಬೈಲ್ ಕೈಯಲ್ಲಿ ಇಲ್ಲದಿದ್ದಾಗ ತೀವ್ರ ಚಡಪಡಿಕೆ, ಆತಂಕದ ಲಕ್ಷಣಗಳನ್ನು ತೋರುವುದು, ಕಿರುಪರೀಕ್ಷೆ, ಪರೀಕ್ಷೆಗಳಲ್ಲಿ ಕಳಪೆ ಸಾಧನೆ ಮಾಡುವುದು, ಸ್ನೇಹಿತರು, ಕುಟುಂಬದವರೊಂದಿಗೆ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಲು ಹಿಂಜರಿಯುವುದು ಹಾಗೂ ಅವರೊಂದಿಗೆ ಒಡನಾಡುವುದನ್ನು ತಪ್ಪಿಸಿಕೊಳ್ಳುವುದು, ತಡರಾತ್ರಿಯವರೆಗೆ ಎದ್ದಿದ್ದು, ಬೆಳಿಗ್ಗೆ ನಿಧಾನವಾಗಿ ಏಳುವಂತಹ ಲಕ್ಷಣಗಳು ಕಂಡುಬಂದಾಗ ಪೋಷಕರು ಎಚ್ಚರ ವಹಿಸಬೇಕು.

ಮೊಬೈಲ್ ಬಳಕೆಗೆ ಕಡಿವಾಣ ಹಾಕುವ ಭರದಲ್ಲಿ ಪೋಷಕರು ಮಕ್ಕಳನ್ನು ಅವಮಾನಿಸುವುದು, ಹೊಡೆಯಲು ಹೋಗುವುದು ಒಳ್ಳೆಯದಲ್ಲ. ಪ್ರೀತಿ, ಆತ್ಮೀಯತೆಯಿಂದ ಮಕ್ಕಳೊಂದಿಗೆ ಸಂಪರ್ಕ ಸಾಧಿಸಿ, ಪರಸ್ಪರ ಚರ್ಚೆಯ ಮೂಲಕ ಹಂತಹಂತವಾಗಿ ಜೊತೆಗೂಡಿ ಮೊಬೈಲ್ ಬಳಕೆಯನ್ನು ನಿಯಂತ್ರಿಸಲು ಪ್ರಯತ್ನಿಸಬೇಕು. ಈ ಕ್ರಮ ನಿಧಾನವಾದರೂ ಮಕ್ಕಳ ಜೀವಕ್ಕೆ ಅಪಾಯ ತಂದೊಡ್ಡದು. ಕೆಲವು ಮಕ್ಕಳು ಅತಿ ಸೂಕ್ಷ್ಮ ಮನಃಸ್ಥಿತಿಯುಳ್ಳವರಾಗಿರುತ್ತಾರೆ. ಅವರ ಮನಸ್ಸಿಗೆ ಗಾಸಿಯಾಗುವಂತೆ ಮಾಡಿದರೆ ಅವರು ತಮ್ಮನ್ನು ತಾವು ತೊಂದರೆಗೆ ಸಿಲುಕಿಸಿಕೊಳ್ಳಬಹುದು ಅಥವಾ ಖಿನ್ನತೆಗೆ ಜಾರಬಹುದು. ಮೊಬೈಲ್ ಹೊರತಾದ ಮಾನವ ಒಡನಾಟ, ಪ್ರಕೃತಿಯ ಸಂಪರ್ಕದ ಅವಕಾಶಗಳನ್ನು ಮಕ್ಕಳು ಹೊಂದಲು ಪ್ರೇರೇಪಿಸಬೇಕು.

ಮೊಬೈಲ್ ಫೋನಿನ ಅತಿಬಳಕೆಯನ್ನು ಅಪಾಯಕಾರಿ ಎಂದು ಪರಿಗಣಿಸಿ, ಎಳೆಯರನ್ನು ರಕ್ಷಿಸುವ ಅಗತ್ಯ ಇದೆ. ಮೊಬೈಲ್ ಬಳಕೆಯ ವಿಷಯದಲ್ಲಿ ಪೋಷಕರೇ ಮಕ್ಕಳಿಗೆ ಮಾದರಿಯಾಗುವಂತೆ ನಡೆದುಕೊಳ್ಳಬೇಕು. ಮನೆಯವರೆಲ್ಲರೂ ಸೇರಿ ಚರ್ಚಿಸಿ, ದಿನದ ಒಂದಷ್ಟು ಸಮಯವನ್ನು 'ಮೊಬೈಲ್ ಬಳಸದೇ ಇರುವ ಅವಧಿ' ಎಂದು ಘೋಷಿಸಿ, ಎಲ್ಲರೂ ಬದ್ಧರಾಗುವಂತೆ ನಡೆದುಕೊಳ್ಳುವುದು ಪರಿಣಾಮಕಾರಿಯಾಗಬಲ್ಲದು.

ಇದರ ಜೊತೆಗೆ ಮೊಬೈಲ್‌ನ ಸಮರ್ಪಕ ಬಳಕೆಯ ಕಡೆ ಎಲ್ಲರೂ ಗಮನಹರಿಸುವ ಅಗತ್ಯ ಇದೆ. ಮೊಬೈಲ್‌ನ ಅತಿಬಳಕೆಯು ಸಹಜ ಬದುಕಿನ ಇತರ ರಸಮಯ ಕ್ಷಣಗಳನ್ನು ನಮ್ಮಿಂದ ಕಿತ್ತುಕೊಳ್ಳಬಲ್ಲದು ಎಂಬ ಅರಿವನ್ನು ಹೊಂದಬೇಕಿದೆ.

ವಾಚಕರ ವಾಣಿ

ಪರೀಕ್ಷೆಯಿಂದ ನಷ್ಟ: ಹಣದ ಮೌಲ್ಯ ಅರಿವಾಗಲಿ

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ನಡೆದಿದ್ದ ಪೂರ್ವಭಾವಿ ಪರೀಕ್ಷೆ ರದ್ದಾಗಿದ್ದರಿಂದ, ಈ ಪರೀಕ್ಷೆಗೆ ಖರ್ಚಾಗಿದ್ದ ₹ 13.40 ಕೋಟಿ ನಷ್ಟದ ಬಾಬ್ತಿಗೆ ಕಾರಣರಾದವರ ಮೇಲೆ ಇನ್ನೂ ಕ್ರಮ ಜರುಗಿಸಿಲ್ಲ ಎಂಬ ವರದಿಯನ್ನು (ಪ್ರ.ವಾ., ಅ. 21) ಓದಿ ದಿಗ್ಭ್ರಮೆಯಾಯಿತು. ಜನರ ತೆರಿಗೆ ಹಣವನ್ನು ಈ ರೀತಿ ಪೋಲು ಮಾಡುತ್ತಿರುವವರಿಗೆ ಹಣದ ಮೌಲ್ಯ ಅರಿವಿಗೆ ಬಂದಂತೆ ಕಾಣುತ್ತಿಲ್ಲ. ತಪ್ಪು ಮಾಡಿದವರ ವಿರುದ್ಧ ಸಂಬಂಧಪಟ್ಟವರು ಕಠಿಣ ಕ್ರಮ ಕೈಗೊಂಡು, ಇಂತಹ ತಪ್ಪುಗಳು ಮರುಕಳಿಸದಂತೆ ಎಚ್ಚರ ವಹಿಸಬೇಕು.

ಶಿವಪ್ರಸಾದ್, ಗುಂಡ್ಲುಪೇಟೆ

ಬೆಂಗಳೂರಿನ ದಾಹ ತೀರಿಸಲು...

ರಾಜ್ಯ ರಾಜಧಾನಿ ಬೆಂಗಳೂರು ಮಳೆನೀರಿನ ಕಾರಣಕ್ಕೆ ಸುದ್ದಿಯಾಗುತ್ತಿರುವುದು ವಿಷಾದಕರ. ನಗರದಲ್ಲಿ ಹಿಂದೆ ಇದ್ದ ನೂರಾರು ಕೆರೆಗಳನ್ನು ನುಂಗಿ ನೀರು ಕುಡಿದಿರುವುದರ ಪರಿಣಾಮವನ್ನು ಇಂದು ಬೆಂಗಳೂರಿನ ನಿವಾಸಿಗಳು ಅನುಭವಿಸುವಂತಾಗಿದೆ. ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಬಂದರೂ ಇದೇ ಹಣೆಬರಹವೇ ವಿನಾ ಶಾಶ್ವತ ಪರಿಹಾರ ಮಾತ್ರ ಸಿಗುತ್ತಿಲ್ಲ.

ಬೇಸಿಗೆ ಬಂತೆಂದರೆ ನೀರಿಗೆ ಹಾಹಾಕಾರ, ಮಳೆಗಾಲ ಬಂತೆಂದರೆ ಜಲಾವೃತ ಎಂಬಂತಾಗಿದೆ ಬೆಂಗಳೂರಿನ ಪರಿಸ್ಥಿತಿ. ಎರಡೂ ಬಗೆಯ ಈ ಸ್ಥಿತಿಗಳನ್ನು ಸಮರ್ಪಕವಾಗಿ ನಿಭಾಯಿಸಲು ಸರ್ಕಾರ ಗಂಭೀರವಾಗಿ ಚಿಂತಿಸಬೇಕಾಗಿದೆ. ಕಾಲಮಿತಿಯ ಯೋಜನೆಗಳನ್ನು ಹಮ್ಮಿಕೊಳ್ಳಬೇಕಿದೆ. ಮಳೆನೀರು ಸಂಗ್ರಹವು ವ್ಯವಸ್ಥಿತವಾಗಿ ನಡೆದರೆ ನಗರದ ನೀರಿನ ದಾಹವನ್ನು ತೀರಿಸಬಹುದು. ರಾಜಕಾಲುವೆ, ಚರಂಡಿಗಳನ್ನು ಸುಸ್ಥಿತಿಯಲ್ಲಿ ಇರಿಸುವುದೂ ಸೇರಿದಂತೆ ಮಳೆಗಾಲವನ್ನು ಎದುರಿಸಲು ಮೊದಲೇ ಸರಿಯಾದ ಸಿದ್ಧತೆ ಮಾಡಿಕೊಂಡರೆ ಮಳೆನೀರು ವಸತಿ ಪ್ರದೇಶಗಳಿಗೆ ನುಗ್ಗುವುದನ್ನು ತಪ್ಪಿಸಬಹುದು.

ಮುರುಗೇಶ ಡಿ., ದಾವಣಗೆರೆ

ಹಾಸನಾಂಬೆ ದರ್ಶನ: ಸೂಕ್ತ ವ್ಯವಸ್ಥೆ ಅಗತ್ಯ

ಇದೇ 25ರಿಂದ ಹಾಸನದ ಹಾಸನಾಂಬೆ ದೇವಾಲಯ ತೆರೆಯಲಿದೆ. ಹಾಸನಾಂಬೆಯ ದರ್ಶನ ಪಡೆಯಲು ಜನ ಮುಗಿಬೀಳುತ್ತಾರೆ. ಈಗ ಎಲ್ಲರ ಬಳಿಯೂ ಕಾರು, ಬೈಕುಗಳಿರುವುದರಿಂದ ದರ್ಶನ ಬಯಸಿ ಬರುವ ಭಕ್ತರ ಸಂಖ್ಯೆಯೂ ಹೆಚ್ಚುತ್ತಿದೆ. ಹೋದ ವರ್ಷ ಹಾಸನಾಂಬೆಯ ದರ್ಶನಕ್ಕೆ ಭಾರಿ ಜನ ಸೇರಿದ್ದರಿಂದ, ದರ್ಶನ ತುಂಬಾ ವಿಳಂಬವಾಗಿ ಜನ ತೊಂದರೆಪಟ್ಟಿದ್ದು ವರದಿಯಾಗಿತ್ತು. ಜಿಲ್ಲಾಡಳಿತವು ಇದೀಗ ಹಾಸನಾಂಬೆಯ ದರ್ಶನದ ಬಗ್ಗೆ ಮೈಸೂರು ಆಕಾಶವಾಣಿಯಲ್ಲಿ ಜಾಹೀರಾತು ನೀಡಿದೆ. ಆದರೆ ಇಂತಹ ಪ್ರಚಾರ ನೀಡಿ ಜನರನ್ನು ಸೆಳೆದರಷ್ಟೇ ಸಾಲದು. ಅಲ್ಲಿಗೆ ಬರುವವರಿಗೆ ಸೂಕ್ತ ಮೂಲ ಸೌಲಭ್ಯಗಳ ವ್ಯವಸ್ಥೆಯನ್ನೂ ಕಲ್ಪಿಸಬೇಕು.

ಸಾವಿರಾರು ಮಂದಿ ದರ್ಶನಕ್ಕಾಗಿ ಗಂಟೆಗಟ್ಟಲೆ ಕಾಯುತ್ತಿದ್ದರೂ ಪೂಜೆಯ ಕಾರಣಕ್ಕೆ ಮಧ್ಯಾಹ್ನ ದೇವಾಲಯದ ಬಾಗಿಲು ಮುಚ್ಚದೆ ನಿರಂತರ ದರ್ಶನಕ್ಕೆ ವ್ಯವಸ್ಥೆ ಮಾಡಲಿ. ಕುಂದುಕೊರತೆಗಳ ಬಗ್ಗೆ ಭಕ್ತರಿಂದ ಸಲಹೆ ಪಡೆದು, ಅದರ ಅನುಸಾರ ಕ್ರಮ ಜರುಗಿಸಲಿ. ದರ್ಶನ ಬಯಸಿ ಬರುವ ವಿಐಪಿಗಳಿಂದ ಜನಸಾಮಾನ್ಯರಿಗೆ ಆಗುವ ತೊಂದರೆಗಳ ಬಗ್ಗೆ ಗಮನಹರಿಸಲಿ.

ಮುಳ್ಳೂರು ಪ್ರಕಾಶ್, ಮೈಸೂರು

ಮಳೆಹಾನಿ: ನಡೆಯಲಿ ತುರ್ತು ಸಮೀಕ್ಷೆ

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಂಗಾರು ಹಂಗಾಮಿನ ಕೃಷಿ ಬೆಳೆಗಳು ಕಟಾವಿನ ಹಂತದಲ್ಲಿವೆ. ಈಗ ಹಿಂಗಾರು ಮಳೆಯ ಪರಿಣಾಮವಾಗಿ ಕೃಷಿ ಬೆಳೆಗಳು ಹೊಲಗಳಲ್ಲಿಯೇ ಉಳಿಯುವಂತಾಗಿ, ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಅಲ್ಲದೆ ಕೆಲವು ಜಿಲ್ಲೆಗಳಲ್ಲಿ ವಿವಿಧ ಬೆಳೆಗಳಿಗೆ ಹಾನಿಯಾಗಿದೆ. ಇನ್ನು ಕೆಲವು ಕಡೆ ಮನೆಗಳು ಕುಸಿದು ಅಪಾರ ಹಾನಿ ಉಂಟಾಗಿದೆ. ಇಂತಹ ಬೆಳವಣಿಗೆಗಳಿಂದ ರಾಜ್ಯದ ಲಕ್ಷಾಂತರ ರೈತರು ಸಂಕಷ್ಟದಲ್ಲಿದ್ದಾರೆ. ಹಿಂದಿನ ಬಾರಿಯ ಬರ ಪರಿಹಾರ ಸಹ ಸರಿಯಾಗಿ ರೈತರ ಕೈಸೇರಿಲ್ಲ. ಮಳೆಯಿಂದ ಹಾನಿಗೀಡಾಗಿರುವ ಪ್ರದೇಶಗಳಲ್ಲಿ ತುರ್ತು ಸಮೀಕ್ಷೆ ನಡೆಸಿ ಸೂಕ್ತ ಪರಿಹಾರವನ್ನು ಶೀಘ್ರವೇ ಒದಗಿಸಿಕೊಡುವ ಮೂಲಕ, ಸರ್ಕಾರವು ರೈತರ ನೆರವಿಗೆ ಧಾವಿಸಬೇಕು.

ನಬಿ ಆರ್.ಬಿ. ದೋಟಿಹಾಳ, ಕುಷ್ಟಗಿ

ಅಂಕಿಅಂಶವಷ್ಟೇ ಸಾಲದು, ಪರಿಹಾರವೂ ಬೇಕು

ದೇಶದ ಗ್ರಾಮೀಣ ಭಾಗದಲ್ಲಿ ಐದು ವರ್ಷಗಳಲ್ಲಿ ಕೃಷಿ ಭೂಮಿಯ ವಿಸ್ತೀರ್ಣ ಕಡಿಮೆ ಆಗಿರುವುದು, ಕೃಷಿ ಮತ್ತು ಕೃಷಿಯೇತರ ಕುಟುಂಬಗಳ ತಿಂಗಳ ಖರ್ಚಿನಲ್ಲಿ ಏರಿಕೆ ಆಗಿರುವುದು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ (ನಬಾರ್ಡ್) ಸಮೀಕ್ಷೆಯಿಂದ ತಿಳಿದುಬಂದಿರುವುದಾಗಿ ವರದಿಯಾಗಿದೆ (ಪ್ರ.ವಾ., ಸಂಖ್ಯೆ-ಸುದ್ದಿ, ಅ. 21). ಕೃಷಿ ಕುಟುಂಬಗಳ ಆದಾಯವು ಕೃಷಿಯೇತರ ಕಸುಬುಗಳನ್ನು ಆಧರಿಸಿದ ಕುಟುಂಬಗಳ ಆದಾಯಕ್ಕಿಂತ ಹೆಚ್ಚಿಗೆ ಇರುವುದು ಗಮನಿಸಬೇಕಾದಂತಹ ವಿಚಾರ. ಆದರೆ ಈ ಸಮೀಕ್ಷೆಯು ಅಂಕಿ ಅಂಶಗಳನ್ನು ಮಾತ್ರ ಒಳಗೊಂಡಿದೆ. ಅಂಕಿಅಂಶಗಳನ್ನು ವಿಶ್ಲೇಷಿಸಿ, ಸಮಸ್ಯೆಗಳನ್ನು ಗುರುತಿಸಿ, ಅದಕ್ಕೆ ಸೂಕ್ತ ಪರಿಹಾರವನ್ನು ಸೂಚಿಸಿದಾಗ ಆ ವರದಿ ಪರಿಪೂರ್ಣವಾಗುತ್ತದೆ.

ಬರೀ ಅಂಕಿಅಂಶಗಳು ವಾಸ್ತವ ಅಂಶಗಳನ್ನು ಹೊರಗೆಡಹುವುದಿಲ್ಲ. ಸರಾಸರಿ ಅಂಕಿಅಂಶಗಳನ್ನು ನಂಬಿಕೊಂಡು ನದಿ ದಾಟಲು ಹೋಗಿ ಮುಳುಗಿದವನ ಕಥೆ ನೆನಪಾಗುತ್ತದೆ. ನದಿಯಲ್ಲಿ ನೀರಿನ ಆಳ ಒಂದು ಅಡಿಯಿಂದ 10 ಅಡಿವರೆಗೆ ಇದೆ ಅಂದರೆ, ಸರಾಸರಿ ಐದು ಅಡಿ ಮಾತ್ರ ಎಂದು ತಿಳಿದು, ನದಿ ದಾಟಲು ಹೋಗಿ, 10 ಅಡಿ ನೀರಿನಲ್ಲಿ ಮುಳುಗಿದವನಂತೆ ಅಂಕಿಅಂಶಗಳು ಯಾರನ್ನಾದರೂ ಮೂರ್ಖರನ್ನಾಗಿಸಬಲ್ಲವು. ಆದ್ದರಿಂದ ಸಮೀಕ್ಷಾ ವರದಿಯ ಆಳ- ಅಗಲಕ್ಕೆ ಹೋಗಿ ವಿಶ್ಲೇಷಣೆ ನಡೆಸಬೇಕಾದ ಅಗತ್ಯವಿರುತ್ತದೆ. ಆಗ ಮಾತ್ರ ಸಮೀಕ್ಷೆಯ ಉದ್ದೇಶ ಸಫಲವಾಗುತ್ತದೆ.

ಟಿ.ವಿ.ಬಿ. ರಾಜನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಾಗತಿಕ ಆಹಾರ ವ್ಯವಸ್ಥೆಯ ನೋಟ

1,038 ಕೋಟಿ ಎಕರೆ — ಜಾಗತಿಕವಾಗಿ ಮನುಷ್ಯರಿಗೆ ಆಹಾರ ಉತ್ಪಾದಿಸಲು ಬಳಕೆಯಾಗುತ್ತಿರುವ ಭೂಮಿಯ ವಿಸ್ತೀರ್ಣ

40% — ವಾಸಯೋಗ್ಯ ಭೂಮಿಯಲ್ಲಿ ಆಹಾರ ಉತ್ಪಾದನೆಗಾಗಿ ಬಳಕೆಯಾಗುತ್ತಿರುವ ಭೂಮಿಯ ಪ್ರಮಾಣ

741 ಕೋಟಿ ಎಕರೆ — ಜಾನುವಾರುಗಳ ಮೇವಿಗಾಗಿ ಬಳಕೆಯಾಗುತ್ತಿರುವ ಪ್ರದೇಶದ ವಿಸ್ತೀರ್ಣ

297 ಕೋಟಿ ಎಕರೆ — ಕೃಷಿ ಉದ್ದೇಶಕ್ಕೆ ಜಗತ್ತಿನಾದ್ಯಂತ ಬಳಸಲಾಗುತ್ತಿರುವ ಭೂಮಿಯ ವ್ಯಾಪ್ತಿ

82% — ಕೃಷಿಗೆ ಬಳಕೆಯಾಗುತ್ತಿರುವ ಭೂಮಿಯಲ್ಲಿ ಜಾನುವಾರುಗಳನ್ನು ಮೇಯಿಸಲು ಮತ್ತು ಅವುಗಳಿಗೆ ಮೇವು ಬೆಳೆಯಲು ಬಳಸಲಾಗುತ್ತಿರುವ ಜಮೀನಿನ ಪ್ರಮಾಣ

27% — ಜಾಗತಿಕ ಹಸಿರು ಮನೆ ಅನಿಲ ಹೊರಸೂಸುವಿಕೆಯಲ್ಲಿ ಜಾಗತಿಕ ಆಹಾರ ವ್ಯವಸ್ಥೆಯ ಪಾಲು

70% — ಆಹಾರ ವ್ಯವಸ್ಥೆಗಾಗಿ ಬಳಕೆಯಾಗುತ್ತಿರುವ ಸಿಹಿ ನೀರಿನ ಪ್ರಮಾಣ

90% — ಕೃಷಿಯಿಂದಾಗಿ ಉಷ್ಣವಲಯದ ಕಾಡು ನಾಶವಾಗುತ್ತಿರುವ ಪ್ರಮಾಣ

ಆಹಾರ ಪದ್ಧತಿ ಭಾರತದ್ದೇ ಉತ್ತಮ

ಮನುಷ್ಯರು ಏನನ್ನು ಸೇವಿಸುತ್ತಾರೆ ಮತ್ತು ಅದನ್ನು ಹೇಗೆ ಉತ್ಪಾದಿಸುತ್ತಾರೆ ಎನ್ನುವುದು ಜಗತ್ತಿನ ಭವಿಷ್ಯವನ್ನು ನಿರ್ಧರಿಸುತ್ತದೆ. 2030ರ ಹೊತ್ತಿಗೆ ಹವಾಮಾನ ಮತ್ತು ಜೀವವೈವಿಧ್ಯದ ಗುರಿಗಳನ್ನು ಸಾಧಿಸಲು ಆಹಾರ ಪದ್ಧತಿಯಲ್ಲಿ ಬದಲಾವಣೆ ಅಗತ್ಯ ಎನ್ನುವುದನ್ನು ಜಾಗತಿಕ ವೇದಿಕೆಗಳಲ್ಲಿ ಒತ್ತಿ ಹೇಳಲಾಗಿದೆ. ಆದರೆ, ಪ್ಯಾರಿಸ್ ಒಪ್ಪಂದ ಮತ್ತು ಜಾಗತಿಕ ಜೀವವೈವಿಧ್ಯದ ಚೌಕಟ್ಟಿನಲ್ಲಿ ಆಹಾರವನ್ನು ತೀವ್ರವಾಗಿ ನಿರ್ಲಕ್ಷಿಸಲಾಗಿದೆ. ಇದು ಜೀವ ಸಂಕುಲಕ್ಕೆ ಹಾನಿ ಮಾಡುತ್ತಿರುವುದಲ್ಲದೇ, ತಾಪಮಾನ ಏರಿಕೆಗೂ ಕಾರಣವಾಗುತ್ತಿದೆ. ಈ ದಿಸೆಯಲ್ಲಿ ಪರಿಸರಕ್ಕೆ ಹತ್ತಿರವಾದ ಭಾರತೀಯರ ಆಹಾರ ಕ್ರಮವು ಅನುಕರಣೆಯೋಗ್ಯವಾಗಿದೆ ಎಂದು ವರ್ಲ್ಡ್ ವೈಲ್ಡ್‌ಲೈಫ್ ಫಂಡ್ ವರದಿ ಹೇಳಿದೆ

ಪ್ರಜಾವಾಣಿ ವಾರ್ತೆ

ವರ್ಲ್ಡ್ ವೈಲ್ಡ್‌ಲೈಫ್ ಫಂಡ್ (ಡಬ್ಲ್ಯುಡಬ್ಲ್ಯುಎಫ್) ಎನ್ನುವುದು ಪರಿಸರ ಮತ್ತು ಪ್ರಾಣಿ ಸಂರಕ್ಷಣೆಗೆ ಸಂಬಂಧಿಸಿದ ಒಂದು ಸ್ವತಂತ್ರ ಸಂಸ್ಥೆ. ಜಗತ್ತಿನಲ್ಲಿ ಮಾಲಿನ್ಯವನ್ನು ತಡೆಗಟ್ಟಿ, ಜೀವ ವೈವಿಧ್ಯವನ್ನು ಕಾಪಾಡಿ, ಪ್ರಕೃತಿಯ ಜತೆ ಮನುಷ್ಯ ಸಹಬಾಳ್ವೆ ನಡೆಸುವಂತಹ ವಾತಾವರಣ ಸೃಷ್ಟಿಗೆ ಪ್ರಯತ್ನಿಸುವುದು ಇದರ ಉದ್ದೇಶ. ಇದು 'ಲಿವಿಂಗ್ ಪ್ಲಾನೆಟ್ ರಿಪೋರ್ಟ್–2024' ಬಿಡುಗಡೆ ಮಾಡಿದ್ದು, ಜೀವವೈವಿಧ್ಯ ಮತ್ತು ಆಹಾರ ಪದ್ಧತಿಗಳ ಬಗ್ಗೆ ಜಾಗತಿಕ ಮಟ್ಟದಲ್ಲಿ ಗಮನ ಹರಿಸಬೇಕಾದ ತುರ್ತಿನ ಬಗ್ಗೆ ಈ ವರದಿ ಗಮನ ಸೆಳೆಯುತ್ತದೆ.

ಡಬ್ಲ್ಯುಡಬ್ಲ್ಯುಎಫ್ ಲಿವಿಂಗ್ ಪ್ಲಾನೆಟ್ ಇಂಡೆಕ್ಸ್ (ಎಲ್‌ಪಿಐ) ಎನ್ನುವ ದೀರ್ಘಾವಧಿಯ ಸೂಚ್ಯಂಕದ ಮೂಲಕ ಜೀವವೈವಿಧ್ಯದಲ್ಲಿ ಆಗಿರುವ ಬದಲಾವಣೆಯನ್ನು ಗುರುತಿಸಿದೆ.

1970ರಿಂದ 2020ರವರೆಗಿನ ಅವಧಿಯಲ್ಲಿ ವನ್ಯಜೀವಿಗಳ ಸರಾಸರಿ ಸಂಖ್ಯೆಯಲ್ಲಿ ಶೇ 73ರಷ್ಟು ಕುಸಿತವಾಗಿದೆ. ಈ ಪೈಕಿ ಸಿಹಿನೀರಿನ ಜಲಚರಗಳ ಸಂಖ್ಯೆ ಶೇ 85ರಷ್ಟು ಕಡಿಮೆಯಾಗಿದ್ದು, ಶೇ 69ರಷ್ಟು ಭೂಚರಗಳು, ಶೇ 56ರಷ್ಟು ಸಮುದ್ರ ಜಲಚರಗಳು ಕಡಿಮೆಯಾಗಿವೆ. ಇದು ಅಪಾಯಕಾರಿ ಮಟ್ಟ ಮುಟ್ಟುತ್ತಿರುವ ಪರಿಸರ ವಿನಾಶದ ಸೂಚನೆಯಾಗಿದ್ದು, ಈ ದಿಸೆಯಲ್ಲಿ ಪರಿಸರವನ್ನು ಉಳಿಸುವುದು ಮತ್ತು ಜಾಗತಿಕ ತಾಪಮಾನವನ್ನು ಕಡಿಮೆ ಮಾಡುವುದು ಅಗತ್ಯವಾಗಿದೆ. ಇದು ಸಾಧ್ಯವಾಗಬೇಕು ಎಂದರೆ ಇಂಧನ, ಆಹಾರ ಮತ್ತು ಆರ್ಥಿಕ ವ್ಯವಸ್ಥೆಗಳು ಸಮನ್ವಯದಿಂದ ಕೆಲಸ ಮಾಡಬೇಕು ಎಂದು ವರದಿ ಹೇಳಿದೆ.

ಜಗತ್ತಿನ ಕೆಲವೇ ರಾಷ್ಟ್ರಗಳು ಪರಿಸರ ನಾಶ, ಸಂಪನ್ಮೂಲಗಳ ಅತಿಬಳಕೆ ಮತ್ತು ಹಸಿರುಮನೆ ಅನಿಲ ಹೊರಸೂಸುವಿಕೆಗೆ ಕಾರಣವಾಗುತ್ತಿವೆ. ಇದೇ ಕಾಲಕ್ಕೆ ಜಾಗತಿಕ ಮಟ್ಟದಲ್ಲಿ ಬಡತನ ಮತ್ತು ಸಂಪನ್ಮೂಲಗಳ ಕೊರತೆಯೂ ಕಾಡುತ್ತಿದೆ. ಬಡ ದೇಶಗಳು ಮತ್ತು ಬಡವರು ಶ್ರೀಮಂತ ರಾಷ್ಟ್ರಗಳ ಅತಿಬಳಕೆಯ ಪರಿಣಾಮಗಳನ್ನು ಎದುರಿಸಬೇಕಾಗಿದೆ. ಶ್ರೀಮಂತ ರಾಷ್ಟ್ರಗಳು ಸುಸ್ಥಿರವಲ್ಲದ ಅಭಿವೃದ್ಧಿ ಮಾದರಿ ಹಾಗೂ ಇಂಧನ ಬಳಕೆ, ಆಹಾರ ಪದ್ಧತಿಗಳನ್ನು ಅನುಸರಿಸುತ್ತಿವೆ. ಇದು ಹೀಗೇ ಮುಂದುವರಿದರೆ, ಮುಂದಿನ ದಿನಗಳಲ್ಲಿ ಆಹಾರ ಉತ್ಪಾದನೆಗೆ ಭೂಮಿಯಲ್ಲಿ ಲಭ್ಯವಿರುವುದಕ್ಕಿಂತಲೂ ಹೆಚ್ಚಿನ ಸಂಪನ್ಮೂಲಗಳು (ಹಲವು ಭೂಮಿಗಳು) ಬೇಕಾಗುತ್ತವೆ. ಈ ನಿಟ್ಟಿನಲ್ಲಿ ಇಂದು ಜಗತ್ತು ಜಿಡಿಪಿ ಆಧಾರಿತ ಬೆಳವಣಿಗೆಯ ಮಾದರಿಗಿಂತಲೂ ಪರಿಸರಸ್ನೇಹಿ ಮತ್ತು ಹವಾಮಾನ ಸ್ನೇಹಿಯಾದ ಸುಸ್ಥಿರ ಅಭಿವೃದ್ಧಿ ಮಾದರಿಗಳನ್ನು ಅನುಸರಿಸಬೇಕಾಗಿದೆ.

ಪ್ಯಾರಿಸ್ ಒಪ್ಪಂದದಂತೆ ಜಾಗತಿಕ ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಮಿತಿಗೊಳಿಸಬೇಕು. ಅಂದರೆ, ಹಸಿರು ಮನೆ ಅನಿಲ ಹೊರಸೂಸುವಿಕೆ ಕಡಿಮೆ ಮಾಡಬೇಕು. ಆದರೆ, ಜಗತ್ತಿನ ಪ್ರಬಲ ಆರ್ಥಿಕತೆಗಳುಳ್ಳ ರಾಷ್ಟ್ರಗಳಲ್ಲಿ ಚಾಲ್ತಿಯಲ್ಲಿರುವ ಆಹಾರ ಪದ್ಧತಿಯನ್ನು 2050ಕ್ಕೆ ಪ್ರತಿಯೊಬ್ಬರೂ ಅಳವಡಿಸಿಕೊಂಡರೆ, ಆಹಾರ ಸಂಬಂಧಿ ಹಸಿರುಮನೆ ಅನಿಲ ಹೊರಸೂಸುವಿಕೆಯು ಶೇ 263 ರಷ್ಟು ಹೆಚ್ಚಾಗುತ್ತದೆ.

ಅತಾರ್ಕಿಕ ಆಹಾರ ಪದ್ಧತಿ: ಜಾಗತಿಕ ಆಹಾರ ಪದ್ಧತಿಯು ಅತ್ಯಂತ ಅತಾರ್ಕಿಕವಾಗಿದೆ. ಇದು ಜೀವವೈವಿಧ್ಯಕ್ಕೆ ಮಾರಕವಾಗಿರುವುದಲ್ಲದೇ, ನೀರಿನ ಸಂಪನ್ಮೂಲವನ್ನು ಬರಿದು ಮಾಡುತ್ತಿದ್ದು, ಹವಾಮಾನ ಬದಲಾವಣೆಗೂ ಕಾರಣವಾಗಿದೆ. ದಾಖಲೆಯ ಮಟ್ಟದಲ್ಲಿ ಆಹಾರ ಉತ್ಪಾದನೆ ಆಗುತ್ತಿದ್ದರೂ, ಕೋಟ್ಯಂತರ ಮಂದಿ ಹಸಿದ ಹೊಟ್ಟೆಯಲ್ಲಿ ಮಲಗುವಂತಾಗಿದೆ.

ಮಾನವನ ಆಹಾರ ಉತ್ಪಾದನೆಗಾಗಿ ಶೇ 90ರಷ್ಟು ಕಾಡುಗಳನ್ನು ನಾಶ ಮಾಡಿ ಕೃಷಿ ಭೂಮಿಯನ್ನಾಗಿ ಮಾಡಲಾಗಿದ್ದು, ಇದು ಜೀವಿ ಸಂಕುಲಗಳ ಮತ್ತು ಜೀವ ವೈವಿಧ್ಯದ ನಾಶಕ್ಕೆ ಮತ್ತು ಹಸಿರುಮನೆ ಅನಿಲ ಹೊರಸೂಸುವಿಕೆಗೆ ಕಾರಣವಾಗಿದೆ. ಕೃಷಿಗಾಗಿ ಶೇ 70ರಷ್ಟು ಅಂತರ್ಜಲವನ್ನು ಬಳಸಲಾಗುತ್ತಿದ್ದು, ಇದರಿಂದ ಜಗತ್ತಿನ ಅರ್ಧಕ್ಕಿಂತಲೂ ಹೆಚ್ಚಿನ ನದಿ, ಕೆರೆ–ಕುಂಟೆಗಳಲ್ಲಿ ನೀರಿನ ಪ್ರಮಾಣ ಕುಸಿದಿದೆ. ಜನರ ಬಳಕೆಗಾಗಿ ಮೀನುಗಾರಿಕೆಯನ್ನು ಮಿತಿಮೀರಿ ಮಾಡಲಾಗುತ್ತಿದ್ದು, ಇದರಿಂದ ಶೇ 37.7ರಷ್ಟು ಪ್ರಭೇದಗಳ ಸಂಖ್ಯೆಯಲ್ಲಿ ಕುಸಿತವಾಗಿದೆ. ಜತೆಗೆ ಇದು ಸಮುದ್ರದ ಸಮತೋಲನಕ್ಕೂ ಮಾರಕವಾಗಿದೆ.

ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ, ಭಾರತದ ಆಹಾರ ಪದ್ಧತಿಯು ಉತ್ತಮವಾಗಿದ್ದು, ಪರಿಸರಸ್ನೇಹಿಯಾಗಿದೆ. ದೇಶದ ಆಹಾರದಲ್ಲಿ ಸಿರಿಧಾನ್ಯಕ್ಕೆ ಮಹತ್ವದ ಸ್ಥಾನವಿದ್ದು, ಸುಸ್ಥಿರ ಆಹಾರ ಕ್ರಮಕ್ಕೆ ಇದು ಜಗತ್ತಿಗೆ ಮಾದರಿಯಾಗಿದೆ.

ಸುಸ್ಥಿರ ಮಾರ್ಗಗಳಲ್ಲಿ ಉತ್ತಮ ಬೆಳೆ ಇಳುವರಿ ಸಾಧಿಸುವುದು ಮತ್ತು ಜಾನುವಾರುಗಳನ್ನು ಸಾಕುವುದು, ಆಹಾರ ಪದ್ಧತಿಯಲ್ಲಿ ಬಹಳ ಮುಖ್ಯವಾಗಿ ಆಗಬೇಕಾದ ಬದಲಾವಣೆಯಾಗಿದೆ. ಜಗತ್ತಿನಲ್ಲಿ ಶೇ 30–ಶೇ 40ರಷ್ಟು ಆಹಾರವನ್ನು ವ್ಯರ್ಥ ಮಾಡಲಾಗುತ್ತಿದೆ. ಅದರ ಉತ್ಪಾದನೆಗಾಗಿ ಐದನೇ ಒಂದರಷ್ಟು ಕೃಷಿ ಭೂಮಿ ಮತ್ತು ನೀರು ಬಳಕೆಯಾಗುತ್ತಿದ್ದು, ಅದು ಶೇ 4.4ರಷ್ಟು ಹಸಿರುಮನೆ ಅನಿಲ ಹೊರಸೂಸುತ್ತಿದೆ. ಮೀನುಗಾರಿಕೆಯಲ್ಲಿ ಶೇ 10ರಷ್ಟು ಮೀನು ವ್ಯರ್ಥವಾಗುತ್ತಿದೆ.

ಜಾಗತಿಕವಾಗಿ ಶೇ 55ರಷ್ಟು ಜಿಡಿಪಿಯು ಪರಿಸರ ಮತ್ತು ಪರಿಸರ ಸಂಬಂಧಿ ಸೇವೆಗಳನ್ನು ಅವಲಂಬಿಸಿದೆ. ಆಹಾರ ಉತ್ಪಾದನೆಯು ಪರಿಸರದ ಮೇಲೆ ಬೀರುತ್ತಿರುವ ಪರಿಣಾಮಗಳನ್ನು ಕಡಿಮೆ ಮಾಡಬೇಕೆಂದರೆ, ಅಪಾರ ಪ್ರಮಾಣದ ಹಣ ಮತ್ತು ಆಡಳಿತಾತ್ಮಕ ಕ್ರಮಗಳ ಅಗತ್ಯವಿದೆ ಎಂದು ಡಬ್ಲ್ಯುಡಬ್ಲ್ಯುಎಫ್‌ನ 'ಲಿವಿಂಗ್ ಪ್ಲಾನೆಟ್ ರಿಪೋರ್ಟ್–2024 ಹೇಳುತ್ತದೆ.

ಒಂದು ಭೂಮಿ ಸಾಕಾಗದು

ಆಹಾರ ಸೇವನೆ ಪ್ರವೃತ್ತಿ ಈಗಿನಂತಿದ್ದರೆ, 2050ರ ವೇಳೆಗೆ ಆಹಾರ ಉತ್ಪಾದನೆಗೆ ಬೇಕಾಗಬಹುದಾದ ಭೂಮಿಗಳ ಸಂಖ್ಯೆ



ಪ್ರಸ್ತುತ ಜಗತ್ತಿನಾದ್ಯಂತ ದಾಖಲೆ ಪ್ರಮಾಣದಲ್ಲಿ ಆಹಾರ ಉತ್ಪಾದನೆಯಾಗುತ್ತಿದ್ದರೂ, ಜನರಿಗೆ ಪೌಷ್ಟಿಕ ಆಹಾರ ದೊರೆಯುತ್ತಿಲ್ಲ. ಸುಸ್ಥಿರ ಆಹಾರ ಪದ್ಧತಿಯನ್ನು ಅನುಸರಿಸುತ್ತಿರುವ ರಾಷ್ಟ್ರಗಳ ಸಂಖ್ಯೆ ಕಡಿಮೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಮಿತಿಗಿಂತಲೂ ಹೆಚ್ಚಿನ ಆಹಾರ ಬಳಸಲಾಗುತ್ತಿದೆ. ಕೊಬ್ಬು ಮತ್ತು ಸಕ್ಕರೆ ಅಂಶ ಹೆಚ್ಚಿರುವ ಆಹಾರ ಪದಾರ್ಥಗಳ ಸೇವನೆಯಿಂದಾಗಿ ಜನರು ಮಿತಿಗಿಂತ ಹೆಚ್ಚು ತೂಕ, ಬೊಜ್ಜಿನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ವರದಿ ಹೇಳಿದೆ. ಜಗತ್ತಿನ ಸಿರಿವಂತ ರಾಷ್ಟ್ರಗಳಲ್ಲಿ ಸದ್ಯ ಇರುವ ಆಹಾರ ಬಳಕೆ ಅಥವಾ ಆಹಾರ ಸೇವನೆ ಪ್ರವೃತ್ತಿ ಮುಂದುವರಿದಿದ್ದೇ ಆದಲ್ಲಿ, 2050ರ ವೇಳೆಗೆ ಆಹಾರ ಉತ್ಪಾದಿಸಲು ಒಂದು ಭೂಮಿ ಸಾಕಾಗುವುದಿಲ್ಲ ಎಂದು ಹೇಳಿದೆ. ಉದಾಹರಣೆಗೆ ಅರ್ಜೆಂಟೀನಾದಲ್ಲಿ ಈಗ ಅನುಸರಿಸಲಾಗುತ್ತಿರುವ ಆಹಾರ ಪದ್ಧತಿ ಮುಂದುವರಿದರೆ, 2050ರ ವೇಳೆಗೆ ಆಹಾರ ಉತ್ಪಾದಿಸಲು 7.42 ಭೂಮಿಗಳು ಬೇಕು.

ಸುಸ್ಥಿರ ಆಹಾರ ಪದ್ಧತಿಯನ್ನು ಅನುಸರಿಸುವುದರಿಂದ ಜನರಿಗೆ ಪೌಷ್ಟಿಕಾಂಶಯುಕ್ತ ಆರೋಗ್ಯಕರ ಆಹಾರವನ್ನು ಒದಗಿಸಬಹುದು ಎಂದೂ ವರದಿ ಹೇಳಿದ್ದು, ಅದಕ್ಕೆ ಭಾರತದ ಆಹಾರ ಪದ್ಧತಿಯ ಉದಾಹರಣೆ ನೀಡಿದೆ. ಇಲ್ಲಿನ ಸಿರಿಧಾನ್ಯ ಕೃಷಿಯ ಬಗ್ಗೆಯೂ ಪ್ರಸ್ತಾಪಿಸಿದೆ. ಭಾರತದ ಆಹಾರ ಪದ್ಧತಿ ಉತ್ತಮವಾಗಿದ್ದು, ಇದೇ ಪದ್ಧತಿ ಮುಂದುವರಿದರೆ 2050ರ ವೇಳೆಗೆ ಆಹಾರ ಉತ್ಪಾದಿಸಲು ಒಂದು ಭೂಮಿಯೂ ಪೂರ್ತಿ ಬೇಕಾಗಿಲ್ಲ. 0.84 ಭೂಮಿ ಸಾಕು.

ಚೆನ್ನೈ ಪ್ರವಾಹ, ಬರ: ನಗರ ವಿಸ್ತರಣೆ ಕಾರಣ

ಚೆನ್ನೈನಲ್ಲಿ 2015, 2023ರಲ್ಲಿ ಉಂಟಾದ ಪ್ರವಾಹ ಮತ್ತು 2019ರಲ್ಲಿ ಕಂಡು ಬಂದ ಬರ ಸ್ಥಿತಿಯ ಬಗ್ಗೆಯೂ ವರದಿ ಪ್ರಸ್ತಾಪಿಸಿದೆ.1988 ಮತ್ತು 2019ರ ನಡುವೆ ವೇಗವಾಗಿ ನಡೆದ ನಗರದ ವಿಸ್ತರಣೆ ಮತ್ತು ನಗರ ವ್ಯಾಪ್ತಿಯಲ್ಲಿದ್ದ ಜೌಗು ಪ್ರದೇಶ (ನೀರು ಬಸಿಯುವ ಪ್ರದೇಶ) ವ್ಯವಸ್ಥೆಯ ನಾಶವು ಪ್ರವಾಹ ಮತ್ತು ಬರಕ್ಕೆ ಕಾರಣ ಎಂದು ವರದಿ ಹೇಳಿದೆ. ನಗರದ ಬೆಳವಣಿಗೆಯಿಂದಾಗಿ ಶೇ 85ರಷ್ಟು ಚೆನ್ನೈನ ಸುತ್ತಮುತ್ತಲಿನ ಜೌಗು ಪ್ರದೇಶ ನಾಶವಾಗಿದೆ ಎಂದು ಅದು ಹೇಳಿದೆ. ಜೌಗು ಪ್ರದೇಶ, ಅದರಲ್ಲಿ ವಾಸಿಸುವ ಪ್ರಾಣಿಗಳು ಮತ್ತು ಸಸ್ಯಗಳು ಪರಿಸರ ವ್ಯವಸ್ಥೆಯ ಪ್ರಮುಖ ಭಾಗ. ಮಳೆಗಾಲದಲ್ಲಿ ನೀರನ್ನು ಸಂಗ್ರಹಿಸಿಡುವ ಜೌಗು ನೆಲವು ಪ್ರವಾಹ ಪರಿಸ್ಥಿತಿಯನ್ನು ತಡೆಯುವುದು ಮಾತ್ರವಲ್ಲದೆ, ಬೇಸಿಗೆಯಲ್ಲಿ ನೀರಿನ ಅಗತ್ಯವನ್ನು ಪೂರೈಸಿ ನೀರಿನ ಗುಣಮಟ್ಟವನ್ನೂ ಹೆಚ್ಚಿಸುತ್ತದೆ ಎಂದು ಅದು ವಿವರಿಸಿದೆ.

73.5 ಕೋಟಿ — ಜಗತ್ತಿನಲ್ಲಿ ಸಾಕಷ್ಟು ಆಹಾರ ಉತ್ಪಾದನೆಯಾಗುತ್ತಿದ್ದರೂ, ಪ್ರತಿ ದಿನ ರಾತ್ರಿ ಊಟ ಮಾಡದೇ ಹಸಿವಿನಿಂದ ಮಲಗುವವರು

10-15 ಟ್ರಿಲಿಯನ್ ಡಾಲರ್ — ಆಹಾರ ವ್ಯವಸ್ಥೆಯಿಂದಾಗಿ ಉಂಟಾಗುವ ಅನಾರೋಗ್ಯ ಮತ್ತು ಪರಿಸರಕ್ಕಾಗುವ ಹಾನಿಯಿಂದ ವಾರ್ಷಿಕವಾಗಿ ಆಗುತ್ತಿರುವ ಅಗೋಚರ ವೆಚ್ಚ

30-40% — ಉತ್ಪಾದಿತ ಆಹಾರದಲ್ಲಿ ಸೇವಿಸದೇ ಇರುವ ಆಹಾರದ ಪ್ರಮಾಣ

250 ಕೋಟಿ — ಮಿತಿಗಿಂತ ಹೆಚ್ಚು ತೂಕ ಹೊಂದಿರುವ ವಯಸ್ಕರ ಸಂಖ್ಯೆ

89 ಕೋಟಿ — ಸ್ಥೂಲಕಾಯ ಹೊಂದಿರುವವರ ಸಂಖ್ಯೆ

ಅರಿವಿನ ಪಾತ್ರೆ, ಭಿಕ್ಷಾ ಪಾತ್ರೆ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

49

ಒಮ್ಮೆ ದೇಶದಲ್ಲಿ ಭೀಕರ ಬರಗಾಲ ಇತ್ತು. ಅದರ ನಡುವೆಯೇ ಬುದ್ಧ ಪ್ರವಚನ ಮಾಡುತ್ತಿದ್ದರು. ರಾಜರು, ಮಹಾರಾಜರು, ಶ್ರೀಮಂತರು ಎಲ್ಲಾ ಪ್ರವಚನ ಕೇಳಲು ಕುಳಿತಿದ್ದರು. ಆಗ ಬುದ್ಧ 'ನಾಡಿಗೆಲ್ಲಾ ಬರಗಾಲ ಬಂದೈತಿ, ನಿಮ್ಮಲ್ಲಿ ಯಾರಾದರೂ ಮುಂದೆ ಬಂದು ಬರಗಾಲ ಕಳೆಯಲಿಕ್ಕೆ ಸಹಾಯ ಮಾಡ್ತೀರೇನು?' ಎಂದು ಕೇಳಿದ. ಪ್ರವಚನ ಕೇಳುತ್ತಾ ಮುಂದೆ ಕುಳಿತಿದ್ದ ರಾಜರು, ಮಹಾರಾಜರು, ಶ್ರೀಮಂತರು ಯಾರೂ ಮುಂದೆ ಬರಲಿಲ್ಲ. ಹತ್ತು ವರ್ಷದ ಹೆಣ್ಣು ಮಗುವೊಂದು ಮುಂದೆ ಬಂತು. ಮೈಮೇಲೆ ಹರಿದ ಬಟ್ಟೆ, ಕೈಯೊಳಗೆ ಭಿಕ್ಷಾ ಪಾತ್ರೆ ಹಿಡಕೊಂಡಿತ್ತು. ಆ ಮಗುವಿಗೆ ತಂದೆಯೂ ಇರಲಿಲ್ಲ. ತಾಯಿಯೂ ಇರಲಿಲ್ಲ.

ಆ ಮಗು ಬುದ್ಧನ ಬಳಿಗೆ ಬಂದು, 'ನಾನು ಈ ನಾಡಿನ ಬರಗಾಲವನ್ನು ಕಳೆಯಲು ಸಹಾಯ ಮಾಡ್ತೇನೆ' ಎಂದಿತು. ಬುದ್ಧನಿಗೆ ಆಶ್ಚರ್ಯ ಆಯ್ತು. 'ರಾಜ ಮಹಾರಾಜರೇ ಸುಮ್ಮನೆ ಕುಳಿತಾರ. ನಿನಗೆ ಅಪ್ಪ ಇಲ್ಲ, ಅಮ್ಮ ಇಲ್ಲ, 10 ವರ್ಷದ ಬಾಲಕಿ ನೀನು. ನಿನ್ನ ಕೈಯಲ್ಲಿ ಭಿಕ್ಷಾ ಪಾತ್ರೆ ಇದೆ. ನೀನೇ ಭಿಕ್ಷಾ ಬೇಡ್ತಿ. ಅದನ್ನು ಹಿಡಕೊಂಡು ನೀನು ಈ ನಾಡಿನ ಬರವನ್ನು ಹ್ಯಾಗೆ ಕಳೀತಿ' ಅಂತ ಕೇಳಿದ. ಅದಕ್ಕ ಆ ಮಗು, 'ನಾನು ಭಿಕ್ಷುಕಿ ಇರಬಹುದು. ನನ್ನ ಕೈಯೊಳಗೆ ಇರುವ ಭಿಕ್ಷಾ ಪಾತ್ರೆ ಸಣ್ಣದು ಇರಬಹುದು. ಆದರೆ ಬರಬಿದ್ದ ಜನರಿಗೆ ಉಣಿಸಬೇಕು ಅನ್ನೋ ನನ್ನ ಹೃದಯದ ಪಾತ್ರೆ ಬಹಳ ದೊಡ್ಡದೈತಿ. ಅದಕ್ಕ ಬಂದೀನಿ ನಾನು' ಅಂತ ಹೇಳಿತು.

ನಮ್ಮ ಕೈಯೊಳಗೆ ಹಿಡಿದ ಭಿಕ್ಷಾ ಪಾತ್ರೆ ಸಣ್ಣದಿದ್ದರೂ ಪರವಾಗಿಲ್ಲ. ಹೃದಯದೊಳಗಿನ ಭಿಕ್ಷಾಪಾತ್ರೆ ಸಣ್ಣದಿರಬಾರದು. ಆ ಬಾಲಕಿ ಬುದ್ಧನ ಬಳಿ ಬಂದು ತನ್ನ ಕೈಯೊಳಗಿನ ಭಿಕ್ಷಾ ಪಾತ್ರೆ ಬುದ್ಧನ ಮುಂದಿಟ್ಟು ಬುದ್ಧನ ಕೈಯೊಳಗಿನ ಭಿಕ್ಷಾ ಪಾತ್ರೆ ತೆಗೆದುಕೊಂಡಳು. 'ಯಾಕೆ ಹೀಗೆ ಮಾಡ್ತಿ' ಎಂದು ಬುದ್ಧ ಕೇಳಿದ. ಅದಕ್ಕೆ ಬಾಲಕಿ, 'ನನ್ನದು ಅನ್ನ ಬೇಡೋ ಭಿಕ್ಷಾ ಪಾತ್ರೆ. ನಿನ್ನ ಕೈಯೊಳಗಿನ ಭಿಕ್ಷಾ ಪಾತ್ರೆ ಐತಲ್ಲಾ, ಅದರೊಳಗೆ ಬೀಳಲು ಅನ್ನವೇ ಓಡಿಬರತೈತಿ. ಒಬ್ಬ ಭಿಕ್ಷುಕನ ಪಾತ್ರೆಗೂ ಒಬ್ಬ ಭಿಕ್ಕುವಿನ ಭಿಕ್ಷಾ ಪಾತ್ರೆಗೂ ವ್ಯತ್ಯಾಸ ಐತಿ. ನಿನ್ನ ಕೈಯೊಳಗಿನ ಭಿಕ್ಷಾ ಪಾತ್ರೆಯೊಳಗೆ ಎಷ್ಟು ಅನ್ನ ಐತಿ ಅಂದರ ಉಣ್ಣೋರೆ ಕಡಿಮೆ ಬಿದ್ದಾರ ಅಷ್ಟು ಐತಿ' ಹೀಗೆ ಹೇಳಿದ ಬಾಲಕಿ ತನ್ನ ಭಿಕ್ಷಾ ಪಾತ್ರೆಯನ್ನು ತೆಗೆದುಕೊಂಡು ಬುದ್ಧನ ಭಿಕ್ಷಾಪಾತ್ರೆಯನ್ನು ಅವನಿಗೆ ಕೊಟ್ಟಳು. 'ಬುದ್ಧನೇ ನಿನ್ನ ಭಿಕ್ಷಾಪಾತ್ರೆ ಅರಿವಿನ ಪಾತ್ರೆ, ಅದು ತಲೆಯನ್ನೂ ತುಂಬತೈತಿ, ಹೊಟ್ಟೆಯನ್ನೂ ತುಂಬತೈತಿ' ಎಂದಳು.

ನಮ್ಮ ಹೃದಯದೊಳಗೆ ಇರುವ ಭಿಕ್ಷಾ ಪಾತ್ರೆ ದೊಡ್ಡದಿರಬೇಕು. ನಾವು ದೇವರ ಆಹ್ವಾನದ ಮೇರೆಗೆ ಇಲ್ಲಿಗೆ ಬಂದವರು. ಇಲ್ಲಿ ಎಲ್ಲರೂ ಕಲಾವಿದರು. ನಾನು ಸನ್ಯಾಸಿಯಾದರೂ ನಾನೊಬ್ಬ ಕಲಾವಿದ. ರಾಜಕಾರಣಿ, ಸರ್ಕಾರಿ ನೌಕರ, ಗೃಹಿಣಿ ಎಲ್ಲರೂ ಇಲ್ಲಿ ಕಲಾವಿದರೇ. ನಮ್ಮ ನಮ್ಮ ಹಾಡನ್ನು ಸರಿಯಾಗಿ ಹಾಡಬೇಕು. ಚಲೋ ಹಾಡಿದರೆ ಮುಂದಿನ ಬಾರಿಯೂ ನಮಗೆ ಆಮಂತ್ರಣ ಇರತೈತಿ. ಕೆಡಿಸಿದರೆ ಇದೇ ಕೊನೆ ಹಾಡು. ಇದು ನಂದಲ್ಲ, ನೀನು ಕೊಟ್ಟ ಪ್ರಸಾದ ಎಂದು ಬದುಕುವುದೇ ಜೀವನ್ಮುಕ್ತ ವ್ಯವಸ್ಥೆ.

ನಾಳೆ S/O ಮುತ್ತಣ್ಣ ಟೀಸರ್ ಬಿಡುಗಡೆ

ಪ್ರಣಂ ದೇವರಾಜ್, ರಂಗಾಯಣ ರಘು

ನಟ ದೇವರಾಜ್ ಕಿರಿಯ ಪುತ್ರ ಪ್ರಣಂ ದೇವರಾಜ್ ನಟನೆಯ 'ಸನ್ ಆಫ್ ಮುತ್ತಣ್ಣ' ಚಿತ್ರದ ಟೀಸರ್ ಅ.23ಕ್ಕೆ ಬಿಡುಗಡೆಯಾಗಲಿದೆ. ನಟ ಶಿವರಾಜ್‌ಕುಮಾರ್ ಟೀಸರ್ ಬಿಡುಗಡೆ ಮಾಡಲಿದ್ದಾರೆ.

ಶ್ರೀಕಾಂತ್ ಹುಣಸೂರು ನಿರ್ದೇಶನದ ಈ ಚಿತ್ರದ ಆಡಿಯೊ ಹಕ್ಕುಗಳು ಈಗಾಗಲೇ ಮಾರಾಟವಾಗಿದೆ. ಸಿನಿಮಾದಲ್ಲಿ ಪ್ರಣಂ ದೇವರಾಜ್ ಅವರಿಗೆ ಖುಷಿ ರವಿ ನಾಯಕಿಯಾಗಿ ಜೋಡಿಯಾಗಿದ್ದಾರೆ. ರಂಗಾಯಣ ರಘು ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಶೀರ್ಷಿಕೆಯೇ ಹೇಳುವಂತೆ ಇದೊಂದು ತಂದೆ-ಮಗನ ಬಾಂಧವ್ಯದ ಕಥೆಯಾಗಿದ್ದು, ಸಿನಿಮಾಗೆ ಸ್ಕೇಟ್ಟಿಂಗ್ ಕೃಷ್ಣ ಛಾಯಾಚಿತ್ರಗ್ರಹಣ, ಹರೀಶ್ ಕೊಮ್ಮೆ ಸಂಕಲನ, ಸಚಿನ್ ಬಸ್ರೂರ್ ಸಂಗೀತ ನಿರ್ದೇಶನವಿದೆ. ಯೋಗರಾಜ್ ಭಟ್, ಜಯಂತ ಕಾಯ್ಕಿಣಿ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಪುರಾತನ ಫಿಲ್ಮಂ ಹಾಗೂ ಎಸ್‌ಆರ್‌ಕೆ ಫಿಲಂಸ್ ಸಹಯೋಗದಲ್ಲಿ ಈ ಚಿತ್ರ ನಿರ್ಮಾಣವಾಗಿದೆ.

'ಜಲಂಧರ' ಚಿತ್ರದ ಮೊದಲ ಹಾಡು ಬಿಡುಗಡೆ

ಪ್ರಮೋದ್ ಶೆಟ್ಟಿ ನಾಯಕರಾಗಿ ನಟಿಸಿರುವ, ವಿಷ್ಣು ವಿ.ಪ್ರಸನ್ನ ನಿರ್ದೇಶನದ 'ಜಲಂಧರ' ಚಿತ್ರದ 'ಹುಟ್ಟುತ್ತಾ ನಾವು' ಎಂಬ ಹಾಡಿನ ಲಿರಿಕಲ್ ವೀಡಿಯೊ ಜಂಕಾರ್ ಮ್ಯೂಸಿಕ್ ಯೂಟ್ಯೂಬ್ ಮೂಲಕ ಬಿಡುಗಡೆಯಾಗಿದೆ.

ಮನ್ವರ್ಷಿ ನವಲಗುಂದ ಬರೆದಿರುವ ಈ ಹಾಡನ್ನು ಅವಿನಾಶ್ ಬಸತ್ಕೂರ್ ಹಾಡಿದ್ದಾರೆ. ಜತಿನ್ ದರ್ಶನ್ ಸಂಗೀತ ನೀಡಿದ್ದಾರೆ. 'ಈ ಕಥೆಯನ್ನು ಕೋವಿಡ್ ಪೂರ್ವದಲ್ಲಿ ಸ್ಟೆಪ್ ಅಪ್ ಲೋಕಿ ಹೇಳಿದ್ದರು. ನಾನು ಇದರಲ್ಲಿ ಪೊಲೀಸ್ ಅಧಿಕಾರಿ ಪಾತ್ರ ಮಾಡಿದ್ದೇನೆ. ಆದರೆ ಇದು ಗಂಭೀರವಾದ ಪಾತ್ರ. ನಾನೊಬ್ಬನೇ ಇದರಲ್ಲಿ ಹೀರೋ ಅಲ್ಲ. ಕಥೆ ಹಾಗೂ ಅಭಿನಯಿಸಿರುವ ಕಲಾವಿದರು ಎಲ್ಲರೂ ನಾಯಕರೇ. ಕನಕಪುರ ಭಾಗದ ಜಾನಪದ ಕಲೆಯನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. 'ಹುಟ್ಟುತ್ತಾ ನಾವು' ಹಾಡಿನಲ್ಲಿ ಚಿತ್ರದ ಕಥೆ ಹೇಳುವ ಪ್ರಯತ್ನ ಮಾಡಲಾಗಿದೆ' ಎಂದರು ಪ್ರಮೋದ್ ಶೆಟ್ಟಿ.

ಚಿತ್ರದ ಕಥೆಯನ್ನು ನಿರ್ಮಾಪಕ ಲೋಕಿ ಅವರು ಬರೆದಿದ್ದು, 'ನೀರಿನ ಬಗ್ಗೆ ನಮ್ಮ ಅಜ್ಜಿ ಹೇಳುತ್ತಿದ್ದ ಕಥೆ, ಈ ಚಿತ್ರದ ಕಥೆ ಬರೆಯಲು ಸ್ಫೂರ್ತಿ. ನಾನು ಈ ಚಿತ್ರದಲ್ಲಿ ಪಾತ್ರವೊಂದಕ್ಕೆ ಬಣ್ಣ ಹಚ್ಚಿದ್ದೇನೆ' ಎಂದರು ಲೋಕಿ. ಪ್ರಮೋದ್‌ಗೆ ಜೋಡಿಯಾಗಿ 'ಟಗರು' ಖ್ಯಾತಿಯ ರುಶಿಕಾ ರಾಜ್ ನಟಿಸಿದ್ದು, ಆರೋಹಿತ ಗೌಡ, ಬಲ ರಾಜವಾಡಿ, ನವೀನ್ ಸಾಗರ್, ಪ್ರತಾಪ್ ನನಸು, ಆದಿ ಕೇಶವರೆಡ್ಡಿ, ಭೀಷ್ಮಾ ರಾಮಯ್ಯ, ವಿಜಯರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸರಿನ್ ರವೀಂದ್ರನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ರುಶಿಕಾ, ಪ್ರಮೋದ್ ಶೆಟ್ಟಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಮಂಗಳವಾರ ಅಕ್ಟೋಬರ್ 22, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಕೃಷ್ಣಷಷ್ಠಿ ಗಂ. 25-30 ನಕ್ಷತ್ರ ಆರ್ದ್ರಾ ಗಂ. 29-39 ಯೋಗ: ಪರಿಘ ಗಂ. 08-46 ಕರಣ: ಗರ ಗಂ. 13-54 ನಂತರ ವಣಿಜ ಗಂ. 25-30, ತುಲಾ ಮಾಸದ 05 ನೇ ದಿನ, ಮಳೆನಕ್ಷತ್ರ: ಚಿತ್ರ 4.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-26 **ಸೂರ್ಯಾಸ್ತ:** 06-04
ಮುಸ್ಲಿಂ ದಿನಾಂಕ: 18 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ: 2, 8

ಮೇಷ: ಐ.ಟಿ.ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಆದಾಯ ಕಂಡುಬರಲಿದೆ. ಮನೆಯ ಒಳಗೆ ಹಾಗೂ ಹೊರಗೆ ಹೇಗೆ ವರ್ತಿಸುವಿರಿ ಎಂಬುದು ಉತ್ತಮ ಬದುಕಿಗೆ ಕಾರಣವಾಗುತ್ತದೆ.

ವೃಷಭ: ಸರಿಯಾಗಿ ಆಲೋಚಿಸಿದ ಬಳಿಕವಷ್ಟೇ ಯಾವುದೇ ಕೆಲಸವನ್ನು ಆರಂಭಿಸುವುದು ಒಳ್ಳೆಯದು. ಹೊಸ ಜವಾಬ್ದಾರಿಯೊಂದನ್ನು ನಿಭಾಯಿಸ ಬೇಕಾಗುವುದು. ದೂರ ಪ್ರಯಾಣವನ್ನು ರಾಹುಕಾಲದ ನಂತರದ ಆರಂಭಿಸಿ.

ಮಿಥುನ: ನಿಮ್ಮ ಕೈಕೆಳಗಿನ ನೌಕರರ ನೆರವು ಅಗತ್ಯವೆನಿಸಲಿದೆ. ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಮನಸ್ಸು ಉಲ್ಲಾಸಿತವಾಗಿರುವುದು. ದೇಹದ ಉಷ್ಣಾಂಶ ಹೆಚ್ಚಳವಾಗುವ ಲಕ್ಷಣಗಳಿವೆ.

ಕರ್ಕಾಟಕ: ಸಮಸ್ಯೆಗಳ ಪರಿಹಾರಕ್ಕಾಗಿ ಹಿತ ಚಿಂತಕರೊಡನೆ ಚರ್ಚಿಸುವುದು ಒಳ್ಳೆಯದು. ಲೇವಾದೇವಿ ವ್ಯವಹಾರಗಳಿಂದ ನಷ್ಟವಾಗುವ ಸಾಧ್ಯತೆ ಇದೆ. ಕೆಲಸಗಳಲ್ಲಿ ಯಶಸನ್ನು ಪಡೆಯುವಿರಿ.

ಸಿಂಹ: ನಿವೃತ್ತಿ ಬಳಿಕ ಜೀವನದಲ್ಲಿ ನೆಲೆ ಕಂಡ ಸಂತೃಪ್ತಿ ಭಾವ ಮೂಡಲಿದೆ. ಸಹೋದ್ಯೋಗಿಗಳ ಮಾತಿಗೆ ಗೌರವ ಕೊಡುವುದು ಉತ್ತಮ. ಸಂಜೆಯೊಳಗೆ ಅಚ್ಚರಿಯ ಸುದ್ದಿಯೊಂದನ್ನು ಕೇಳುವಿರಿ.

ಕನ್ಯಾ: ಸಹೋದ್ಯೋಗಿಗಳಿಂದ ಹೆಚ್ಚಿನ ಸಹಕಾರ ನಿರೀಕ್ಷಿಸಬೇಡಿ. ಕೋರ್ಟ್ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ಸೂಕ್ತ ಸಮಯ. ಮದುವೆ ವಿಚಾರವಾಗಿ ನಿಮ್ಮ ನಿರ್ಧಾರವನ್ನು ಹಿರಿಯರಿಗೆ ಸ್ಪಷ್ಟವಾಗಿ ತಿಳಿಸಿರಿ.

ತುಲಾ: ವೈದ್ಯಕೀಯ ಖರ್ಚಿನ ಹಣವನ್ನು ವಿಮಾ ಸಂಸ್ಥೆಯಿಂದ ಪಡೆದುಕೊಳ್ಳುವಂತಾಗುವುದು. ಕೌಟುಂಬಿಕ ಕಲಹದಿಂದ ಆದಷ್ಟು ದೂರ ಇರುವುದು ಒಳ್ಳೆಯದು. ಕಚೇರಿಯಲ್ಲಿ ಸಹೋದ್ಯೋಗಿಗಳು ಕಿರುಕುಳ ನೀಡಬಹುದು.

ವೃಶ್ಚಿಕ: ಸತ್ಯನಾರಾಯಣ ಸ್ವಾಮಿಯ ಆರಾಧನೆಯಿಂದ ಜಟಿಲ ಸಮಸ್ಯೆಗಳು ಕೂಡ ಸುಲಭವಾಗಿ ಬಗೆಹರಿಯಲಿವೆ. ದುರಾಲೋಚನೆಗಳನ್ನು ಬದಲಿಸಿ ಕೊಳ್ಳಲು ಸೂಕ್ತ ಸಮಯ ಇದಾಗಿದೆ. ಹಣದ ಹರಿವು ಸರಾಗವಾಗಿರಲಿದೆ.

ಧನು: ಹೊಸ ಕಾರ್ಯ ಆರಂಭಿಸುವ ಮುನ್ನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವುದು ಒಳಿತು. ಇನ್ನೊಬ್ಬರಿಗೆ ಮೋಸ ಮಾಡುವ ಮನಸ್ಥಿತಿಯಿಂದ ಹೊರಬನ್ನಿ.

ಮಕರ: ನಿರೀಕ್ಷಿತ ಸ್ಥಾನಮಾನಗಳು ಪ್ರಾಪ್ತಿಯಾಗಲಿವೆ. ಸಂಸಾರದಲ್ಲಿ ಸುಖ ಕಂಡುಬರಲಿದೆ. ದೀರ್ಘ ಪ್ರಯಾಣದಿಂದ ದೇಹಾಯಾಸ ಆಗುವುದು. ಬಂಗಾರ ವ್ಯಾಪಾರಿಗಳು ತಾಳ್ಮೆಯನ್ನು ಕಳೆದುಕೊಳ್ಳಬೇಡಿ.

ಕುಂಭ: ಕೆಲಸ ಆರಂಭಕ್ಕೆ ಮುನ್ನ ಆಳವಾಗಿ ಯೋಚಿಸದೇ ಮುಂದುವರೆಯುವುದು ಸರಿಯಲ್ಲ. ಸಂತಾನ ಅಪೇಕ್ಷಿಗಳಿಗೆ ಶುಭ ಸಮಾಚಾರ ಕೇಳಿಬರಲಿದೆ. ಗೃಹೋಪಕರಣಗಳ ಖರೀದಿಗೆ ಶುಭದಿನ.

ಮೀನ: ಮಕ್ಕಳ ದಾಂಪತ್ಯದಲ್ಲಿ ಅನುರಾಗ ವೃದ್ಧಿಯಾಗಿ ನೆಮ್ಮದಿ ಉಂಟಾಗಲಿದೆ. ಬರಬೇಕಾದ ಹಣ ಕೈ ಸೇರಲು ಹೆಚ್ಚಿನ ಪ್ರಯತ್ನ ಅಗತ್ಯ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕಂತಹ ಫಲ ಸಿಗದಿರಬಹುದು. ಗಣಪತಿಯನ್ನು ಆರಾಧಿಸಿ.

ಪದಬಂಧ 5839

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಈತ ಪರಿಚಯವೇ ಇಲ್ಲದವನು (5)
6.ನಡುವೆ ರಂಪವಿದ್ದಾಗ ಕಂಡದ್ದು ಈ ಸಂಪ್ರದಾಯ! (4)
7.ಪತಿಯ ಬಳಿ ಸರ ಕೇಳಿದ್ದು ಸ್ವಂತ ಹೆಂಡತಿಯಲ್ಲ! (4)
9.ಮರ ಅಥವಾ ಲೋಹದ ಪೀಠ (2)
10.ಪ್ರತಿಭೆಯಲ್ಲಿರುವ ಕಾಂತಿ (2)
11.ಈತ ಬುದ್ಧಿಯಿಲ್ಲದವನು (4)
14.ತರಂಗವನ್ನು ನೋಡುತ್ತಿರುವವನು ತುಂಬಾ ನಿಪುಣ! (4)
15.ಅದೇತಾನೆ ಮದುವೆಯಾದ ಗಂಡಹೆಂಡತಿ (5)

ಮೇಲಿಂದ ಕೆಳಕ್ಕೆ
1.ಶಾಪವನ್ನು ಹೊಂದಿದವನು (4)
2.ಅಪ್ಪನ ಈ ರೂಪ ತುಸು ವಿರಳ (4)
4.ಪದವಿಯನ್ನು ಕಳೆದುಕೊಳ್ಳುವಿಕೆ (4)
5.ಬರಿದಾಗದ ಬತ್ತಳಿಕೆ (4)
8.ಸತಿಗೆ ಸಿಕ್ಕಿರುವ ಮೋಕ್ಷ (3)
10.ಜನ ಕೊನೆಗಿದ್ದಾಗಲೇ ಬಿರುಗಾಳಿ! (4)
11.ಮನದ ವಿಷಯ ಪ್ರಸ್ತಾಪ ಮಾಡಿದ್ದಕ್ಕೇ ಈ ದ್ವೇಷ (4)
12.ನವ ದೇವಾಲಯದ ಸಭಾಮಂಟಪವಿದು (4)
13.ಒಂದು ಗ್ರಂಥದ ಬೇರೆ ಬೇರೆ ಪ್ರತಿಗಳಲ್ಲಿ ಕಂಡು ಬರುವ ಬೇರೆ ಬೇರೆ ಪಾಠ (4)



5838ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕವಾಡಿಗ 4.ಪ್ರಹಾರ
5.ಜಾಡು 6.ಜಾಗ
7.ಭ್ರೂಣಹತ್ಯೆ 9.ಪ್ರತಿ
10.ಜ್ಞಾನ 11.ಪರಿಸರ
13.ತಿದಿ 14.ಯಿಬಾ
15.ಹಲಗೆ 16.ಹಜಾಮತಿ

ಮೇಲಿಂದ ಕೆಳಕ್ಕೆ:
1.ಸಹಾನುಭೂತಿ 2.ಕಡುದಾಹ
3.ಗಜಗಮನ 8.ಣದ್ರುಸ
9.ಪ್ರಸೂತಿಗೃಹ 10.ಜ್ಞಾತಿಕಲಹ
12.ರಿಯಾಯಿತಿ

ಸುಡೊಕು 6224

				5		7		2
	9	3	6		7			
		7		3		6		9
	6			1		8		7
7		9	5				1	
	8			9		3		5
	7		3		1			
5				2			7	3
	3		9		5		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6223 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,854
ಇಂದಿನ ಅಂತ್ಯ	24,781
▼	73
ದಿನದ ಕನಿಷ್ಠ	24,679

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹555
12 ಕ್ಕೆ	₹75
ಮೈಸೂರು	
100ಕ್ಕೆ	₹560

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕಿ)	₹203-459
ದ್ವಿತಳಿ (ಪ್ರ.ಕಿ)	₹222-628

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹173

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1490 (1505)
ಸೋಯಾ (ರಿಫೈನ್ಡ್)	₹1250 (1260)
ಸೂರ್ಯಕಾಂತಿ (ರಿಫೈನ್ಡ್)	₹1290 (1300)
ಪಾಮೋಲಿನ್	₹1260 (1255)

ಮುದ್ರಮನೆ ಕಾಫಿ

(50 ಕೆಜಿಗೆ)

ಎಪಿ	₹18000
ಎಸಿ	₹11370
ಆರ್‌ಪಿ	₹20000
ಆರ್‌ಸಿ	₹10270

ವಿನಿಮಯ ದರ

$	ಡಾಲರ್	84.07
£	ಪೌಂಡ್	109.44
€	ಯುರೊ	91.18
¥	ಯೆನ್ (100ಕ್ಕೆ)	56

‘ಇ–ಶ್ರಮ್’: ಒಂದೇ ಸೂರಿನಡಿ ಮಾಹಿತಿ ಯೋಜನೆಗೆ ಚಾಲನೆ

ನವದೆಹಲಿ (ಪಿಟಿಐ): ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ಸಚಿವ ಮನ್ಸುಖ್ ಮಾಂಡವೀಯ ಅವರು ಸೋಮವಾರ ‘ಇ–ಶ್ರಮ್–ಒನ್ ಸ್ಟಾಪ್ ಸಲ್ಯೂಷನ್’ಗೆ ಚಾಲನೆ ನೀಡಿದರು.

ಈ ಪೋರ್ಟಲ್‌ನಡಿ ಅಸಂಘಟಿತ ವಲಯದ ಕಾರ್ಮಿಕರಿಗೆ ಒಂದೇ ಸೂರಿನಡಿ ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಸಮಗ್ರ ಮಾಹಿತಿ ದೊರೆಯಲಿದೆ. ಪ್ರತಿದಿನ 60 ಸಾವಿರದಿಂದ 90 ಸಾವಿರ ಕಾರ್ಮಿಕರು ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿ ಆಗುತ್ತಿದ್ದಾರೆ. ಇದು ಅವರಲ್ಲಿ ವಿಶ್ವಾಸವನ್ನು ಹೆಚ್ಚಿಸುತ್ತಿದೆ ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸರ್ಕಾರದ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಯೋಜನೆಗಳ ಬಗ್ಗೆ ಫಲಾನುಭವಿಗಳು ಮಾಹಿತಿ ಪಡೆಯಲು ಇದರಿಂದ ನೆರವಾಗಲಿದೆ. ಈ ವೇದಿಕೆಯು ಸೇತುವೆಯಾಗಿ ಕಾರ್ಯನಿರ್ವಹಿಸಲಿದ್ದು, ನೋಂದಣಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವುದು ಮತ್ತು ಹೆಚ್ಚು ಪಾರದರ್ಶಕವನ್ನಾಗಿಸುವ ಮೂಲಕ ಕಾರ್ಮಿಕರನ್ನು ಸಂಪರ್ಕಿಸುತ್ತದೆ ಎಂದು ಹೇಳಿದರು.

ಎಲ್ಲಾ ಅಸಂಘಟಿತ ವಲಯದ ಕಾರ್ಮಿಕರು ಇ–ಶ್ರಮ್ ಪೋರ್ಟಲ್‌ನಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು ಮತ್ತು ವಿವಿಧ ಕಲ್ಯಾಣ ಯೋಜನೆಗಳ ಲಾಭವನ್ನು ಪಡೆದುಕೊಳ್ಳಬೇಕು ಎಂದು ಕಾರ್ಮಿಕರಿಗೆ ತಿಳಿಸಿದರು.

ಬೆಳ್ಳಿ ದರ ಕೆ.ಜಿಗೆ ₹5 ಸಾವಿರ ಏರಿಕೆ

ನವದೆಹಲಿ/ಬೆಂಗಳೂರು (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಬೆಳ್ಳಿ ಧಾರಣೆಯಲ್ಲಿ ಭಾರಿ ಏರಿಕೆಯಾಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹5 ಸಾವಿರ ಏರಿಕೆಯಾಗಿ ₹99,500ಕ್ಕೆ ಮುಟ್ಟಿದೆ. ಇದೇ ವೇಳೆ ಚಿನ್ನದ ದರವು 10 ಗ್ರಾಂಗೆ ₹750 ಹೆಚ್ಚಳವಾಗಿ ₹80,650ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಂಗಳೂರಿನಲ್ಲಿ ಕೆ.ಜಿ. ಬೆಳ್ಳಿ ಧಾರಣೆ ₹1.03 ಲಕ್ಷಕ್ಕೆ ಮುಟ್ಟಿದ್ದರೆ, 10 ಗ್ರಾಂ ಚಿನ್ನದ ದರವು ₹82,020 ಆಗಿದೆ.

ಏರಿಕೆಗೆ ಕಾರಣವೇನು?: ಹಬ್ಬದ ಋತು ಮತ್ತು ಮದುವೆ ಅಂಗವಾಗಿ ಬೇಡಿಕೆ ಹೆಚ್ಚಿರುವುದು, ಸ್ಥಳೀಯ ಆಭರಣ ತಯಾರಕರಿಂದ ಖರೀದಿಯಲ್ಲಿ ಹೆಚ್ಚಳ, ಕೈಗಾರಿಕೆಗಳಲ್ಲಿ ಹೆಚ್ಚಿದ ಬೇಡಿಕೆ, ಚಿನ್ನದ ಬೆಲೆ ಏರಿಕೆಯಿಂದ ಹೂಡಿಕೆದಾರರು ಹಾಗೂ ಖರೀದಿದಾರರು ಬೆಳ್ಳಿ ಖರೀದಿಸಲು ಮುಂದಾಗಿರುವುದರಿಂದ ಬೆಲೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಎನ್‌ಡಿಟಿವಿ ವರ್ಲ್ಡ್ ಸಮಿಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅಭಿಮತ

‘ಕೈಗಾರಿಕಾ ಕ್ರಾಂತಿ 4.0ಗೆ ಭಾರತ ಸಿದ್ಧ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಬ್ರಿಟಿಷರ ಆಳ್ವಿಕೆ ಇದ್ದಿದ್ದರಿಂದಾಗಿ ಕೈಗಾರಿಕಾ ಕ್ರಾಂತಿಯ ಲಾಭವನ್ನು ಪಡೆಯಲು ಭಾರತಕ್ಕೆ ಸಾಧ್ಯವಾಗಲಿಲ್ಲ. ಆದರೆ, ‘ಕೈಗಾರಿಕಾ ಕ್ರಾಂತಿ 4.0’ಕ್ಕೆ ಬೇಕಾಗಿರುವ ಎಲ್ಲ ಕೌಶಲ ಹಾಗೂ ಮೂಲಸೌಕರ್ಯಗಳನ್ನು ಪಡೆದುಕೊಳ್ಳಲು ಭಾರತವು ಕ್ಷಿಪ್ರವಾಗಿ ಕೆಲಸ ಮಾಡುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸೋಮವಾರ ನಡೆದ ‘ಎನ್‌ಡಿಟಿವಿ ವರ್ಲ್ಡ್ ಸಮಿಟ್’ನಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಸಂಪರ್ಕ, ಆಧುನಿಕ ತಂತ್ರಜ್ಞಾನ, ಆಧುನಿಕ ಉತ್ಪಾದನಾ ತಂತ್ರಜ್ಞಾನವನ್ನು ಮೈಗೂಡಿಸಿಕೊಂಡಿರುವ ಈ ಯುಗದ ಕೈಗಾರಿಕಾ ಅಭಿವೃದ್ಧಿಯನ್ನು ‘ಕೈಗಾರಿಕಾ ಕ್ರಾಂತಿ 4.0’ ಎಂದು ಕರೆಯಲಾಗುತ್ತದೆ.

ಈ ಬಗ್ಗೆ ಪ್ರಸ್ತಾಪಿಸಿದ ಮಾತನಾಡಿದ ಪ್ರಧಾನಿ ಮೋದಿ, ‘ಕೈಗಾರಿಕಾ ಕ್ರಾಂತಿ 4.0’ರ ಈ ಯುಗದಲ್ಲಿ ಭಾರತವು ಯಾರಿಗೂ ಗುಲಾಮನಾಗಿಲ್ಲ. ಸ್ವಾತಂತ್ರ್ಯ ಪಡೆದುಕೊಂಡು 75 ವರ್ಷಗಳು ಸಂದಿವೆ. ಆದ್ದರಿಂದ, ಕೈಗಾರಿಕಾ ಕ್ರಾಂತಿಯ ಈ ಯುಗಕ್ಕೆ ನಾವು ಸಿದ್ಧರಾಗಿದ್ದೇವೆ’ ಎಂದು ಅಭಿಪ್ರಾಯಪಟ್ಟರು.

ಪ್ರಧಾನಿ ಮೋದಿ

‘ಭಾರತದ ಅಭಿವೃದ್ಧಿಯು ಇತರ ದೇಶಗಳಲ್ಲಿ ಅಸೂಯೆಯನ್ನು ಹುಟ್ಟಿಸುತ್ತಿಲ್ಲ. ಭಾರತ ಅಭಿವೃದ್ಧಿ ಹೊಂದುತ್ತಿರುವುದರಿಂದಾಗಿ ನಮಗೆ ಯಾವ ಶತ್ರುಗಳೂ ಹುಟ್ಟಿಕೊಳ್ಳುತ್ತಿಲ್ಲ. ನಮ್ಮ ಅಭಿವೃದ್ಧಿಗೆ ಜಗತ್ತು ಸಂತಸ ಪಡುತ್ತಿದೆ ಮತ್ತು ನಮ್ಮ ಅಭಿವೃದ್ಧಿಯು ಜಗತ್ತಿಗೆ ಸಹಕಾರಿಯಾಗುತ್ತಿದೆ’ ಎಂದು ವಿಶ್ಲೇಷಿಸಿದರು.

‘ಭಾರತದ ಬಳಿ ಇದೆ ‘ಡಬಲ್ ಎಐ’

‘ಭಾರತದ ಬಳಿ ‘ಡಬಲ್ ಎಐ’ಗಳ ಶಕ್ತಿ ಮತ್ತು ಅನುಕೂಲಗಳಿವೆ. ಒಂದು ‘ಆ್ಯಸ್ಪಿರೇಷನಲ್ ಇಂಡಿಯಾ’ (ಮಹತ್ವಾಕಾಂಕ್ಷೆಯ ಭಾರತ) ಮತ್ತೊಂದು ‘ಕೃತಕ ಬುದ್ಧಿಮತ್ತೆ’. ಈ ಎರಡು ಶಕ್ತಿಗಳು ಮೇಳೈಸಿದರೆ ಸಹಜವಾಗಿ ಅಭಿವೃದ್ಧಿಯು ವೇಗ ಪಡೆಯುತ್ತದೆ’ ಎಂದು ಪ್ರಧಾನಿ ಮೋದಿ ಅಭಿಪ್ರಾಯಪಟ್ಟರು.

‘ತಂತ್ರಜ್ಞಾನ, ಡಿಜಿಟಲ್ ಕ್ಷೇತ್ರದ ಹೊಸ ಅನ್ವೇಷಣೆಗಳು ಮತ್ತು ಪ್ರಜಾಪ್ರಭುತ್ವ ತತ್ವಗಳು ಒಟ್ಟೊಟ್ಟಿಗೆ ಸಾಗಬಹುದು ಎಂಬುದನ್ನು ಭಾರತವು ಜಗತ್ತಿಗೆ ತೋರಿಸಿದೆ. ತಂತ್ರಜ್ಞಾನ ಎಂಬುದು ಜನರನ್ನು ವಿಭಜಿಸುವ ಅಥವಾ ನಿಯಂತ್ರಿಸುವುದಕ್ಕೆ ಇರುವ ಸಾಧನವಲ್ಲ. ಬದಲಿಗೆ ಎಲ್ಲರನ್ನೂ ಒಳಗೊಳ್ಳುವ, ಪಾರದರ್ಶಕವಾದ ಹಾಗೂ ಸಬಲೀಕರಣಕ್ಕೆ ಸಾಕಾರಕ್ಕೆ ಸಾಧನವಾಗಬಹುದು ಎಂಬುದನ್ನೂ ದೇಶ ತೋರಿಸಿದೆ’ ಎಂದು ಶ್ಲಾಘಿಸಿದರು.

‘ಸ್ಥಿರತೆಗಾಗಿ ಮತ; ಜನರ ಸಂದೇಶ’: ‘ಆರು ದಶಕಗಳಲ್ಲಿ ಇದೇ ಮೊದಲ ಬಾರಿಗೆ ಸರ್ಕಾರವೊಂದಕ್ಕೆ ಸತತವಾಗಿ ಮೂರನೇ ಬಾರಿಗೆ ಜನರು ಅವಕಾಶ ನೀಡಿದ್ದಾರೆ. ನಮಗೆ ಸ್ಥಿರತೆ ಬೇಕು ಎನ್ನುವ ಕುರಿತ ಜನರ ಸಂದೇಶವಿದು. ಹರಿಯಾಣ ಚುನಾವಣೆಯಲ್ಲಿಯೂ ಜನರು ಇದೇ ಸಂದೇಶ ವನ್ನು ರವಾನಿಸಿದರು’ ಎಂದು ಪ್ರಧಾನಿ ಮೋದಿ ಅಭಿಪ್ರಾಯಪಟ್ಟರು.

‘ನಂಬಿಕೆ, ವಿಶ್ವಾಸಾರ್ಹತೆ: ದೇಶಗಳ ನಡುವಿನ ಸಂಬಂಧಗಳ ಅಡಿಪಾಯ’

‘ಹಗುರವಾಗಿ ಪರಿಗಣಿಸುವಂಥ ಸಂಬಂಧದಲ್ಲಿ ಭಾರತಕ್ಕೆ ನಂಬಿಕೆ ಇಲ್ಲ. ವಿಶ್ವಾಸಾರ್ಹತೆ ಮತ್ತು ನಂಬಿಕೆಯು ಎರಡು ದೇಶಗಳ ಸಂಬಂಧಕ್ಕೆ ಅಡಿಪಾಯವಾಗುತ್ತವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯಪಟ್ಟರು.

ಭಾರತ–ಕೆನಡಾ ದೇಶಗಳ ಮಧ್ಯೆ ಸಂಘರ್ಷ ನಡೆಯುತ್ತಿರುವ ಈ ಹೊತ್ತಿನಲ್ಲಿಯೇ ಪ್ರಧಾನಿ ಮೋದಿ ಅವರು ಈ ಹೇಳಿಕೆ ನೀಡಿದ್ದಾರೆ. ಕೆನಡಾ ಜೊತೆಗಿನ ಸಂಘರ್ಷದ ಕುರಿತು ಮೋದಿ ಅವರು ತಮ್ಮ ಭಾಷಣದಲ್ಲಿ ಎಲ್ಲಿಯೂ ಪ್ರಸ್ತಾಪ ಮಾಡಲಿಲ್ಲ.

‘ನಂಬಿಕೆ ಹಾಗೂ ವಿಶ್ವಾಸಾರ್ಹತೆಯ ಅಡಿಪಾಲದ ಮೇಲೆಯೇ ಭಾರತ ಹಾಗೂ ಇತರ ದೇಶಗಳ ಸಂಬಂಧ ನಿಂತಿದೆ. ಇದನ್ನು ಇಡೀ ಜಗತ್ತೇ ಅರಿತುಕೊಳ್ಳುತ್ತಿದೆ. ಜೊತೆಗೆ, ಹಲವು ಕ್ಷೇತ್ರದಲ್ಲಿ ಭಾರತವು ‘ಜಗತ್ತಿನ ಭವಿಷ್ಯ’ದ ದಿಕ್ಕನ್ನು ನಿರ್ದೇಶಿಸುತ್ತಿದೆ. ಬಿಕ್ಕಟ್ಟುಗಳ ಸಂದರ್ಭದಲ್ಲಿ ಭಾರತವು ಉತ್ತಮ ಸ್ನೇಹಿತನಾಗಬಲ್ಲದು ಎಂದು ಜಗತ್ತು ಅರಿತುಕೊಳ್ಳುತ್ತಿದೆ’ ಎಂದರು.

‘10 ವರ್ಷ ಉಡಾನ್ ಯೋಜನೆ ವಿಸ್ತರಣೆ’

ನವದೆಹಲಿ (ಪಿಟಿಐ): ಪ್ರಾದೇಶಿಕ ಸಂಪರ್ಕ ಯೋಜನೆ (ಉಡಾನ್) ಅನ್ನು ಇನ್ನೂ 10 ವರ್ಷಗಳವರೆಗೆ ವಿಸ್ತರಿಸಲಾಗುವುದು ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು ಸೋಮವಾರ ಹೇಳಿದ್ದಾರೆ.

ಈ ಯೋಜನೆಯು ಪ್ರಾದೇಶಿಕ ವಿಮಾನಯಾನ ಸಂಸ್ಥೆಗಳ ಹುಟ್ಟು ಮತ್ತು ಬೆಳವಣಿಗೆಗೆ ಕಾರಣವಾಗಿದೆ. ಇದು ಉದ್ಯೋಗ ಸೃಷ್ಟಿ ಮತ್ತು ಪ್ರವಾಸೋದ್ಯಮಕ್ಕೆ ಉತ್ತಮ ಕೊಡುಗೆ ನೀಡಿದೆ ಎಂದು ಉಡಾನ್ ಯೋಜನೆಗೆ 8 ವರ್ಷ ಪೂರ್ಣಗೊಂಡ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

601 ಮಾರ್ಗಗಳು ಮತ್ತು 71 ವಿಮಾನ ನಿಲ್ದಾಣಗಳು ಈ ಯೋಜನೆಯಡಿ ಕಾರ್ಯನಿರ್ವಹಿಸುತ್ತಿವೆ.

ದೇಶದ ವಿವಿಧ ಪ್ರದೇಶಕ್ಕೆ ವಿಮಾನ ಸಂಪರ್ಕ ಕಲ್ಪಿಸಲು ಮತ್ತು ಕೈಗೆಟುಕುವ ದರದಲ್ಲಿ ವಿಮಾನ ಪ್ರಯಾಣ ಸೇವೆ ಒದಗಿಸಲು 2016ರ ಅಕ್ಟೋಬರ್ 21ರಂದು ಉಡಾನ್ ಆರಂಭಿಸಲಾಯಿತು. ಇದೀಗ ಈ ಯೋಜನೆಯನ್ನು ಇನ್ನೂ 10 ವರ್ಷಗಳ ವರೆಗೆ ವಿಸ್ತರಿಸಲಾಗುವುದು ಎಂದು ತಿಳಿಸಿದ್ದಾರೆ.

71 ವಿಮಾನ ನಿಲ್ದಾಣಗಳು, 13 ಹೆಲಿಪೋರ್ಟ್ಸ್ ಮತ್ತು 2 ವಾಟರ್ ಏರೋಡ್ರೋಮ್ಸ್ ಇದ್ದು, 1.44 ಕೋಟಿಗೂ ಅಧಿಕ ಜನ ಪ್ರಯಾಣಿಸುತ್ತಿದ್ದಾರೆ. 2014ರಲ್ಲಿ ದೇಶದಲ್ಲಿ 74 ವಿಮಾನ ನಿಲ್ದಾಣಗಳು ಕಾರ್ಯಾಚರಿಸುತ್ತಿದ್ದವು. ಅದು 2024ರ ವೇಳೆಗೆ 157ಕ್ಕೆ ಏರಿಕೆಯಾಗಿದೆ. 2047ರ ವೇಳೆಗೆ 350–400ಕ್ಕೆ ಹೆಚ್ಚಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14000-15500
ಬೆಂಗಳೂರು	₹18000-20000
ಮಧುಗಿರಿ	₹8000-9200
ತಿಪಟೂರು	₹13000-14000
ತುರುವೇಕೆರೆ	₹13000-14000

2023–24ನೇ ಸಾಲಿನ ಜಿಡಿಪಿ ಬೆಳವಣಿಗೆ ಶೇ 10.2ರಷ್ಟು ದಾಖಲು

ಕರ್ನಾಟಕದ ಜಿಡಿಪಿ ದೇಶದಲ್ಲೇ ಅಧಿಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ 2023-24ನೇ ಸಾಲಿನ ಜಿಡಿಪಿ ಬೆಳವಣಿಗೆ ಶೇ 10.2ರಷ್ಟಿದ್ದು, ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ (ಎನ್‌ಎಸ್‌ಸಿ) ಸಚಿವಾಲಯ ಅಂದಾಜಿಸಿದ್ದಕ್ಕಿಂತ ಶೇ 6.2 ಹೆಚ್ಚು ಪ್ರಗತಿ ಸಾಧಿಸಿದೆ ಎಂದು ಮುಖ್ಯಮಂತ್ರಿ ಸಚಿವಾಲಯ ಹೇಳಿದೆ.

ಎನ್‌ಎಸ್‌ಸಿ ಅಂಕಿಅಂಶಗಳ ಪ್ರಕಾರ ದೇಶದ ಸರಾಸರಿ ಜಿಡಿಪಿ ಶೇ 8.2 ಆಗಿದ್ದು, ಜಿಡಿಪಿಯಲ್ಲಿ ಕರ್ನಾಟಕ ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಕಳೆದ ವರ್ಷ ರಾಜ್ಯ ಬರಗಾಲಕ್ಕೆ ತುತ್ತಾಗಿದ್ದರೂ, ಜಾಗತಿಕವಾಗಿ ಮಾಹಿತಿ ತಂತ್ರಜ್ಞಾನ ಮಾರುಕಟ್ಟೆ ಹಿನ್ನಡೆ ಅನುಭವಿಸಿದ್ದರೂ, ಕರ್ನಾಟಕ ಉತ್ತಮ ಆರ್ಥಿಕ ಪ್ರಗತಿ ಸಾಧಿಸಿದೆ ಎಂದು ಸಚಿವಾಲಯದ ಪ್ರಕಟಣೆ ವಿವರಿಸಿದೆ.

ಪ್ರಕಟಣೆ ಹೇಳಿದ್ದೇನು?: 2023-24ನೇ ಸಾಲಿನ ಆರಂಭದಲ್ಲಿ ಕರ್ನಾಟಕದ ಜಿಡಿಪಿಯನ್ನು ಶೇ 4 ಎಂದು ಅಂದಾಜಿಸಲಾಗಿತ್ತು. ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯಿಂದಾಗಿ ಕೃಷಿ ವಲಯದ ಅಭಿವೃದ್ಧಿ ನಿರೀಕ್ಷಿತ ಪ್ರಮಾಣದಲ್ಲಿ ಸಾಧ್ಯವಾಗಿಲ್ಲ. ಆದರೆ, ಒಟ್ಟು ಆರ್ಥಿಕತೆಯಲ್ಲಿ ಮಾಹಿತಿ ತಂತ್ರಜ್ಞಾನ (ಐ.ಟಿ) ಮತ್ತು ಹಾರ್ಡ್‌ವೇರ್ ವಲಯದ ಪಾಲು ಶೇ 28ಕ್ಕೆ ಹಿಗ್ಗಿತ್ತು. ಹಾಗಾಗಿ, ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿ ಈ ವಲಯ ಜಾಗತಿಕಮಟ್ಟದಲ್ಲಿ ಹಿನ್ನಡೆ ಅನುಭವಿಸಿದ್ದರೂ, ಕರ್ನಾಟಕದ ಪ್ರಗತಿ ಏರುಗತಿಯಲ್ಲಿ ಸಾಗಿತ್ತು.

ಭಾರತದ ಐ.ಟಿ ವಲಯ 2022ರ ಹಣಕಾಸು ಸಾಲಿನಲ್ಲಿ ಶೇ 15.5ರಷ್ಟು ಪ್ರಗತಿ ಕಂಡಿದ್ದು, 2023ರ ಅವಧಿಯಲ್ಲಿ ಶೇ 8ಕ್ಕೆ ಕುಸಿತ ಅನುಭವಿಸಿದರೂ, ಉತ್ತಮ ಆಡಳಿತ ಮತ್ತು ಬಹುವಲಯಗಳ ಅಭಿವೃದ್ಧಿಯಿಂದಾಗಿ ಕರ್ನಾಟಕ ರಾಜ್ಯದ ಆರ್ಥಿಕತೆ ಸ್ಥಿರತೆ ಸಾಧಿಸಿದೆ.

2024-25ನೇ ಹಣಕಾಸು ಸಾಲಿಗೆ ಎನ್‌ಎಸ್‌ಸಿ ಕರ್ನಾಟಕ ರಾಜ್ಯಕ್ಕೆ ಶೇ 9.4 ಜಿಡಿಪಿ ಪ್ರಗತಿಯನ್ನು ಅಂದಾಜಿಸಿದ್ದು, ಇದು ರಾಷ್ಟ್ರೀಯ ಸರಾಸರಿ ಶೇ 10.5ಕ್ಕಿಂತ ಸ್ವಲ್ಪ ಕಡಿಮೆಯಾಗಿದೆ. ಆದರೆ, ಹಣಕಾಸು ಸಚಿವಾಲಯ ಕರ್ನಾಟಕದ ಜಿಡಿಪಿ ದರವನ್ನು ಶೇ 14ರಷ್ಟು ಅಂದಾಜಿಸಿದೆ.

2024ರ ಸೆಪ್ಟೆಂಬರ್ ಅವಧಿಯಲ್ಲಿ ಕರ್ನಾಟಕ ವರ್ಷದಿಂದ ವರ್ಷಕ್ಕೆ ಜಿಎಸ್‌ಟಿ ಸಂಗ್ರಹದಲ್ಲಿ ಶೇ 10ರಷ್ಟು ಹಾಗೂ ಮುದ್ರಾಂಕ ಶುಲ್ಕ ಸಂಗ್ರಹದಲ್ಲಿ ಶೇ 24ರಷ್ಟು ಹೆಚ್ಚಳ ದಾಖಲಿಸಿದೆ.

ಗ್ಯಾರಂಟಿ ಸೇರಿದಂತೆ ರಾಜ್ಯ ಸರ್ಕಾರದ ಹಲವು ಜನಪರ ಯೋಜನೆಗಳು ಅಭಿವೃದ್ಧಿಯ ಫಲ ಎಲ್ಲ ವರ್ಗಗಳಿಗೂ ತಲುಪುವುದನ್ನು ಖಾತ್ರಿ ಪಡಿಸಿವೆ. ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಪ್ರಗತಿಯನ್ನು ಒಂದುಗೂಡಿಸುವ, ಬಂಡವಾಳ ಆಕರ್ಷಿಸುವ ಕರ್ನಾಟಕದ ಆರ್ಥಿಕ ಮಾದರಿ ಈ ಯಶಸ್ಸಿಗೆ ಕಾರಣ. ದೇಶದ ಡಿಜಿಟಲ್ ಮತ್ತು ಆರ್ಥಿಕ ರಂಗದಲ್ಲಿ ಕರ್ನಾಟಕ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಉದ್ಯಮ ರಂಗದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ವಿಧ	ದರ
ಬಂಟ್ವಾಳ	ಕೋಕ	19000-27000
	ಹಳತು	40000-49000
ಚಿತ್ರದುರ್ಗ	ಅಪಿ	47619-48059
	ಬೆಟ್ಟೆ	32629-33099
	ಕೆಂಪುಗೋಟು	27409-27810
	ರಾಶಿ	47139-47569
ಕುಮಟ	ಚಿಪ್ಪು	23569-36569
	ಕೋಕ	5099-22569
	ಫ್ಯಾಕ್ಟರಿ	3019-16489
	ಹಳೆಚಾಲಿ	36799-39699
	ಹೊಸಚಾಲಿ	30319-34099
ಪುತ್ತೂರು	ಕೋಕ	24000-32500
	ಹೊಸತು	34000-49000
ಕಾರ್ಕಳ	ಹಳತು	30000-49000
ಸಾಗರ	ಬಿಳಿಗೋಟು	11099-25474
	ಚಾಲಿ	18099-32711
	ಕೋಕ	7099-21074
	ಕೆಂಪುಗೋಟು	11569-31499
	ರಾಶಿ	26899-50370
	ಸಿಪ್ಪೆಗೋಟು	7199-16189
ಶಿವಮೊಗ್ಗ	ಬೆಟ್ಟೆ	44099-55119
	ಗೊರಬಲು	17109-33009
	ಹೊಸತು	46509-47259
	ರಾಶಿ	37210-50021
	ಸರಕು	50109-81063
ಸಿದ್ದಾಪುರ	ಬಿಳಿಗೋಟು	24299-27609
	ಚಾಲಿ	31009-34399
	ಕೋಕ	21109-26809
	ರಾಶಿ	40999-46699
	ತಟ್ಟಿಬೆಟ್ಟೆ	27099-33099
ಶಿರಸಿ	ಬೆಟ್ಟೆ	28709-38989
	ಬಿಳಿಗೋಟು	23898-31499
	ಚಾಲಿ	31472-35412
	ರಾಶಿ	40061-42899
ಯಲ್ಲಾಪುರ	ಬಿಳಿಗೋಟು	14899-29000
	ಚಾಲಿ	29099-35560
	ಕೋಕ	5020-16899
	ಕೆಂಪುಗೋಟು	17699-24329
	ರಾಶಿ	40895-56099
	ತಟ್ಟಿಬೆಟ್ಟೆ	26619-32513

1 ಸಾವಿರ ಬಸ್ ಚಾಸಿಸ್ ಪೂರೈಕೆಗೆ ಕಾರ್ಯಾದೇಶ ಪಡೆದ ಟಾಟಾ ಮೋಟರ್ಸ್

ನವದೆಹಲಿ (ಪಿಟಿಐ): ಉತ್ತರಪ್ರದೇಶದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ (ಯುಪಿಎಸ್‌ಆರ್‌ಟಿಸಿ) 1 ಸಾವಿರ ಡೀಸೆಲ್ ಬಸ್‌ನ ಚಾಸಿಸ್ ಪೂರೈಸಲು ಕಾರ್ಯಾದೇಶ ಪಡೆದಿರುವುದಾಗಿ ಟಾಟಾ ಮೋಟರ್ಸ್ ಸೋಮವಾರ ತಿಳಿಸಿದೆ.

ಸ್ಪರ್ಧಾತ್ಮಕ ಇ-ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಈ ಕಾರ್ಯಾದೇಶ ಅನ್ನು ಪಡೆದಿದೆ. ನಿಯಮಗಳ ಪ್ರಕಾರ ಬಸ್ ಚಾಸಿಸ್ ಅನ್ನು ಹಂತ ಹಂತವಾಗಿ ಪೂರೈಸಲಾಗುವುದು ಎಂದು ತಿಳಿಸಿದೆ. ಕಳೆದ ವರ್ಷ ಯುಪಿಎಸ್‌ಆರ್‌ಟಿಸಿಯಿಂದ 1,350 ಬಸ್ ಚಾಸಿಸ್ ಪೂರೈಸುವ ಕಾರ್ಯಾದೇಶ ಪಡೆಯಲಾಗಿತ್ತು ಎಂದು ತಿಳಿಸಿದೆ.

ಸುರಕ್ಷಿತ ಮತ್ತು ದೂರದ ಪ್ರಯಾಣಕ್ಕಾಗಿ ವಿನ್ಯಾಸಗೊಳಿಸಲಾಗಿರುವ ಟಾಟಾ ಎಲ್‌ಪಿಒ 1618 ಡೀಸೆಲ್ ಬಸ್ ಚಾಸಿಯು ಉತ್ತಮ ಕಾರ್ಯಕ್ಷಮತೆ ಹೊಂದಿದೆ. ಕಡಿಮೆ ನಿರ್ವಹಣಾ ವೆಚ್ಚ ಹೊಂದಿದ್ದು, ಜೊತೆಗೆ ಇದರ ಕಾರ್ಯಾಚರಣೆ ವೆಚ್ಚವೂ ಕಡಿಮೆ ಇದೆ. ಪ್ರಯಾಣಿಕರಿಗೆ ಅನುಕೂಲಕರವಾಗಿ ಪ್ರಯಾಣ ಮಾಡಲು ಅನುವು ಮಾಡಿಕೊಡುತ್ತದೆ ಎಂದು ಕಂಪನಿ ತಿಳಿಸಿದೆ.

ವಿಮಾನಗಳಿಗೆ ಹುಸಿ ಬಾಂಬ್ ಪ್ರಕರಣ

ಗಂಭೀರ ಅಪರಾಧ, ನೋ–ಫ್ಲೈ ಪಟ್ಟಿಗೆ ಸರ್ಕಾರ ಚಿಂತನೆ: ಸಚಿವ

ನವದೆಹಲಿ: ವಿಮಾನಯಾನ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಸಂದೇಶ ಕಳಿಸುವುದನ್ನು ಗಂಭೀರ ಅಪರಾಧವಾಗಿ ಪರಿಗಣಿಸಲು ಮತ್ತು ಅಪರಾಧಿಗಳನ್ನು ‘ನೋ–ಫ್ಲೈ’ ಪಟ್ಟಿಗೆ ಸೇರಿಸಲು ಸರ್ಕಾರ ಯೋಜಿಸುತ್ತಿದೆ ಎಂದು ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಸೋಮವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಒಂದು ವಾರದಲ್ಲಿ ಸುಮಾರು 100 ವಿಮಾನಗಳಿಗೆ ಬಾಂಬ್ ಬೆದರಿಕೆಗಳು ಬಂದಿರುವ ಹಿನ್ನೆಲೆಯಲ್ಲಿ, ಈ ಸಮಸ್ಯೆಯನ್ನು ನಿಭಾಯಿಸಲು ಕೇಂದ್ರ ಸರ್ಕಾರ ಸೂಕ್ತ ಕಾನೂನುಗಳನ್ನು ಜಾರಿಗೆ ತರಲು ಯೋಜಿಸಿದೆ ಎಂದು ಅವರು ಹೇಳಿದರು.

‘ಪ್ರಯಾಣಿಕರ ಸುರಕ್ಷತೆ ಮತ್ತು ಭದ್ರತೆ ಅತಿಮುಖ್ಯವಾಗಿದೆ’ ಎಂದು ಒತ್ತಿಹೇಳಿರುವ ನಾಯ್ಡು, ಇತ್ತೀಚಿನ ಬೆದರಿಕೆಗಳನ್ನು ಗಂಭೀರವಾಗಿ ಪರಿಗಣಿಸಲು ಸಾಧ್ಯವಿಲ್ಲ. ಏಕೆಂದರೆ ಅವೆಲ್ಲವೂ ಹುಸಿ ಕರೆಗಳು ಎನ್ನುವುದು ಖಚಿತವಾಗಿದೆ. ಆದರೆ, ಅಂತರ ರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳು ನಿಗದಿಪಡಿಸಿದ ಶಿಷ್ಟಾಚಾರವನ್ನು ಅಧಿಕಾರಿಗಳು ಅನುಸರಿಸುತ್ತಿದ್ದಾರೆ. ಪ್ರಯಾಣಿಕರಿಗೆ ಉಂಟಾಗುವ ಅನನುಕೂಲ ತಗ್ಗಿಸಲು ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಅವರು ಹೇಳಿದರು.

ಬೆದರಿಕೆ ಸಂದೇಶಗಳು ಮತ್ತು ಹುಸಿ ಬೆದರಿಕೆ ಸಂದೇಶಗಳನ್ನು ನಿಭಾಯಿಸಲು ನಾಗರಿಕ ವಿಮಾನಯಾನ ಸಚಿವಾಲಯವು ಸರಣಿ ಸಭೆಗಳನ್ನು ನಡೆಸಿದ್ದು, ಎರಡು ವಿಷಯಗಳಲ್ಲಿ ಕೆಲವು ಶಾಸನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಸ್ತಾಪಿಸಿದೆ ಎಂದು ಅವರು ಹೇಳಿದರು.

ಇದರಲ್ಲಿ ಮೊದಲನೆಯದಾಗಿ, ವಿಮಾನ ಭದ್ರತಾ ನಿಯಮಗಳಿಗೆ ತಿದ್ದುಪಡಿ ತರುವುದು, ಎರಡನೆಯದು; ನಾಗರಿಕ ವಿಮಾನ ಸುರಕ್ಷತೆಗೆ ಭಂಗ ತರುವ ಕಾನೂನು ವಿರೋಧಿ ಚಟುವಟಿಕೆ ನಿಗ್ರಹ ಕಾಯ್ದೆ -1982ಕ್ಕೆ ತಿದ್ದುಪಡಿ ತರುವ ಕುರಿತದ್ದಾಗಿದೆ. ಇಂತಹ ತಿದ್ದುಪಡಿಗಳಿಂದ, ಬೆದರಿಕೆ ಸಂದೇಶ ಕಳುಹಿಸುವವರನ್ನು ನೋ–ಫ್ಲೈ ಪಟ್ಟಿಗೆ ಸೇರಿಸಲು ಮತ್ತು ಗಂಭೀರ ಅಪರಾಧವಾಗಿ ಪರಿಗಣಿಸುವುದರಿಂದ ಸಂದೇಶ ಕಳುಹಿಸಿದವರನ್ನು ವಾರಂಟ್ ಇಲ್ಲದೇ ಬಂಧಿಸಲು ಸಾಧ್ಯವಾಗಲಿದೆ ಎಂದು ಅವರು ಹೇಳಿದರು.

ಇತ್ತೀಚಿನ ಘಟನೆಗಳ ಮಧ್ಯೆ, ವಿಮಾನ ನಿಲ್ದಾಣಗಳಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ನಾಗರಿಕ ವಿಮಾನಯಾನ ಭದ್ರತಾ ಸಂಸ್ಥೆ (ಬಿಸಿಎಎಸ್) ಕೂಡ ವಿಮಾನಗಳಿಗೆ ಬಂದಿರುವ ಬಾಂಬ್ ಬೆದರಿಕೆಯ ಸಂದೇಶಗಳ ಕುರಿತು ಗೃಹ ಸಚಿವಾಲಯದೊಂದಿಗೆ ನಿರಂತರ ಸಂವಹನ ನಡೆಸುತ್ತಿದೆ. ನಾಗರಿಕ ವಿಮಾನಯಾನ ಸಚಿವಾಲಯವು ಎಲ್ಲ ಪಾಲುದಾರರೊಂದಿಗೆ ಸಂಪರ್ಕದಲ್ಲಿದೆ ಎಂದು ಅವರು ಹೇಳಿದರು.

ಎಚ್‌ಡಿಎಫ್‌ಸಿ ಬ್ಯಾಂಕ್ ಮಾರುಕಟ್ಟೆ ಮೌಲ್ಯಕ್ಕೆ ₹36,360 ಕೋಟಿ ಸೇರ್ಪಡೆ

ನವದೆಹಲಿ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್ 2024–25ರ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಏರಿಕೆ ಕಂಡಿದ್ದರಿಂದ ಸೋಮವಾರದ ವಹಿವಾಟಿನಲ್ಲಿ ಬ್ಯಾಂಕ್‌ನ ಷೇರಿನ ಮೌಲ್ಯ ಶೇ 3ರಷ್ಟು ಏರಿಕೆ ಕಂಡಿವೆ.

ಷೇರಿನ ಮೌಲ್ಯ ಏರಿಕೆಯಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ಒಂದೇ ದಿನ ₹36,360 ಕೋಟಿ ಸೇರ್ಪಡೆಯಾಗಿದೆ. ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯ ₹13.19 ಲಕ್ಷ ಕೋಟಿಗೆ ಮುಟ್ಟಿದೆ.

ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್ 2024–25ನೇ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹16,821 ಕೋಟಿ ಲಾಭ ಗಳಿಸಿದೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ: ದಿನದ ವಹಿವಾಟಿನ ಆರಂಭದಲ್ಲಿ ಏರಿಕೆ ದಾಖಲಿಸಿದ್ದ ಷೇರು ಸೂಚ್ಯಂಕಗಳು ನಂತರ ಇಳಿಕೆ ದಾಖಲಿಸಿದವು.

ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯ ಇಳಿಕೆ, ವಿದೇಶಿ ಬಂಡವಾಳದ ಹೊರಹರಿವಿನಿಂದ ಸೂಚ್ಯಂಕಗಳು ಇಳಿಕೆ ಕಂಡಿವೆ. ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯ ಶೇ 5ರಷ್ಟು ಕುಸಿದಿದೆ. ಇದರಿಂದ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯ ₹15,954 ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 73 ಅಂಶ ಕಡಿಮೆಯಾಗಿ, 81,151ಕ್ಕೆ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ವೇಳೆ 545 ಅಂಶ ಏರಿಕೆ ದಾಖಲಿಸಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 73 ಅಂಶ ಇಳಿಕೆಯಾಗಿ, 24,781ಕ್ಕೆ ಸ್ಥಿರಗೊಂಡಿತು.

ಒಳ ಮೀಸಲಾತಿ ಜಾರಿಗೆ ಮೂಡಿದ ಒಮ್ಮತ

ಒಂದನೇ ಪುಟದಿಂದ...

ಆದರೆ, ಜಾತಿಗಣತಿ ವರದಿಯು ಸಮೀಕ್ಷಾ ವರದಿಯೇ ಹೊರತು ಜನಗಣತಿ ಅಲ್ಲ ಎಂಬ ಅಭಿಪ್ರಾಯವನ್ನು ಹಲವರು ಹಂಚಿಕೊಂಡರು. ಸಭೆಯ ಬಳಿಕ ಮಾಹಿತಿ ನೀಡಿದ ಜಿ. ಪರಮೇಶ್ವರ, ‘ಒಳ ಮೀಸಲಾತಿ ವಿಚಾರವಾಗಿ ಪರಿಶಿಷ್ಟ ಜಾತಿಯಲ್ಲಿನ ಎಲ್ಲ ಉಪ ಜಾತಿಗಳ ಜನಪ್ರತಿನಿಧಿಗಳ ಜೊತೆ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಲಾಗಿದೆ’ ಎಂದರು.

‘ಒಳ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ನೀಡಿರುವ ವರದಿಯು ಅವೈಜ್ಞಾನಿಕವಾಗಿದೆ ಎನ್ನುವುದು ಕೆಲವರ ಆಕ್ಷೇಪ. ಅಲ್ಲದೆ, ಹಿಂದಿನ ಬಿಜೆಪಿ ಸರ್ಕಾರ ಈ ವರದಿಯನ್ನು ತಿರಸ್ಕರಿಸಿದೆ. ಪರಿಶಿಷ್ಟ ಜಾತಿಯ ಉಪ ಜಾತಿಗಳ ಅಧಿಕೃತ ಅಂಕಿ-ಅಂಶ ಸದ್ಯ ಲಭ್ಯ ಇಲ್ಲ’ ಎಂದರು.

> **ಪರಿಶಿಷ್ಟ ಜಾತಿಯ ನಾಯಕರ ನಡುವೆ ಒಳ ಮೀಸಲಾತಿ ಜಾರಿ ವಿಚಾರಕ್ಕೆ ಸಂಬಂಧಿಸಿದಂತೆ ಗೊಂದಲ, ಪ್ರತಿರೋಧ ಇಲ್ಲ ಎನ್ನುವುದು ಈ ಸಭೆಯ ಮೂಲಕ ಸಾಬೀತಾಗಿದೆ**
> **ಸುಧಾಮ್ ದಾಸ್,** ವಿಧಾನ ಪರಿಷತ್ ಸದಸ್ಯ

ಶಾಸಕ ಪಿ.ಎಂ. ನರೇಂದ್ರಸ್ವಾಮಿ ಮಾತನಾಡಿ, ‘ನೈಜ ದತ್ತಾಂಶದ ಆಧಾರದಲ್ಲಿ ಒಳ ಮೀಸಲಾತಿ ಜಾರಿಗೆ ಎಲ್ಲರ ಸಹಮತವಿದೆ. ಇದು ಸಂವಿಧಾನಾತ್ಮಕ ವಿಚಾರ. ಹೀಗಾಗಿ ಎಲ್ಲ ಆಯಾಮಗಳಲ್ಲೂ ಪರಿಶೀಲಿಸಬೇಕಿದೆ. ಹರಿಯಾಣ, ತೆಲಂಗಾಣದಲ್ಲಿ ಏನು ಮಾಡಿದ್ದಾರೆ. ಆ ಮಾದರಿಯನ್ನು ನಾವೂ ಪರಿಗಣಿಸಬೇಕೇ ಎಂಬ ಬಗ್ಗೆಯೂ ಚರ್ಚೆ ನಡೆಸಿದ್ದೇವೆ. ಆದರೆ, ನಮ್ಮ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಲು ಬದ್ಧವಾಗಿದೆ’ ಎಂದರು.

> **ಒಳ ಮೀಸಲಾತಿ ಜಾರಿಗೆ ನಾವೆಲ್ಲರೂ ಬದ್ಧರಾಗಿದ್ದೇವೆ. ಶೀಘ್ರದಲ್ಲಿ ಮತ್ತೊಮ್ಮೆ ಸಭೆ ಸೇರಿ ಈ ವಿಚಾರವಾಗಿ ವಿಸ್ತೃತವಾಗಿ ಸಮಾಲೋಚನೆ ನಡೆಸಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ**
> **ಪಿ.ಎಂ. ನರೇಂದ್ರಸ್ವಾಮಿ,** ಶಾಸಕ

‘ಚುನಾವಣೆ ಮೊದಲೇ ಚಿತ್ರದುರ್ಗದಲ್ಲಿ ನಡೆದಿದ್ದ ಪರಿಶಿಷ್ಟರ ಸಮಾವೇಶದಲ್ಲಿ ಒಳ ಮೀಸಲಾತಿ ಜಾರಿಯ ಭರವಸೆ ನೀಡಿದ್ದೇವೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಒಳಮೀಸಲಾತಿ ಜಾರಿ ಮಾಡುವುದಾಗಿ ಹೇಳಿದ್ದೆವು. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಕೂಡ ಇತ್ತೀಚೆಗೆ ಸ್ಪಷ್ಟ ತೀರ್ಪು ನೀಡಿದೆ. ಹೀಗಾಗಿ, ನಾವೆಲ್ಲರೂ ಒಟ್ಟಾಗಿ ಕುಳಿತು ಚರ್ಚಿಸಿದ್ದೇವೆ. ಮತ್ತೊಮ್ಮೆ ಗಣತಿ ಮಾಡುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಬೇಕಿದೆ’ ಎಂದರು.

ಜಾತಿಗಣತಿ ವಿರುದ್ಧ ಜಂಟಿ ಹೋರಾಟಕ್ಕೆ ತೀರ್ಮಾನ

ಒಂದನೇ ಪುಟದಿಂದ...

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆಯಲ್ಲಿ ವೀರಶೈವ ಲಿಂಗಾಯತರ ನಡೆಯುತ್ತಿದೆ. ಸಭೆಗೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಸಂಸದ ಬಸವರಾಜ ಬೊಮ್ಮಾಯಿ ಸೇರಿದಂತೆ ಸಮುದಾಯದ ಮುಖಂಡರು, ಕೆಲ ಮಠಾಧೀಶರು, ಮಹಾಸಭಾದ ಪ್ರಮುಖರು ಭಾಗವಹಿಸುತ್ತಿದ್ದಾರೆ.

ಲಡಾಖ್ – ಎಲ್‌ಎಸಿ ಉದ್ದಕ್ಕೂ ಗಸ್ತು: ಭಾರತ– ಚೀನಾ ಒಪ್ಪಂದ

ಒಂದನೇ ಪುಟದಿಂದ...

‘ಸಂಧಾನಕಾರರ ಚರ್ಚೆಗಳ ಪರಿಣಾಮವಾಗಿ, ಭಾರತ-ಚೀನಾ ಗಡಿ ಪ್ರದೇಶಗಳಲ್ಲಿ ಎಲ್‌ಎಸಿ ಉದ್ದಕ್ಕೂ ಗಸ್ತು ವ್ಯವಸ್ಥೆಗೆ ಒಪ್ಪಂದಕ್ಕೆ ಬರಲಾಗಿದೆ. ಇದು 2020ರಲ್ಲಿ ಈ ಪ್ರದೇಶಗಳಲ್ಲಿ ಉದ್ಭವಿಸಿದ ಸೇನಾ ಸಂಘರ್ಷದ ಸಮಸ್ಯೆಗಳಿಗೆ ಪರಿಹಾರ ನೀಡಲಿದೆ. ನಾವು ಈ ಬಗ್ಗೆ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ’ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿ ಗಸ್ತು ತಿರುಗಲು ಈ ಒಪ್ಪಂದವು ಸಂಬಂಧಿಸಿದೆ ಎಂದು ತಿಳಿದುಬಂದಿದೆ. ಪೂರ್ವ ಲಡಾಖ್‌ನಲ್ಲಿ ಉಭಯ ದೇಶಗಳ ಸೇನೆಗಳ ನಡುವೆ ಉಂಟಾದ ಘರ್ಷಣೆಗೆ ಮುಂಚೆಯೇ ಇದ್ದ ಗಸ್ತು ಹಕ್ಕುಗಳ ಮರುಸ್ಥಾಪನೆಯನ್ನು ಈ ಒಪ್ಪಂದ ಸುಗಮ ಗೊಳಿಸುತ್ತದೆಯೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ.

> **ಭಾರತ– ಚೀನಾ ನಡುವೆ ಸೇನಾ ಸಂಘರ್ಷ ಉಲ್ಬಣಿಸುವ ಮೊದಲು 2020ರಲ್ಲಿ ಎಲ್‌ಎಸಿಯಲ್ಲಿ ನಡೆಯುತ್ತಿದ್ದ ಗಸ್ತು ಅನ್ನು ಯಥಾಸ್ಥಿತಿಗೆ ತರಲು ಈ ಒಪ್ಪಂದದಿಂದ ಸಾಧ್ಯವಾಗಲಿದೆ**
> **ಎಸ್. ಜೈಶಂಕರ್,** ವಿದೇಶಾಂಗ ಸಚಿವ

ಗಡಿ ವಿವಾದ ಈವರೆಗೂ ಬಗೆಹರಿದಿಲ್ಲ: ಭಾರತ ಮತ್ತು ಚೀನಾದ ಸೇನೆಗಳು 2020ರ ಮೇನಿಂದ ಪೂರ್ವ ಲಡಾಖ್‌ನಲ್ಲಿ ಗಡಿ ಬಿಕ್ಕಟ್ಟಿನಲ್ಲಿ ಸಿಲುಕಿವೆ. ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದ ಹಲವು ಸ್ಥಳಗಳಿಂದ ಎರಡೂ ಕಡೆಯವರು ಸೇನೆಗಳನ್ನು ಹಿಂತೆಗೆದುಕೊಂಡಿದ್ದರೂ ವಿವಾದ ಈವರೆಗೂ ಬಗೆಹರಿದಿಲ್ಲ.

2020ರ ಜೂನ್‌ನಲ್ಲಿ ಗಾಲ್ವಾನ್ ಕಣಿವೆಯಲ್ಲಿ ಎರಡೂ ಸೇನೆಗಳ ನಡುವೆ ನಡೆದ ಭೀಕರ ಘರ್ಷಣೆಯ ನಂತರ ಉಭಯ ರಾಷ್ಟ್ರಗಳ ನಡುವಿನ ಸಂಬಂಧ ತೀವ್ರ ಹದಗೆಟ್ಟಿತ್ತು. ಇದು ದಶಕಗಳಲ್ಲಿ ಉಭಯತ್ರರ ನಡುವಿನ ಅತ್ಯಂತ ಗಂಭೀರ ಸೇನಾ ಸಂಘರ್ಷವಾಗಿ ಗುರುತಿಸಿಕೊಂಡಿದೆ.

ಬಿಕ್ಕಟ್ಟು ಪ್ರಾರಂಭವಾದಾಗಿನಿಂದ ನಡೆದಿರುವ ಎಲ್ಲ ಮಾತುಕತೆಗಳಲ್ಲಿ, ಭಾರತವು ಪೀಪಲ್ಸ್ ಲಿಬರೇಶನ್ ಆರ್ಮಿ (ಪಿಎಲ್‌ಎ) ಅನ್ನು ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಿಂದ ಸಂಪೂರ್ಣ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುತ್ತಾ ಬಂದಿದೆ. ಗಡಿಯಲ್ಲಿ ಶಾಂತಿ ನೆಲಸದಿದ್ದರೆ ಚೀನಾ ಜತೆಗಿನ ಬಾಂಧವ್ಯ ಸಹಜ ಸ್ಥಿತಿಗೆ ಮರಳಲು ಸಾಧ್ಯವಿಲ್ಲ ಎಂದು ಭಾರತ ಪ್ರತಿಪಾದಿಸಿದೆ.

‘ಮಾತುಕತೆಗಳು ನಡೆಯುತ್ತಿವೆ. ಚೀನಾ ಜತೆಗಿನ ಗಡಿ ವಿವಾದದ ಸಮಸ್ಯೆಗಳಿಗೆ ಶೇ 75ರಷ್ಟು ಪರಿಹಾರ ಸಿಕ್ಕಿದೆ. ಆದರೆ, ಇದಕ್ಕಿಂತಲೂ ಅದು ತನ್ನ ಸೇನಾ ಬಲ ಹೆಚ್ಚಿಸಿಕೊಳ್ಳುತ್ತಿರುವುದು ಬಹುದೊಡ್ಡ ಸಮಸ್ಯೆಯಾಗಿದೆ’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಕಳೆದ ತಿಂಗಳಷ್ಟೇ ಹೇಳಿದ್ದರು.

ಜಾಗತಿಕ ಮಟ್ಟದಲ್ಲಿ ಶಕ್ತಿ ಪ್ರದರ್ಶನಕ್ಕೆ ಪುಟಿನ್ ಮುಂದು

ಇಂದು ‘ಬ್ರಿಕ್ಸ್’ ಶೃಂಗಸಭೆ

ವಾಷಿಂಗ್ಟನ್ (ಎಪಿ): ‘ಬ್ರಿಕ್ಸ್’ ಶೃಂಗಸಭೆಯು ಮಂಗಳವಾರ ರಷ್ಯಾದ ಕಜಾನ ನಗರದಲ್ಲಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನೇತೃತ್ವದಲ್ಲಿ ನಡೆಯಲಿದೆ. ಈ ಸಮಾವೇಶದಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ಭಾರತದ ಪ್ರಧಾನಿ ನರೇಂದ್ರ ಮೋದಿ, ಟರ್ಕಿಯ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್, ಇರಾನ್‌ನ ಅಧ್ಯಕ್ಷ ಡಾ.ಮಸೂದ್ ಪೆಜೆಶ್ಕಿಯಾನ್ ಸೇರಿದಂತೆ ಪ್ರಮುಖರು ಭಾಗವಹಿಸಲಿದ್ದಾರೆ.

ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿದಂತೆ ಪುಟಿನ್ ವಿರುದ್ಧ ಅಂತರರಾಷ್ಟ್ರೀಯ ಬಂಧನ ವಾರಂಟ್ ಜಾರಿಯಾಗಿದೆ. ಈ ಸಂದರ್ಭದಲ್ಲಿ ತಮ್ಮ ಬೆಂಬಲ ಹೆಚ್ಚಿಸಿಕೊಳ್ಳಲು ಪುಟಿನ್ ಶೃಂಗಸಭೆ ಆಯೋಜಿಸಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ಪಾಶ್ಚಿಮಾತ್ಯ ರಾಷ್ಟ್ರಗಳ ಒಕ್ಕೂಟಕ್ಕೆ ಪರ್ಯಾಯವಾಗಿ ಈ ಮಿತ್ರಕೂಟ ರಚನೆಯಾಗಿದೆ ಎಂದು ಹೇಳಲಾಗಿದೆ. ಆರಂಭದಲ್ಲಿ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಹಾಗೂ ದಕ್ಷಿಣ ಆಫ್ರಿಕಾ ರಾಷ್ಟ್ರಗಳು ಮಾತ್ರ ಸದಸ್ಯತ್ವ ಹೊಂದಿದ್ದವು. ಈ ವರ್ಷ ಇರಾನ್, ಈಜಿಪ್ಟ್, ಇಥಿಯೋಪಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್, ಸೌದಿ ಅರೇಬಿಯಾ ರಾಷ್ಟ್ರಗಳು ಸೇರ್ಪಡೆಯಾದವು. ಟರ್ಕಿ, ಅಜರ್‌ಬೈಜಾನ್, ಮಲೇಷ್ಯಾ ಕೂಡ ಔಪಚಾರಿಕವಾಗಿ ಸೇರ್ಪಡೆಗೆ ಅರ್ಜಿ ಸಲ್ಲಿಸಿದ್ದು, ಇನ್ನಷ್ಟು ರಾಷ್ಟ್ರಗಳು ಸೇರ್ಪಡೆಯಾಗಲು ಒಪ್ಪಿಗೆ ಸೂಚಿಸಿವೆ.

‘ಶೃಂಗಸಭೆಯಲ್ಲಿ 32 ರಾಷ್ಟ್ರಗಳು ಭಾಗವಹಿಸುವುದಾಗಿ ತಿಳಿಸಿವೆ. 20 ರಾಷ್ಟ್ರಗಳ ಮುಖ್ಯಸ್ಥರೇ ಭಾಗವಹಿಸಲಿದ್ದಾರೆ. ಪುಟಿನ್ ಅವರ ವಿದೇಶಾಂಗ ನೀತಿಗೆ ಸಿಕ್ಕ ಅತಿ ದೊಡ್ಡ ಯಶಸ್ಸು ಇದು’ ಎಂದು ರಷ್ಯಾದ ವಿದೇಶಾಂಗ ನೀತಿಯ ಅಧಿಕಾರಿ ಯುರಿ ಉಶಾಕೋವ್ ತಿಳಿಸಿದ್ದಾರೆ. ‘ಮಿತ್ರರಾಷ್ಟ್ರಗಳ ಮುಖ್ಯಸ್ಥರ ಜತೆ ಪುಟಿನ್ ಅವರು 20 ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಹಲವು ಒಪ್ಪಂದಗಳಿಗೆ ಸಹಿ ಹಾಕಲಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಮನೆ ಕೆಲಸಕ್ಕೆ (15,000), ಹೋಂನರ್ಸ್ (20,000), ಹೆಂಗಸರು / ಹುಡುಗಿಯರು ಬೇಕಾಗಿದ್ದಾರೆ. ಊಟ - ವಸತಿ ಉಚಿತ. ಉಡುಪಿ 9845276452

ವೈಯಕ್ತಿಕ

Change of Name

ಹೆಸರು ಬದಲಾವಣೆ
ಬಿ.ಎನ್. ಸುಕನ್ಯಾ ಮತ್ತು ಸುಕನ್ಯಾ ನಂಜೇಗೌಡ W/o ಜಿ.ಎಸ್. ನಂಜೇಗೌಡ ಎಂಬ ನಾನು, ಮನೆ ನಂ. 8/4, ನ್ಯೂ ಟಿಂಬರ್ ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-560026 ಇಲ್ಲಿನ ನಿವಾಸಿಯಾಗಿದ್ದು, ಮೇಲಿನ ಎರಡು ಹೆಸರುಗಳು ನನ್ನದೇ ಆಗಿದ್ದು, ಇದನ್ನು ದಿ: 18.10.2024ರಂದು ನೋಟರಿಯವರಾದ ಎಸ್.ಆರ್.ತುಳಸೀಕೃಷ್ಣ, ಬೆಂಗಳೂರು ಇವರ ಮುಂದೆ ಪ್ರಮಾಣೀಕರಿಸಿದ್ದೇನೆ. ಇನ್ನು ಮುಂದೆ ನನ್ನ ಹೆಸರನ್ನು ಬಿ.ಎನ್. ಸುಕನ್ಯಾ ಎಂದು ಕರೆಯಲ್ಪಡುತ್ತೇನೆ.

I, GEETHA Dinesh, D/o P.Krishnappa, #131, 1st Main, Swathantra Nagar, Bangalore 560049, have changed my name to Geetha Krishnappa, vide affidavit number - IN-KA10942314374536W, Dt -10/9/2024

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಾಹನ

Four Wheelers Selling

TATA

ಸಂಕ್ಷಿಪ್ತ ಸುದ್ದಿ

ವಾಂಗ್ಚುಕ್ ಉಪವಾಸ ಸತ್ಯಾಗ್ರಹ ಅಂತ್ಯ

ನವದೆಹಲಿ (ಪಿಟಿಐ): ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಮತ್ತು ಅವರ ಬೆಂಬಲಿಗರು ಸೋಮವಾರ ಉಪವಾಸ ಸತ್ಯಾಗ್ರಹ ಮುಕ್ತಾಯಗೊಳಿಸಿದರು.

ಸೋನಮ್ ವಾಂಗ್ಚುಕ್

ಲಡಾಖ್ ಬಗೆಗಿನ ಬೇಡಿಕೆಗಳ ಬಗ್ಗೆ ಡಿಸೆಂಬರ್‌ನಲ್ಲಿ ಮಾತುಕತೆ ನಡೆಸುವುದಾಗಿ ಕೇಂದ್ರ ಗೃಹ ಸಚಿವಾಲಯವು ಭರವಸೆ ನೀಡಿದ ಬಳಿಕ ವಾಂಗ್ಚುಕ್ ಮತ್ತು ಇತರರು ಸತ್ಯಾಗ್ರಹವನ್ನು ಕೈಬಿಟ್ಟರು.

ದೆಹಲಿಯಲ್ಲಿರುವ ಲಡಾಖ್ ಭವನದಲ್ಲಿ ಅ. 6ರಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ವಾಂಗ್ಚುಕ್ ಮತ್ತು ಅವರ ಬೆಂಬಲಿಗರನ್ನು ಜಮ್ಮು–ಕಾಶ್ಮೀರ ಮತ್ತು ಲಡಾಖ್‌ನ ಜಂಟಿ ಕಾರ್ಯದರ್ಶಿ ಪ್ರಶಾಂತ್ ಲೋಖಂಡೆ ಸೋಮವಾರ ಭೇಟಿ ಮಾಡಿ, ಗೃಹ ಸಚಿವಾಲಯದ ಪತ್ರವನ್ನು ನೀಡಿದರು.

ಲಡಾಖ್‌ನ ಪ್ರತಿನಿಧಿಗಳೊಂದಿಗೆ ಗೃಹ ಸಚಿವಾಲಯದ ಉನ್ನತ ಮಟ್ಟದ ಸಮಿತಿಯು ಮಾತುಕತೆ ನಡೆಸಿದ್ದು, ಡಿ.3ರಂದು ಮುಂದಿನ ಸಭೆ ನಡೆಯಲಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಮಹಿಳಾ ಕಾನ್‌ಸ್ಟೆಬಲ್ ಮೇಲೆ ಅತ್ಯಾಚಾರ

ಕಾನ್ಪುರ (ಪಿಟಿಐ): ಮಹಿಳಾ ಕಾನ್‌ಸ್ಟೆಬಲ್ ಮೇಲೆ ವ್ಯಕ್ತಿಯೊಬ್ಬ ಅತ್ಯಾಚಾರ ಎಸಗಿರುವುದು ಉತ್ತರ ಪ್ರದೇಶದ ಕಾನ್ಪುರದಲ್ಲಿ ನಡೆದಿದೆ.

ಅಯೋಧ್ಯೆಯ ಮೀಸಲು ಪೊಲೀಸ್ ಪಡೆಯಲ್ಲಿ ಹಿರಿಯ ಕಾನ್‌ಸ್ಟೆಬಲ್ ಆಗಿರುವ ಸಂತ್ರಸ್ತೆಯು 'ಕರ್ವಾ ಚೌತ್' ಹಬ್ಬದ ಆಚರಣೆಗೆಂದು ಕಾನ್ಪುರದ ಬಳಿ ಇರುವ ತಮ್ಮ ಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಶನಿವಾರ ರಾತ್ರಿ ಈ ಘಟನೆ ನಡೆದಿದೆ.

ಮಹಿಳೆಯು ತಮ್ಮ ಗ್ರಾಮಕ್ಕೆ ತೆರಳುತ್ತಿದ್ದ ವೇಳೆ ದಾರಿಯಲ್ಲಿ ಸಿಕ್ಕ ಪರಿಚಿತ ವ್ಯಕ್ತಿ ಧರ್ಮೇಂದ್ರ ಪಾಸ್ವಾನ್ ತನ್ನ ದ್ವಿಚಕ್ರ ವಾಹನದಲ್ಲಿ ಮನೆಗೆ ಬಿಡುವುದಾಗಿ ಹೇಳಿದ್ದಾನೆ. ಆದರೆ, ಮನೆಗೆ ಕರೆದುಕೊಂಡು ಹೋಗದೇ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ.

ನಂತರ ಸ್ಥಳೀಯ ಪೊಲೀಸ್ ಠಾಣೆಗೆ ತೆರಳಿ ಮಹಿಳೆಯು ದೂರು ದಾಖಲಿಸಿದ್ದಾರೆ. ಎಫ್‌ಐಆರ್ ದಾಖಲಿಸಿ ಆರೋಪಿಯನ್ನು ಬಂಧಿಸಲಾಗಿದೆ. ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಧೀಶರು 14 ದಿನ ನ್ಯಾಯಾಂಗ ವಶಕ್ಕೆ ನೀಡಿ ಆದೇಶಿಸಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಆಂಧ್ರ: ದೀಪಾವಳಿಗೆ ಉಚಿತ ಸಿಲಿಂಡರ್

ಹೈದರಾಬಾದ್: ಆಂಧ್ರ ಪ್ರದೇಶದಲ್ಲಿ ಅರ್ಹ ಮಹಿಳೆಯರಿಗೆ ಉಚಿತ ಅಡುಗೆ ಅನಿಲ ಸಿಲಿಂಡರ್ ವಿತರಿಸುವ 'ದೀಪಂ' ಯೋಜನೆಗೆ ದೀಪಾವಳಿಯಂದು (ಅಕ್ಟೋಬರ್ 31) ಚಾಲನೆ ನೀಡಲಾಗುತ್ತದೆ.

ಚುನಾವಣೆ ಸಂದರ್ಭದಲ್ಲಿ ಟಿಡಿಪಿ ನೀಡಿದ್ದ ಆರು ಪ್ರಮುಖ ಭರವಸೆಗಳಲ್ಲಿ, ವರ್ಷಕ್ಕೆ ಮೂರು ಅಡುಗೆ ಅನಿಲ ಸಿಲಿಂಡರ್‌ಗಳನ್ನು ಉಚಿತವಾಗಿ ವಿತರಿಸುವುದು ಪ್ರಮುಖವಾದುದು.

ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಅಮರಾವತಿಯ ಸಿಬ್ಬಂದಿ ಸಚಿವಾಲಯದಲ್ಲಿ ಸೋಮವಾರ ಸಭೆ ನಡೆಸಿ, ಯೋಜನೆ ಚಾಲನೆಗೆ ಸಂಬಂಧಿಸಿದ ಸಿದ್ಧತೆಯನ್ನು ಪರಿಶೀಲಿಸಿದರು.

ನಾಗರಿಕ ಪೂರೈಕೆ ಸಚಿವ ಮತ್ತು ಅಧಿಕಾರಿಗಳು ಹಾಗೂ ಭಾರತೀಯ ಅನಿಲ ನಿಗಮ, ಹಿಂದೂಸ್ತಾನ್ ಪೆಟ್ರೋಲಿಯಂ, ಭಾರತ್ ಪೆಟ್ರೋಲಿಯಂ ನಿಗಮದ ಪ್ರತಿನಿಧಿಗಳೊಂದಿಗೆ ಚರ್ಚಿಸಿದರು.

ಎನ್‌ಸಿಪಿಸಿಆರ್ ಪತ್ರಕ್ಕೆ ಸ್ಪಂದಿಸದಂತೆ ಕೋರ್ಟ್ ತಡೆಯಾಜ್ಞೆ

ನವದೆಹಲಿ: ಅನಧಿಕೃತ ಮದರಸಾಗಳಲ್ಲಿ ಇರುವ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗಳಿಗೆ ವರ್ಗಾವಣೆ ಮಾಡಬೇಕು ಎಂಬ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ (ಎನ್‌ಸಿಪಿಸಿಆರ್) ಮನವಿಗೆ ರಾಜ್ಯಗಳು ಸ್ಪಂದಿಸದಂತೆ ಸುಪ್ರೀಂ ಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿದೆ.

ಮಕ್ಕಳ ಶೈಕ್ಷಣಿಕ ಹಕ್ಕುಗಳ ಕಾಯ್ದೆ ಉಲ್ಲಂಘನೆ ಆರೋಪ ಕೇಳಿಬಂದ ಕಾರಣ ಸರ್ಕಾರಿ ಶಾಲೆಗಳಿಗೆ ಸ್ಥಳಾಂತರಿಸಬೇಕು ಎಂದು ಎನ್‌ಸಿಪಿಸಿಆರ್ ಪತ್ರ ಮುಖೇನ ಕೋರಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠವು, ಎನ್‌ಸಿಪಿಸಿಆರ್ ಪತ್ರಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಕ್ರಮ ಕೈಗೊಳ್ಳದಂತೆ ತಡೆಯಾಜ್ಞೆ ನೀಡಿದೆ. ಉತ್ತರ ಪ್ರದೇಶ, ತ್ರಿಪುರಾ ಸರ್ಕಾರಗಳ ನಿರ್ಧಾರವನ್ನು ಪ್ರಶ್ನಿಸಿ ಮುಸ್ಲಿಂ ಸಂಘಟನೆಗಳು ಕೋರ್ಟ್ ಮೆಟ್ಟಿಲೇರಿದ್ದವು.

'ಭಾರತವು ಧರ್ಮನಿರಪೇಕ್ಷ ಆಗುವುದು ನಿಮಗೆ ಬೇಕಿಲ್ಲವೇ?'

ಧರ್ಮನಿರಪೇಕ್ಷತೆ ಸಂವಿಧಾನದ ಮೂಲ ಸ್ವರೂಪ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಧರ್ಮನಿರಪೇಕ್ಷತೆ'ಯು ದೇಶದ ಸಂವಿಧಾನದ ಮೂಲ ಸ್ವರೂಪದ ಭಾಗ, ತಿದ್ದುಪಡಿಗೆ ಅವಕಾಶ ಇಲ್ಲದ ಸ್ಥಾನವನ್ನು ಇದಕ್ಕೆ ನೀಡಲಾಗಿದೆ ಎಂಬುದನ್ನು ಸ್ಪಷ್ಟಪಡಿಸುವ ಹಲವು ತೀರ್ಪುಗಳು ಇವೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಸಮಾನತೆಯ ಹಕ್ಕನ್ನು, ಸಂವಿಧಾನದಲ್ಲಿ ಬಳಸಿರುವ ಭ್ರಾತೃತ್ವ ಪದವನ್ನು ಗಮನಿಸಿದಾಗ, ಅವುಗಳ ಜೊತೆಗೆ ಮೂಲಭೂತ ಹಕ್ಕುಗಳನ್ನು ಗಮನಿಸಿದಾಗ, ಧರ್ಮನಿರಪೇಕ್ಷತೆಯು ಸಂವಿಧಾನದ ಮೂಲ ಚಹರೆಗಳಲ್ಲಿ ಒಂದು ಎಂಬುದು ಸ್ಪಷ್ಟವಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಸಂಜಯ್ ಕುಮಾರ್ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ.

ಸಂವಿಧಾನದ ಪೀಠಿಕೆಯಲ್ಲಿ ಇರುವ 'ಸಮಾಜವಾದಿ' ಪದದ ವಿಚಾರವಾಗಿ ಪೀಠವು, 'ಪಾಶ್ಚಿಮಾತ್ಯ ಪರಿಕಲ್ಪನೆಗಳನ್ನು ಆಧರಿಸಿದರೆ, ಅದು ಬೇರೆ ಅರ್ಥವನ್ನು ಧ್ವನಿಸುತ್ತದೆ. ಆದರೆ, ಅದನ್ನು ನಾವು ಅನುಕರಿಸಿಲ್ಲ. ಆಗಿರುವ ಬದಲಾವಣೆಗಳ ವಿಚಾರವಾಗಿ ನಾವು ಬಹಳ ಖುಷಿಪಡುತ್ತೇವೆ... ಅಂದರೆ, ಆರ್ಥಿಕವಾಗಿ ಆಗಿರುವ ಬೆಳವಣಿಗೆ' ಎಂದು ಹೇಳಿದೆ.

ಬಿಜೆಪಿಯ ನಾಯಕ ಸುಬ್ರಮಣಿಯನ್ ಸ್ವಾಮಿ, ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಹಾಗೂ ಇತರರು ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಸಂವಿಧಾನದ ಪೀಠಿಕೆಯಲ್ಲಿ 'ಸಮಾಜವಾದಿ' ಮತ್ತು 'ಧರ್ಮನಿರಪೇಕ್ಷ' ಎಂಬ ಪದಗಳನ್ನು ಸೇರಿಸಿರುವುದನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

'ಪೀಠಿಕೆಯ ದಿನಾಂಕ 1949ರ ನವೆಂಬರ್ 26. ಆದರೆ ಅದಕ್ಕೆ ಸೇರಿಸಿರುವ ಪದಗಳು ಮೂಲಕ್ಕೆ ಹೊಂದಿಕೆ ಆಗುತ್ತಿಲ್ಲ. ಇದನ್ನು ಸರಿಪಡಿಸಬೇಕಿದೆ. ಹೊಸದಾಗಿ ಸೇರಿಸಿರುವುದನ್ನು ಪ್ರತ್ಯೇಕವಾಗಿ ತೋರಿಸಬೇಕಿತ್ತು' ಎಂದು ಸ್ವಾಮಿ ವಾದಿಸಿದರು.

ಪೀಠಿಕೆಯನ್ನು ಎರಡು ಭಾಗಗಳನ್ನಾಗಿಸಬಹುದು. ಮೂಲ ದಿನಾಂಕದ್ದನ್ನು ಒಂದು ಭಾಗದಲ್ಲಿ, ನಂತರದ ದಿನಾಂಕದ್ದನ್ನು ಇನ್ನೊಂದು ಭಾಗದಲ್ಲಿ ನೀಡಬಹುದು ಎಂದು ಸ್ವಾಮಿ ಹೇಳಿದರು.

'ಭಾರತವು ಧರ್ಮನಿರಪೇಕ್ಷ ಆಗುವುದು ನಿಮಗೆ ಬೇಕಿಲ್ಲವೇ' ಎಂದು ಅರ್ಜಿಯ ವಿಚಾರಣೆ ವೇಳೆ ಪೀಠವು ಪ್ರಶ್ನಿಸಿತು. 'ಭಾರತ ಧರ್ಮನಿರಪೇಕ್ಷ ಅಲ್ಲ ಎಂದು ಹೇಳುತ್ತಿಲ್ಲ. ಆದರೆ ಸಂವಿಧಾನ ತಿದ್ದುಪಡಿಯನ್ನು ನಾವು ಪ್ರಶ್ನಿಸುತ್ತಿದ್ದೇವೆ' ಎಂದು ಅರ್ಜಿದಾರರಲ್ಲಿ ಒಬ್ಬರಾದ ಬಲರಾಮ್ ಸಿಂಗ್ ಪರ ವಕೀಲ ವಿಷ್ಣು ಶಂಕರ್ ಜೈನ್ ಹೇಳಿದರು.

'ಸಮಾಜವಾದಿ' ಎಂಬ ಪದವನ್ನು ಸೇರಿಸುವುದರಿಂದ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಮಿತಿ ಹೇರಿದಂತೆ ಆಗುತ್ತದೆ ಎಂಬ ಅಭಿಪ್ರಾಯ ಬಿ.ಆರ್. ಅಂಬೇಡ್ಕರ್ ಅವರದ್ದಾಗಿತ್ತು ಎಂದು ಜೈನ್ ತಿಳಿಸಿದರು. ಸಮಾಜವಾದಿ ಅಂದರೆ, ಅವಕಾಶಗಳಲ್ಲಿ ಸಮಾನತೆ ಇರಬೇಕು ಹಾಗೂ ದೇಶದ ಸಂಪತ್ತಿನ ಹಂಚಿಕೆ ಸಮಾನವಾಗಿ ಇರಬೇಕು ಎಂದೂ ಅರ್ಥ ಮಾಡಿಕೊಳ್ಳಬಹುದು. ಈ ಪದಕ್ಕೆ ಪಾಶ್ಚಿಮಾತ್ಯರಲ್ಲಿ ಇರುವ ಅರ್ಥವನ್ನು ಮಾತ್ರವೇ ಪರಿಗಣಿಸಬೇಕಾಗಿಲ್ಲ ಎಂದು ಪೀಠವು ಹೇಳಿತು.

ಆದರೆ, ಈ ಪದಗಳನ್ನು ಸೇರಿಸಿದ 42ನೆಯ ತಿದ್ದುಪಡಿಯು ಸಂಸತ್ತಿನಲ್ಲಿ ಚರ್ಚೆಗೆ ಒಳಗಾಗಿರಲಿಲ್ಲ ಎಂದು ಜೈನ್ ವಾದಿಸಿದರು. ಈ ಪದಗಳನ್ನು ಸೇರಿಸುವಾಗ, ಅದು ಜನರ ಇಚ್ಛೆ ಆಗಿರಲಿಲ್ಲ ಎಂದೂ ಅವರು ಹೇಳಿದರು. ಅರ್ಜಿಗಳ ವಿಚಾರಣೆಯನ್ನು ಮುಂದೂಡಲಾಗಿದೆ.

ನೀಟ್–ಯುಜಿ: ತಜ್ಞರ ಸಮಿತಿಗೆ ಹೆಚ್ಚುವರಿ ಸಮಯ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಕಾರ್ಯವಿಧಾನವನ್ನು ಪರಿಶೀಲಿಸಿ, ಪರೀಕ್ಷೆಗಳಲ್ಲಿ ಸುಧಾರಣೆ ತರಲು ಅಗತ್ಯವಿರುವ ಕ್ರಮಗಳ ಬಗ್ಗೆ ವರದಿ ಸಲ್ಲಿಸಲು ಕೇಂದ್ರ ಸರ್ಕಾರ ನೇಮಕ ಮಾಡಿರುವ ಏಳು ಸದಸ್ಯರ ಸಮಿತಿಗೆ ಸುಪ್ರೀಂ ಕೋರ್ಟ್ ಹೆಚ್ಚುವರಿಯಾಗಿ ಎರಡು ವಾರ ಸಮಯ ನೀಡಿದೆ.

ಎನ್‌ಟಿಎ ಕಾರ್ಯವಿಧಾನವನ್ನು ಪರಿಶೀಲಿಸಿ, ಪರೀಕ್ಷೆಗಳಲ್ಲಿ ಸುಧಾರಣೆ ತರಲು ಅಗತ್ಯವಿರುವ ಶಿಫಾರಸುಗಳನ್ನು ನೀಡಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಅಧ್ಯಕ್ಷ ಕೆ. ರಾಧಾಕೃಷ್ಣನ್ ನೇತೃತ್ವದ ಈ ಸಮಿತಿಯ ವ್ಯಾಪ್ತಿಯನ್ನು ಸುಪ್ರೀಂ ಕೋರ್ಟ್ ಆಗಸ್ಟ್ 2ರ ಆದೇಶದಲ್ಲಿ ಹಿಗ್ಗಿಸಿದೆ. ನೀಟ್–ಯುಜಿ ಪರೀಕ್ಷೆಯನ್ನು ವಿವಾದಗಳು ಇಲ್ಲದಂತೆ ನಡೆಸುವ ಉದ್ದೇಶದಿಂದ ಕೋರ್ಟ್ ಈ ಸೂಚನೆ ನೀಡಿತ್ತು.

2024ರ ನೀಟ್–ಯುಜಿ ಪರೀಕ್ಷೆಯನ್ನು ರದ್ದುಪಡಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿತು.

ಸಮಿತಿಯು ವರದಿ ಸಲ್ಲಿಸಲು ನಿಗದಿ ಮಾಡಿರುವ ದಿನಾಂಕ ಸಮೀಪಿಸುತ್ತಿದೆ. ಹೀಗಾಗಿ, ಗಡುವನ್ನು ವಿಸ್ತರಿಸಬೇಕು ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಸಿಜೆಐ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠಕ್ಕೆ ಮನವಿ ಸಲ್ಲಿಸಿದರು.

ಅಯೋಧ್ಯೆ ವಿವಾದ ಇತ್ಯರ್ಥಕ್ಕೆ ದೇವರಲ್ಲಿ ಬೇಡಿಕೊಂಡಿದ್ದೆ: ಸಿಜೆಐ

ಪುಣೆ (ಪಿಟಿಐ): ರಾಮ ಜನ್ಮಭೂಮಿ – ಬಾಬರಿ ಮಸೀದಿ ವಿವಾದದ ಇತ್ಯರ್ಥಕ್ಕೆ ದಾರಿ ತೋರಿಸುವಂತೆ ದೇವರಲ್ಲಿ ಬೇಡಿಕೊಂಡಿದ್ದುದಾಗಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

ಚಂದ್ರಚೂಡ್

ನಂಬಿಕೆ ಇದ್ದವರ ಪಾಲಿಗೆ ದೇವರು ದಾರಿ ತೋರಿಸುತ್ತಾನೆ ಎಂದೂ ಚಂದ್ರಚೂಡ್ ಹೇಳಿದ್ದಾರೆ. ಖೇಡ್ ತಾಲ್ಲೂಕಿನ ತಮ್ಮ ಊರಾಗಿರುವ ಕನ್ಹೇರಸರ್‌ದ ಗ್ರಾಮಸ್ಥರನ್ನು ಉದ್ದೇಶಿಸಿ ಅವರು ಮಾತನಾಡಿದರು. 'ನಮ್ಮ ಮುಂದೆ ಪ್ರಕರಣಗಳು ಬರುವುದು, ನಮಗೆ ಪರಿಹಾರ ಕಂಡುಕೊಳ್ಳಲು ಆಗದೆ ಇರುವುದು ಬಹಳ ಸಾಮಾನ್ಯ. ನನ್ನ ಮುಂದೆ ಮೂರು ತಿಂಗಳು ಇದ್ದ ಅಯೋಧ್ಯೆ ಪ್ರಕರಣದ ಸಂದರ್ಭದಲ್ಲಿಯೂ ಇದೇ ರೀತಿ ಆಯಿತು. ದೇವರ ಮುಂದೆ ಕುಳಿತು ನಾನು, ಇದಕ್ಕೆ ನೀನೇ ಪರಿಹಾರ ಕಂಡುಕೊಳ್ಳಬೇಕು ಎಂದು ಹೇಳಿದೆ' ಎಂದರು. ತಾವು ಯಾವಾಗಲೂ ಪ್ರಾರ್ಥನೆ ಸಲ್ಲಿಸುವುದಾಗಿ ಹೇಳಿದ ಚಂದ್ರಚೂಡ್, 'ನಿಮಗೆ ನಂಬಿಕೆ ಇದ್ದರೆ ದೇವರು ಯಾವಾಗಲೂ ಒಂದು ದಾರಿ ತೋರಿಸುತ್ತಾನೆ' ಎಂದರು. ಅಯೋಧ್ಯೆ ಪ್ರಕರಣದ ತೀರ್ಪು ನೀಡಿದ ಐವರು ನ್ಯಾಯಮೂರ್ತಿಗಳ ಪೀಠದಲ್ಲಿ ಚಂದ್ರಚೂಡ್ ಅವರೂ ಇದ್ದರು.

ಚಂದ್ರಚೂಡ್ ಅವರು ಅಯೋಧ್ಯೆಯ ರಾಮ ಮಂದಿರಕ್ಕೆ ಈ ವರ್ಷದ ಜುಲೈನಲ್ಲಿ ಭೇಟಿ ನೀಡಿ ಪೂಜೆ ಸಲ್ಲಿಸಿದ್ದರು.

'ವಿದ್ಯಾರ್ಥಿಗಳ ಸುರಕ್ಷತೆಗೆ ಏಕರೂಪ ನಿಯಮ'

ನವದೆಹಲಿ (ಪಿಟಿಐ): ಕೋಚಿಂಗ್ ಕೇಂದ್ರಗಳಲ್ಲಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ, ಸಾಧ್ಯವಾದಷ್ಟುಮಟ್ಟಿಗೆ ಏಕರೂಪ ನಿಯಮಗಳನ್ನು ಹೊಂದುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ದೆಹಲಿಯ ಕೋಚಿಂಗ್ ಕೇಂದ್ರವೊಂದರಲ್ಲಿ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದ ಮೂವರು ವಿದ್ಯಾರ್ಥಿಗಳು ಪ್ರವಾಹದ ಕಾರಣದಿಂದಾಗಿ ಮೃತಪಟ್ಟದ್ದಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ವಲ್ ಭುಯಾನ್ ಅವರು ಇರುವ ವಿಭಾಗೀಯ ಪೀಠ ನಡೆಸುತ್ತಿದೆ.

ಸಿದ್ಧಾರ್ಥ ದವೆ ಅವರು ಈ ಪ್ರಕರಣದಲ್ಲಿ ಅಮಿಕಸ್ ಕ್ಯೂರಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಪ್ರಕರಣದಲ್ಲಿ ಎಲ್ಲ ರಾಜ್ಯಗಳನ್ನೂ ಪ್ರತಿವಾದಿಗಳನ್ನಾಗಿಸಬೇಕು ಎಂದು ಹೇಳಿದರು. ಮೇಲ್ವಿಚಾರಣೆಯ ಅಗತ್ಯದ ಬಗ್ಗೆ ದವೆ ಅವರು ಪ್ರಸ್ತಾಪಿಸಿದಾಗ, ಅದು ಕಾಯಂ ವ್ಯವಸ್ಥೆ ಆಗಬೇಕು ಎಂದು ಪೀಠವು ಹೇಳಿತು. ವಿಚಾರಣೆಯನ್ನು ಎರಡು ವಾರ ಮುಂದೂಡಲಾಗಿದೆ.

ಕೇಜ್ರಿವಾಲ್ ಅರ್ಜಿ ವಜಾ



ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ಕುರಿತು ಆಡಿದ ಮಾತುಗಳ ಸಂಬಂಧ ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರ ಮೇಲೆ ದಾಖಲಾದ ಮಾನಹಾನಿ ಪ್ರಕರಣವನ್ನು ರದ್ದು ಮಾಡಲು ಒಪ್ಪದ ಗುಜರಾತ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾ ಮಾಡಿದೆ.

ಪ್ರಧಾನಿ ಮೋದಿ ಅವರ ಪದವಿ ಕುರಿತು ಆಡಿತ ಮಾತುಗಳ ಕಾರಣಕ್ಕೆ ಆಮ್ ಆದ್ಮಿ ಪಕ್ಷದ ನಾಯಕ ಸಂಜಯ್ ಸಿಂಗ್ ಅವರ ಮೇಲೆಯೂ ಮಾನಹಾನಿ ಪ್ರಕರಣ ದಾಖಲಾಗಿತ್ತು. ಈ ಅರ್ಜಿಯನ್ನು ಪ್ರಶ್ನಿಸಿ ಸಂಜಯ್ ಅವರೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯವು, ಅರ್ಜಿಯನ್ನು ವಜಾ ಮಾಡಿತ್ತು.

ನ್ಯಾಯಾಲಯದ ಈ ಆದೇಶವನ್ನು ಉಲ್ಲೇಖಿಸಿದ ನ್ಯಾಯಾಮೂರ್ತಿಗಳಾದ ಹೃಷಿಕೇಶ್ ರಾಯ್, ಎಸ್.ವಿ.ಎನ್ ಭಟ್ಟಿ ಅವರಿದ್ದ ಪೀಠ 'ಇಬ್ಬರೂ ನಾಯಕರ ಅರ್ಜಿಗಳನ್ನೂ ಒಂದೇ ರೀತಿಯಲ್ಲಿ ನೋಡಬೇಕಾಗುತ್ತದೆ' ಎಂದು ಹೇಳಿತು.

ಬಿಜೆಪಿಯಿಂದ ತಪ್ಪು ಮಾಹಿತಿ ಪ್ರಚಾರ– ರಾವುತ್ ಆರೋಪ

210 ಸೀಟುಗಳಿಗೆ ಎಂವಿಎ ಒಮ್ಮತ

ಮುಂಬೈ (ಪಿಟಿಐ): 'ಮಹಾರಾಷ್ಟ್ರ ವಿಧಾನಸಭೆಯ 280 ಕ್ಷೇತ್ರಗಳ ಪೈಕಿ 210 ಕ್ಷೇತ್ರಗಳ ವಿಚಾರದಲ್ಲಿ ಮಹಾರಾಷ್ಟ್ರ ವಿಕಾಸ ಆಘಾಡಿಯು ಒಮ್ಮತಕ್ಕೆ ಬಂದಿದ್ದು, ಗಮನಾರ್ಹ ಸಾಧನೆಯಾಗಿದೆ' ಎಂದು ಶಿವಸೇನಾದ (ಉದ್ಧವ್ ಬಣ) ರಾಜ್ಯಸಭಾ ಸಂಸದ ಸಂಜಯ್ ರಾವುತ್ ತಿಳಿಸಿದ್ದಾರೆ.

ಸಂಜಯ್ ರಾವುತ್

'ಎಂವಿಎ ಒಕ್ಕೂಟವು ಮಹಾರಾಷ್ಟ್ರವನ್ನು ಲೂಟಿ ಮಾಡುತ್ತಿರುವ ಶಕ್ತಿಗಳನ್ನು ಮಣಿಸುವ ಗುರಿ ಹೊಂದಿದ್ದು, ಮಹಾಯುತಿ ಒಕ್ಕೂಟವು ಧೂಳೀಪಟವಾಗಲಿದೆ' ಎಂದು ಮಾಧ್ಯಮಗಳ ಮುಂದೆ ಸೋಮವಾರ ವಿಶ್ವಾಸ ವ್ಯಕ್ತಪಡಿಸಿದರು. ಶಿವಸೇನಾ ಉದ್ಧವ್ ಬಣವು ಎಂವಿಎ ಒಕ್ಕೂಟದಿಂದ ಹೊರಬಂದು, ಎಲ್ಲಾ 288 ಕ್ಷೇತ್ರಗಳಿಗೆ ಸ್ವತಂತ್ರವಾಗಿ ಸ್ಪರ್ಧಿಸಲಿದೆ ಎಂದು ಕೆಲವು ಸುದ್ದಿವಾಹಿನಿಗಳ ವರದಿಯ ಬೆನ್ನಲ್ಲೇ, ರಾವುತ್ ಈ ಸ್ಪಷ್ಟನೆ ನೀಡಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ

ಬಿಜೆಪಿಯೊಂದಿಗೆ ಶಿವಸೇನಾ (ಉದ್ಧವ್ ಬಣ) ಮತ್ತೆ ಮೈತ್ರಿ ಮಾಡಿಕೊಳ್ಳುವ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಫೋನ್ ಮಾಡಿ ಮಾತನಾಡಿದ್ದಾರೆ ಎಂಬ ಊಹಾಪೋಹಗಳನ್ನು ರಾವುತ್ ತಳ್ಳಿಹಾಕಿದರು.

'ಬಿಜೆಪಿಯು ಸುಳ್ಳು ಮಾಹಿತಿಗಳನ್ನು ಹರಡುತ್ತಿದೆ. ಇಂತಹ ಕೆಲಸಗಳನ್ನು ಯಾರು ಮಾಡುತ್ತಿದ್ದಾರೆ ಎಂಬುದು ನಮಗೆ ಗೊತ್ತಿದೆ. ವಿಧಾನಸಭಾ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಇಂತಹ ತಪ್ಪು ಮಾಹಿತಿಗಳನ್ನು ಹರಡುವುದರಲ್ಲಿ ಆ ಪಕ್ಷದ ಮುಖಂಡರು ನಿರತರಾಗಿದ್ದಾರೆ' ಎಂದು ಅವರು ಆರೋಪಿಸಿದರು.

'ಬಿಜೆಪಿ ಜತೆಗೆ ಮತ್ತೆ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆಗಳೇ ಇಲ್ಲ. ದೇಶದ ಸಂವಿಧಾನಕ್ಕೆ ಅವಮಾನವೆಸಗಿ, ಮಹಾರಾಷ್ಟ್ರದ ಗೌರವಕ್ಕೆ ಬಿಜೆಪಿ ಧಕ್ಕೆ ತಂದಿದೆ. ಇಂತಹವರ ಜತೆಗೆ ಹೋಗುವ ಸಾಧ್ಯತೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಬಾರಾಮತಿ: ಅಜಿತ್ ಪವಾರ್, ಯುಗೇಂದ್ರ ಮಧ್ಯೆ ಹಣಾಹಣಿ?

ಅಜಿತ್ ಪವಾರ್

ಪುಣೆ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದು, ಬಾರಾಮತಿ ಕ್ಷೇತ್ರದಲ್ಲಿ ಚುನಾವಣೆಯ ಕಾವು ಏರಿದೆ. ಕ್ಷೇತ್ರದಲ್ಲಿ ಉಪಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಅವರ ತಮ್ಮನ ಮಗ ಯುಗೇಂದ್ರ ಪವಾರ್ (ಪವಾರ್ ಕುಟುಂಬದ 3ನೇ ಪೀಳಿಗೆ) ಅವರ ಮಧ್ಯೆ ನೇರ ಹಣಾಹಣಿ ಏರ್ಪಡುವ ಸಾಧ್ಯತೆ ಇದೆ.

ಎನ್‌ಸಿಪಿ (ಶರದ್ ಪವಾರ್ ಬಣ) ಇನ್ನೂ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿಲ್ಲ. 'ಮಹಾಯುತಿ'ಯ ಭಾಗವಾಗಿರುವ ಎನ್‌ಸಿಪಿ (ಅಜಿತ್ ಪವಾರ್ ಬಣ) ಸಹ ಇನ್ನಷ್ಟೇ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಬೇಕಿದೆ. ಆದರೆ, ಬಾರಾಮತಿ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಸ್ಪರ್ಧಿಸಬಹುದು ಎನ್ನಲಾದ ಅಭ್ಯರ್ಥಿಗಳ ಹೆಸರು ಹರಿದಾಡುತ್ತಿದೆ.

32 ವರ್ಷದ ಯುಗೇಂದ್ರ ಅವರು ಅಜಿತ್ ಪವಾರ್ ಅವರ ಸೋದರ ಶ್ರೀನಿವಾಸ್ ಪವಾರ್ ಅವರ ಪುತ್ರ. ಬೋಸ್ಟನ್ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದಾರೆ. ಬಾರಾಮತಿ ಪವಾರ್ ಕುಟುಂಬದ ಭದ್ರಕೋಟೆಯಾಗಿದೆ.

'ಚುನಾವಣೆಗಾಗಿ ನೈತಿಕತೆಯ ಮುಸುಕಷ್ಟೆ'

ಮುಂಬೈ (ಪಿಟಿಐ): 'ಪತ್ರಕರ್ತೆ, ಹೋರಾಟಗಾರ್ತಿ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿ ಶ್ರೀಕಾಂತ್ ಪಾಂಗಾರ್ಕರ್ ಅವರನ್ನು ಶಿವಸೇನೆಯು ಪಕ್ಷದ ಹುದ್ದೆಯಿಂದ 'ಹೊರಗಿಟ್ಟಿರುವುದು' ಚುನಾವಣೆಯ ಕಾರಣಕ್ಕಾಗಿ ಮಾತ್ರ' ಎಂದು ಎನ್‌ಸಿಪಿ (ಶರದ್ ಬಣ) ಸಂಸದೆ ಸುಪ್ರಿಯಾ ಸುಳೆ ಸೋಮವಾರ ಅಭಿಪ್ರಾಯಪಟ್ಟರು.

ಸುಪ್ರಿಯಾ ಸುಳೆ

'ಗೌರಿ ಲಂಕೇಶ್ ಅವರ ಹತ್ಯೆ ಆರೋಪಿಯನ್ನು ಪಕ್ಷಕ್ಕೆ ಸೇರಿಸಿಕೊಂಡು, ಈಗ ಹುದ್ದೆಯಿಂದ ದೂರ ಇಟ್ಟಿದ್ದಾರೆ. ಇಷ್ಟು ಮಾಡಿದರೆ ಸಾಕಾಗದು. ರಾಜ್ಯದಲ್ಲಿ ಚುನಾವಣೆ ಇದೆ ಎನ್ನುವ ಕಾರಣಕ್ಕಾಗಿ ಇಂಥ ನೈತಿಕತೆಯ ಮುಸುಕು ಹಾಕಿಕೊಳ್ಳಲಾಗುತ್ತಿದೆಯಷ್ಟೆ. ಚುನಾವಣೆ ಮುಗಿಯುತ್ತಿದ್ದಂತೆಯೇ ಇಂಥ ಅಪರಾಧಿಗಳನ್ನು ಮತ್ತೊಮ್ಮೆ ಹತ್ತಿರ ಸೇರಿಸಿಕೊಳ್ಳಲಾಗುತ್ತದೆ' ಎಂದು ಸುಳೆ ಅವರು ತಮ್ಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಶ್ರೀಕಾಂತ್ ಅವರು ಶಿವಸೇನಾ (ಶಿಂದೆ ಬಣ) ಸೇರಿಕೊಂಡಿದ್ದು, ಅವರನ್ನು ಜಲ್ನಾ ಪ್ರಚಾರ ಸಮಿತಿಯ ಮುಖ್ಯಸ್ಥರನ್ನಾಗಿ ಮಾಡಿದ್ದು ರಾಜ್ಯದಾದ್ಯಂತ ಟೀಕೆಗೆ ಗುರಿಯಾಗಿತ್ತು. ತಕ್ಷಣವೇ ಎಚ್ಚೆತ್ತುಕೊಂಡ ಮುಖ್ಯಮಂತ್ರಿ ಏಕನಾಥ ಶಿಂದೆ, ಶ್ರೀಕಾಂತ್ ಅವರನ್ನು ಪಕ್ಷದ ಹುದ್ದೆಯಿಂದ ವಜಾಗೊಳಿಸುವಂತೆ ಆದೇಶ ನೀಡಿದ್ದರು.

ಪತ್ರಕರ್ತ ಕಪಿಲ್ ಪಾಟೀಲ್ ಕಾಂಗ್ರೆಸ್‌ಗೆ: ಪತ್ರಕರ್ತ, ಸಮಾಜವಾದಿ ಚಳವಳಿಯಲ್ಲಿ ಗುರುತಿಸಿಕೊಂಡಿದ್ದ ಮಾಜಿ ಶಾಸಕ ಕಪಿಲ್ ಪಾಟೀಲ್ ಅವರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ. ಪಾಟೀಲ್ ಅವರು ಈ ಹಿಂದೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಪಕ್ಷದಲ್ಲಿ ಗುರುತಿಸಿಕೊಂಡಿದ್ದರು.

ಕಮಲ್ ಫಾರೂಕಿ ಮತ್ತೆ ಕಾಂಗ್ರೆಸ್‌ಗೆ: ಸುಮಾರು 20 ವರ್ಷಗಳ ಹಿಂದೆ ಕಾಂಗ್ರೆಸ್ ತೊರೆದಿದ್ದ ಕಮಲ್ ಫಾರೂಕಿ ಅವರು ಮತ್ತೆ ಕಾಂಗ್ರೆಸ್ ಸೇರಿಕೊಂಡಿದ್ದಾರೆ. ಎನ್‌ಸಿಪಿ ಪಕ್ಷದ ಮಾಜಿ ವಕ್ತಾರ, ವಕೀಲ, ಫಾರೂಕಿ ಅವರ ಮಗ ಉಮರ್ ಕಮಲ್ ಫಾರೂಕಿ ಕೂಡ ಕಾಂಗ್ರೆಸ್ ಸೇರಿದ್ದಾರೆ.

ಪ್ರಿಯಾಂಕಾ ನಾಮಪತ್ರ ಸಲ್ಲಿಕೆ ನಾಳೆ

ನವದೆಹಲಿ (ಪಿಟಿಐ): ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣೆಗೆ ಯುಡಿಎಫ್ ಮೈತ್ರಿಕೂಟದ ಅಭ್ಯರ್ಥಿಯಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಬುಧವಾರ (ಅ.23) ನಾಮಪತ್ರ ಸಲ್ಲಿಸಲಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸೋಮವಾರ ಭೇಟಿಯಾಗಿ ಆಶೀರ್ವಾದ ಪಡೆದರು –ಪಿಟಿಐ ಚಿತ್ರ

ನಾಮಪತ್ರ ಸಲ್ಲಿಕೆ: (ಮೈನ್‌ಪುರಿ ವರದಿ): ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಕರಹಾಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಪಕ್ಷದ ಅಭ್ಯರ್ಥಿ ತೇಜ್ ಪ್ರತಾಪ್ ಯಾದವ್ ಅವರು ಸೋಮವಾರ ನಾಮಪತ್ರ ಸಲ್ಲಿಸಿದರು.

ಬಂಗಾಳಕೊಲ್ಲಿಯಲ್ಲಿ ನಾಳೆ ಚಂಡಮಾರುತ ಸಾಧ್ಯತೆ

ಅಮರಾವತಿ (ಪಿಟಿಐ): ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಇದರಿಂದಾಗಿ ಅ.23ರ ವೇಳೆಗೆ ಚಂಡಮಾರುತ ಅಪ್ಪಳಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಸೋಮವಾರ ತಿಳಿಸಿದೆ.

ಪೂರ್ವ– ಮಧ್ಯ ಬಂಗಾಳಕೊಲ್ಲಿ ಹಾಗೂ ಅಂಡಮಾನ್ ಸಮುದ್ರದ ಉತ್ತರಕ್ಕೆ ವಾಯುಭಾರ ಕುಸಿತ ಉಂಟಾಗಿದೆ. ಇದು ಪಶ್ಚಿಮ– ವಾಯುವ್ಯ ದಿಕ್ಕಿನೆಡೆಗೆ ಚಲಿಸುವ ಸಾಧ್ಯತೆ ಇದೆ. ಅ.23ರಂದು ಪೂರ್ವ– ಮಧ್ಯ ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ತೀವ್ರಗೊಳ್ಳುವ ಸಾಧ್ಯತೆ ಇದೆ.

ನಂತರ ಚಂಡಮಾರುತವು ವಾಯುವ್ಯಕ್ಕೆ ಚಲಿಸುವ ಸಾಧ್ಯತೆ ಇದ್ದು, ಅ.24ರ ಮುಂಜಾನೆ ಒಡಿಶಾ– ಪಶ್ಚಿಮ ಬಂಗಾಳ ಕರಾವಳಿಯಿಂದ ವಾಯುವ್ಯ ಬಂಗಾಳಕೊಲ್ಲಿಯನ್ನು ತಲುಪುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ತಂಡಗಳ ನಿಯೋಜನೆ (ನವದೆಹಲಿ ವರದಿ): ಒಡಿಶಾ ಮತ್ತು ಪಶ್ಚಿಮ ಬಂಗಾಳ ಕರಾವಳಿಯಲ್ಲಿ ಚಂಡಮಾರುತ ಸನ್ನಿಹಿತವಾಗಿರುವ ಕಾರಣ ಕಾರ್ಯಾಚರಣೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ಒಟ್ಟು 25 ತಂಡಗಳನ್ನು ನಿಯೋಜಿಸಲಾಗಿದೆ.

ಪಶ್ಚಿಮ ಬಂಗಾಳದಲ್ಲಿ 14 ಹಾಗೂ ಒಡಿಶಾದಲ್ಲಿ 11 ತಂಡಗಳು ಕಾರ್ಯಾಚರಣೆಗೆ ಸನ್ನದ್ಧವಾಗಿವೆ.

ನೃತ್ಯ....

ನವದೆಹಲಿಯಲ್ಲಿ ಸೋಮವಾರ ನಡೆದ ಭಾರತೀಯ ನೃತ್ಯ ಕುರಿತ ಅಂತರರಾಷ್ಟ್ರೀಯ ಉತ್ಸವದ ಸಮಾರೋಪದಲ್ಲಿ ಕಲಾವಿದರು ಹೆಜ್ಜೆ ಹಾಕಿದರು –ಪಿಟಿಐ ಚಿತ್ರ

ಶ್ರೀನಗರ: ಎನ್‌ಐಎ ತಂಡ ಭೇಟಿ

ಶ್ರೀನಗರ: ಕಾಶ್ಮೀರದ ಗಾಂದರ್‌ಬಲ್ ಜಿಲ್ಲೆಯ ಗಗನ್‌ಗೀರ್‌ನಲ್ಲಿ ಭಾನುವಾರ ನಡೆದ ಉಗ್ರರ ದಾಳಿ ನಡೆದ ಸ್ಥಳಕ್ಕೆ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಹಿರಿಯ ಅಧಿಕಾರಿಗಳನ್ನು ಒಳಗೊಂಡ ನಾಲ್ವರು ಸದಸ್ಯರ ತಂಡವು ಸೋಮವಾರ ಭೇಟಿ ನೀಡಿ, ಆರು ಮಂದಿ ಹತ್ಯೆಯಾದ ಸ್ಥಳದಲ್ಲಿ ವಿಧಿವಿಜ್ಞಾನ ತಂಡವು ಪರಿಶೀಲನೆ ನಡೆಸಿತು.

ಈ ಪ್ರಕರಣದ ತನಿಖೆಯನ್ನು ಎನ್‌ಐಗೆ ವಹಿಸಲು ಕೇಂದ್ರ ಗೃಹ ಸಚಿವಾಲಯವು ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಘಟನಾ ಸ್ಥಳಕ್ಕೆ ಎನ್‌ಐಎ ಅಧಿಕಾರಿಗಳು ಭೇಟಿ ನೀಡಿದ್ದು, ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಿದ್ದಾರೆ.

'ಜಿಲ್ಲೆಯ ಗುಂಡ್ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿದ್ದ ಸುರಂಗ ಮಾರ್ಗದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಮೇಲೆ ಇಬ್ಬರು ಉಗ್ರರು ಮನಬಂದಂತೆ ಗುಂಡಿನ ದಾಳಿ ನಡೆಸಿದ್ದು, ದೊಡ್ಡ ಪ್ರಮಾಣದಲ್ಲಿ ಜೀವ ಹಾನಿಗೊಳಿಸುವ ಯೋಜನೆ ರೂಪಿಸಿದ್ದರು. ದಾಳಿಗೂ ಮುನ್ನ ಸಾಕಷ್ಟು ಪೂರ್ವ ತಯಾರಿ ನಡೆಸಿದಂತೆ ಕಂಡುಬರುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪಾಕಿಸ್ತಾನದ ಮೂಲದ ಲಷ್ಕರ್‌–ಎ–ತಯಬಾದ ಸಹ ಸಂಘಟನೆಯಾದ 'ದ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ದಾಳಿಯ ಹೊಣೆ ಹೊತ್ತುಕೊಂಡಿದೆ.

ಉಗ್ರರ ದಾಳಿ ನಿಲ್ಲುವವರೆಗೂ ಮಾತುಕತೆ ಬೇಡ: ಶ್ರೀನಗರ/ನವದೆಹಲಿ (ಪಿಟಿಐ): 'ಜಮ್ಮು–ಕಾಶ್ಮೀರದಲ್ಲಿ ಹತ್ಯೆಗಳು ನಿಲ್ಲುವವರೆಗೆ ಭಾರತ ಮತ್ತು ಪಾಕಿಸ್ತಾನ ನಡುವೆ ಯಾವುದೇ ಮಾತುಕತೆ ಸಾಧ್ಯವಿಲ್ಲ' ಎಂದು ಮಾಜಿ ಮುಖ್ಯಮಂತ್ರಿ ಹಾಗೂ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಸೋಮವಾರ ಹೇಳಿದ್ದಾರೆ.

ದೆಹಲಿಯಲ್ಲಿ ಸ್ಫೋಟ ಪ್ರಕರಣ ಟೆಲಿಗ್ರಾಂಗೆ ಪೊಲೀಸರ ಪತ್ರ

ನವದೆಹಲಿ (ಪಿಟಿಐ): ಸಿಆರ್‌ಪಿಎಫ್ ಶಾಲೆ ಸಮೀಪ ನಡೆದ ಬಾಂಬ್ ಸ್ಫೋಟ ಪ್ರಕರಣಕ್ಕೂ ಖಾಲಿಸ್ತಾನಿ ಪ್ರತ್ಯೇಕತಾವಾದಿಗಳಿಗೂ ಸಂಬಂಧ ಇದೆಯೇ ಎಂಬ ಬಗ್ಗೆ ದೆಹಲಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಈ ಸಂಬಂಧ ಸಾಮಾಜಿಕ ಮಾಧ್ಯಮ 'ಟೆಲಿಗ್ರಾಂ'ಗೆ ಪತ್ರ ಬರೆದು, ಸ್ಫೋಟದ ಹೊಣೆ ಹೊತ್ತ ಗುಂಪಿನ ಬಗ್ಗೆ ಮಾಹಿತಿ ಕೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಖಾಲಿಸ್ತಾನಿ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸುವವರನ್ನು ಭಾರತ ಗುರಿಯಾಗಿಸಿದ್ದಕ್ಕೆ ಪ್ರತಿಯಾಗಿ ಈ ದಾಳಿ ನಡೆಸಲಾಗಿದೆ ಎಂದು ಹೇಳಲಾದ ಟೆಲಿಗ್ರಾಂ ಪೋಸ್ಟ್ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಹೀಗಾಗಿ 'ಜಸ್ಟೀಸ್ ಲೀಗ್ ಇಂಡಿಯನ್' ಗುಂಪಿನ ಸೃಷ್ಟಿಕರ್ತರ ಕುರಿತು ಮಾಹಿತಿ ನೀಡುವಂತೆ ಟೆಲಿಗ್ರಾಂಗೆ ಪೊಲೀಸರು ಪತ್ರ ಬರೆದಿದ್ದಾರೆ ಎಂದು ತಿಳಿಸಿವೆ.

ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ತಂಡವು ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಕಚ್ಚಾಬಾಂಬ್ ಅನ್ನು ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಸುತ್ತಿ, ಒಂದು ಅಡಿ ಆಳದ ಗುಂಡಿ ಅಗೆದು ಅದರಲ್ಲಿ ಇಟ್ಟಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಘಟನೆ ಸಂಬಂಧ ಭಾರತೀಯ ನ್ಯಾಯಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ.ರೋಹಿಣಿಯ ಪ್ರಶಾಂತ್ ವಿಹಾರ್ ಸಮೀಪ ಭಾನುವಾರ ಸ್ಫೋಟ ಸಂಭವಿಸಿತ್ತು.

ಮಹಾರಾಷ್ಟ್ರ: 5 ನಕ್ಸಲರ ಹತ್ಯೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಗಢಚಿರೋಲಿ ಜಿಲ್ಲೆಯಲ್ಲಿ ಪೊಲೀಸರು ಸೋಮವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಐದು ಮಂದಿ ನಕ್ಸಲರು ಹತರಾಗಿದ್ದಾರೆ.

'ಛತ್ತೀಸಗಢದ ನಾರಾಯಣಪುರ ಗಡಿ ಸಮೀಪದಲ್ಲಿರುವ ಭಮ್ರಾಗಢದ ತಾಲೂಕಿನಲ್ಲಿ ಗಢಚಿರೋಲಿ ಪೊಲೀಸರ ಸಿ60 ಕಮಾಂಡೊ ತಂಡ ಮತ್ತು ಸಿಆರ್‌ಪಿಎಫ್ ತಂಡ ಜಂಟಿಯಾಗಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ಕೈಗೊಂಡಿತ್ತು. ಈ ವೇಳೆ ಗುಂಡಿನ ಚಕಮಕಿ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಚುನಾವಣೆಗೆ ಸ್ಪರ್ಧಿಸಲು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬೇಕು ಎಂಬ ನಿಯಮ

ಜನಸಂಖ್ಯಾ ಹೆಚ್ಚಳಕ್ಕೆ ಆಂಧ್ರ ಚಿಂತನೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಸ್ಥಳೀಯ ಚುನಾವಣೆಗಳಿಗೆ ಸ್ಪರ್ಧಿಸಲು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬೇಕು ಎಂಬ ನಿಯಮ ರೂಪಿಸಲು ಆಂಧ್ರ ಪ್ರದೇಶ ಸರ್ಕಾರ ಚಿಂತನೆ ನಡೆಸಿದೆ.

ಇದಕ್ಕಾಗಿ ಎರಡು ದಶಕಗಳ ಹಿಂದಿನ 'ಇಬ್ಬರು ಮಕ್ಕಳ' ನೀತಿಯನ್ನು ಎನ್.ಚಂದ್ರಬಾಬು ನಾಯ್ಡು ಅವರ ಸರ್ಕಾರವು ಆಗಸ್ಟ್‌ನಲ್ಲಿಯೇ ರದ್ದು ಮಾಡಿದೆ.

ಹಳೆಯ ನೀತಿಯಡಿ, ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇಬ್ಬರಿಗಿಂತ ಹೆಚ್ಚು ಮಕ್ಕಳನ್ನು ಹೊಂದಿರುವವರು ಸ್ಪರ್ಧಿಸಿದರೆ ಅವರನ್ನು ಅನರ್ಹಗೊಳಿಸಬಹುದಿತ್ತು.

ಈ ನೀತಿ ರದ್ದು ಮಾಡಲು ಆಂಧ್ರ ಪ್ರದೇಶ ಮಹಾನಗರ ಪಾಲಿಕೆ ಕಾಯ್ದೆ– 1955, ಆಂಧ್ರಪ್ರದೇಶ ಪಂಚಾಯತ್ ರಾಜ್ ಕಾಯ್ದೆ–1994, ಆಂಧ್ರ ಪ್ರದೇಶ ಪಾಲಿಕೆಗಳ ಕಾಯ್ದೆ–1965ಕ್ಕೆ ತಿದ್ದುಪಡಿ ಮಾಡಲಾಗಿದೆ.

ಚಂದ್ರಬಾಬು ನಾಯ್ಡು

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ, ಆಂಧ್ರಪ್ರದೇಶದಲ್ಲಿ ಒಟ್ಟು ಫಲವತ್ತತೆಯ ಪ್ರಮಾಣ (ಟಿಎಫ್‌ಆರ್– ಮಹಿಳೆಯು ತನ್ನ ಜೀವಿತಾವಧಿಯಲ್ಲಿ ಪಡೆಯುವ ಮಕ್ಕಳ ಸರಾಸರಿ ಸಂಖ್ಯೆ) 1.70ಕ್ಕಿಂತ ಕಡಿಮೆ ಇದೆ. ಇದು ರಾಷ್ಟ್ರೀಯ ಸರಾಸರಿ 1.91ಕ್ಕಿಂತ ಕಡಿಮೆ. ಕಳೆದ ವಾರ ನಾಯ್ಡು ಅವರು, 'ಜನಸಂಖ್ಯಾ ಬಿಕ್ಕಟ್ಟು' ಉಂಟಾಗಿದೆ. ಮಕ್ಕಳನ್ನು ಪಡೆಯುವವರ ಸಂಖ್ಯೆ ತಗ್ಗಿದೆ, ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿದೆ' ಎಂದು ಹೇಳಿದ್ದರು.

'ರಾಜ್ಯದಲ್ಲಿ ಜನನ ದರ ಏರಿಕೆಯಾಗಬೇಕು. ಕನಿಷ್ಠ ಎರಡು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಪಡೆಯುವ ಬಗ್ಗೆ ಕುಟುಂಬಗಳು ಯೋಚಿಸಬೇಕು. ಭವಿಷ್ಯಕ್ಕಾಗಿ ಜನನ ದರವನ್ನು ಹೆಚ್ಚಿಸಬೇಕಿದೆ' ಎಂದು ಹೇಳಿದ್ದರು. ಒಟ್ಟು ಫಲವತ್ತತೆಯ ಪ್ರಮಾಣ, ಕರ್ನಾಟಕದಲ್ಲಿ1.70, ತೆಲಂಗಾಣದಲ್ಲಿ 1.82, ಕೇರಳದಲ್ಲಿ 1.80, ತಮಿಳುನಾಡಿನಲ್ಲಿ 1.80ರಷ್ಟಿದೆ.

'ದಕ್ಷಿಣದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯಕ್ಕೆ ಕುತ್ತು?'

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, 'ಎಕ್ಸ್'ನಲ್ಲಿ, 'ದಕ್ಷಿಣದ ರಾಜ್ಯಗಳು ಕುಟುಂಬ ಯೋಜನೆಯ ಪ್ರತಿಪಾದಕ ರಾಜ್ಯಗಳು. ಕೇರಳವು 1988ರಲ್ಲಿ ಮೊದಲ ಬಾರಿಗೆ ಫಲವತ್ತತೆಯ ಪ್ರಮಾಣವನ್ನು ಸರಿದೂಗಿಸುವ ಮಟ್ಟ ತಲುಪಿತು. ನಂತರ 1993ರಲ್ಲಿ ತಮಿಳುನಾಡು, 2001ರಲ್ಲಿ ಆಂಧ್ರಪ್ರದೇಶ ಮತ್ತು 2005ರಲ್ಲಿ ಕರ್ನಾಟಕ ಆ ಹಂತವನ್ನು ತಲುಪಿತು. ಆದರೆ ಈ ಯಶಸ್ಸು ದಕ್ಷಿಣದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯವನ್ನು ತಗ್ಗಿಸುತ್ತದೆ ಎಂಬ ಆತಂಕ ಈಗ ಎದುರಾಗಿದೆ' ಎಂದು ಹೇಳಿದ್ದಾರೆ.

'ಸುದೀರ್ಘ ಕಾಲದಿಂದ ನೆನಗುದಿಗೆ ಬಿದ್ದಿರುವ ಜನಗಣತಿಯು ಶೀಘ್ರ ಆರಂಭವಾಗಲಿದೆ ಎಂಬ ಮಾತು ಕೇಳಿಬರುತ್ತಿದೆ. ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಇದನ್ನು ಬಳಸಿಕೊಳ್ಳಲಾಗುತ್ತದೆಯೇ?, ದಕ್ಷಿಣ ರಾಜ್ಯಗಳ ಯಶಸ್ಸಿಗೆ 'ಶಿಕ್ಷೆ' ನೀಡುವಂತಾಗಬಾರದು' ಎಂದು ಹೇಳಿದ್ದಾರೆ.

16 ಮಕ್ಕಳನ್ನು ಪಡೆಯುವ ಕನಸಿಗೆ ಪೂರಕ: ಸ್ಟಾಲಿನ್ ಅಭಿಮತ

ಚೆನ್ನೈ: ಲೋಕಸಭಾ ಕ್ಷೇತ್ರಗಳ ಪುನರ್‌ವಿಂಗಡಣೆಯು 16 ಮಕ್ಕಳನ್ನು ಪಡೆಯುವ ಕನಸಿಗೆ ಪೂರಕವಾಗಬಹುದು. ಆದರೆ ತಾವೆಲ್ಲರೂ ಮಕ್ಕಳಿಗೆ ತಮಿಳು ಹೆಸರನ್ನೇ ನಾಮಕರಣ ಮಾಡಬೇಕು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದ್ದಾರೆ.

ಸೋಮವಾರ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರು, ಜನಗಣತಿ ಮತ್ತು ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆ ಉಲ್ಲೇಖಿಸಿ, 'ನೂತನ ದಂಪತಿಗಳು ಕೆಲವೇ ಮಕ್ಕಳನ್ನು ಪಡೆಯಬೇಕೆಂಬ ಯೋಚನೆಯನ್ನು ಕೈಬಿಡಬಹುದು. ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯು ಹೆಚ್ಚು ಮಕ್ಕಳನ್ನು ಪಡೆಯಲು ಪ್ರೇರೇಪಿಸಬಹುದು' ಎಂದು ಹೇಳಿದರು.

'ಈ ಹಿಂದೆ ಹಿರಿಯರು 16 ಮಕ್ಕಳನ್ನು ಪಡೆಯುವಂತೆ ನವದಂಪತಿಗಳಿಗೆ ಆಶೀರ್ವದಿಸುತ್ತಿದ್ದರು' ಎಂದರು.

ರಣಜಿ: ಮಳೆಯಿಂದಾಗಿ ಮೊದಲ ಇನಿಂಗ್ಸ್ ಅಪೂರ್ಣ • ಪಾಯಿಂಟ್ ಹಂಚಿಕೊಂಡ ಕೇರಳ

ಕರ್ನಾಟಕಕ್ಕೆ ಮತ್ತೆ ಒಂದು ಅಂಕ, ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತತ ಎರಡನೇ ಬಾರಿ ಕರ್ನಾಟಕ ಈ ಋತುವಿನ ರಣಜಿ ಟ್ರೋಫಿ ಪಂದ್ಯದಲ್ಲಿ ಒಂದು ಪಾಯಿಂಟ್ ಪಡೆಯಬೇಕಾಯಿತು. ಕರ್ನಾಟಕ ಮತ್ತು ಕೇರಳ ನಡುವಣ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ರಣಜಿ ಟ್ರೋಫಿ 'ಸಿ' ಗುಂಪಿನ ಪಂದ್ಯದ ನಾಲ್ಕನೇ ದಿನವಾದ ಸೋಮವಾರ ಸಹ ಒಂದೂ ಎಸೆತದ ಆಟ ಸಾಧ್ಯವಾಗಲಿಲ್ಲ. ಒಂದೂ ಇನಿಂಗ್ಸ್ ಪೂರ್ಣವಾಗದೇ ಉಭಯ ತಂಡಗಳು ತಲಾ ಒಂದು ಪಾಯಿಂಟ್ ಪಡೆದವು.

ಭಾನುವಾರದ ಮಳೆಯಿಂದಾಗಿ ಕ್ರೀಡಾಂಗಣ ಆಡಲು ಯೋಗ್ಯವಾಗಿರಲಿಲ್ಲ. ಸೋಮವಾರವೂ ಬಿಟ್ಟುಬಿಟ್ಟು ಮಳೆಯಾಯಿತು.

ಇಂದೋರ್‌ನಲ್ಲಿ ಹಾಲಿ ಋತುವಿನ ಮೊದಲ ಪಂದ್ಯದಲ್ಲಿ ಮಧ್ಯಪ್ರದೇಶ ವಿರುದ್ಧವೂ ಪ್ರತಿಕೂಲ ಹವಾಮಾನದಿಂದಾಗಿ ಪಂದ್ಯ ಅಪೂರ್ಣಗೊಂಡು ಕರ್ನಾಟಕ ಒಂದು ಪಾಯಿಂಟ್ ಪಡೆದಿತ್ತು. ತಂಡದ ಕೋಚ್ ಯರೇ ಗೌಡ ಮತ್ತು ನಾಯಕ ಮಯಂಕ್ ಅಗರವಾಲ್ ನೇರವಾಗಿ ನಿರಾಸೆ ವ್ಯಕ್ತಪಡಿಸದಿದ್ದರೂ ಅವರ ಮಾತುಗಳಲ್ಲಿ ಆತಂಕ ಕಾಣಿಸಿತು.

ನಾಲ್ಕು ದಿನಗಳ ಆಟದಲ್ಲಿ ಸಾಧ್ಯವಾಗಿದ್ದು 50 ಓವರುಗಳ ಆಟವಷ್ಟೇ. ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಕೇರಳ ಮೊದಲ ದಿನ 23 ಓವರ್ ಮತ್ತು ಎರಡನೇ ದಿನ 27 ಓವರ್ ಆಡಿದ್ದು 3 ವಿಕೆಟ್‌ಗೆ 161 ರನ್ ಗಳಿಸಿತ್ತು. ಎರಡು ಪಂದ್ಯಗಳಲ್ಲಿ ಎರಡು ಪಾಯಿಂಟ್ ಮಾತ್ರ ಬಂದಿರುವುದು ಕರ್ನಾಟಕ ಪಾಳೆಯದಲ್ಲಿ ಆತಂಕ ಮೂಡಿಸಿದೆ.

'ನಾವು ಬಯಸಿದಂತೆ ಆಗಿಲ್ಲ. ಏನು ಮಾಡಲು ಸಾಧ್ಯ?' ಎಂದು ಯರೇ ಗೌಡ ಪ್ರತಿಕ್ರಿಯಿಸಿದರು. 'ಪರಿಸ್ಥಿತಿ ನಮ್ಮ ಕೈಲಿದ್ದರೆ ನಿಭಾಯಿಸಬಹುದು. ಪೂರ್ಣ ಗೆಲುವು ಸಾಧಿಸುವ ಗುರಿಯೊಡನೆ ನಾವು

ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ –ಪ್ರಜಾವಾಣಿ ಚಿತ್ರ

ಈ ಟೂರ್ನಿಗೆ ಆಡಲು ಇಳಿದಿದ್ದೆವು. ಮುಂದೆಯೂ ನಮ್ಮ ಗುರಿ ಅದೇ' ಎಂದು ಕೋಚ್ ಹೇಳಿದರು.

ಕರ್ನಾಟಕ ತಂಡವು ಮುಂದಿನ ಪಂದ್ಯವನ್ನು ಅಕ್ಟೋಬರ್ 26 ರಿಂದ 29ವರೆಗೆ ಪಟ್ನಾದಲ್ಲಿ ಬಿಹಾರ ವಿರುದ್ಧ ಆಡಲಿದೆ. ನಂತರ ನವೆಂಬರ್ 6 ರಿಂದ 9ರ ವರೆಗೆ ಬೆಂಗಳೂರಿನಲ್ಲಿ ಬಂಗಾಳ ವಿರುದ್ಧ ಪಂದ್ಯ ನಿಗದಿಯಾಗಿದೆ. ಬಳಿಕ ಲಖನೌದಲ್ಲಿ ಉತ್ತರ ಪ್ರದೇಶ ತಂಡವನ್ನು ನವೆಂಬರ್ 13 ರಿಂದ 16ರವರೆಗೆ ಎದುರಿಸಲಿದೆ. ಕೊನೆಯ ಎರಡು ಪಂದ್ಯಗಳಿಗೆ ಮೊದಲು (ಪಂಜಾಬ್ ಮತ್ತು ಹರಿಯಾಣ ವಿರುದ್ಧ) ಸ್ವಲ್ಪ ವಿರಾಮ ಸಿಗಲಿದೆ. ಆ ಪಂದ್ಯಗಳು 2025ರ ಜನವರಿ, ಫೆಬ್ರುವರಿ ತಿಂಗಳಲ್ಲಿ ನಡೆಯಲಿವೆ.

'ನಾವು ಈಗ ಕಷ್ಟದ ಪರಿಸ್ಥಿತಿಯಲ್ಲಿದ್ದೇವೆ' ಎಂದು ಮಯಂಕ್ ಅಗರವಾಲ್ ಹೇಳಿದರು. ಪಂದ್ಯ ಗೆಲ್ಲಬೇಕೆಂಬ ಉದ್ದೇಶದಿಂದ ನಾವು ಎರಡೂ ಪಂದ್ಯಗಳಲ್ಲಿ ಟಾಸ್ ಗೆದ್ದು ಬೌಲಿಂಗ್ ಆಯ್ಕೆಮಾಡಿಕೊಂಡೆವು. ಈಗಿನ ಸ್ಥಿತಿ ಹತಾಶೆ ಮೂಡಿಸಿದೆ. ಆದರೆ ಇಂಥದ್ದನ್ನು ನಿಭಾಯಿಸಬೇಕಾಗುತ್ತದೆ' ಎಂದರು.

ಪಂದ್ಯಕ್ಕೆ ಪ್ರತಿಕೂಲ ಹವಾಮಾನ ಅಡ್ಡಿಯಾಗುವುದರಿಂದ ಹೊಸಬರ ಸಾಮರ್ಥ್ಯ ಅಳೆಯಲೂ ಆಗುತ್ತಿಲ್ಲ. 'ನಿಜ. ಈ ಆಟಗಾರರು ಕ್ರೀಡಾಂಗಣದಲ್ಲಿ ಸಾಕಷ್ಟು ಹೊತ್ತು ಕಳೆಯದೇ ಹೋದಲ್ಲಿ ಅವರ ಸಾಮರ್ಥ್ಯ ತಿಳಿಯಲು ಆಗುವುದಿಲ್ಲ' ಎಂದು ಮಯಂಕ್ ಹೇಳಿದರು.

ಸಂಕ್ಷಿಪ್ತ ಸ್ಕೋರು: ಕೇರಳ: 50 ಓವರುಗಳಲ್ಲಿ 3 ವಿಕೆಟ್‌ಗೆ 161. ಪಂದ್ಯ ಡ್ರಾ. ಕೇರಳ: 1 ಪಾಯಿಂಟ್, ಕರ್ನಾಟಕ: 1 ಪಾಯಿಂಟ್

ಕೋಲ್ಕತ್ತ: ಬಂಗಾಳ ಮತ್ತು ಬಿಹಾರ ನಡುವಣ ಪಂದ್ಯ ಡ್ರಾ. ಬಂಗಾಳ 1 ಪಾಯಿಂಟ್. ಬಿಹಾರ: 1 ಪಾಯಿಂಟ್

ಲಖನೌ: ಹರಿಯಾಣ: 453 ಮತ್ತು 25 ಓವರುಗಳಲ್ಲಿ 3 ವಿಕೆಟ್‌ಗೆ 72 (ಮಯಂಕ್ ಶಾಂಡಿಲ್ಯ 31, ಶಿವಂ ಶರ್ಮಾ 22ಕ್ಕೆ2), ಉತ್ತರ ಪ್ರದೇಶ: (ಭಾನುವಾರ; 6 ವಿಕೆಟ್‌ಗೆ 267) 93.2 ಓವರುಗಳಲ್ಲಿ 364 (ಆರ್ಯನ್ ಜುಯಲ್ 119, ರಿಂಕು ಸಿಂಗ್ 89, ಯಶ್ ದಯಾಳ್ 41, ಅಂಕಿತ್ ರಜಪೂತ್ ಔಟಾಗದೇ 40; ಜಯಂತ್ ಯಾದವ್ 102ಕ್ಕೆ4). ಫಲಿತಾಂಶ: ಡ್ರಾ, ಹರಿಯಾಣ 3, ಉತ್ತರ ಪ್ರದೇಶ 1.

ಮುಲ್ಲನಪುರ: ಪಂಜಾಬ್: 277 ಮತ್ತು (ಭಾನುವಾರ; 3 ವಿಕೆಟ್‌ಗೆ 265) 6 ವಿಕೆಟ್‌ಗೆ 329 ಡಿಕ್ಲೇರ್ಡ್ (ಜಸ್ಕರಣವೀರ್ ಸಿಂಗ್ ಪಾಲ್ 116, ಅಭಯ್ ಚೌಧರಿ 46; ಅನ್ಮೋಲ್‌ಪ್ರೀತ್ ಸಿಂಗ್ 72); ಮಧ್ಯಪ್ರದೇಶ: 207 ಮತ್ತು 73 ಓವರುಗಳಲ್ಲಿ 8 ವಿಕೆಟ್‌ಗೆ 146 (ಹಿಮಾಂಶು ಮಂತ್ರಿ 41, ಹರ್‌ಪ್ರೀತ್ ಸಿಂಗ್ 35; ಅರ್ಷದೀಪ್ ಸಿಂಗ್ 28ಕ್ಕೆ2, ಗುರನೂರ್ ಬ್ರಾರ್ 60ಕ್ಕೆ3, ಸುಖ್ವಿಂದರ್ ಸಿಂಗ್ 19ಕ್ಕೆ2). ಪಂದ್ಯ ಡ್ರಾ. ಪಾಯಿಂಟ್ಸ್: ಪಂಜಾಬ್ 3, ಮಧ್ಯಪ್ರದೇಶ: 1

ಪಡಿಕ್ಕಲ್, ವಿದ್ವತ್ ಅಲಭ್ಯ: ಅಭಿನವ್, ಅನೀಶ್‌ಗೆ ಸ್ಥಾನ

ಪಟ್ನಾದಲ್ಲಿ ಇದೇ 26ರಿಂದ 29ರವರೆಗೆ ಬಿಹಾರ ವಿರುದ್ಧ ನಡೆಯಲಿರುವ ರಣಜಿ ಟ್ರೋಫಿ ಪಂದ್ಯಕ್ಕೆ ಕರ್ನಾಟಕ ತಂಡವನ್ನು ಆಯ್ಕೆ ಮಾಡಲಾಗಿದೆ. ಆಸ್ಟ್ರೇಲಿಯಾ ವಿರುದ್ಧ ಭಾರತ 'ಎ' ತಂಡಕ್ಕೆ ದೇವದತ್ತ ಪಡಿಕ್ಕಲ್ ಮತ್ತು ವಿದ್ವತ್ ಕಾವೇರಪ್ಪ ಆಯ್ಕೆಯಾಗಿರುವ ಕಾರಣ, ಅವರ ಬದಲು ಅಭಿನವ್ ಮನೋಹರ್ ಮತ್ತು ಅನೀಶ್ ಕೆ.ವಿ. ಸ್ಥಾನ ಪಡೆದಿದ್ದಾರೆ.

ತಂಡ ಹೀಗಿದೆ: ಮಯಂಕ್ ಅಗರವಾಲ್ (ನಾಯಕ), ನಿಕಿನ್ ಜೋಸ್ ಎಸ್.ಜೆ., ಸ್ಮರಣ್ ಆರ್., ಮನೀಶ್ ಪಾಂಡೆ (ಉಪನಾಯಕ), ಶ್ರೇಯಸ್ ಗೋಪಾಲ್, ಸುಜಯ್ ಸಾತೇರಿ (ವಿಕೆಟ್ ಕೀಪರ್), ಹಾರ್ದಿಕ್ ರಾಜ್, ವೈಶಾಖ ವಿ., ವಾಸುಕಿ ಕೌಶಿಕ್, ವಿದ್ಯಾಧರ ಪಾಟೀಲ, ಅಭಿನವ್ ಮನೋಹರ್, ಲವನೀತ್ ಸಿಸೋಡಿಯಾ, ಕಿಶನ್ ಎಸ್.ಬೆದರೆ, ಅನೀಶ್ ಕೆ.ವಿ., ಮೊಹ್ಸಿನ್ ಖಾನ್ ಮತ್ತು ಅಭಿಲಾಷ್ ಶೆಟ್ಟಿ.

ಅನೀಶ್ ಕೆ.ವಿ.

ಅಭಿನವ್ ಮನೋಹರ್

ಯು.ಪಿ. ಯೋಧಾಸ್ ಶುಭಾರಂಭ

ಪ್ರೊ ಕಬಡ್ಡಿ: ಪುಣೇರಿ ಪಲ್ಟನ್‌ಗೆ ಮಣಿದ ಪಟ್ನಾ ಪೈರೇಟ್ಸ್

ಹೈದರಾಬಾದ್: ಭವಾನಿ ರಜಪೂತ್ (7 ಅಂಕ) ಅವರ ರೈಡಿಂಗ್ ಮತ್ತು ಶಾವುಲ್ ಕುಮಾರ್ (5 ಅಂಕ) ಅವರ ರಕ್ಷಣಾ ಆಟದ ನೆರವಿನಿಂದ ಯು.ಪಿ ಯೋಧಾಸ್ ತಂಡ ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯಲ್ಲಿ ಶುಭಾರಂಭ ಮಾಡಿತು. ಸೋಮವಾರ ನಡೆದ ಪಂದ್ಯದಲ್ಲಿ ಯೋಧಾಸ್ ತಂಡ 28–23 ರಿಂದ ಡೆಲ್ಲಿ ದಬಾಂಗ್ ತಂಡವನ್ನು ಮಣಿಸಿತು.

ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೊದಲಾರ್ಧದಲ್ಲಿ ಹಣಾಹಣಿ ಕಂಡುಬಂದಿದ್ದು, ಯೋಧಾಸ್ 12–11ರಲ್ಲಿ ಒಂದು ಪಾಯಿಂಟ್ ಮುನ್ನಡೆ ಪಡೆದಿತ್ತು.

ವಿರಾಮದ ನಂತರ ಯೋಧಾಸ್ ತಂಡದ ರಕ್ಷಣಾ ಕೌಶಲದಿಂದ ಮುನ್ನಡೆಯನ್ನು ಹೆಚ್ಚಿಸಿಕೊಂಡಿತು. ಡೆಲ್ಲಿ ಪರ ಅನುಭವಿ ರೈಡರ್‌ಗಳಾದ ನವೀನ್, ಆಶು ಮಲಿಕ್ ರೈಡಿಂಗ್‌ನಲ್ಲಿ ಮಿಂಚಿದರು. ಆಲ್‌ರೌಂಡರ್ ಆಶೀಶ್ ಅವರೂ ನಾಲ್ಕು ಪಾಯಿಂಟ್ ಗಳಿಸಿದರು. ದಬಾಂಗ್ ಎರಡು ಪಂದ್ಯಗಳಲ್ಲಿ ಒಂದು ಗೆದ್ದು, ಒಂದು ಸೋತಂತಾಗಿದೆ.

ದಿನದ ಇನ್ನೊಂದು ಪಂದ್ಯದಲ್ಲಿ ಹತ್ತನೇ ಆವೃತ್ತಿಯ ಚಾಂಪಿಯನ್ ಪುಣೇರಿ ಪಲ್ಟನ್ ತಂಡವು 40–25ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿ ಎರಡನೇ ಜಯ ದಾಖಲಿಸಿತು.

ಪ್ರೊ ಕಬಡ್ಡಿ ಪಂದ್ಯದಲ್ಲಿ ಯು.ಪಿ. ಯೋಧಾಸ್ ಮತ್ತು ಡೆಲ್ಲಿ ದಬಾಂಗ್ ತಂಡಗಳ ಆಟಗಾರರ ಸೆಣಸಾಟ –ಎಕ್ಸ್ ಚಿತ್ರ

ಸಂಕ್ಷಿಪ್ತ ಸುದ್ದಿ

ಐಸಿಸಿ ಅಧ್ಯಕ್ಷರ ಅವಧಿ ಬದಲಾವಣೆ: ಶಿಫಾರಸು

ದುಬೈ (ಪಿಟಿಐ): ಐಸಿಸಿ ಅಧ್ಯಕ್ಷ ಮತ್ತು ಸ್ವತಂತ್ರ ನಿರ್ದೇಶಕರ ಅವಧಿಯಲ್ಲಿ ಬದಲಾವಣೆ ತರಲು ಅಂತರರಾಷ್ಟ್ರೀಯ ಕ್ರಿಕೆಟ್ ಉದ್ದೇಶಿಸಿದ್ದು, ಮೂರು ವರ್ಷಗಳ ಎರಡು ಅವಧಿಗೆ ಶಿಫಾರಸು ಮಾಡಿದೆ. ಇದು ಜಾರಿಯಾದಲ್ಲಿ ಹಾಲಿ ತಲಾ ಎರಡು ವರ್ಷಗಳ ಮೂರು ಅವಧಿಯ ನಿಯಮ ಬದಲಾಗಲಿದೆ.

ಈ ಶಿಫಾರಸಿಗೆ ಸದಸ್ಯರು ಸಮ್ಮತಿ ನೀಡಿದಲ್ಲಿ, ಡಿಸೆಂಬರ್ 1ರಂದು ಅಧ್ಯಕ್ಷರಾಗಿ ವಹಿಸಲಿರುವ ಜಯ್ ಶಾ ಅವರಿಗೆ ಮೂರು ವರ್ಷಗಳ ಅಧಿಕಾರದ ಅವಧಿ ದೊರೆಯಲಿದೆ. ಅವರು ಬಯಸಿದಲ್ಲಿ ಮಂಡಳಿ ಸಮ್ಮತಿಯೊಡನೆ ಅವರು ಮೂರು ವರ್ಷಗಳ ಮತ್ತೊಂದು ಅವಧಿಗೆ ಮುಂದುವರಿಯಲು ಅವಕಾಶವಿದೆ. ಶಿಫಾರಸು ಜಾರಿಯಾದರೆ ಶಾ ಅವರ ಮೊದಲ ಅವಧಿಯ ಬಹುಪಾಲು ಬಿಸಿಸಿಐನಲ್ಲಿ ಅವರ ಮೂರು ವರ್ಷಗಳ 'ಕೂಲಿಂಗ್ ಆಫ್' ಅವಧಿಯನ್ನು ಒಳಗೊಳ್ಳಲಿದೆ. ಆ ಅವಧಿ 2025ರ ಸೆಪ್ಟೆಂಬರ್‌ನಲ್ಲಿ ಆರಂಭವಾಗಲಿದೆ.

ಯಾವುದೇ ವ್ಯಕ್ತಿ ಬಿಸಿಸಿಐ ಅಥವಾ ಅದರ ರಾಜ್ಯ ಘಟಕದಲ್ಲಿ ಸತತ ಆರು ವರ್ಷಗಳ ಕಾಲ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ನಂತರ ಮೂರು ವರ್ಷಗಳ 'ಕೂಲಿಂಗ್ ಆಫ್' ಅವಧಿ ಪಾಲಿಸುವುದು ಕಡ್ಡಾಯವಾಗಿದೆ.

ಫುಟ್‌ಬಾಲ್: ಕರ್ನಾಟಕಕ್ಕೆ ಗೆಲುವು

ಬೆಂಗಳೂರು: ಕರ್ನಾಟಕದ ತಂಡವು ಪಶ್ಚಿಮ ಬಂಗಾಳದ ನಾಡಿಯಾದಲ್ಲಿ 'ರಾಜಮಾತಾ ಜೀಜಾಬಾಯಿ ಟ್ರೋಫಿ'ಗಾಗಿ ನಡೆಯುತ್ತಿರುವ 29ನೇ ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನ ಓಟವನ್ನು ಮುಂದುವರಿಸಿದೆ.

ಅಫ್ರೀನ್ ಪೀರ್‌ಭಾಯ್ ನಾಯಕತ್ವದ ಕರ್ನಾಟಕ ತಂಡವು ಸೋಮವಾರ ಬಿ ಗುಂಪಿನ ಎರಡನೇ ಪಂದ್ಯದಲ್ಲಿ 1–0 ಗೋಲುಗಳಿಂದ ಬಿಹಾರ ತಂಡವನ್ನು ಸೋಲಿಸಿತು. ಮೈತ್ರಿ ಪಾಲಸಮುದ್ರಂ (45 + 4ನೇ) ಅವರು ಕರ್ನಾಟಕದ ಪರ ಗೆಲುವಿನ ಗೋಲು ದಾಖಲಿಸಿದರು. 23ರಂದು ಆತಿಥೇಯ ಪಶ್ಚಿಮ ಬಂಗಾಳ ತಂಡವನ್ನು ಎದುರಿಸಲಿದೆ.

ನೆಟ್‌ಬಾಲ್: ಭಾರತಕ್ಕೆ ಗೆಲುವು

ಬೆಂಗಳೂರು: ಭಾರತ ತಂಡವು ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಏಷ್ಯನ್ ನೆಟ್‌ಬಾಲ್ ಮಹಿಳೆಯರ ಚಾಂಪಿಯನ್ ಷಿಪ್‌ನ ಪಂದ್ಯದಲ್ಲಿ ಸೋಮವಾರ 54–48ರಿಂದ ಮಾಲ್ದೀವ್ಸ್ ತಂಡವನ್ನು ಮಣಿಸಿತು. ನಾಲ್ಕನೇ ದಿನದ ಇತರ ಪಂದ್ಯಗಳಲ್ಲಿ ಸಿಂಗಪುರ 94–27ರಿಂದ ಬ್ರೂನಿ ತಂಡವನ್ನು; ಮಲೇಷ್ಯಾ 87–3ರಿಂದ ಸೌದಿ ಅರೇಬಿಯಾ ತಂಡವನ್ನು; ಥಾಯ್ಲೆಂಡ್ 86–18ರಿಂದ ಬಹರೇನ್ ತಂಡವನ್ನು ಸೋಲಿಸಿತು.

ಈಜು: ಸಿಮ್ರಾನ್, ಶರಣ್ಯಾಗೆ ಚಿನ್ನ

ಪಣಜಿ (ಪಿಟಿಐ): ಕರ್ನಾಟಕದ ಸಿಮ್ರಾನ್ ಮತ್ತು ಶರಣ್ಯಾ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಷಿಪ್‌ನ ಮಹಿಳೆಯರ 50 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಕ್ರಮವಾಗಿ ಎಸ್6 ಮತ್ತು ಎಸ್7 ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

ಆರ್ಚರಿ: ದೀಪಿಕಾಗೆ ಬೆಳ್ಳಿ

ಮೆಕ್ಸಿಕೊ (ಪಿಟಿಐ): ಭಾರತದ ಅನುಭವಿ ರಿಕರ್ವ್ ಬಿಲ್ಗಾರ್ತಿ ದೀಪಿಕಾ ಕುಮಾರಿ ಅವರು ಇಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ಫೈನಲ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ದೀಪಿಕಾ, ಸೋಮವಾರ ಫೈನಲ್‌ನಲ್ಲಿ 0-6 ರಿಂದ ಚೀನಾದ ಲಿ ಜಿಯಾಮನ್ ವಿರುದ್ಧ ಸೋತರು.

ಭಾರತ ತಂಡಕ್ಕೆ ವರುಣ್ ವಾಪಸ್

ನವದೆಹಲಿ (ಪಿಟಿಐ): ಪೋಕ್ಸೊ ಪ್ರಕರಣದಲ್ಲಿ ಖುಲಾಸೆಗೊಂಡ ಹಾಕಿ ಆಟಗಾರ ವರುಣ್ ಕುಮಾರ್ ಮತ್ತೆ ಭಾರತ ಹಾಕಿ ತಂಡಕ್ಕೆ ವಾಪಸಾಗಿದ್ದಾರೆ. ಇದೇ 23 ಮತ್ತು 24ರಂದು ಜರ್ಮನಿ ವಿರುದ್ಧ ನಡೆಯುವ ಹಾಕಿ ಸರಣಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದೆ.

ಲೈಂಗಿಕ ದೌರ್ಜನ್ಯದ ಆರೋಪಕ್ಕೆ ತುತ್ತಾಗಿ ಪ್ಯಾರಿಸ್ ಒಲಿಂಪಿಕ್ಸ್ ಮತ್ತು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಿಂದ ಹೊರಗುಳಿದಿದ್ದ ಡಿಫೆಂಡರ್ ವರುಣ್ ಅವರನ್ನು ಮತ್ತೆ ತಂಡಕ್ಕೆ ಸೇರಿಸಲಾಗಿದೆ.

ಮುನ್ನಡೆ ಪಡೆದ ದಕ್ಷಿಣ ಆಫ್ರಿಕಾ

ಮೊದಲ ಟೆಸ್ಟ್ ಕ್ರಿಕೆಟ್: ಆರಂಭಿಕ ದಿನ 16 ವಿಕೆಟ್ ಪತನ

ಮೀರ್‌ಪುರ್ (ಬಾಂಗ್ಲಾದೇಶ), (ಎಎಫ್‌ಪಿ): ಬಾಂಗ್ಲಾದೇಶ ತಂಡ, ಸೋಮವಾರ ಆರಂಭವಾದ ಮೊದಲ ಕ್ರಿಕೆಟ್ ಟೆಸ್ಟ್‌ನ ಮೊದಲ ದಿನ ಕೇವಲ 106 ರನ್‌ಗಳಿಗೆ ಉರುಳಿತು. ದಿನದ ಕೊನೆಗೆ ದಕ್ಷಿಣ ಆಫ್ರಿಕಾ ಮುನ್ನಡೆ ಪಡೆದರೂ, 140 ರನ್ ಗಳಿಸುವಷ್ಟರಲ್ಲಿ ಆರು ವಿಕೆಟ್ ಕಳೆದುಕೊಂಡಿದೆ.

ದಕ್ಷಿಣ ಆಫ್ರಿಕಾದ ವೇಗದ ಬೌಲರ್ ಕಗಿಸೊ ರಬಾಡ (26ಕ್ಕೆ3) ಈ ಪಂದ್ಯದಲ್ಲಿ 300 ವಿಕೆಟ್ ಪೂರೈಸಿದರು. ಜೊತೆಗೆ ದಾಖಲೆಯೊಂದರ ಒಡೆಯರೂ ಆದರು. ಟೆಸ್ಟ್ ಕ್ರಿಕೆಟ್‌ನಲ್ಲಿ 39 ಮಂದಿ ಬೌಲರ್‌ಗಳು ಈ ಮೈಲಿಗಲ್ಲು ದಾಟಿದರೂ, ರಬಾಡ ಈ ಸಾಧನೆಗೆ ಉಳಿದವರಿಗಿಂತ ಕಡಿಮೆ ಎಸೆತಗಳನ್ನು ಬಳಸಿದ್ದಾರೆ.

ಕಡಿಮೆ ಎಸೆತಗಳಲ್ಲಿ 300 ವಿಕೆಟ್ ಪಡೆದವರು (ಟೆಸ್ಟ್ ಕ್ರಿಕೆಟ್)

ಬೌಲರ್	ದೇಶ	ಎಸೆತಗಳು
ಕಗಿಸೊ ರಬಾಡ	ದಕ್ಷಿಣ ಆಫ್ರಿಕಾ	11,817
ವಕಾರ್ ಯೂನಸ್	ಪಾಕಿಸ್ತಾನ	12,602
ಡೇಲ್ ಸ್ಟೇನ್	ದಕ್ಷಿಣ ಆಫ್ರಿಕಾ	12,605
ಆ್ಯಲನ್ ಡೊನಾಲ್ಡ್	ದಕ್ಷಿಣ ಆಫ್ರಿಕಾ	13,672
ಮಾಲ್ಕಂ ಮಾರ್ಷಲ್	ವೆಸ್ಟ್ ಇಂಡೀಸ್	13,728


ಕಗಿಸೊ ರಬಾಡ

ಸ್ಕೋರುಗಳು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 40.1 ಓವರುಗಳಲ್ಲಿ 106 (ಮಹಮದುಲ್ ಹಸನ್ ಜಾಯ್ 30; ಕಗಿಸೊ ರಬಾಡ 26ಕ್ಕೆ3, ವಿಯಾನ್ ಮುಲ್ಡರ್ 22ಕ್ಕೆ3, ಕೇಶವ ಮಹಾರಾಜ್ 34ಕ್ಕೆ3); ದಕ್ಷಿಣ ಆಫ್ರಿಕಾ: 41 ಓವರುಗಳಲ್ಲಿ 6 ವಿಕೆಟ್‌ಗೆ 140 (ಟೋನಿ ಡಿ ಜೋರ್ಜಿ 30, ಟ್ರಿಸ್ಟನ್ ಸ್ಟಬ್ಸ್ 23, ರ್‍ಯಾನ್ ರಿಕೆಲ್ಟನ್ 27; ಕೈಲ್ ವೇರಿಯನ್ ಔಟಾಗದೇ 18, ವಿಯಾನ್ ಮುಲ್ಡರ್ ಔಟಾಗದೇ 17; ತೈಜುಲ್ ಇಸ್ಲಾಂ 49ಕ್ಕೆ5).

ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದ ಹರ್ಮನ್‌ಪ್ರೀತ್ ಕೌರ್

ದುಬೈ (ಪಿಟಿಐ): ಮಹಿಳಾ ಟಿ20 ವಿಶ್ವಕಪ್ 2024 ತಂಡವನ್ನು ಐಸಿಸಿ ಸೋಮವಾರ ಪ್ರಕಟಿಸಿದ್ದು, ಇದರಲ್ಲಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಸ್ಥಾನ ಪಡೆದಿದ್ದಾರೆ. ಫೈನಲ್‌ನಲ್ಲಿ ಆಡಿದ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡದ ಆಟಗಾರ್ತಿಯರು ಹೆಚ್ಚಿನ ಸ್ಥಾನಗಳನ್ನು ಪಡೆದಿದ್ದಾರೆ.

ನ್ಯೂಜಿಲೆಂಡ್ ಭಾನುವಾರ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಮೊದಲ ಬಾರಿ ಚಾಂಪಿಯನ್ ಆಗಿತ್ತು. ಸೆಮಿಫೈನಲ್ ತಲುಪಲು ವಿಫಲವಾಗಿದ್ದ ಭಾರತ ತಂಡದಲ್ಲಿ ಹರ್ಮನ್‌ಪ್ರೀತ್ ಕೌರ್ ಮಾತ್ರ ಸ್ಥಿರ ಪ್ರದರ್ಶನ ನೀಡಿದ್ದು, ಐಸಿಸಿ ಪ್ರಕಟಿಸಿದ ತಂಡದಲ್ಲಿ ಸ್ಥಾನ ಪಡೆದ ಭಾರತದ ಏಕೈಕ ಆಟಗಾರ್ತಿ ಎನಿಸಿದ್ದಾರೆ. ಅವರ ಸ್ಟ್ರೈಕ್‌ರೇಟ್ (133.92) ಟೂರ್ನಿಯ ಐದನೇ ಉತ್ತಮ ಎನಿಸಿತ್ತು.

ತಂಡ ಹೀಗಿದೆ: ಲಾರಾ ವೋಲ್ವಾರ್ಟ್ (ದಕ್ಷಿಣ ಆಫ್ರಿಕಾ, ನಾಯಕಿ), ತಾಝ್ಮಿನ್ ಬ್ರಿಟ್ಸ್ (ದಕ್ಷಿಣ ಆಫ್ರಿಕಾ), ಡ್ಯಾನ್ನಿ ವ್ಯಾಟ್ ಹಾಜ್ (ಇಂಗ್ಲೆಂಡ್), ಅಮೇಲಿಯಾ ಕೆರ್ (ನ್ಯೂಜಿಲೆಂಡ್), ಹರ್ಮನ್‌ಪ್ರೀತ್ ಕೌರ್ (ಭಾರತ), ಡಿಯೆಂಡ್ರಾ ಡಾಟಿನ್ (ವೆಸ್ಟ್ ಇಂಡೀಸ್), ನಿಜರ್ ಸುಲ್ತಾನಾ ಜೋಟಿ (ಬಾಂಗ್ಲಾದೇಶ, ವಿಕೆಟ್ ಕೀಪರ್), ಆ್ಯಫಿ ಫ್ಲೆಚರ್ (ವೆಸ್ಟ್ ಇಂಡೀಸ್), ರೋಸ್ಮರಿ ಮೇರ್ (ನ್ಯೂಜಿಲೆಂಡ್), ನೊಬ್‌ಕುಲುಲೆಕೊ ಮ್ಲಾಬಾ (ದಕ್ಷಿಣ ಆಫ್ರಿಕಾ), ಮೇಗನ್ ಶೂಟ್ (ಆಸ್ಟ್ರೇಲಿಯಾ). 12ನೇ ಆಟಗಾರ್ತಿ: ಎಡೆನ್ ಕಾರ್ಸನ್ (ನ್ಯೂಜಿಲೆಂಡ್).

ಹರ್ಮನ್‌ಪ್ರೀತ್ ಕೌರ್

ಫುಟ್‌ಬಾಲ್ ಆಟಗಾರ ಮ್ಯಾಥ್ಯೂಸ್ ನಿಧನ

ಬೆಂಗಳೂರು: ಭಾರತ ಜೂನಿಯರ್ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಕರ್ನಾಟಕದ ಟಿ. ಮ್ಯಾಥ್ಯೂಸ್ (71) ಸೋಮವಾರ ನಿಧನರಾದರು.

1970ರ ದಶಕದಲ್ಲಿ ಐಟಿಐ, ಎಚ್‌ಎಎಲ್ ಮತ್ತು ಈಸ್ಟ್ ಬೆಂಗಾಲ್ ನಂತಹ ಪ್ರಸಿದ್ಧ ಕ್ಲಬ್‌ಗಳನ್ನು ಪ್ರತಿನಿಧಿಸಿದ್ದ ಮ್ಯಾಥ್ಯೂಸ್ ಅವರು 1975ರಲ್ಲಿ ಕುವೈತ್‌ನಲ್ಲಿ ನಡೆದ ಟೂರ್ನಿಯಲ್ಲಿ ಭಾರತ ಜೂನಿಯರ್ ತಂಡಕ್ಕೆ ಆಡಿದ್ದರು.

ಶಿವಲಿಂಗಯ್ಯ ನಿಧನ

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಮಾಜಿ ಕಾರ್ಯಕಾರಿ ಸಮಿತಿ ಸದಸ್ಯ ಮತ್ತು ಐಟಿಐ ಸ್ಪೋರ್ಟ್ಸ್ ಕ್ಲಬ್‌ನ ಕ್ರೀಡಾ ಕಾರ್ಯದರ್ಶಿ ಎಸ್.ಬಿ. ಶಿವಲಿಂಗಯ್ಯ (93) ವಯೋಸಹಜ ಅನಾರೋಗ್ಯದಿಂದ ಸೋಮವಾರ ನಿಧನರಾದರು.

ನೋವು ಕಾಡುತ್ತಿಲ್ಲ: ಶಮಿ

ಗುರುಗ್ರಾಮ (ಪಿಟಿಐ): ಪಾದದ ನೋವಿನಿಂದ ತಾವು ಪೂರ್ಣ ಗುಣಮುಖರಾಗಿರುವುದಾಗಿ ವೇಗದ ಬೌಲರ್ ಮೊಹಮ್ಮದ್ ಶಮಿ ಘೋಷಿಸಿದ್ದಾರೆ. ಆದರೆ ಮುಂದಿನ ತಿಂಗಳ ಮಧ್ಯದಲ್ಲಿ ಆರಂಭವಾಗುವ ಆಸ್ಟ್ರೇಲಿಯಾ ಪ್ರವಾಸಕ್ಕೆ ತಮ್ಮನ್ನು ಪರಿಗಣಿಸುವಂತಾಗಲು 'ಒಂದು ಅಥವಾ ಎರಡು' ದೇಶೀಯ ಪಂದ್ಯಗಳಲ್ಲಿ ಆಡಲು ನಿರ್ಧರಿಸಿದ್ದಾರೆ.

ಕಳೆದ ವರ್ಷದ ಏಕದಿನ ವಿಶ್ವಕಪ್ ನಂತರ ಶಮಿ ಯಾವುದೇ ಪಂದ್ಯದಲ್ಲಿ ಆಡಿಲ್ಲ. ಆದರೆ ಬೆಂಗಳೂರಿನಲ್ಲಿ ಟೆಸ್ಟ್ ಪಂದ್ಯದ ನಂತರ, ಭಾನುವಾರ ಬೌಲಿಂಗ್ ಅಭ್ಯಾಸದಲ್ಲಿ ತೊಡಗಿಕೊಂಡಿದ್ದರು.

ಕಳೆದ ವರ್ಷದ ಪಾದದ ನೋವಿಗೆ ಅವರು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಅವರ ಮೊಣಕಾಲಿನಲ್ಲಿ ಊತ ಕಾಣಿಸಿಕೊಂಡಿತ್ತು ಎಂದು ನಾಯಕ ರೋಹಿತ್ ಶರ್ಮಾ ಮಾಧ್ಯಮಗೋಷ್ಠಿಯಲ್ಲಿ ಬಹಿರಂಗಪಡಿಸಿದ್ದರು.

'ಬೆಂಗಳೂರಿನಲ್ಲಿ ಪೂರ್ಣ ರನ್‌ಅಪ್‌ನೊಂದಿಗೆ ಬೌಲಿಂಗ್ ಮಾಡಿದ್ದೆ. ನಾನು ಫಿಟ್ ಆಗಿದ್ದು, ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡೆ. ಫಲಿತಾಂಶ ಉತ್ತಮವಾಗಿತ್ತು. ಒಂದಿಷ್ಟೂ ನೋವು ಕಾಣಿಸಿಕೊಳ್ಳಲಿಲ್ಲ' ಎಂದು ಅವರು ಖಾಸಗಿ ಸಮಾರಂಭದಲ್ಲಿ ಪಾಲ್ಗೊಳ್ಳಲು ಬಂದಿದ್ದ ವೇಳೆ ಮಾಧ್ಯಮದವರಿಗೆ ತಿಳಿಸಿದರು.

'ನಾನು ಆಸ್ಟ್ರೇಲಿಯಾ ಪ್ರವಾಸಕ್ಕೆ ಆಯ್ಕೆಯಾಗುವೆನೇ ಎಂಬ ಕುತೂಹಲ ಎಲ್ಲರಲ್ಲಿದೆ. ಆದರೆ ಅದಕ್ಕೆ ಇನ್ನೂ ಸಾಕಷ್ಟು ಸಮಯ ಇದೆ' ಎಂದು 34 ವರ್ಷ ವಯಸ್ಸಿನ ಶಮಿ ಹೇಳಿದ್ದಾರೆ.

ನವೆಂಬರ್ 22 ರಂದು ಪರ್ತ್‌ನಲ್ಲಿ ಮೊದಲ ಟೆಸ್ಟ್ ನಡೆಯಲಿದೆ. ಅದಕ್ಕೆ ಎರಡು ವಾರ ಮೊದಲು ಭಾರತ ತಂಡ ಆಸ್ಟ್ರೇಲಿಯಾಕ್ಕೆ ತೆರಳಲಿದೆ.

ಟಾಟಾ ಸ್ಟೀಲ್ ಚೆಸ್‌ಗೆ ಕಾರ್ಲ್‌ಸನ್

ಕೋಲ್ಕತ್ತ (ಪಿಟಿಐ): ವಿಶ್ವದ ಅಗ್ರಮಾನ್ಯ ಆಟಗಾರ, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ನವೆಂಬರ್ 13 ರಿಂದ 17ರವರೆಗೆ ನಡೆಯಲಿರುವ ಆರನೇ ಆವೃತ್ತಿಯ ಟಾಟಾ ಸ್ಟೀಲ್ ಚೆಸ್ ಇಂಡಿಯಾ ಟೂರ್ನಿಯಲ್ಲಿ ಆಡಲಿದ್ದು, ಆಕರ್ಷಣೆಯ ಕೇಂದ್ರವಾಗಲಿದ್ದಾರೆ.

ಎರಡನೇ ಬಾರಿ ನಾರ್ವೆಯ ಮಾಜಿ ವಿಶ್ವಚಾಂಪಿಯನ್ ಈ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈ ಹಿಂದೆ 2019ರಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಚಾಂಪಿಯನ್ ಆಗಿದ್ದರು.

ಕಾರ್ಲ್‌ಸನ್

ಒಲಿಂಪಿಯಾಡ್‌ನಲ್ಲಿ ಅಮೋಘ ಸಾಮರ್ಥ್ಯ ತೋರಿದ್ದ ಭಾರತ ತಂಡದ ಬಹುತೇಕ ಆಟಗಾರರು (ಅರ್ಜುನ್ ಇರಿಗೇಶಿ, ಪ್ರಜ್ಞಾನಂದ, ವಿದಿತ್ ಗುಜರಾತಿ) ಅವರೂ ಈ ಪ್ರತಿಷ್ಠಿತ ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ. ಈ ಬಾರಿಯೂ ಓಪನ್ ಮತ್ತು ಮಹಿಳಾ ವಿಭಾಗದಲ್ಲಿ ಸ್ಪರ್ಧೆಯಿರಲಿದೆ. ವಿಜೇತರಿಗೆ ಬಹುಮಾನ ಹಣವೂ ಸಮಾನವಾಗಿದೆ.

ಪಾಲ್ಗೊಳ್ಳುವವರು: ಓಪನ್ ವಿಭಾಗ: ಮ್ಯಾಗ್ನಸ್ ಕಾರ್ಲ್‌ಸನ್, ನಾಡಿರ್ಬೆಕ್ ಅಬ್ದುಸತ್ತಾರೊವ್, ವೆಸ್ಲಿ ಸೊ, ವಿನ್ಸೆಂಟ್ ಕೀಮರ್, ಡೇನಿಯಲ್ ಡುಬೊವ್, ಅರ್ಜುನ್ ಇರಿಗೇಶಿ, ಆರ್.ಪ್ರಜ್ಞಾನಂದ, ವಿದಿತ್ ಗುಜರಾತಿ, ನಿಹಾಲ್ ಸರಿನ್, ಎಸ್.ಎಲ್.ನಾರಾಯಣನ್.

ಮಹಿಳೆಯರು: ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ, ಕ್ಯಾತರಿನಾ ಲಾಗ್ನೊ, ಅಲೆಕ್ಸಾಂಡ್ರಾ ಕೊಸ್ಟೆನಿಯುಕ್, ನಾನಾ ಝಾಗ್ನಿಡ್ಜ್, ವೆಲೆಂಟಿನಾ ಗುನಿನಾ, ಕೋನೇರು ಹಂಪಿ, ಆರ್. ವೈಶಾಲಿ, ಡಿ.ಹಾರಿಕಾ, ದಿವ್ಯಾ ದೇಶಮುಖ್ ಮತ್ತು ವಂತಿಕಾ ಅಗರವಾಲ್.

ಹೊಸ ಕೃತಿಯಲ್ಲಿ ಒಲಿಂಪಿಕ್ ಪದಕ ವಿಜೇತೆ ಕುಸ್ತಿಪಟು ಸಾಕ್ಷಿ ಮಲಿಕ್ ಅಭಿಪ್ರಾಯ

'ಟ್ರಯಲ್ಸ್ ರಿಯಾಯಿತಿ: ಹೋರಾಟದಲ್ಲಿ ಬಿರುಕು'

ನವದೆಹಲಿ (ಪಿಟಿಐ): ಕಳೆದ ವರ್ಷ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಿಂದ ವಿನಾಯಿತಿ ನೀಡುವ ಪ್ರಸ್ತಾವಕ್ಕೆ ವಿನೇಶ್ ಫೋಗಟ್ ಮತ್ತು ಬಜರಂಗ್ ಪೂನಿಯಾ ಅವರು ಒಪ್ಪಿಕೊಂಡಿದ್ದರಿಂದ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ನಡೆಯುತ್ತಿದ್ದ ಧರಣಿ, ಹೋರಾಟದ ವರ್ಚಸ್ಸು ಕಳೆಗುಂದಿತು ಎಂದು ಒಲಿಂಪಿಕ್ ಪದಕ ವಿಜೇತೆ ಕುಸ್ತಿಪಟು ಸಾಕ್ಷಿ ಮಲಿಕ್ ಹೇಳಿದ್ದಾರೆ.

ಇತ್ತೀಚೆಗೆ ಬಿಡುಗಡೆಗೊಂಡ ತಮ್ಮ ಕೃತಿ 'ವಿಟ್ನೆಸ್'ನಲ್ಲಿ ಸಾಕ್ಷಿ ಹೀಗೆ ಬರೆದಿದ್ದಾರೆ. ಏಳು ಮಂದಿ ಮಹಿಳಾ ಪೈಲ್ವಾನರಿಗೆ ಭಾರತ ಕುಸ್ತಿ ಫೆಡರೇಷನ್‌ನ ಅಂದಿನ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಲೈಂಗಿಕ ಕಿರುಕುಳ ನೀಡಿದ್ದರೆಂದು ದೂರಿ ಅವರ ವಿರುದ್ಧ ಜಂತರ್‌ಮಂತರ್‌ನಲ್ಲಿ ನಡೆದ ಧರಣಿಯಲ್ಲಿ ಬಜರಂಗ್, ವಿನೇಶ್ ಮತ್ತು ಸಾಕ್ಷಿ ಪ್ರಮುಖವಾಗಿ ಕಾಣಿಸಿಕೊಂಡಿದ್ದರು.

'ಬಜರಂಗ್ ಮತ್ತು ವಿನೇಶ್ ಅವರಿಗೆ ಆಪ್ತರಾದ ಕೆಲವರು ಈ (ವಿನಾಯಿತಿಯ) ಪ್ರಲೋಭನೆಯನ್ನು ಅವರ ತಲೆಗೆ ತುಂಬಿದ ಪರಿಣಾಮ ಹೋರಾಟದಲ್ಲಿ ಬಿರುಕುಗಳು ಕಾಣಿಸಿಕೊಂಡವು' ಎಂದು ಸಾಕ್ಷಿ ಹೇಳಿದ್ದಾರೆ.

ಸಾಕ್ಷಿ ಮಲಿಕ್

ಬ್ರಿಜ್‌ಭೂಷಣ್ ವಿರುದ್ಧ ಮಾಡಲಾಗಿರುವ ಲೈಂಗಿಕ ಕಿರುಕುಳ ಪ್ರಕರಣದ ವಿಚಾರಣೆ ದೆಹಲಿ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ.

ಧರಣಿಯ ಮಧ್ಯೆಯೇ ಕುಸ್ತಿ ಫೆಡರೇಷನ್‌ವ್ಯವಹಾರ ನೋಡಿಕೊಳ್ಳಲು ನೇಮಕವಾದ ಅಡ್‌ಹಾಕ್ ಸಮಿತಿಯು 2023ರ ಏಷ್ಯನ್ ಕ್ರೀಡೆಗಳ ಟ್ರಯಲ್ಸ್‌ನಲ್ಲಿ ಭಾಗವಹಿಸುವುದರಿಂದ ಇವರಿಬ್ಬರಿಗೆ ವಿನಾಯಿತಿ ನೀಡಿತ್ತು. ಆದರೆ ಸಾಕ್ಷಿ ವಿನಾಯಿತಿ ಪಡೆಯಲು ಮುಂದಾಗಿರಲಿಲ್ಲ. ಆದರೆ ಹಾಂಗ್‌ಝೌ ಕ್ರೀಡೆಗಳಿಗೆ ಮೊದಲು ವಿನೇಶ್ ಗಾಯಾಳಾದರು. ಸಾಕ್ಷಿ ಭಾಗವಹಿಸಲಿಲ್ಲ. ಬಜರಂಗ್ ಪದಕ ಗೆಲ್ಲಲಾಗಲಿಲ್ಲ.

'ಸ್ವಹಿತಾಸಕ್ತಿ ಮತ್ತೊಮ್ಮೆ ಕೆಲಸ ಮಾಡಿತು. ಬಜರಂಗ್ ಮತ್ತು ವಿನೇಶ್ ಅವರಿಗೆ ಆಪ್ತರಾಗಿದ್ದವರು ಅವರಿಗೆ ಪ್ರಲೋಭನೆ ಒಡ್ಡಿದರು. ಆದರೆ ಈ ವಿನಾಯಿತಿ ಪಡೆದಿದ್ದರಿಂದ ಒಳ್ಳೆಯದೇನೂ ಆಗಲಿಲ್ಲ. ಅವರ ನಿರ್ಧಾರವು, ನಮ್ಮ ಹೋರಾಟದ ವರ್ಚಸ್ಸಿಗೆ ಕುಂದುಂಟುಮಾಡಿತು. ನಾವು ಸ್ವಹಿತಾಸಕ್ತಿ ಮುಂದಿಟ್ಟುಕೊಂಡು ಹೋರಾಟ ನಡೆಸಿದೆವು ಎಂದು ಅನೇಕ ಬೆಂಬಲಿಗರು ಯೋಚಿಸುವಂಥ ಪರಿಸ್ಥಿತಿ ತಂದುಕೊಂಡೆವು' ಎಂದು 32 ವರ್ಷ ವಯಸ್ಸಿನ ಸಾಕ್ಷಿ ಕೃತಿಯಲ್ಲಿ ವಿವರಿಸಿದ್ದಾರೆ. ಈ ಕೃತಿಗೆ ಪತ್ರಕರ್ತ ಜೊನಾಥನ್ ಸೆಲ್ವರಾಜ್ ಸಹ ಲೇಖಕರಾಗಿದ್ದಾರೆ.

'ಬಾಲ್ಯದಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದೆ'

'ಬಾಲ್ಯದಲ್ಲಿ ನಾನು ಮನೆಪಾಠದ ಶಿಕ್ಷಕನಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದೆ. ಆದರೆ ಪ್ರತಿಭಟಿಸದೇ ಮೌನವಾಗಿ ಸಹಿಸಿಕೊಂಡಿದ್ದೆ' ಎಂದು ಸಾಕ್ಷಿ ಹೇಳಿಕೊಂಡಿದ್ದಾರೆ.

'ಇದನ್ನು ನಾನು ಕುಟುಂಬದ ಜೊತೆ ಹೇಳಿಕೊಳ್ಳಲಾಗಲಿಲ್ಲ. ಅದು ನನ್ನ ತಪ್ಪು ಎಂದು ಭಾವನೆ ಮೂಡಿದ್ದರಿಂದ ಸುಮ್ಮನಾದೆ. ನನ್ನ ಶಾಲಾ ದಿನಗಳಲ್ಲಿ ಮನೆಪಾಠ ಹೇಳಿಕೊಡುತ್ತಿದ್ದ ಶಿಕ್ಷಕ ಲೈಂಗಿಕ ಶೋಷಣೆ ಮಾಡುತ್ತಿದ್ದ. ಹೊತ್ತಲ್ಲದ ಹೊತ್ತಿನಲ್ಲಿ ಪಾಠಕ್ಕೆ ಕರೆಯುತ್ತಿದ್ದ. ಅನುಚಿತವಾಗಿ ಅಂಗಸ್ಪರ್ಷ ಮಾಡಲು ಯತ್ನಿಸುತ್ತಿದ್ದ. ನನಗೆ ಟ್ಯೂಷನ್‌ಗೆ ಹೋಗಲು ಹೆದರಿಕೆಯಾಗುತಿತ್ತು. ಆದರೆ ತಾಯಿಗೆ ನಾನು ಆ ಬಗ್ಗೆ ಎಂದೂ ಹೇಳಲಿಲ್ಲ' ಎಂದಿದ್ದಾರೆ ಸಾಕ್ಷಿ.

'ಈಗ ಬಿಜೆಪಿಯಲ್ಲಿರುವ ಬಬಿತಾ ಫೋಗಟ್‌ಗೆ ಸ್ವಾರ್ಥವಿತ್ತು. ಅವರು ನಮ್ಮ ಹೋರಾಟಕ್ಕೆ ನೀಡಿದ ಬೆಂಬಲ ತೋರಿಕೆಯದ್ದಾಗಿತ್ತು' ಎಂದಿದ್ದಾರೆ. ಇದಕ್ಕೆ ಸಂಬಂಧಿಸಿ ಪ್ರತಿಕ್ರಿಯೆಗೆ ಬಬಿತಾ ಲಭ್ಯರಾಗಲಿಲ್ಲ.

ತಮಗೆ ಬಂದ ಬಹುಮಾನದ ಹೆಚ್ಚಿನ ಹಣವನ್ನು ಪೋಷಕರು ತೆಗೆದುಕೊಂಡು ಹೋದರು ಎಂದು ಸಾಕ್ಷಿ ಹೇಳಿಕೊಂಡಿದ್ದಾರೆ. 'ನನ್ನ ಮತ್ತು ಸತ್ಯವ್ರಥ ಕಾದಿಯಾನ್ (ಕುಸ್ತಿ ಪಟು) ಸಂಬಂಧಕ್ಕೆ ನನ್ನ ಕುಟುಂಬ ವಿರೋಧ ವ್ಯಕ್ತಪಡಿಸಿತ್ತು. ಆದರೆ ನಾನು ನಿಲುವು ಬದಲಿಸಲಿಲ್ಲ' ಎಂದು ಅವರು ವಿವರಿಸಿದ್ದಾರೆ.